ಕರ್ನಾಟಕದ ಗಮಕಿಗಳು

ಕನ್ನಡ ಸಾಹಿತ್ಯ ಪರಿಷತ್ತು

ಚಾಮರಾಜ ಪೇಟೆ : : ಬೆಂಗಳೂರು-೧೮

ವಜ್ರಮಹೋತ್ಸವ ವರ್ಷ

ಪಂಚವಾರ್ಷಿಕ ಯೋಜನೆಯ ಪುಸ್ತಕಮಾಲೆ-೬೧

ಕರ್ನಾಟಕದ ಗಮಕಿಗಳು

ಕನ್ನಡ ಸಾಹಿತ್ಯ ಪರಿಷತ್ತು
ಚಾಮರಾಜ ಪೇಟೆ : : ಬೆಂಗಳೂರು-೧೮

KARNATAKADA GAMAKIGALU—A book about recitationists in Kannada, Published by Kannada Sahitya Parishat, Chamarajapet, Bangalore-18. Pages viii + 194; First Edition 1977; Price Rs. 5.

ಪ್ರಥಮ ಮುದ್ರಣ ೧೯೭೭

ರೂ. ೫-೦೦

ಮುದ್ರಕರು :

ಶ್ರೀ ಶಕ್ತಿ ಎಲೆಕ್ಟ್ರಿಕ್ ಪ್ರೆಸ್, ಜಯನಗರ, ಮೈಸೂರು-೯

ಪ್ರಸ್ತಾವನೆ

೧೯೧೫ರಲ್ಲಿ ಸ್ಥಾಪಿತವಾದ ಕನ್ನಡ ಸಾಹಿತ್ಯ ಪರಿಷತ್ತು ಕಾಲಾನುಕ್ರಮದಲ್ಲಿ ಅನೇಕ ವಿದ್ವತ್ಪೂರ್ಣ ಗ್ರಂಥಗಳನ್ನು ಪ್ರಕಟಿಸಿ, ಕನ್ನಡಿಗರ ಮನ್ನಣೆಗೆ ಪಾತ್ರವಾಗಿದೆ. ೧೯೬೦ರಲ್ಲಿ ಪರಿಷತ್ತು ರೂಪಿಸಿದ ತ್ರೈವಾರ್ಷಿಕ ಯೋಜನೆಯ ಪ್ರಕಾರ, ಮೂರು ವರ್ಷಗಳ ಅವಧಿಯಲ್ಲಿ ಒಂದು ನೂರು ಪುಸ್ತಕಗಳನ್ನು ಪ್ರಕಟಿಸುವ ನಿರ್ಧಾರವನ್ನು ಅದು ಕೈಗೊಂಡಿತು. ಅದರಂತೆ ೧೯೬೧ರಿಂದ ೬೪ರವರೆಗಿನ ಮೂರು ವರ್ಷದ ಅವಧಿಯಲ್ಲಿ ಶಾಸ್ತ್ರ, ಸಾಹಿತ್ಯ, ಕಲೆ, ವಿಜ್ಞಾನ, ಇತ್ಯಾದಿ ವಿಷಯಗಳಿಗೆ ಸಂಬಂಧಪಟ್ಟಂತೆ ಒಂದು ನೂರು ಪುಸ್ತಕಗಳನ್ನು ಹೊರತರಲಾಯಿತು. ಈ ಗ್ರಂಥಗಳು ವಿಷಯವೈವಿಧ್ಯದಿಂದ ಕೂಡಿವೆ; ಪುಸ್ತಕಗಳ ಬೆಲೆ ಸಾಮಾನ್ಯರ ಕೈಗೆ ಎಟಕುವಂತಿದೆ; ವಿದ್ವಾಂಸರ ಮತ್ತು ಜನಸಾಮಾನ್ಯರ ಮೆಚ್ಚುಗೆಗೆ ಪಾತ್ರವಾಗಿವೆ.

ತ್ರೈವಾರ್ಷಿಕ ಯೋಜನೆಯನ್ನು ಯಶಸ್ವಿಯಾಗಿ ಕಾರ್ಯಗತ ಮಾಡಿದ ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ನಾಡು, ನುಡಿ ಮತ್ತು ಸಂಸ್ಕೃತಿಯ ಪುರೋಭಿವೃದ್ಧಿಗಾಗಿ ಈಗ ಪಂಚವಾರ್ಷಿಕ ಯೋಜನೆಯನ್ನು ರೂಪಿಸಿ, ಈ ಯೋಜನೆಗೆ ಸಾರ್ವಜನಿಕರ ಮತ್ತು ಸರ್ಕಾರದ ಪ್ರೋತ್ಸಾಹವನ್ನೂ ಬೆಂಬಲವನ್ನೂ ಪಡೆದಿದೆ. ೧೯೬೪ರಲ್ಲಿ ಆರಂಭಿಸಲಾದ ಪಂಚವಾರ್ಷಿಕ ಯೋಜನೆಯ ಪ್ರಕಾರ, ೫ ವರ್ಷಗಳ ಅವಧಿಯಲ್ಲಿ ಒಂದು ನೂರ ಐವತ್ತು ಪುಸ್ತಕಗಳನ್ನು ಹೊರತರಬೇಕಾಗಿದೆ. ಕೆಲವು ಪ್ರಾಚೀನ ಗ್ರಂಥಗಳನ್ನು ಕನ್ನಡಕ್ಕೆ ಅನುವಾದಿಸಿ ಮೂಲಪಾಠದೊಡನೆ ಪ್ರಕಟಿಸುವುದು, ಕೆಲವು ಅಮೂಲ್ಯ ಗ್ರಂಥಗಳ ಪುನರ್ಮುದ್ರಣ, ಭಾಷಾಂತರ ಕೃತಿಗಳ ಮುದ್ರಣ, ಜನಸಾಮಾನ್ಯರಿಗಾಗಿ ಶಾಸ್ತ್ರ, ಸಾಹಿತ್ಯ, ಕಲೆ, ವಿಜ್ಞಾನ, ಜನಪದ ಸಾಹಿತ್ಯ ಮೊದಲಾದ ನಾನಾ ವಿಷಯಗಳನ್ನು ಕುರಿತ ಗ್ರಂಥಗಳ ಪ್ರಕಟಣೆ—ಇವು ಪರಿಷತ್ತಿನ ಪಂಚವಾರ್ಷಿಕ ಯೋಜನೆಯ ಪ್ರಕಟಣೆಯ ಉದ್ದೇಶಗಳಲ್ಲಿ ಅಡಕವಾಗಿವೆ. ಅಲ್ಲದೆ ಸಂಗೀತ, ಚಿತ್ರಕಲೆ, ಗಮಕ ಮುಂತಾದ ವಿಷಯಗಳನ್ನು ಸಾಮಾನ್ಯರಿಗೆ ಪರಿಚಯ ಮಾಡಿಕೊಡುವ ಪುಸ್ತಕಗಳನ್ನೂ ವಿಜ್ಞಾನದ ವಿವಿಧ ಅಂಶಗಳನ್ನು ವಿವರಿಸುವ ಜನಪ್ರಿಯ ಹೊತ್ತಗೆಗಳನ್ನೂ ಪ್ರಕಟಿಸಲಾಗುವುದು. ಮಕ್ಕಳ ಸಾಹಿತ್ಯ, ಮಹಿಳೆಯರಿಗೆ ಉಪಯುಕ್ತವಾದ ಗ್ರಂಥಗಳು—ಇವುಗಳ ಪ್ರಕಟಣೆಯೂ ಈ ಉದ್ದೇಶದ ಅಂಗವಾಗಿದೆ. ಕನ್ನಡ ಬಾರದವರು ಕನ್ನಡ ಕಲಿಯಲು ಸಹಾಯಕವಾಗಬಹುದಾದ ಸ್ವಯಂಬೋಧಿನಿಗಳೂ ಈ ಯೋಜನೆಯಲ್ಲಿ ಸೇರಿಕೊಂಡಿವೆ.

ಕನ್ನಡ ಜನತೆಗೆ ಉತ್ತಮ ಸಾಹಿತ್ಯವನ್ನು ಸುಲಭ ಬೆಲೆಯಲ್ಲಿ ಒದಗಿಸಬೇಕೆಂಬ ಪರಿಷತ್ತಿನ ಆಶಯವನ್ನು ಗಮನಿಸಿ, ಕರ್ನಾಟಕ ರಾಜ್ಯ ಸರ್ಕಾರ ಪರಿಷತ್ತಿಗೆ ಆರ್ಥಿಕ ಸಹಾಯವನ್ನು ನೀಡಲು ಮುಂದೆ ಬಂದಿರುವುದರಿಂದ, ಪರಿಷತ್ತಿನ ಪ್ರಕಟಣ ಕಾರ್ಯಕ್ಕೆ ವಿಶೇಷ ಪ್ರೋತ್ಸಾಹ ದೊರೆತಂತಾಗಿದೆ. ಅದೇ ರೀತಿ ನಾಡಿನ ವಿದ್ವಾಂಸರು ಪರಿಷತ್ತಿನ ಮೇಲೆ ಅಭಿಮಾನವಿಟ್ಟು, ಪರಿಷತ್ತಿನ ಪ್ರಕಟಣ ಕಾರ್ಯದಲ್ಲಿ ಆಸಕ್ತಿವಹಿಸಿ, ಎಲ್ಲ ರೀತಿಯಿಂದಲೂ ತಮ್ಮ ಸಹಕಾರ ನೀಡುತ್ತಿದ್ದಾರೆ. ಪರಿಷತ್ತಿನ ಗ್ರಂಥ ಪ್ರಕಟಣಾ ಸಮಿತಿಯ ಪ್ರಧಾನ ಸಂಪಾದಕರಾದ ಡಾ|| ರಂ. ಶ್ರೀ ಮುಗಳಿಯವರೂ ಇತರ ಸದಸ್ಯರೂ ತುಂಬ ಉತ್ಸಾಹದಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ಎಲ್ಲ ಮಹನೀಯರ ಪ್ರೋತ್ಸಾಹ ಮತ್ತು ಬೆಂಬಲದಿಂದ ಕನ್ನಡ ಸಾಹಿತ್ಯ ಪರಿಷತ್ತು ತನ್ನ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಮೇಲಿನ ಉದ್ದೇಶಗಳನ್ನು ಪೂರೈಸುತ್ತದೆಂಬ ನಂಬಿಕೆ ನನಗಿದೆ. ಈ ಕಾರ್ಯದಲ್ಲಿ ಸಹಕಾರ ನೀಡುತ್ತಿರುವ ಈ ಎಲ್ಲ ಮಹನೀಯರಿಗೂ ರಾಜ್ಯ ಸರ್ಕಾರಕ್ಕೂ ಪರಿಷತ್ತು ಆಭಾರಿಯಾಗಿದೆ.

ಪರಿಷತ್ತಿನ ಪ್ರಕಟಣೆಯ ಲಾಭವನ್ನು ಎಲ್ಲ ಕನ್ನಡಿಗರೂ ಪಡೆದು ನಾಡು ನುಡಿಯ ಸೇವೆಯಲ್ಲಿ ಭಾಗಿಗಳಾಗಬೇಕೆಂದು ಈ ಮೂಲಕ ಪ್ರಾರ್ಥಿಸುತ್ತೇನೆ.

ಬೆಂಗಳೂರು
೧೨-೧೧-೧೯೭೬

ದೇಶಹಳ್ಳಿ ಜಿ. ನಾರಾಯಣ
ಅಧ್ಯಕ್ಷ
ಕನ್ನಡ ಸಾಹಿತ್ಯ ಪರಿಷತ್ತು

ಮುನ್ನುಡಿ

ಕನ್ನಡ ಸಾಹಿತ್ಯ ಪರಿಷತ್ತು ಗಮಕ ಕಲೆಗೆ ಬಹು ಹಿಂದಿನಿಂದ ಪ್ರೋತ್ಸಾಹ ನೀಡುತ್ತಾ ಬಂದಿದೆ. ಹಿಂದೆ ನಮ್ಮ ಪುರಾತನ ಕವಿಗಳು 'ಗಮಕ' ವಾಚನ ದಿಂದಲೇ ಜನರಿಗೆ ಪರಿಚಯುವಾಗಬೇಕಾಗಿತ್ತು. ಈಗಲೂ ಅಷ್ಟೆ. ಚಂಪೂ, ಷಟ್ಪದಿ, ಸಾಂಗತ್ಯ ಮತ್ತು ಹಾಡುಗಬ್ಬಗಳು 'ಗಮಕ' 'ವಾಚನ'ದಿಂದಲೇ ಜನರನ್ನು ಮುಟ್ಟಬೇಕು. ಹಿಂದೆ ರಾಜರ ಆಸ್ಥಾನದಲ್ಲಿ ಹೆಚ್ಚು ಕಡಮೆ ಕವಿಗೆ ದೊರಕಿದ ಸ್ಥಾನವೇ ಗಮಕಿಗೂ ದೊರಕುತ್ತಿತ್ತು. ಆ ಸ್ಥಾನವನ್ನು ಸಮಾನ ಸ್ಥಾನದಲ್ಲಿ ಅಲಂಕರಿಸುವವರು 'ಕವಿ ಗಮಕಿ ವಾದಿ ವಾಗ್ಮಿ ಪ್ರವರರು'. ಎಂದರೆ ಗಮಕಿಯಿಲ್ಲದೆ ಕವಿಯಿಲ್ಲ ; ಗಮಕವಿಲ್ಲದೆ ಕಾವ್ಯವಿಲ್ಲ. ಈ ಗಮಕಿಗಳ ಪರಂಪರೆ ಬೆಳೆದು ಬಂದುದನ್ನು ನಮ್ಮ ಸಾಹಿತ್ಯಚರಿತ್ರೆಯಲ್ಲಿ ನಾವು ಕಾಣುತ್ತೇವೆ.

ಈ ಕಲೆಯನ್ನು ಬೆಳೆಸಬೇಕು, ಪ್ರೋತ್ಸಾಹಿಸಬೇಕು ಎಂದು ಪರಿಷತ್ತು ಡಾ|| ಡಿ. ವಿ. ಗುಂಡಪ್ಪನವರು ಪರಿಷತ್ತಿನ ಆಡಳಿತ ಕೈಗೊಂಡಾಗಲಿಂದ ನಿರ್ಧರಿಸಿ ಕೊಂಡೇ ಬಂದಿದೆ. ಅದಕ್ಕಾಗಿ ಪರಿಷತ್ತಿನಲ್ಲೇ ತರಗತಿಗಳನ್ನೂ ನಡೆಸಿ ಗಮಕಿ ಗಳಿಗೆ ಶಿಕ್ಷಣ ನೀಡುತ್ತಾ ಬಂದಿದೆ. ದಿ. ಎಸ್. ಜಿ. ಬಿಂದೂರಾಯರು, ಕಳಲೆ ಸಂಪತ್ಕುಮಾರಾಚಾರ್ಯರು, ಕೃಷ್ಣಗಿರಿ ಕೃಷ್ಣರಾಯರು ಮುಂತಾದ ಗಮಕ ವಿದ್ವಾಂಸರು ಪರಿಷತ್ತಿನ ಪರವಾಗಿ ಪಾಠ ಹೇಳಿ ನೂರಾರು ಗಮಕಿಗಳನ್ನು ತಯಾರು ಮಾಡಿದ್ದಾರೆ. ಅವರು ಮತ್ತು ಅವರ ಶಿಷ್ಯರು ಈಗ ಕರ್ನಾಟಕದ ನಾನಾ ಭಾಗಗಳಲ್ಲಿ ಗಮಕ ವಾಚನ ಮಾಡುತ್ತಾ ಶಿಷ್ಯವರ್ಗವನ್ನು ತಯಾರಿ ಸುತ್ತಾ ಸೇವೆ ಸಲ್ಲಿಸುತ್ತಿದ್ದಾರೆ. ಪ್ರಾರಂಭದಲ್ಲಿ ಗಮಕ ಶಿಕ್ಷಣ ಬೆರಳೆಣಿಸುವಷ್ಟು ಕೇಂದ್ರಗಳಲ್ಲಿ ನಡೆಯುತ್ತಿತ್ತು. ಈಗ ನೂರಾರು ಕೇಂದ್ರಗಳಲ್ಲಿ ಈ ಶಿಕ್ಷಣದ ಸೌಲಭ್ಯ ದೊರಕುತ್ತಿದೆ. ಈ ಕಾರ್ಯ ನಿರ್ವಹಣೆಯಲ್ಲಿ ಗಮಕ ಸಮಿತಿಯ ಸಂಚಾಲಕರಾಗಿದ್ದ ದಿ.ಹು. ಮಾ. ರಾಮಾರಾಧ್ಯರು ಶ್ರಮಿಸಿದರು. ಈಗ ಸಂಚಾಲಕ ರಾಗಿರುವ ಗಮಕಿ ಎಂ. ರಾಘವೇಂದ್ರರಾಯರು ಅತ್ಯಂತ ಶ್ರಮವಹಿಸಿ ಕೆಲಸ ಮಾಡುತ್ತಿದ್ದಾರೆ.

ಪರಿಷತ್ತಿನ ವತಿಯಿಂದಲ್ಲದೆ, ಸ್ವಂತ ಅಭ್ಯಾಸಗಳಿಂದ ಅಥವಾ ತಮ್ಮ ತಮ್ಮ ನೆಲೆಯಲ್ಲಿ ದೊರಕಿದ ಗುರುಗಳ ಪಾಠದಿಂದ ಗಮಕ ಕಲೆಯನ್ನು ಕಲಿತು ನೂರಾರು ಗಮಕಿಗಳು ಕರ್ನಾಟಕಾದ್ಯಂತ ನೆಲೆಸಿದ್ದಾರೆ. ಅವರೆಲ್ಲರ ಸ್ಥೂಲ ಪರಿಚಯ ಮಾಡಿ

ಕೊಡಬೇಕೆಂದು ಪರಿಷತ್ತು ಮೂರು ನಾಲ್ಕು ವರ್ಷಗಳ ಹಿಂದೆ ಆಲೋಚಿಸಿತು. ದಿ. ರಾಮಾರಾಧ್ಯರು ಅನೇಕ ಗಮಕಿಗಳಿಂದ ಅವರ ಆತ್ಮವೃತ್ತಾಂತವನ್ನೂ ಅವರ ಅನುಭವ ಸಾರವನ್ನೂ ತರಿಸಿಕೊಂಡು ಈ ಪುಸ್ತಕದ ಪ್ರಕಟಣೆಗೆ ಅಡಿಪಾಯ ಹಾಕಿದರು. ಶ್ರೀ ಗಮಕಿ ರಾಘವೇಂದ್ರರಾಯರು ಈ ಕಾರ್ಯವನ್ನು ಮುಂದುವರಿಸಿ, ಅದಕ್ಕೆ ಒಂದು ರೂಪ ಕೊಟ್ಟು ಒಂದು ಸಂಪಾದಕ ಮಂಡಲಿಯಿಂದ ಈ 'ಗಮಕಿಗಳ' ಪರಿಚಯ ಗ್ರಂಥವನ್ನು ಸಿದ್ಧಪಡಿಸಿಕೊಟ್ಟಿದ್ದಾರೆ.

ಅವರುಗಳಿಗೂ ಸಂಪಾದಕ ಮಂಡಲಿಗೂ ಪರಿಷತ್ತು ತನ್ನ ಹಾರ್ದಿಕ ವಂದನೆಗಳನ್ನು ಸಲ್ಲಿಸುತ್ತದೆ.

ರಂ. ಶ್ರೀ. ಮುಗಳಿ
ಪ್ರಧಾನ ಸಂಪಾದಕರು
ಗ್ರಂಥ ಪ್ರಕಟಣ ಸಲಹಾ ಸಮಿತಿ

ಬೆಂಗಳೂರು
೧೨–೪–೧೯೭೭

ಸಂಪಾದಕೀಯ

ಕನ್ನಡ ನಾಡಿನ ಗಮಕಿಗಳ ಸಂಕ್ಷಿಪ್ತ ಪರಿಚಯದ ಕಿರು ಹೊತ್ತಗೆಯೊಂದು ಇದೀಗ ಪರಿಷತ್ತಿನ ವಜ್ರಮಹೋತ್ಸವದ ವೇಳೆಗೆ ಬೆಳಕಿಗೆ ಬರುತ್ತಿರುವುದು ಗಮಕ ಕಲಾಭಿಮಾನಿಗಳೆಲ್ಲರಿಗೂ ಸಂತಸವನ್ನುಂಟುಮಾಡತಕ್ಕದ್ದಾಗಿದೆ.

ಇದರ ಪ್ರಥಮ ಪ್ರಯತ್ನವು ಈ ಹಿಂದೆ ಪರಿಷತ್ತಿನ ಗಮಕ ಶಿಕ್ಷಣ ಸಮಿತಿಯ ಸಂಚಾಲಕರಾಗಿದ್ದ ದಿವಂಗತ ಪಂಡಿತ ಹು. ಮಾ. ರಾಮಾರಾಧ್ಯರ ಕಾಲದಲ್ಲೇ ನಡೆದಿದ್ದು ಆ ಕಾರ್ಯವು ಈಗ ಪೂರ್ಣಗೊಂಡು ಪರಿಷತ್ತಿನ ಅಧ್ಯಕ್ಷರಾದ ಶ್ರೀ ಜಿ. ನಾರಾಯಣ ಅವರ ಆದೇಶ ಹಾಗೂ ಗಮಕ ಶಿಕ್ಷಣ ಸಮಿತಿಯ ಅಭಿಪ್ರಾಯದಂತೆ ಸರ್ವಶ್ರೀ ಎಸ್. ಎಸ್. ರಾಮಸ್ವಾಮಿ ಅಯ್ಯರ್‌ರವರು, ಡಿ. ಎಸ್. ಶ್ರೀನಿವಾಸರಾಯರು, ಎಂ. ರಾಘವೇಂದ್ರರಾಯರು, ಈ ಸದಸ್ಯರೊಳಗೊಂಡ ಸಂಪಾದಕ ಮಂಡಲಿಯ ನೆರವಿನಿಂದ ಸಿದ್ಧಗೊಳಿಸಲಾಗಿದೆ. ಪರಿಷತ್ತಿನ ಕರೆಗೆ ಓಗೊಟ್ಟು ತಮ್ಮ ಲೇಖನಗಳನ್ನು ಕಳುಹಿಸಿ ಕೊಟ್ಟ ಗಮಕಿಗಳೆಲ್ಲರಿಗೆ ವಂದನೆಗಳು ಸಲ್ಲಬೇಕಾಗಿವೆ.

ಮೇಲಾಗಿ ಈ ಗ್ರಂಥ ಸಂಪಾದನೆಯ ಗುರುತರವಾದ ಕಾರ್ಯಕ್ಕೆ ತಾವು ಹಿಂದೆಯೇ ಸಂಗ್ರಹಿಸಲಾಗಿದ್ದ ಅನೇಕ ಗಮಕಿಗಳ ಪರಿಚಯ ಲೇಖನಗಳನ್ನು ಹಾಗೂ ಹಲವು ಕಲಾವಿದರಿಗೆ ಸಂಬಂಧಿಸಿದ ವಿಷಯ ಮಾಹಿತಿಯನ್ನು ನಮಗೆ ವಿಶೇಷ ರೀತಿಯಲ್ಲಿ ಒದಗಿಸಿದ ಈ ಕೆಳಗೆ ಕಂಡ ಮಹನೀಯರಿಗೆ ಸಂಪಾದಕ ಸಮಿತಿಯು ತನ್ನ ಕೃತಜ್ಞತೆಯನ್ನು ಅರ್ಪಿಸುತ್ತದೆ: ಸರ್ವಶ್ರೀ ವಾಗೀಶ್ ಕುಮಾರ್ (ದಿವಂಗತ ಹು. ಮಾ. ರಾಮಾರಾಧ್ಯರ ಪುತ್ರರು), ಎಂ. ರಾಘವೇಂದ್ರರಾಯರು, ಸಿ. ವಿ. ಶ್ರೀನಿವಾಸಾಚಾರ್ಯರು, ಬಿ. ಎಸ್. ಪಾಂಡುರಂಗರಾಯರು ಮತ್ತು ಶ್ರೀಮತಿ ಶಕುಂತಳಾಬಾಯಿ ಪಾಂಡುರಂಗರಾಯರು.

ನಾಡಿನ ಮೂಲೆ ಮೂಲೆಗಳಲ್ಲಿ ಎಲೆಯ ಮರೆಯ ಹೂವಿನಂತಿದ್ದು ಕಲಾಸೇವೆಯನ್ನು ಮಾಡುತ್ತಿರುವ ಇನ್ನೂ ಎಷ್ಟೋ ಮಂದಿ ಗಮಕಿಗಳು ಇರಬಹುದು. ಅಂತಹ ಮಹನೀಯರ ವಿಷಯವನ್ನು ತಿಳಿದವರು ಪರಿಷತ್ತಿಗೆ ಪರಿಚಯ ಮಾಡಿಕೊಡುವುದರ ಮೂಲಕ ಈ ಗ್ರಂಥವು ಮುಂದೆ ಬೆಳೆಯಲು ಸಹಕರಿಸಬೇಕಾಗಿ ಬಿನ್ನವಿಸುವ,

೨೩-೩-೧೯೭೭

ಸಂಪಾದಕ ಮಂಡಲಿ

೧. ಬಸವಪ್ಪ ಶಾಸ್ತ್ರಿಗಳು, ಮೈಸೂರು

ಇಂದಿನ ಗಮಕಲೋಕದಲ್ಲಿ ಇವರನ್ನು ಪ್ರಪ್ರಥಮವಾಗಿ ಸ್ಮರಿಸಬೇಕು. ಬೆಂಗಳೂರು ಜಿಲ್ಲೆಗೆ ಸೇರಿದ ನಾರಸಂದ್ರಗ್ರಾಮದ ವೀರಮಾಹೇಶ್ವರ ವರ್ಗಕ್ಕೆ ಸೇರಿದ ರುದ್ರಾಕ್ಷಿಮಠಾಧಿಕಾರಿಗಳಾಗಿದ್ದ ಮುರುಡು ಬಸವ ಸ್ವಾಮಿಗಳು ಇವರ ಹಿರಿಯರು. ಇವರ ತಂದೆಯವರಾದ ಶ್ರೀ ಮಹದೇವಶಾಸ್ತ್ರಿಗಳು ಪ್ರಸಿದ್ಧ ವೈದಿಕ ವಿದ್ವಾಂಸರಾಗಿದ್ದು ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರವರ ಸಮ್ಮುಖದಲ್ಲಿ ಪುರೋಹಿತರಾಗಿದ್ದರು. ಬಸಪ್ಪಶಾಸ್ತ್ರಿಗಳವರ ಕಾಲ ೧೮೪೩ ರಿಂದ ೧೮೯೧ನೇ ಫೆಬ್ರವರಿಯವರೆಗೆ. ಅಳಿಯ ಲಿಂಗರಾಜ ಅರಸ್‌ರವರ ಪೋಷಣೆ ಮತ್ತು ಪ್ರೋತ್ಸಾಗಳಿಂದ ಉಭಯಭಾಷೆಗಳನ್ನೂ ಮತ್ತು ಸಂಗೀತವೇ ಮುತಾದ ಕಲೆಗಳನ್ನೂ ಕಲಿತು ಅಮೋಘ ಪಾಂಡಿತ್ಯವನ್ನು ಗಳಿಸಿದರು. ತಮ್ಮ ಹದಿನೆಂಟರ ಪ್ರಾಯದಲ್ಲಿಯೇ ಮಹಾಸನ್ನಿಧಾನದ ಅಪ್ಪಣೆಯಂತೆ ಸಂಸ್ಕೃತದಲ್ಲಿ 'ಬಿಲ್ವವೃಕ್ಷ ಪೂಜಾವಿಧಿ'ಯನ್ನೂ 'ಕೃಷ್ಣರಾಜಾಭ್ಯುದಯ'ವೆಂಬ ಕನ್ನಡ ಚಂಪೂ ಗ್ರಂಥವನ್ನೂ ಬರೆದರು. ಮುಂದೆ ಇವರು ಶ್ರೀ ಚಾಮರಾಜೇಂದ್ರ ಒಡೆಯರ್‌ರವರಿಗೆ ವಿದ್ಯಾಬೋಧಕರಾಗಿಯೂ ಮತ್ತು ಆಸ್ಥಾನ ಕವಿಗಳಾಗಿಯೂ ಇದ್ದರು. ಇವರು ಕರ್ಣಾಟಕ ಶಾಕುಂತಲ ನಾಟಕಂ, ರತ್ನಾವಳೀ, ವಿಕ್ರಮೋರ್ವಶೀಯ, ಮಾಲತಿಮಾಧವ, ಚಂಡಕೌಶಿಕ, ಶೂರಸೇನ ಚರಿತ್ರೆ ಮುಂತಾದ ನಾಟಕಗಳನ್ನೂ ಸರಳ ಶೈಲಿಯಲ್ಲಿ ಭರ್ತೃಹರಿಯ ಸುಭಾಷಿತಗಳು, ಶಂಕರ ಶತಕ, ನೀತಿಸಾರ ಸಂಗ್ರಹ, ಸಾವಿತ್ರೀ ಚರಿತ್ರೆ ಮುಂತಾದುವುಗಳನ್ನೂ ಅಲ್ಲದೆ ದಮಯಂತೀ ಸ್ವಯಂವರ ಮುಂತಾದ ಪ್ರೌಢ ಚಂಪೂಕಾವ್ಯಗಳನ್ನೂ ಅನೇಕ ಸ್ತೋತ್ರಗಳನ್ನೂ ರಚಿಸಿರುವರು. ಇವರು ಆಸ್ಥಾನ ಕವಿಗಳಾಗಿದ್ದರು. ಇವರ ಕಾವ್ಯವಾಚನವು ಪಂಡಿತಪಾಮರರಾದಿಯಾಗಿ ಸಕಲರನ್ನೂ ಪರವಶರನ್ನಾಗಿ ಮಾಡುತ್ತಿದ್ದಿತು. ಇವರ ಗಮಕ ಕಲೆ ವೈಶಿಷ್ಟ್ಯಪೂರ್ಣವಾಗಿತ್ತು. ಇವರ ಕಾವ್ಯ ವಾಚನದಿಂದ ಪಶುಗಳೂ ಸಹ ತಲ್ಲೀನತೆಯಿಂದ ಮೇವನ್ನೂ ಬಿಟ್ಟು ಕೇಳುತ್ತಿದ್ದುವೆಂದು ಪ್ರತೀತಿ ಇದೆ.

೨. ಪಿ. ಎಂ. ತಮ್ಮಯ್ಯನವರು

ಇವರು ಸುಮಾರು ೧೮೬೮ರಲ್ಲಿ ಮೈಸೂರಿನಲ್ಲಿ ಜನಿಸಿದರು. ಇವರ ತಂದೆ ಶ್ರೀ ಪುಟ್ಟಮುದ್ದಪ್ಪ(ಮಾದಪ್ಪ)ನವರು. ಇವರು ಜವಳೀ ಅಂಗಡಿ ತಮ್ಮಯ್ಯನವರು ಪುರಾಣದ ತಮ್ಮಯ್ಯನವರು ಎಂದು ಪರಿಚಿತರಾಗಿದ್ದು ಮೈಸೂರು ಗಮಕ ಸಮಾಜದ ಅಧ್ಯಕ್ಷರಾಗಿದ್ದರು. ಕಾಳಮ್ಮನ ಗುಡಿ ಗುರುಕುಲದಲ್ಲಿ, ಸಂಗೀತ ಸಾಹಿತ್ಯ ವಿದ್ವಾಂಸರಾಗಿದ್ದ ಉಪಾಧ್ಯಾಯ ನಂಜಪ್ಪನವರಲ್ಲಿ ಕಾವ್ಯವಾಚನ ಕಲೆಯನ್ನು ಅಭ್ಯಸಿಸಿದರು. ಇವರು ಸುಮಾರು ೫೦ ವರ್ಷಗಳ ಕಾಲ ಗಮಕಕಲಾರಾಧನೆಯನ್ನು ನಡೆಸಿದ್ದರು. ಭಕ್ಷಿ ಲಿಂಗರಾಜೇ ಅರಸಿನವರು ರಚಿಸಿದ್ದ ರಾಮಾಯಣ ಕಾವ್ಯವಾಚನ ಸಂದರ್ಭದಲ್ಲಿ ಮೈಸೂರಿನ ಜಗನ್ಮೋಹನ ಛತ್ರದಲ್ಲಿ ನಡೆಸಿದ ಸನ್ಮಾನ ಸಮಾರಂಭದಲ್ಲಿ ವಾಸುದೇವಾಚಾರ್ಯರು ಇವರಿಗೆ ಚಿನ್ನದ ಪದಕ ಪ್ರಶಸ್ತಿಗಳನ್ನಿತ್ತು ಗೌರವಿಸಿದರು. ಮಹಾಜನರೂ ಸಹ ಬೇರೆ ಬೇರೆ ಸಂದರ್ಭಗಳಲ್ಲಿ ಸಮಾರಂಭಗಳನ್ನು ನಡೆಸಿ ಇವರಿಗೆ ಸನ್ಮಾನಗಳನ್ನು ಮಾಡಿದ್ದರು. ತಮ್ಮ ೭೦ನೆ ವಯಸ್ಸಿನಲ್ಲಿ ಸುಮಾರು ೧೯೩೮ರಲ್ಲಿ ಇವರು ನಿಧನ ಹೊಂದಿದರು. ಪ್ರಸಿದ್ಧ ಗಮಕಿಗಳಾದ ಶ್ರೀ ಎಂ. ರಾಘವೇಂದ್ರರಾಯರು ಇವರ ಶಿಷ್ಯ ಸಮೂಹಕ್ಕೆ ಸೇರಿದವರು.

೩. ಸಂ.ಗೋ. ಬಿಂದೂರಾಯರು

ಇವರು ಸು. ೧೮೭೬ರಲ್ಲಿ ಸಂತೇಬೆನ್ನೂರಿನಲ್ಲಿ ಜನಿಸಿದರು. ಇವರ ತಂದೆ ಶ್ರೀ ಗೋವಿಂದರಾಯರು ಮತ್ತು ತಾಯಿ ಶ್ರೀಮತಿ ರಮಾಬಾಯಿಯವರು. ಇವರು ಗಂಧದ ಇಲಾಖೆಯಲ್ಲಿಯೂ ಮತ್ತು ಶ್ರೀ ಕೃಷ್ಣರಾಜೇಂದ್ರ ಮಿಲ್‌ನಲ್ಲಿಯೂ ಉದ್ಯೋಗದಲ್ಲಿದ್ದರು. ಸಾಹಿತ್ಯ ಸಂಗೀತಗಳಿಗೆ ನೆಲೆಯಲ್ಲದ ವಾತಾವರಣದಲ್ಲಿ ಬೆಳೆದ ಬಿಂದೂರಾಯರು "ಭಾರತ ವಾಚನ ಪ್ರವೀಣ" ಬಿಂದೂರಾಯರಾಗಿ ಮಾರ್ಪಾಟಾದುದು ಒಂದು ಪವಾಡವೇ ಸರಿ. ಇವರು ಹೊಸದುರ್ಗದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ಕಾಲದಲ್ಲಿ ಅಲ್ಲಿನ ಜೋಡೀದಾರ್ ಶಾಮಾಚಾರ್ಯರ ಸ್ನೇಹ ಬೆಳೆಯಿತು. ಶಾಮಾಚಾರ್ಯರು ಬಿಂದೂರಾಯರಿಗಿಂತ ಬಹಳ ಹಿರಿಯರು. ಅವರು ಕುಮಾರವ್ಯಾಸಭಾರತ, ಜೈಮಿನಿ ಭಾರತ ಮತ್ತು ಷಡಕ್ಷರಿಯ ರಾಜಶೇಖರ

ವಿಳಾಸ ಮುಂತಾದ ಕಾವ್ಯಗಳನ್ನು ವಾಚನ ಮಾಡುವುದರಲ್ಲಿ ನಿಷ್ಣಾತರಾಗಿದ್ದರು. ಅವರ ಮಧುರವಾದ ಶಾರೀರ, ಪ್ರಕಾಂಡಶಾಸ್ತ್ರ ಸಾಹಿತ್ಯಗಳ ಪರಿಶ್ರಮಗಳು ಅವರ ಕಾವ್ಯವಾಚನವನ್ನು ಬಹಳ ಪ್ರಭಾವಶಾಲಿಯನ್ನಾಗಿ ಮಾಡಿದ್ದುವು. ಕಾವ್ಯವಾಚನ ದಲ್ಲಿ ಪರಿಶ್ರಮ, ಅಭಿರುಚಿಗಳಿಲ್ಲದ ಬಿಂದೂರಾಯರು ಅವುಗಳನ್ನು ಅರಳಿಹಿಟ್ಟಿನ ಪದ್ಯಗಳೆಂದು ಉಪಹಾಸ್ಯ ಮಾಡುತ್ತಿದ್ದರು. ಶಾಮಾಚಾರ್ಯರು, "ಅರಳುಹಿಟ್ಟಿನ ಪದ್ಯಗಳನ್ನು ನೀನು ಹೇಗೆ ಓದ್ತೀಯೋ ನೋಡೋಣ" ಎಂದು ಛೇಡಿಸಿದಾಗ ಕುಮಾರವ್ಯಾಸಭಾರತವನ್ನು ಬಿಂದೂರಾಯರು ಕೈಗೆತ್ತಿಕೊಂಡರು. ವಾಚನ ಮಾಡಲು ತೊಡಗಿದಾಗ ಸುಲಭವೆಂದು ಇವರು ತಿಳಿದಿದ್ದ ಕಾವ್ಯವು ಕಬ್ಬಿಣದ ಕಡಲೆಯೂ ಹೌದು ಎಂದು ಇವರಿಗೆ ಮನವರಿಕೆಯಾಗಿ ಆ ದಿನ ಶಾಮಾಚಾರ್ಯ ರಲ್ಲಿ ತಮ್ಮ ಸೋಲನ್ನೊಪ್ಪಿಕೊಂಡರು. ಆ ಕ್ಷಣದಲ್ಲಿಯೇ ತಾವೂ ಸಹ ಭಾರತ ವನ್ನು ಉತ್ಕೃಷ್ಟ ರೀತಿಯಲ್ಲಿ ವಾಚನಮಾಡಿ ಅವರನ್ನು ಮೆಚ್ಚಿಸುವುದಾಗಿ ದೃಢ ನಿರ್ಧಾರ ಮಾಡಿದರು. ಮುಂದೆ ಒಂದು ತಿಂಗಳ ಕಾಲ ತಾವೇ ತೋಚಿದಂತೆ ಕೀಚಕವಧಾಪ್ರಸಂಗವನ್ನು ಅಭ್ಯಾಸಮಾಡಿ ಶಾಮಾಚಾರ್ಯರ ಮುಂದೆ ವಾಚನ ಮಾಡಿ ಅವರಿಂದ ಭೇಷ್ ಎನ್ನಿಸಿಕೊಂಡರು. ಅಂದು ಬಿಂದೂರಾಯರಲ್ಲಿ ಆವಿಷ್ಟ ನಾದ ಕುಮಾರವ್ಯಾಸನು ಅವರ ಕೊನೆಯ ಘಳಿಗೆಯುವರೆಗೂ ಅವರನ್ನು ಬಿಡದೆ ಬಲವಾಗಿ ಹಿಡಿದಿದ್ದ. ಮೈಸೂರಿನಲ್ಲಿದ್ದಾಗ ತಮ್ಮ ಮನೆಯಲ್ಲಿ ಪ್ರತಿನಿತ್ಯವೂ ಸಾಯಂಕಾಲದ ವೇಳೆಯಲ್ಲಿ ಇವರು ಭಾರತ ವಾಚನವನ್ನು ಮಾಡುತ್ತಿದ್ದರೆ, ಅನೇಕರು ಹೊರಗೆ ನಿಂತು ಕೇಳುತ್ತಿದ್ದರು. ಹಾಗೆ ಕೇಳಲು ಒಂದು ದಿನ ದಯ ಮಾಡಿಸಿದ್ದ ಪೌರಾಣಿಕ ರತ್ನ ಶ್ರೀ ಶೇಷಾಚಾರ್ಯರು ಇವರ ವಾಚನವನ್ನು ಕೇಳಿ ಆನಂದ ಬಾಷ್ಪಗಳನ್ನು ಸುರಿಸಿದರಂತೆ. ಅಂತಹ ವಿದ್ವಾಂಸರಾದ ಪೌರಾಣಿಕ ರತ್ನರು ತಮ್ಮ ವಾಚನವನ್ನು ಕೇಳಿ ಆನಂದಿಸಲು ಈ ಭಾರತದಲ್ಲಿ ಯಾವ ಮಹತ್ವ ವಡಗಿದೆ ಎಂದು ಅವರನ್ನು ಕೇಳಿದರಂತೆ. ಆಗ ಶೇಷಾಚಾರ್ಯರು "ನಮ್ಮ ನಾರಣಪ್ಪ ಕನ್ನಡದಲ್ಲಿ ವರಕವಿ ಮಾತ್ರವಲ್ಲ. ಆತನು ಮಹಾನುಭಾವ, ಮಹಾ ಶಾಸ್ತ್ರಜ್ಞ, ಶ್ರೀಮನ್ಮಧ್ವಾಚಾರ್ಯರ ಮಹಾಭಾರತ ತಾತ್ಪರ್ಯ ನಿರ್ಣಯವನ್ನೂ, ಶಾಸ್ತ್ರಗಳನ್ನೂ ಮತ್ತು ಮೂಲ ಸಂಸ್ಕೃತ ಭಾರತದ ಸ್ವಾರಸ್ಯವನ್ನೂ ಅಳವಡಿಸಿ ಕೊಂಡು ತನ್ನ ಕಾವ್ಯವನ್ನು ಹಾಡಿದ ಮಹಾನುಭಾವನಪ್ಪ" ಎಂದರು. ಬಿಂದೂ ರಾಯರ ದೃಷ್ಟಿಯಲ್ಲಿ ಆ ಕ್ಷಣದವರೆಗೂ ಅರಳುಹಿಟ್ಟಿನ ಪದ್ಯಗಳನ್ನು ಬರೆದ ಕುಮಾರವ್ಯಾಸನು ಶಾಸ್ತ್ರಸಿದ್ಧಾಂತಗಳನ್ನು ವಿಶಿಷ್ಟ ರೀತಿಯಿಂದ ನಿರೂಪಿಸಿದ ವರ ಕವಿಯೂ ಮಹಾನುಭಾವನೂ ಆದನು.

ಮುಂದೆ ಬಿಂದೂರಾಯರು ಶಾಸ್ತ್ರಗ್ರಂಥಗಳನ್ನೂ ದಾಸರ ಕೃತಿಗಳನ್ನೂ ತಾತ್ಪರ್ಯ ನಿರ್ಣಯ ಮತ್ತು ಭಗವದ್ಗೀತೆಯನ್ನೂ ಆಳವಾಗಿ ಅಭ್ಯಾಸಮಾಡಿ ಅವುಗಳ ವೈಭವ ಗಾಂಭೀರ್ಯಗಳನ್ನು ಕುಮಾರವ್ಯಾಸನ ಪ್ರತಿ ಪದ್ಯದಲ್ಲಿಯೂ ಕಂಡರು. ಬಿಂದೂರಾಯರ ವಾಚನದ ರೀತಿ ಸಂಗೀತ ಪ್ರಧಾನವಾಗಿರದೆ ಮುಂದೆ ಸರಳವಾಗಿ ಉಚಿತವಾದಷ್ಟು ರಾಗದೊಡನೆ ಭಾವಪ್ರಧಾನವಾಗಿ ವ್ಯಾಖ್ಯಾನ ವಿಶಿಷ್ಟವೆನಿಸಿತು. ಇದು ನಡೆದದ್ದು ಸುಮಾರು ೧೯೩೫ರಲ್ಲಿ. ಬಿಂದೂರಾಯರ ವಾಚನವನ್ನು ಕೇಳಿ ಮೆಚ್ಚಿ, ಸಾಹಿತ್ಯದ ವಿಷಯವಾಗಿ ಪರಿಷ್ಕಾರ ಮಾಡಿದ ಕೀರ್ತಿ ಪುಣ್ಯಗಳು ಪೂಜ್ಯರಾದ ಮಾಸ್ತಿಯವರು, ತಳುಕಿನ ವೆಂಕಣ್ಣಯ್ಯನವರು, ಎಂ.ಆರ್. ಶ್ರೀಯವರು, ಬಿ.ಎಂ.ಶ್ರೀಯವರು ಮತ್ತು ಡಿ.ವಿ.ಜಿ.ಯವರಿಗೆ ಸೇರುವುದೆಂದು ಬಿಂದೂರಾಯರು ಕೃತಜ್ಞತೆಯಿಂದ ಸ್ಮರಿಸುತ್ತಿದ್ದರು. ಶ್ರೀ ಡಿ.ವಿ.ಜಿ.ಯವರು ಪರಿಷತ್ತಿನ ಉಪಾಧ್ಯಕ್ಷರಾಗಿದ್ದಾಗ ಎಂದರೆ ೧೯೩೫–೩೭ರಲ್ಲಿ ಗಮಕ ತರಗತಿಗಳನ್ನ ಪರಿಷತ್ತಿನಲ್ಲಿ ನಡೆಸಿ ಕಾವ್ಯವಾಚನವನ್ನು ಬೋಧಿಸಲು ಬಿಂದೂರಾಯರನ್ನು ಒತ್ತಾಯಮಾಡಿ ನಿಯಮಿಸಿದರು. ತರಗತಿಗಳು ಪ್ರಾರಂಭವಾಗುವ ಮುಂಚಿತವಾಗಿಯೇ ಬಿಂದೂರಾಯರು ತಂಬೂರಿಯನ್ನು ಶ್ರುತಿ ಮಾಡಿ, ಅಂದು ಪಾಠಹೇಳಬೇಕಾಗಿದ್ದ ಭಾಗಗಳನ್ನು ತಾವು ಅಭ್ಯಾಸಮಾಡಿ, ಅಭ್ಯರ್ಥಿಗಳು ಬರುವ ವೇಳೆಗೆ ಸಿದ್ಧವಾಗಿದ್ದು ಪಾಠಗಳನ್ನು ಪ್ರಾರಂಭಿಸುತ್ತಿದ್ದರು. ಅಂದು ಬಿಂದೂರಾಯರ ಶಿಷ್ಯರಾಗಿದ್ದವರು ಅನೇಕರು ಇಂದು ಉಚ್ಚಮಟ್ಟದ ಗಮಕಿಗಳಾಗಿ ಪ್ರಸಿದ್ಧರಾಗಿರವರು. ಅವರುಗಳಲ್ಲಿ ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾಯರು, ರಾಜಾಮಣಿ ನಾಗರಾಜರಾಯರು, ದಿ|| ಎಂ.ಎಸ್. ಚಂದ್ರಶೇಖರಯ್ಯನವರು, ಎನ್. ಶ್ರೀನಿವಾಸರಾಯರು, ಎಸ್. ನಾಗೇಶರಾಯರು, ಎಂ. ಹರಿನಾರಾಯಣ ಅವರು ಮತ್ತು ಗನಾಯಕ್ ಗುರುರಾವ್ ದೇಶಪಾಂಡೆಯವರನ್ನು ಹೆಸರಿಸಬಹುದು. ಬಿಂದೂರಾಯರ ಭಾರತ ವಾಚನವು ನಾಡಿನಲ್ಲೆಲ್ಲಾ ಸುಮಾರು ನಲವತ್ತು ವರ್ಷಗಳಿಗೂ ಮೀರಿ ನಡೆದಿದೆ. ಇವರ ವಾಚನ ವ್ಯಾಖ್ಯಾನಗಳನ್ನು ಹುಬ್ಬಳ್ಳಿಯಲ್ಲಿ ನಡೆಸಿದಾಗ 'ಸಂಯುಕ್ತ ಕರ್ನಾಟಕ'ದ ದಿನಪತ್ರಿಕೆಯ ಸಂಪಾದಕರಾಗಿದ್ದ ಶ್ರೀ ವಿ.ಬಿ.ನಾಯಕ್‌ರವರು ಅದನ್ನು ಸಮಗ್ರವಾಗಿ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದರು. ಮುಂದೆ ಬಾಗಲಕೋಟೆ, ಗದಗು, ಬೆಂಗಳೂರು, ಬಿಜಾಪುರಗಳಲ್ಲಿ ವಾಚನಗಳು ನಡೆದು ಪ್ರಕಟವಾಗಿ, ಮಹಾಜನಗಳ ಅಪೇಕ್ಷೆಯಂತೆ 'ಕುಮಾರವ್ಯಾಸ ಭಾರತ ಸಾರೋದ್ಧಾರ' ಎಂಬ ಗ್ರಂಥವು ಲೋಕ ಶಿಕ್ಷಣ ನಿಧಿಯ ಆಶ್ರಯದಲ್ಲಿ ಪ್ರಕಟವಾಯಿತು. ಬೊಂಬಾಯಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಇವರು ಗಮಕ

ಗೋಷ್ಠಿಯ ಅಧ್ಯಕ್ಷರಾಗಿದ್ದರು. ಆಗ ಪರಿಷತ್ತು ಇವರಿಗೆ ಶಾಲುಜೋಡಿಯನ್ನೂ ಮಾನಪತ್ರವನ್ನೂ ಸಮರ್ಪಿಸಿ ಕನ್ನಡನಾಡಿನ ಕೃತಜ್ಞತೆಯನ್ನೂ ಪ್ರಶಂಸೆಯನ್ನೂ ವ್ಯಕ್ತಪಡಿಸಿತು. ರಾಜ್ಯ ಸರ್ಕಾರವು ೧೯೭೦ರಲ್ಲಿ ದಸರಾ ವಸ್ತುಪ್ರದರ್ಶನದಲ್ಲಿ ಬಿಂದೂರಾಯರಿಗೆ ಗಮಕ ಪ್ರಶಸ್ತಿಯನ್ನು ಸಮರ್ಪಿಸಿ ಗೌರವಿಸಿತು. ಭಾರತದ ಮೂಲ ಗಮಕಿಗಳಾಗಿದ್ದ ಶ್ರೀ ಸಂ.ಗೋ. ಬಿಂದೂರಾಯರು ೧೨-೩-೧೯೭೯ರಂದು ಕಣ್ಮರೆಯಾದರು.

೪. ಗೌರೀದೇವುಡು ನರಸಿಂಹಶಾಸ್ತ್ರಿಗಳು, ಮೈಸೂರು

ಇವರು ಸುಮಾರು ೧೮೭೮ರಲ್ಲಿ ಮೈಸೂರಿನಲ್ಲಿ ಜನಿಸಿದರು. ಇವರ ತಂದೆ ಅಚ್ಚಂಭಟ್ಟರು, ತಾಯಿ ನರಸಮ್ಮನವರು. ಇವರು ಅರಮನೆಯಲ್ಲಿ ಗೌರೀಪೂಜೆಯ ಪೌರೋಹಿತ್ಯವನ್ನು ಮಾಡಿಸುತ್ತಿದ್ದರು. ಶಾರದಾವಿಲಾಸ ಮಾಧ್ಯಮಿಕ ಮತ್ತು ಪ್ರೌಢಶಾಲೆಗಳಲ್ಲಿ ಕನ್ನಡ ಪಂಡಿತರಾಗಿದ್ದರು. ಇವರ ಅಣ್ಣಂದಿರು ಗೌರೀ ನರಸಿಂಹಯ್ಯನವರು ಪ್ರಸಿದ್ಧ ನಾಟಕ ಕಲಾವಿದರೂ ಶ್ರೇಷ್ಠ ಗಮಕಿಗಳೂ ಆಗಿದ್ದರು. ನರಸಿಂಹಶಾಸ್ತ್ರಿಗಳಿಗೆ ಅವರ ಅಣ್ಣಂದಿರಲ್ಲಿಯೇ ಗಮಕಾಭ್ಯಾಸವು ನಡೆಯಿತು. ಉದ್ದಾಮ ವಿದ್ವಾಂಸರಾಗಿದ್ದ ಪಿ. ಆರ್. ಕರಿಬಸಪ್ಪ ಶಾಸ್ತ್ರಿಗಳಲ್ಲಿ ಕಾವ್ಯಾಭ್ಯಾಸ ಮತ್ತು ಮಾರ್ಗದರ್ಶನಗಳನ್ನು ಪಡೆದರು. ನಂಜನಗೂಡು ಶ್ರೀಕಂಠಶಾಸ್ತ್ರಿಗಳವರ ವಿದ್ವತ್ಪೂರ್ಣ ವ್ಯಾಖ್ಯಾನದೊಡನೆ ಇವರ ವಾಚನಗಳು ಆರುತಿಂಗಳಕಾಲ ಅರಮನೆಯಲ್ಲಿ ವಾಣೀವಿಲಾಸ ಮಹಾರಾಣಿಯವರ ಸನ್ನಿಧಾನದಲ್ಲಿ ನಡೆದುವು. ಇವರ ಮೇಲೆ ಹಿರಿಯ ಗಮಕಿಗಳೆನಿಸಿದ್ದ ಸಾಲಿಗ್ರಾಮದ ಗುಂಡಪ್ಪನವರು, ಅರಕೆರೆ ಶಾಮಯ್ಯಂಗಾರ್ರವರು, ಹೊಸಕೋಟೆ ನರಸಿಂಹಭಟ್ಟರು, ಅಭಿನವ ಕಾಳಿದಾಸರೆಂದು ಪ್ರಸಿದ್ಧರಾದ ಆಸ್ಥಾನ ವಿದ್ವಾನ್ ಬಸವಪ್ಪಶಾಸ್ತ್ರಿಗಳು, ಅಕ್ಕಸಾಲೆ ದೇವಯ್ಯನವರುಗಳು ವಾಚನ ಪ್ರಭಾವವನ್ನು ಬೀರಿದ್ದರು. ಭಾರತ ವಾಚನ ಪ್ರವೀಣ ಸಂ. ಗೋ. ಬಿಂದೂರಾಯರು ತಮ್ಮ ಮನೆಯಲ್ಲಿ ಆರುತಿಂಗಳಕಾಲ ಶಾಸ್ತ್ರಿಗಳ ವಾಚನವನ್ನು ನಡೆಸಿದ್ದಾಗ ಅದನ್ನು ಕೇಳಿ ಪ್ರಭಾವಿತರಾಗಿದ್ದರು. ಶಾಸ್ತ್ರಿಗಳವರು ಮುಂದೆ ಟ್ರೈನಿಂಗ್ ಕಾಲೇಜಿನಲ್ಲಿ ಗಮಕದ ಉಪಾಧ್ಯಾಯರಾಗಿದ್ದರು. ಶ್ರೀಮತಿ ರಾಜಮ್ಮ ಕಲ್ಲೋಳಿಮಠ್‌ರವರು ಶಾಸ್ತ್ರಿಗಳವರ ಶಿಷ್ಯರಲ್ಲಿ ಒಬ್ಬರು. ಶಾಸ್ತ್ರಿಗಳವರು ಸಾಹಿತ್ಯ ಮತ್ತು ಗಮಕ ಕಲೆಗಳಿಗಾಗಿ ಸುಮಾರು ೩೫ ವರ್ಷಗಳ ಕಾಲ ತಮ್ಮ ಸೇವೆಯನ್ನು ಸಲ್ಲಿಸಿ ತಮ್ಮ ೫೫ ನೇ ವಯಸ್ಸಿನಲ್ಲಿ ಅಂದರೆ ೧೯೩೩ ನೇ ಆಗಸ್ಟ್ ತಿಂಗಳಲ್ಲಿ ಕಣ್ಮರೆಯಾದರು.

೫. ಬಾಳಮ್ಮ ಪಾಟೀಲ ಅವರು

ಇವರು ೧೮೮೮ ರಲ್ಲಿ ರಾಯಚೂರು ಜಿಲ್ಲೆಯ ಎಲಬುರ್ಗಿ ತಾಲ್ಲೋಕಿನ ತಳಕಲ್ಲು ಗ್ರಾಮದಲ್ಲಿ ಜನಿಸಿದರು. ಗ್ರಾಮದ ಗೌಡರ ಮನೆತನಕ್ಕೆ ಸೇರಿದ ಬಾಳನ ಗೌಡರ ಪತ್ನಿಯಾಗಿ ಶ್ರೀಮಂತ ಜೀನನವನ್ನು ಕಂಡ ಇವರು ತಮ್ಮ ಯಜಮಾನರ ನಿಧನದಿಂದ ಅನೇಕ ಕಷ್ಟಗಳಿಗೆ ಗುರಿಯಾದರು. ಇವರ ಕಷ್ಟಗಳು ಇವರಿಗೆ ನಿರ್ವೇದವನ್ನು ತಂದು ಇವರನ್ನು ವಿಜಾಪುರದ ಷಣ್ಮುಖಸ್ವಾಮಿ ಮಠದ ಶ್ರೀ ಸದ್ಗುರು ಸಿದ್ಧರಾಮಸ್ವಾಮಿಗಳವರ ಸನ್ನಿಧಿಗೆ ಕರೆದೊಯ್ದಿತು. ಮಠದಲ್ಲಿ ನಡೆಯುತ್ತಿದ್ದ ಪ್ರವಚನಗಳನ್ನು ಕೇಳುವುದು, ಪೂಜೆಗಳನ್ನು ನೋಡುವುದು ಇದರಿಂದಲೇ ಇವರ ವಿರಕ್ತಿಯು ಉಜ್ವಲವಾಯಿತು. ಕಾಲಕ್ಷೇಪಗಳನ್ನು, ಸ್ತೋತ್ರ, ಭಜನೆಗಳನ್ನು, ಪುರಾಣ ಕಾವ್ಯ ವಾಚನಗಳನ್ನು ಕೇಳುತ್ತ ಇವರಿಗೂ ಹಾಡುವ ಆಕಾಂಕ್ಷೆ ಬಲವಾಯಿತು. ಅನಕ್ಷರಸ್ಥರಾಗಿದ್ದ ಈಕೆಯು ಸಾನ್ನಿಧ್ಯದ ಬಲದಿಂದ ಸ್ವಪ್ರಯತ್ನದಿಂದ ಮುಂದೆ ಕಾವ್ಯವಾಚನದಲ್ಲೂ, ಸ್ತೋತ್ರಗಳನ್ನು ಹಾಡುವುದರಲ್ಲೂ ಹಾಗೆಯೇ ವ್ಯಾಖ್ಯಾನಮಾಡುವುದರಲ್ಲೂ ಪರಿಣತಿಯುನ್ನು ಪಡೆದರು. ಪ್ರಾಚೀನ ಗ್ರಂಥಗಳನ್ನು ಮುದ್ದಾಗಿ ಪ್ರತಿಲಿಪಿಮಾಡುವ ಕಾಯಕವನ್ನೇ ಶಿವನ ಆರಾಧನೆಯೆಂದು ಕೈಗೊಂಡರು. ಅದಕ್ಕೆ ಬೇಕಾಗುವ ಲೇಖನ ಸಾಮಗ್ರಿಗಳನ್ನು ತಾವೇ ತಯಾರು ಮಾಡಿಕೊಳ್ಳುತ್ತಿದ್ದರು. ಇವರು ಪ್ರತಿಮಾಡಿದ ಸಿದ್ಧರಾಮಚಾರಿತ್ರವನ್ನು ಕಂಡು ಕರ್ಣಾಟಕ ವಿಶ್ವವಿದ್ಯಾನಿಲಯದ ಉಪಕುಲಪತಿ ಡಾ|| ಆರ್. ಸಿ. ಹಿರೇಮಠ್‌ರವರು ಆಶ್ಚರ್ಯವನ್ನು ವ್ಯಕ್ತಪಡಿಸಿ, ಅದನ್ನು ವಿಶ್ವವಿದ್ಯಾನಿಲಯದ ಗ್ರಂಥ ಭಂಡಾರಕ್ಕೆ ಸ್ವೀಕರಿಸಿರುವರು. ಈಕೆಯು ಅನೇಕ ಕವನಗಳನ್ನೂ ಹಾಡುಗಳನ್ನೂ ರಚಿಸಿರುವರು. ಮನೆಯಲ್ಲಿ ಇವರು ನಡೆಸುತ್ತಿದ್ದ ವೇದಾಂತದ ಸಭೆಗಳಿಗೆ ಸಹೃದಯರೇ ಅಲ್ಲದೆ ಅನೇಕ ಮಠಗಳ ಸ್ವಾಮಿಗಳವರೂ ದಯಮಾಡಿಸುತ್ತಿದ್ದರು. ಇವರು ಮನೆಯಲ್ಲೇ ಶಿಷ್ಯರಿಗೆ ಉಪದೇಶಮಾಡುತ್ತಿದ್ದರಂ. ೧೯೬೮ ರಲ್ಲಿ ಇವರಿಗೆ ಬಹಳ ಪ್ರಿಯವಾಗಿದ್ದ ಶಿವಮಹಿಮ್ನ ಸ್ತೋತ್ರ, ಶಿವತಾಂಡವ ಸ್ತೋತ್ರ, ಶಿವನಾಮ ಸ್ತೋತ್ರಗಳನ್ನು ಹುಡುತ್ತ ಕೇಳುತ್ತ ಶಿವೈಕ್ಯರಾದರು. ಈಕೆಯು ತಳಕಲ್ಲು ಗ್ರಾಮದ ಗೌಡರ ಮನೆತನದ ಸಾಮಾನ್ಯ ಸ್ತ್ರೀಯಾಗಿರದೆ ಕನ್ನಡನಾಡಿನ ವಿಭೂತಿ ಪುರುಷರ ಮತ್ತು ಶಿವಶರಣೆಯರ ದಿವ್ಯಪಂಜ್ತಿಯಲ್ಲಿ ಸೇರಲು ಅರ್ಹರೆನಿಸಿರುವರು.

೬. ಕೃಷ್ಣಗಿರಿ ಕೃಷ್ಣರಾಯರು, ಮೈಸೂರು

ಇವರು ೩-೬-೧೮೭೩ರಲ್ಲಿ ಹಾಸನದಲ್ಲಿ ಜನಿಸಿದರು. ಇವರ ತಂದೆ ಶ್ರೀ ಕೃಷ್ಣಗಿರಿ ಅನಂತಯ್ಯನವರು ಮತ್ತು ತಾಯಿ ನಾಮಗಿರಿಯಮ್ಮನವರು. ಬಾಲ್ಯದಲ್ಲಿ ಇವರ ಅಕ್ಕಂದಿರಾದ ಜಾನಕಮ್ಮನವರು ಹಾಡುತ್ತಿದ್ದ ಕೀರ್ತನೆ ಮತ್ತು ದೇವರನಾಮಗಳನ್ನು ಕೇಳಿ ತಾವೂ ಸಹ ಅವುಗಳನ್ನು ರಾಗವಾಗಿ ಹೇಳುತ್ತಿದ್ದರು. ಸಣ್ಣ ಪುಟ್ಟ ಕಾವ್ಯಗಳನ್ನು ತಮ್ಮ ತಾಯಿಯವರ ಮುಂದೆ ಕುಳಿತು ಹಾಡುತ್ತಿದ್ದರು. ಈ ಆಸಕ್ತಿ ಮತ್ತು ಅಭ್ಯಾಸ ನಿರಂತರವಾಗಿ ಮುಂದುವರಿಯಿತು. ಮುಂದೆ ಕಾಲೇಜು ವಿದ್ಯಾಭ್ಯಾಸ ಮುಗಿಸಿ ಮಹಾರಾಜಾ ಕಾಲೇಜಿನಲ್ಲಿ ಲೈಬ್ರೇರಿಯನ್ ಆಗಿ ಉದ್ಯೋಗದಲ್ಲಿದ್ದರು. ಇವರಿಗೆ ಆಸ್ಥಾನವಿದ್ವಾನ್ ಕೊಯಮತ್ತೂರು ಸುಬ್ಬಣ್ಣನವರಲ್ಲಿ ಸಂಗೀತಪಾಠವಾಗಿದ್ದಿತು. ಇವರು ಪಿಟೀಲು ವಾದನವನ್ನೂ ಮಾಡುತ್ತಿದ್ದರು. ಶ್ರೀ ಎ. ವಿ. ವರದಾಚಾರ್ಯರ ನಾಟಕಗಳನ್ನು ನೋಡಿ, ಅವರು ಹಾಡುತ್ತಿದ್ದ ಕಂದ, ವೃತ್ತಗಳನ್ನು ಕೇಳಿ ಪ್ರಭಾವಿತರಾಗಿದ್ದು ಆ ಮಾರ್ಗವನ್ನು ತಾವೂ ವಾಚನದಲ್ಲಿ ಅನುಸರಿಸುತ್ತಿದ್ದರು. ೧೯೧೯ ರಲ್ಲಿ ಬಿಂದೂರಾಯರ ಗಮಕವಾಚನ ಇವರ ಮೇಲೆ ಪ್ರಭಾವ ಬೀರಿತು. ಇವರ ವಾಚನದಲ್ಲಿ ಮಧ್ಯೆ ಮಧ್ಯೆ ಉಚಿತವಾದಷ್ಟು ಸ್ವಾರಸ್ಯವಾಗಿ ವ್ಯಾಖ್ಯಾನವೂ ಇರುತ್ತಿದ್ದು ಪ್ರಸಿದ್ಧ ಆಂಗ್ಲ ಕವಿಗಳ ವಾಕ್ಯಗಳನ್ನೂ ಉದ್ಧರಿಸುತ್ತಿದ್ದರು. ಶ್ರೀಕೃಷ್ಣರಾಯರ ಗಮಕ ಕಲಾಸೇವೆಯು ನಿಸ್ವಾರ್ಥವಾಗಿ ಅವರು ನಡೆಸುತ್ತಿದ್ದ ಸಾರಸ್ವತ ಕೈಂಕರ್ಯವಾಗಿದ್ದಿತು. ೧೯೪೪ ಕ್ಕೂ ಮುಂಚೆಯೇ ಮೈಸೂರಿನಲ್ಲಿ ಭಗಿನೀ ಸೇವಾ ಸಮಾಜ ಮತ್ತು ವನಿತಾ ಸದನಗಳಲ್ಲಿ ವಿದ್ಯಾರ್ಥಿಗಳಿಗೆ ಕಾವ್ಯವಾಚನವನ್ನು ಕಲಿಸುತ್ತಿದ್ದರು. ಇವರ ಮನೆಯಲ್ಲಿಯೂ ನಿರಂತರವಾಗಿ ಗಮಕ ತರಗತಿಗಳು ನಡೆಯುತ್ತಿದ್ದು ಅದು ಕುಮಾರವ್ಯಾಸನ ಗುರುಕುಲವೇ ಎನ್ನಿಸಿತ್ತು. ಕಲಿಯುವವರಿಗೆ ತಾವೇ ಸೌಕರ್ಯಗಳನ್ನು ಒದಗಿಸಿ ಬೋಧಿಸುವ ವಾತ್ಸಲ್ಯ ಕೃಷ್ಣರಾಯರದು. ೧೯೩೮ ರಲ್ಲಿ ಪರಿಷತ್ತಿನಲ್ಲಿ ಗಮಕ ತರಗತಿಗಳನ್ನು ನಡೆಸುತ್ತಿದ್ದರು.

ಕೃಷ್ಣರಾಯರು ನಾಡಿನ ನಾನಾ ಭಾಗಗಳಲ್ಲಿ ಪ್ರವಾಸವನ್ನು ಕೈಗೊಂಡು ಗಮಕ ಕಲೆಯನ್ನು ತಮ್ಮ ವಾಚನಗಳಿಂದ ಬೆಳಗಿದರು. ೧೯೪೭ ರಿಂದ ೧೯೫೦ ರ ವರೆಗೆ ಎರಡು ವರ್ಷಗಳು ಸತತವಾಗಿ ಮುಜೇಶ್ವರದ ಅನಂತೇಶ್ವರ ದೇವಾಲಯದಲ್ಲಿ ಕುಮಾರವ್ಯಾಸ ಭಾರತ ಮತ್ತು ತೊರವೆ ರಾಮಾಯಣ ವಾಚನ ನಡೆದಾಗ

ರಾಷ್ಟ್ರ ಕವಿಗಳಾದ ಗೋವಿಂದಪೈಗಳು ಕೇಳಿ ಮೆಚ್ಚಿಗೆಯನ್ನು ವ್ಯಕ್ತಪಡಿಸಿದರು. ಕೃಷ್ಣರಾಯರು ಬೇಲೂರಿನಲ್ಲಿ ೧೯೫೩ ರಲ್ಲಿ ನಡೆದ ೩೫ ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ನಡೆದ ಗಮಕ ಗೋಷ್ಠಿಯ ಅಧ್ಯಕ್ಷರಾಗಿದ್ದರು. ಕೃಷ್ಣ ರಾಯರ ಶಿಷ್ಯವರ್ಗವು ವಿಪುಲವಾಗಿದ್ದು ಅವರಲ್ಲಿ ಶ್ರೀ ವೈ. ಕೇ. ಅನಂತಪದ್ಮನಾಭ ರಾಯರು, ನಂ. ಅಶ್ವತ್ಥನಾರಾಯಣ, ಶ್ರೀಮತಿ ಅನ್ನಪೂರ್ಣಮ್ಮ ರಘುಪತಿಶಾಸ್ತ್ರಿ, ಶ್ರೀಮತಿಯರಾದ ಎಸ್. ಸತ್ಯವತಿ, ಚಂದ್ರಾ, ಗೌರಮ್ಮ ಶ್ರೀನಿವಾಸಮೂರ್ತಿ, ಕಮಲಾ ರಾಮಕೃಷ್ಣ ಮತ್ತು ಶ್ರೀ ಬಿ. ಎಸ್. ಎಸ್. ಕೌಶಿಕ್‌ರವರು ಖ್ಯಾತ ಗಮಕಿಗಳಾಗಿದ್ದಾರೆ. ಶ್ರೀ ಕೃಷ್ಣರಾಯರು ೬-೯-೧೯೭೬ ರಲ್ಲಿ ಕಣ್ಮರೆಯಾದರು.

೭. ತಲಕಾಡು ಮಾಯಿಗೌಡರು

ಇವರು ೧೮೯೫ ರಲ್ಲಿ ತಲಕಾಡಿನಲ್ಲಿ ಜನಿಸಿದರು. ಇವರ ತಂದೆ ತಾಯಿ ಮಾದ ಬಸವೇಗೌಡರು ನಂಜಮ್ಮನವರು. ಇವರು ಶಾಲಾ ಉಪಾಧ್ಯಾಯರಾಗಿದ್ದು ಸ್ವಂತ ಅಭ್ಯಾಸದಿಂದ ಕಾವ್ಯವಾಚನ ಕಲೆಯನ್ನು ಬೆಳೆಸಿಕೊಂಡವರು. ಇವರಿಗೆ ಯಕ್ಷಗಾನ ಕಲೆಯಲ್ಲಿಯೂ ಒಳ್ಳೆಯ ಪರಿಶ್ರಮವಿದ್ದಿತು. ಇವರ ಕಾವ್ಯವಾಚನ ದಲ್ಲಿ ಕರ್ಣಾಟಕ ಮತ್ತು ಉತ್ತರಾದಿ ಸಂಗೀತಗಳ ಮಾರ್ಗಗಳನ್ನೇ ಅಲ್ಲವೆ ಯಕ್ಷ ಗಾನದ ಮಟ್ಟುಗಳನ್ನೂ ವಿಶೇಷವಾಗಿ ಬಳಸುತ್ತಿದ್ದರು. ತಮ್ಮ ಶಿಷ್ಯ ಮಿತ್ರ ವೃಂದವರೊಡನೆ ಕೂಡಿ 'ಶನಿಪ್ರಭಾವ' ಮುಂತಾದ ಯಕ್ಷಗಾನ ಪ್ರಸಂಗಗಳನ್ನು ನಡೆಸುತ್ತಿದ್ದರು. ಸುಮಾರು ೬೦ ವರ್ಷಗಳ ಕಾಲ ಕಾವ್ಯವಾಚನಗಳನ್ನು ಕನ್ನಡ ನಾಡಿನ ಅನೇಕ ಭಾಗಗಳಲ್ಲಿಯೂ ಮತ್ತು ಬೊಂಬಾಯಿ ಮುಂತಾದ ಹೊರ ನಾಡುಗಳಲ್ಲಿಯೂ ನಡೆಸಿರುವರು. ಕನ್ನಡ ಪದ್ಯಗಳನ್ನು ವಿಲೋಮಗತಿಯಲ್ಲಿಯೂ ಅಶ್ವಗತಿಯಲ್ಲಿಯೂ ಓದುವುದು ಇವರ ವಾಚನದ ರಂಜನೀಯಾಂಶಗಳಾಗಿದ್ದುವು. ಇವರಿಗೆ ವಿದ್ವಜ್ಜನರಿಂದಲೂ ಮಹಾಜನಗಳಿಂದಲೂ 'ಗಮಕಶಿಖಾಮಣಿ', 'ಗಮಕಕಲಾಕೋವಿದ', 'ಗಮಕರತ್ನ' ಎಂಬ ಬಿರುದುಗಳೂ ಮತ್ತು ೧೯೭೫ ರಲ್ಲಿ ರಾಜ್ಯ ಸರ್ಕಾರದ ಸಾಹಿತ್ಯ ಅಕಾಡೆಮಿಯಿಂದ ಗಮಕ ಕಲೆಗಾಗಿ ಪ್ರಶಸ್ತಿಯೂ ಲಭಿಸಿದ್ದುವು. ಇವರು ೧೨-೫-೧೯೭೬ ರಲ್ಲಿ ನಿಧನರಾದರು.

೮. ಶೇಕದಾರ್ ಸಿ. ಸಿಂಗಾಚಾರ್ಯರು

ಇವರು ೧೮೯೬ ನೇ ಇಸವಿಯಲ್ಲಿ ಹುಣಸೂರು ತಾಲ್ಲೋಕು ಹುಲ್ಯಾಳು ಗ್ರಾಮದಲ್ಲಿ ಹುಟ್ಟಿದರು. ತಂದೆ ಕುಂಟಾಚಾರ್ಯರು. ಚುಂದಗಾಲು ಪುಟ್ಟಾಚಾರ್ಯರು ತಾತ. ಎಲ್. ಎಸ್. ಪರೀಕ್ಷೆ ಆಗಿತ್ತು. ಲೋಕಲ್ ಫಂಡ್ ಗುಮಾಸ್ತೆಯಾಗಿ ತಮ್ಮ ಮೇಲಧಿಕಾರಿಗಳ ಮೆಚ್ಚಿಗೆ ಪಡೆದು ಶೇಕದಾರಿ ಕೆಲಸವನ್ನು ಸಂಪಾದಿಸಿದರು. ಚಿಕ್ಕ ವಯಸ್ಸಿನಲ್ಲಿ ಕೊಂಡಯ್ಯ ಎಂಬುವರಲ್ಲಿ ಪಿಟೀಲು ಕಲಿತಿದ್ದರು. ಜೊತೆಗೆ ಸಾಹಿತ್ಯಜ್ಞಾನವೂ ಇದ್ದಿತು. ಆದುದರಿಂದ ಕಾವ್ಯವಾಚನಮಾಡುವ ಪ್ರವೃತ್ತಿಯನ್ನು ಹೊಂದಿದ್ದರು. ಇವರಿಗೆ ಸುಮಾರು ೩೦-೩೫ ರಾಗಗಳ ಪರಿಚಯವಿತ್ತು. ಒಳ್ಳೆ ಮೈಕಟ್ಟು, ಗೌಳ ಶಾರೀರ. ಅಠಾಣ ಮತ್ತು ಶಂಕರಾಭರಣ ರಾಗಗಳನ್ನು ಹೆಚ್ಚಾಗಿ ಉಪಯೋಗಿಸುತ್ತಿದ್ದರು. ನಾಟಕದಲ್ಲೂ ಪಾತ್ರವಹಿಸಿದ್ದರು. ಅಮಲ್ದಾರ್ ಡಿ. ಎಂ. ವೆಂಕಟಕೃಷ್ಣಪ್ಪನವರು ಆಗಿನ ಕಾಲದ ಹಾರ್ಮೋನಿಯಂ ಸ್ವಬೋಧಿನಿಯ ಲೇಖಕರು, ಹಾರ್ಮೋನಿಯಂ ಬಾರಿಸುವಾಗ ಸಿಂಗಾಚಾರ್ಯರಿಗೆ ರಾಗಗಳ ಪರಿಚಯಮಾಡಿಕೊಡುತ್ತಿದ್ದರು. ಕಾವ್ಯವಾಚನವನ್ನು ದೀರ್ಘಕಾಲ ಬಳಲಿಕೆಯಿಲ್ಲದೆ ಮಾಡುತ್ತಿದ್ದರು. ಕೆಲಸದ ಮೇಲೆ ಸರ್ಕೀಟು ಹೋದಾಗ ಹಳ್ಳಿಗಳಲ್ಲಿ ಜನರನ್ನು ಸೇರಿಸಿ ವಾಚನಮಾಡುತ್ತಿದ್ದರು. ರಾಮೋತ್ಸವಗಳನ್ನು ಏರ್ಪಡಿಸಿ ಚೀರ್ನಹಳ್ಳಿ ಕೃಷ್ಣರಾಯರ ವ್ಯಾಖ್ಯಾನದೊಂದಿಗೆ ವಾಚನಮಾಡುತ್ತಿದ್ದರು. ಜನತೆ ಈ ಇಬ್ಬರ ಕಾರ್ಯಕ್ರಮವನ್ನು ಉತ್ಸಾಹದಿಂದ ಕೇಳುತ್ತಿತ್ತು. ಇವರು ಸುಮಾರು ೪೦-೪೫ ವರ್ಷಗಳ ಕಾಲ ಕಾವ್ಯವಾಚನಗಳನ್ನು ನಡೆಸಿ, ದೇವರ ನಾಮಗಳ ಸಂಕೀರ್ತನಮಾಡಿ ತಮ್ಮ ೭೩ ನೆಯ ವಯಸ್ಸಿನಲ್ಲಿ ದೈವಾಧೀನರಾದರು.

೯. ರಾಮಕೃಷ್ಣಶಾಸ್ತ್ರಿಗಳು, ಬೆಂಗಳೂರು

ಇವರು ೧೮೯೬ ರಲ್ಲಿ ಜನಿಸಿದರು. ಇವರು ಬಾಲ್ಯದಲ್ಲಿ ಗಮಕ ಕಲೆಯನ್ನು ಗಮಕ ವಿದ್ವಾನ್ ಜವಳೀ ಅಂಗಡಿ ಶ್ರೀ ತಮ್ಮಯ್ಯನವರಲ್ಲಿ ಅಭ್ಯಾಸಮಾಡಿದ್ದರು. ಗಮಕ ಮತ್ತು ಹರಿಕಥೆಗಳಿಗೆ ಬೇಕಾಗುವಷ್ಟು ಸಂಗೀತವನ್ನು ಸಂಗೀತ ವಿದ್ವಾಂಸರಾಗಿದ್ದ ವಾಸುದೇವಾಚಾರ್ಯರು, ಚಿಕ್ಕರಾಮರಾಯರು ಮತ್ತು ಬೆಳಕವಾಡಿ ಶ್ರೀನಿವಾಸ ಅಯ್ಯಂಗಾರ್ಯರವರಲ್ಲಿ ಅಭ್ಯಾಸಮಾಡಿದ್ದರು. ಕಾವ್ಯವಾಚನವನ್ನು

೫೦ ವರ್ಷಗಳ ಹಿಂದಿನಿಂದಲೂ ಮಾಡುತ್ತಿದ್ದರು. ಇವರ ಸಾಮಾನ್ಯ ವಿದ್ಯಾಭ್ಯಾಸ ಅಂದಿನ ಮೆಟ್ರಿಕ್ಯುಲೇಷನ್‌ವರೆಗೆ. ಸುಮಾರು ೧೯೩೦ ರ ಸಮಯದಲ್ಲಿಯೇ ಮೈಸೂರು ಸಂಸ್ಕೃತ ಪಾಠಶಾಲಾ ವಿದ್ವಾಂಸರು ಆಸ್ಥಾನ ವಿದ್ವಾನ್ ನಂಜನಗೂಡು ಶ್ರೀಕಂಠಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ 'ಗಮಕಿ' ಎಂಬ ಬಿರುದನ್ನು ಕೊಟ್ಟಿದ್ದರು. ಮುಂದೆ ರಾಜಾಜೀ ನಗರದ ದಾಸಾಶ್ರಮದಲ್ಲಿ ನಡೆದ ಕೀರ್ತನಕಾರರ ಸಮ್ಮೇಳನ ನಲ್ಲಿ 'ಕೀರ್ತನ ಭೂಷಣ' ಎಂಬ ಬಿರುದನ್ನು ಪಡೆದರು. ದ್ವಾರಕಾ ಶೃಂಗೇರಿ ಜಗದ್ಗುರುಗಳಿಂದ 'ಕೀರ್ತನ ಕಲಾನಿಧಿ' ಎಂಬ ಪ್ರಶಸ್ತಿಯನ್ನೂ ಶಿವಮೊಗ್ಗೆಯ ವಿದ್ವನ್ಮಂಡಳಿ ಮತ್ತು ಮಹಾಜನರಿಂದ "ಕೀರ್ತನ ಕಮಲ ಭಾಸ್ಕರ" ಎಂಬ ಪ್ರಶಸ್ತಿಯನ್ನೂ ಪಡೆದಿದ್ದರು. ಮೈಸೂರಿನಲ್ಲಿ ಆಕಾಶವಾಣಿಯನ್ನು ಪ್ರಾರಂಭಿಸಿದ ಮೊದಲ ದಿನವೇ ಇವರ ಹರಿಕಥೆಯು ಪ್ರಸಾರವಾಯಿತು. ಹರಿಕಥೆ ಮತ್ತು ಪದ್ಯ ಗದ್ಯ ಗ್ರಂಥರಚನೆಯಲ್ಲಿ ವಿಶೇಷ ಪರಿಶ್ರಮ ಹೊಂದಿದ್ದರು. ಇವರು ರಚಿಸಿದ 'ಮಾತೃಭಕ್ತಿ' 'ಸತೀಸಾವಿತ್ರಿ' ಮತ್ತು 'ರಾವಣ ದಿಗ್ವಿಜಯ' ನಾಟಕಗಳು ನಾಲ್ವಡಿ ಕೃಷ್ಣರಾಜಪ್ರಭುಗಳ ಸಮ್ಮುಖದಲ್ಲಿ ಅಭಿನಯಿಸಲ್ಪಟ್ಟಿದ್ದುವು. 'ಭೂ-ಕೈಲಾಸ', 'ವಸಂತಸೇನೆ', 'ಕಬೀರದಾಸ್' ಮತ್ತು 'ಹರಿಶ್ಚಂದ್ರ' 'ವೆಂಕಟೇಶ್ವರ ಮಹಾತ್ಮೆ' ಚಲನ ಚಿತ್ರಗಳಿಗೆ ಹಾಡುಗಳನ್ನೂ ಪದ್ಯಗಳನ್ನೂ ರಚಿಸಿದವರು ಇವರೇ. ಮಾಜಿ ವಿದ್ಯಾ ಸಚಿವರಾದ ಶ್ರೀ ಕೆ. ವಿ. ಶಂಕರೇಗೌಡರು ರಚಿಸಿ ಅಭಿನಯಿಸಿದ 'ಪಾದುಕಾ ಕಿರೀಟಿ' ನಾಟಕಕ್ಕೆ ಬಳಸಿದ ಎಲ್ಲ ಹಾಡು ಪದ್ಯಗಳೂ ಇವರ ರಚನೆಗಳೇ. ಧಾರವಾಡದ ಆಕಾಶವಾಣಿ ಕೇಂದ್ರದಿಂದ ಆಗಾಗ್ಗೆ ಪ್ರಸಾರ ವಾಗುತ್ತಿರುವ 'ಶ್ರೀರಾಮ ಸುಪ್ರಭಾತ'ದ ರಚಯಿತರೂ ಇವರೇ. ಇವರು ಲೇಖಕ ರಾಗಿ ವಿಪುಲವಾದ ಸಾಹಿತ್ಯವನ್ನು ರಚಿಸಿರುವರು. ಆನಂದರಾಮಾಯಣ, ಅದ್ಭುತ ರಾಮಾಯಣ, ಶ್ರೀಮದ್ಭಾಗವತ, ದೇವೀ ಭಾಗವತಗಳನ್ನು ಕೀರ್ತನರೂಪದ ಲ್ಲಿಯೂ ಪೂಜ್ಯ ಗಾಂಧೀಜಿ, ಶ್ರೀರಾಮಕೃಷ್ಣ ಪರಮಹಂಸರ ಕತೆಗಳನ್ನು ಹರಿಕಥೆ ಗಳನ್ನಾಗಿಯೂ, ಹೇಳುತ್ತಿದ್ದರು. ಗೋಂದಾವಳೀ ಬ್ರಹ್ಮಚೈತನ್ಯರ ಚರಿತ್ರೆ ಯನ್ನು ಒಂದು ಸಾವಿರ ಪದ್ಯಗಳನ್ನೊಳಗೊಂಡ ಭಾಮಿನೀ ಷಟ್ಪದೀ ಕಾವ್ಯ ವಾಗಿಯೂ ರಚಿಸಿದ್ದಾರೆ. ಇವರ ಗದ್ಯ ಗ್ರಂಥಗಳು 'ಕೇದಾರ ಬದರೀ ಯಾತ್ರಾ ದರ್ಪಣ', 'ಶ್ರೀ ಸಾಯೀ ರಾಮಸುಧಾ', 'ಶೃಂಗಗಿರಿ ಮಹಾ ತಪಸ್ವಿ' ಮುಂತಾದುವು ಪ್ರಕಟವಾಗಿವೆ. ಇವರು ಕಾವ್ಯವಾಚನವನ್ನೂ ಹರಿಕಥಾ ಕೀರ್ತನೆ ಗಳನ್ನೂ ಶೃಂಗೇರಿ ಜಗದ್ಗುರುಗಳವರ ಮಹಾ ಸನ್ನಿಧಾನದಲ್ಲಿಯೂ ಕಲ್ಕತ್ತೆ, ಬೊಂಬಾಯಿ, ದೆಹಲಿ, ದುರ್ಗಾಪುರ, ಕರಾಡ್ ಮುಂತಾದ ಕಡೆ ಕರ್ನಾಟಕ ಸಂಘಗಳಲ್ಲಿಯೂ ನಡೆಸಿ ಪ್ರಖ್ಯಾತರಾಗಿದ್ದರು.

೧೦. ಗುರುರಾವ್ ದೇಶಪಾಂಡೆ

ಇವರು ೧೮೮೯ರಲ್ಲಿ ಧಾರವಾಡದಲ್ಲಿ ಜನಿಸಿದರು. ಇವರದು ಸಂಗೀತಗಾರರ ಮನೆತನ. ಇವರ ತಂದೆ ಮತ್ತು ಅಕ್ಕನವರು ಶ್ರೇಷ್ಠ ಹಿಂದೂಸ್ತಾನೀ ಸಂಗೀತಗಾರರಾದ ಶ್ರೀಭಾಸ್ಕರ ಬೂವಾ ಬಕ್ಲೆಯವರ ಶಿಷ್ಯರಾದ ದತ್ತೋಪಂತ ಜೋಷಿಯವರಲ್ಲಿ ಸಂಗೀತಾಭ್ಯಾಸಮಾಡಿದರು. ಪ್ರಸಿದ್ಧ ಅಭಿನಯಕಾರರಾದ ಗರೂಡ್ ಸದಾಶಿವರಾಯರು, ವೆಂಕೋಬರಾಯರು, ವಾಮನರಾವ್ ಮಾಸ್ತರ ಮುಂತಾದವರ ನಾಟಕ ಕಂಪೆನಿಗಳಲ್ಲಿ ಸುಮಾರು ೩ ವರ್ಷ ಅಭಿನಯಿಸಿ ಶ್ರೇಷ್ಠ ನಟರೆನಿಸಿಕೊಂಡಿದ್ದಾರೆ. ೧೯೩೪ರಲ್ಲಿ ಜಮಖಂಡಿ ಮಹಾರಾಜರ ವಿಶೇಷ ಆಮಂತ್ರಣದ ಮೇಲೆ ಸಂಗೀತ ಕಛೇರಿಯನ್ನು ನಡೆಸಿ ಖ್ಯಾತರಾದರು. ಇವರ ಹಾಡುಗಾರಿಕೆಯನ್ನು ಓಡಿಯನ್ ಕಂಪೆನಿಯವರು ಧ್ವನಿಮುದ್ರಿಸಿಕೊಂಡಿರುವರು. ೧೯೩೯ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಧಾರವಾಡದಲ್ಲಿ ನಡೆಸಿದ ಗಮಕ ತರಗತಿಗೆ ಇವರೂ ಸೇರಿ ಭಾರತ ಬಿಂದೂರಾಯರ ಪ್ರಿಯಶಿಷ್ಯರಾಗಿ ಗಮಕ ಪರೀಕ್ಷೆಯಲ್ಲಿ ಅತ್ಯುಚ್ಚ ಶ್ರೇಣಿಯಲ್ಲಿ ಉತ್ತೀರ್ಣರಾದರು. ೧೯೪೭-೪೩ರಲ್ಲಿ ತಾವು ಗಮಕ ತರಗತಿಗಳನ್ನು ನಡೆಸಿರುವರು. ಇವರ ಸಾಮಾನ್ಯ ವಿದ್ಯಾಭ್ಯಾಸ ಇಂಟರ್ಮಿಡಿಯಟ್‌ವರೆಗೆ. ಇವರ ಸಂಗೀತ ಮತ್ತು ಕಾವ್ಯವಾಚನ ಕಾರ್ಯಕ್ರಮಗಳು ೧೯೫೦ರಿಂದಲೂ ಧಾರವಾಡದ ಆಕಾಶವಾಣಿ ಕೇಂದ್ರದಿಂದ ಆಗಿಂದಾಗ್ಗೆ ಪ್ರಸಾರವಾಗಿವೆ. ಕರ್ಣಾಟಕ ಮತ್ತು ಹಿಂದೂಸ್ತಾನಿ ಸಂಗೀತಗಳಲ್ಲಿ ವಿಶೇಷ ಪರಿಶ್ರಮ ಹೊಂದಿ ಈಗಲೂ ತಮ್ಮ ವೃದ್ಧಾಪ್ಯದಲ್ಲಿಯೂ ಸಹ ಕಾವ್ಯವಾಚನಮಾಡುತ್ತಲೂ ಶಿಷ್ಯವರ್ಗವನ್ನು ಬೆಳೆಸುತ್ತಲೂ ಇರುವರು.

೧೧. ಹಾಡಿನ ನಾಗಮ್ಮನವರು, ಮೈಸೂರು

ಇವರು ಸುಮಾರು ೧೯೦೦ರಲ್ಲಿ ಜನಿಸಿದರು. ಇವರ ತಂದೆ ಸುಬ್ಬಣ್ಣನವರು. ಈಕೆಯು ಪ್ರಸಿದ್ಧ ಕವಿಗಳೂ ಗಮಕಿಗಳೂ ಆಗಿದ್ದ ಆಸ್ಥಾನ ವಿದ್ವಾನ್, ಅಭಿನವ ಕಾಳಿದಾಸ ಬಸವಪ್ಪಶಾಸ್ತ್ರಿಗಳ ಶಿಷ್ಯೆ. ಇವರು ಸಂಪ್ರದಾಯದ ಹಾಡುಗಳನ್ನೂ ಸ್ತೋತ್ರಗಳನ್ನೂ ದೇವರನಾಮಗಳನ್ನೂ ತಮ್ಮ ಮಧುರ ಕಂಠದಿಂದ ಹಾಡಿ ಮೈಸೂರಿನ ಜನರ ಮನಸ್ಸನ್ನು ಸೂರೆಗೊಂಡಿದ್ದರು. ಇವರ ಕೀರ್ತಿಯು ಅರ

ಮನೆಗೂ ಮುಟ್ಟಿ ಅವರು ಈಕೆಯನ್ನು ಅರಮನೆಯ ಕಟ್ಟಳೆಯ ಮುತ್ತೈದೆ ಯನ್ನಾಗಿ ನೇಮಿಸಿಕೊಂಡಿದ್ದರು. ಅರಮನೆಯಲ್ಲಿ ನಡೆಯುತ್ತಿದ್ದ ಹಬ್ಬಹುಣ್ಣಿಮೆ ಗಳು, ಉತ್ಸವ ಸಮಾರಂಭಗಳು, ಶುಭಕಾರ್ಯಗಳ ಸಂದರ್ಭದಲ್ಲಿ ಇವರು ಎಣ್ಣೆ ಶಾಸ್ತ್ರದಿಂದ ಪ್ರಾರಂಭವಾಗಿ ಆರತಿ ಅಕ್ಷತೆಗಳು ಮುಗಿಯುವವರೆಗೂ ಎಲ್ಲಾ ಕಟ್ಟಳೆಯ ಸಂಪ್ರದಾಯದ ಹಾಡುಗಳನ್ನೂ ಹಾಡುತ್ತಿದ್ದರು. ಇವರು ಮಹಾ ಮಾತೃಶ್ರೀ ವಾಣೀವಿಲಾಸ ಸನ್ನಿಧಾನಕ್ಕೆ ಬಹಳ ಅಚ್ಚುಮೆಚ್ಚಾಗಿದ್ದರು. ಸನ್ನಿಧಾನ ದವರು ಯಾತ್ರಾಪ್ರವಾಸ ಹೊರಟಾಗ ಇವರನ್ನು ತಮ್ಮ ಪರಿವಾರದೊಡನೆ ಕರೆ ದೊಯ್ಯುತ್ತಿದ್ದರು. ಈಕೆಯಿಂದ ಗದುಗಿನ ಭಾರತ, ಜೈಮಿನಿ ಭಾರತ, ತೊರವೆ ರಾಮಾಯಣ ಮುಂತಾದ ಕಾವ್ಯಗಳ ವಾಚನಗಳು ಸನ್ನಿಧಾನದವರ ಸಮ ಕ್ಷಮದಲ್ಲಿ ಅನೇಕ ಬಾರಿ ನಡೆಯುತ್ತಿದ್ದುವು. ಇವರು ವಾಚನವನ್ನೇ ಅಲ್ಲದೆ ವ್ಯಾಖ್ಯಾನವನ್ನೂ ನಡೆಸುತ್ತಿದ್ದರು.

ಮೈಸೂರಿನ ಪ್ರಸಿದ್ಧ ಸಮಾಜ ಸೇವಕಿಯಾದ ತಿಮ್ಮಮ್ಮನವರು ಮತ್ತು ಕೆ.ಡಿ. ರುಕ್ಮಿಣಿಯಮ್ಮನವರು ಮೈಸೂರು ಲಕ್ಷ್ಮೀಪುರಂನಲ್ಲಿ ಸ್ಥಾಪಿಸಿ ನಡೆಸು ತ್ತಿದ್ದ ಮಹಿಳಾ ಸಮಾಜದಲ್ಲಿ ನಾಗಮ್ಮನವರ ಕಾವ್ಯವಾಚನಗಳು ನಿರಂತರವಾಗಿ ನಡೆಯಲು ವ್ಯವಸ್ಥೆ ಮಾಡಿದ್ದರು. ಮೈಸೂರಿನ ನಾಲ್ಕೂ ಮೂಲೆಯಲ್ಲಿರುವ ವರುಣ, ವಾಜಮಂಗಲ, ತಾಂಡವಪುರ ಮತ್ತು ಬೋಗಾದಿ ಗ್ರಾಮಗಳಲ್ಲಿಯೂ ನಾಗಮ್ಮನವರ ಕಾವ್ಯವಾಚನಗಳು ನಡೆಯುತ್ತಿದ್ದುವು. ಇವರು ಮಹಿಳಾಕಾಲೇಜಿನ ವಿದ್ಯಾರ್ಥಿನಿ ಮತ್ತು ಶಿಕ್ಷಕಿಯರಿಗೂ ಮತ್ತು ಲಕ್ಷ್ಮೀಪುರಂ ಮಾಧ್ಯಮಿಕ ಶಾಲೆಯ ವಿದ್ಯಾರ್ಥಿನಿಯರಿಗೂ ಕಾವ್ಯವಾಚನವನ್ನು ಕಲಿಸುತ್ತಿದ್ದರು. ಕಾವ್ಯವಾಚನ ಮಾತ್ರವೇ ಅಲ್ಲದೆ ಆಧುನಿಕ ಭಾವಗೀತೆಗಳನ್ನೂ ಹಾಡಿ ಶ್ರೋತೃಗಳ ಕಣ್ಣುಗಳು ತೇವವಾಗುವಂತೆ ಮಾಡುತ್ತಿದ್ದರು. ಇವರ ಹಾಡುಗಳನ್ನು ಸುಮಾರು ೧೯೧೦–೧೧ ರಲ್ಲಿ ಹೆಚ್.ಎಂ.ವಿ. ಕಂಪೆನಿಯವರು ಧ್ವನಿಮುದ್ರಿಸಿಕೊಂಡಿರುತ್ತಾರೆ. ವಿನಯದ ಮೂರ್ತಿಯಾಗಿದ್ದ ನಾಗಮ್ಮನವರು ವೃದ್ಧಾಪ್ಯದಲ್ಲಿ ನಿರ್ವೇಗವನ್ನು ಹೊಂದಿ ಕಾಶಿ ಯಲ್ಲಿ ತಮ್ಮ ಕೊನೆಯ ದಿನಗಳನ್ನು ಕಳೆದರು.

೧೨. ಎಂ. ರಮಾಬಾಯಿ, ಮಂಜೇಶ್ವರ

ಇವರು ೧೯೦೧ರಲ್ಲಿ ಮಂಜೇಶ್ವರದಲ್ಲಿ ಜನಿಸಿದರು. ಇವರ ತಂದೆಯವರು ಎಂ.ವಿ. ಪದ್ಮನಾಭಭಟ್ಟರು. ರಾಷ್ಟ್ರಕವಿಗಳಾದ ಮಂಜೇಶ್ವರದ ಶ್ರೀ ಗೋವಿಂದಪೈ ಗಳವರು ಇವರ ಅಣ್ಣಂದಿರು. ಬಾಲ್ಯದಲ್ಲಿಯೇ ಅಂದರೆ ಸುಮಾರು ಹದಿನೇಳನೆಯ ವಯಸ್ಸಿನಲ್ಲಿಯೇ ಪತಿಯನ್ನು ಕಳೆದುಕೊಂಡ ಇವರು ಮನೆಯಲ್ಲಿಯೇ ಕಷ್ಟದ ದಿನ ಗಳನ್ನು ಕಳೆದರು. ಮುಂದೆ ಪ್ರಸಿದ್ಧ ವಕೀಲರಾಗಿದ್ದ ಎಂ. ಎನ್. ಪ್ರಭುರವರ ವಾತ್ಸಲ್ಯ ಮತ್ತು ಪ್ರೋತ್ಸಾಹಗಳಿಂದ ವಿದ್ಯಾಭ್ಯಾಸವನ್ನು ಮುಂದುವರಿಸಿ ಕನ್ನಡ ಪಂಡಿತೆಯಾಗಿ ಪ್ರೌಢಶಾಲೆಯಲ್ಲಿ ಉದ್ಯೋಗದಲ್ಲಿದ್ದು ನಿವೃತ್ತರಾದರು. ಇವರು ಗಮಕ ಕಲೆಯನ್ನು ಶ್ರೀ ಕೃಷ್ಣಗಿರಿ ಕೃಷ್ಣರಾಯರಲ್ಲಿ ಅಭ್ಯಾಸ ಮಾಡಿ ೧೯೬೧ರಲ್ಲಿ ನಡೆದ ಗಮಕ ಪರೀಕ್ಷೆಯಲ್ಲಿ ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾದರು. ಇವರಿಗೆ ಕನ್ನಡ, ತುಳು ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಪರಿಶ್ರಮವಿದ್ದು ನಾಟಕಗಳ ವಿಷ್ಕಂಭಕಗಳಲ್ಲಿ ಪ್ರೇಕ್ಷಕರನ್ನು ರಂಜಿಸಲು ಅನೇಕ ಹಾಸ್ಯದ ಚುಟಕಗಳನ್ನು ರಚಿಸಿರುವರು. ಇವರು ಉದ್ಯೋಗದಲ್ಲಿದ್ದ ಶಾಲೆಗಳಲ್ಲಿ ವಿದ್ಯಾರ್ಥಿನಿಯರಿಗೆ ಗಮಕ ಕಲೆಯನ್ನು ಕಲಿಸುತ್ತಿದ್ದರು. ಇವರಿಗೆ ಸಂಗೀತವನ್ನು ಕಲಿಸಿದವರು ಇಚ್ಚಪ್ಪನವರ ಮಗಳು ಸೌಭಾಗ್ಯವತಿ ಶ್ಯಾಮಾರವರು. ಪಿಳ್ಳಾರಿ ಗೀತೆಗಳು, ವರ್ಣ, ಕೀರ್ತನೆಗಳು ಅಭ್ಯಾಸವಾಗಿದ್ದುವು. ಇವರಿಗೆ ಗಮಕ ಕಲೆಯಲ್ಲಿ ವಿಶೇಷ ಅಭಿಮಾನವಿದ್ದು ವಿದ್ಯಾರ್ಥಿನಿಯರಿಗೆ ಕಾವ್ಯವಾಚನ ಕಲೆಯನ್ನು ಕಲಿಸುವ ಹಂಬಲದಿಂದ ಗಮಕ ಕಲಾಸೇವೆಯನ್ನು ಯಥೇಚ್ಛವಾಗಿ ಮಾಡಿರುವರು.

೧೩. ಮೋಟಗಾನಹಳ್ಳಿ ಸುಬ್ರಹ್ಮಣ್ಯಶಾಸ್ತ್ರಿಗಳು ಬೆಂಗಳೂರು

ಇವರು ೧೯೦೨ರಲ್ಲಿ ಜನಿಸಿದರು. ಇವರ ತಂದೆ ಮೋಟಗಾನಹಳ್ಳಿ ಶಂಕರ ಶಾಸ್ತ್ರಿಗಳು, ತಾಯಿ ಭಾಗೀರಥಮ್ಮನವರು. ವಿದ್ವಾಂಸರ ಮನೆತನದಲ್ಲಿ ಜನಿಸಿ ಉತ್ತಮ ಸಂಸ್ಕಾರವನ್ನು ಪಡೆದಿದ್ದ ಶಾಸ್ತ್ರಿಗಳು ಒಳ್ಳೆಯ ಶಾರೀರವನ್ನು ಹೊಂದಿದ್ದು, ಸಂಸ್ಕೃತ ಶ್ಲೋಕಗಳನ್ನೂ ಉಭಯ ಭಾಷೆಗಳಲ್ಲಿ, ವೃತ್ತ, ಕಂದ ಪದ್ಯಗಳನ್ನೂ ಮನೋಹರವಾಗಿ ಹಾಡುತ್ತಿದ್ದರು. ಇವರು ಪ್ರತಿಭಾ ಸಂಪನ್ನ

ರಾದ ಶ್ರೇಷ್ಠ ಕವಿಗಳೂ, ಉತ್ತಮ ವಾಗ್ಮಿಗಳೂ ಆಗಿದ್ದರು. ಇವರ ಕಾರ್ಯಕ್ರಮಗಳು ವಿದ್ವಜ್ಜನ ಪ್ರಶಂಸೆಯನ್ನು ಪಡೆದಿದ್ದುವು. ಪರಿಷತ್ತಿನ ನಿಕಟ ಬಾಂಧವ್ಯವನ್ನು ಪಡೆದಿದ್ದ ಇವರು ಅನೇಕ ವರ್ಷಗಳ ಕಾಲ 'ಕನ್ನಡನುಡಿ'ಯ ಸಂಪಾದಕರಾಗಿದ್ದರು. ಶ್ರೀಮದ್ವಾಲ್ಮೀಕಿ ರಾಮಾಯಣವನ್ನು ಕನ್ನಡ ತಾತ್ಪರ್ಯದೊಡನೆ ಪ್ರಚುರ ಪಡಿಸಿರುವರು. ಕೆಲವು ಸ್ವತಂತ್ರ ಗ್ರಂಥಗಳನ್ನೂ ರಚನೆ ಮಾಡಿರುವರು. ಹಳಗನ್ನಡ ಕಾವ್ಯಗಳ ವಾಚನ ಇವರ ವೈಶಿಷ್ಟ್ಯ. ಮೈಸೂರಿನ ಆಸ್ಥಾನ ವಿದ್ವಾಂಸರಾಗಿದ್ದ ಶಾಸ್ತ್ರಿಗಳು ೧೯೬೦ರಲ್ಲಿ ನಿಧನರಾದರು.

೧೪. ಟಿ. ರಾಮಾಶಾಸ್ತ್ರಿಗಳು, ಮತ್ತೂರು

ಇವರು ೧೯೦೨ರಲ್ಲಿ ಜನಿಸಿದರು. ಇವರು ಸಂಸ್ಕೃತ ವಿದ್ವಾಂಸರು. ಕೇಳ್ಮೆಯ ಬಲದಿಂದಲೇ ಸುಮಾರು ೫೦ ರಾಗಗಳನ್ನು ಸಮರ್ಥ ರೀತಿಯಲ್ಲಿ ಹಾಡಬಲ್ಲರು. ೧೯೩೭ ರಲ್ಲಿ ಭಾರತದ ಬಿಂದೂರಾಯರ ಕಾವ್ಯವಾಚನವನ್ನು ಕೇಳಿ ಪ್ರಭಾವಿತರಾಗಿ ತಮ್ಮ ಮಿತ್ರರಾದ ಲಕ್ಷ್ಮೀ ಕೇಶವಶಾಸ್ತ್ರಿಗಳೊಡನೆ ಕಾವ್ಯವಾಚನ, ವ್ಯಾಖ್ಯಾನಗಳನ್ನು ಅಭ್ಯಾಸಮಾಡಿದರು. ಇವರಿಬ್ಬರ ಕಾರ್ಯಕ್ರಮಗಳು ಜನಪ್ರಿಯವಾಗಿ ನಾಡಿನಲ್ಲೆಲ್ಲಾ ಪ್ರಶಂಸೆಗೆ ಪಾತ್ರವಾಗಿವೆ. ಸಾಹಿತ್ಯ-ಸಂಸ್ಕೃತಿ ಪ್ರಸಾರ ಇಲಾಖೆಯ ಆಶ್ರಯದಲ್ಲಿ ಅನೇಕಕಡೆ ಇವರ ಕಾರ್ಯಕ್ರಮಗಳು ನಡೆದಿವೆ. ೧೯೫೫ ರಿಂದ ೧೯೬೨ ರ ವರೆಗೆ ಆಕಾಶವಾಣಿಯಿಂದ ಇವರ ವಾಚನ, ವ್ಯಾಖ್ಯಾನ ಕಾರ್ಯಕ್ರಮಗಳು ಪ್ರಸಾರವಾಗಿವೆ. ಪರಿಷತ್ತಿನಲ್ಲಿ ಇವರ ಕಾರ್ಯಕ್ರಮಗಳು ನಡೆದು ಕನ್ನಡಿಗರ ಅಭಿನಂದನೆಗೆ ಪಾತ್ರರಾಗಿರುವರು. ಮಲ್ಲೇಶ್ವರದ ಶ್ರೀರಾಮ ಭಜನ ಮಂಡಲಿಯಲ್ಲಿ ಹತ್ತು ವರ್ಷಗಳ ಕಾಲ ಇವರ ಕಾರ್ಯಕ್ರಮ ನಡೆಯಿತು. ಆವನೀ ಮತ್ತು ದ್ವಾರಕಾ ಪೀಠಾಧೀಶ್ವರರು ಇವರ ಕಾವ್ಯವಾಚನ ವ್ಯಾಖ್ಯಾನಗಳನ್ನು ಕೇಳಿ ಕ್ರಮವಾಗಿ "ಗಮಕ ಕಲಾನಿಧಿ" ಮತ್ತು "ವ್ಯಾಖ್ಯಾನ ವಾಚಸ್ಪತಿ" ಎಂಬ ಪ್ರಶಸ್ತಿಗಳನ್ನಿತ್ತು ಆಶೀರ್ವದಿಸಿರುವರು. ೧೩-೧೪ ಮಾರ್ಚಿ ೧೯೭೧ ರಲ್ಲಿ ಹೊಂಬುಚ್ಚದಲ್ಲಿ ನಡೆದ ಕಾವ್ಯವಾಚನದ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಸಂಘದವರು ಇವರನ್ನು ಗೌರವಿಸಿರುವರು. ಸ್ವಗ್ರಾಮದಲ್ಲಿನ ಅನೇಕ ಉತ್ಸಾಹಿಗಳು ಇವರಲ್ಲಿ ವಾಚನ-ವ್ಯಾಖ್ಯಾನ ಕಲೆಯನ್ನು ಕಲಿತಿರುವರು.

೧೫. ಹನುಮನಾಳ ಸಿದ್ದೇಗೌಡರು, ಮೈಸೂರು

ತಿರುಮಕೂಡಲು ನರಸೀಪುರದ ತಾಲ್ಲೂಕು ಬನ್ನೂರು ಹೋಬಳಿ ಹನುಮನಾಳು ಗ್ರಾಮದ ಒಕ್ಕಲಿಗ ಕುಟುಂಬದಲ್ಲಿ ಇವರ ಜನನ. ಇವರ ವಾಕ್ ಲಹರಿಗೆ ಮೆಚ್ಚಿ ಒಬ್ಬ ಶ್ರೀ ವೈಷ್ಣವ ವಿದ್ವಾಂಸರು ಇವರಿಗೆ ವಿದ್ಯಾದಾನ ಮಾಡಿದರು. ತಮ್ಮ ಹದಿನೆಂಟನೇ ವರ್ಷದಲ್ಲಿ ಒಬ್ಬ ಆಸ್ಥಾನ ವಿದ್ವಾಂಸರಲ್ಲಿ, "ನಾನು ಚಾಮರಾಜ ಒಡೆಯರ್‌ರವರ ಸಮ್ಮುಖದಲ್ಲಿ ರಾಜಶೇಖರವಿಳಾಸ ಕಾವ್ಯವನ್ನು ವಾಚನ ವ್ಯಾಖ್ಯಾನ ಮಾಡುತ್ತೇನೆ" ಎಂದರಂತೆ. ಅಂದು ಸಂಜೆ ಪ್ರಾರಂಭವಾದ ವಾಚನವು ಬೆಳಗಿನಜಾವದವರೆಗೂ ನಡೆಯಿತೆಂದೂ, ಶ್ರೋತೃಗಳು ಕದಲದೆ, ವಿಸ್ಮಿತರಾಗಿ ಕೇಳುತ್ತಿದ್ದರೆಂದೂ ಹೇಳುವರು. ಪ್ರಭುಗಳು ಇವರ ವೈದುಷ್ಯವನ್ನು ಮೆಚ್ಚಿ ನವರತ್ನಖಚಿತವಾದ ಪದಕವನ್ನೂ ತೋಡಾಗಳನ್ನೂ 'ವೇದಾಂತ ರತ್ನ' ಎಂಬ ಬಿರುದನ್ನೂ ಅನುಗ್ರಹಿಸಿ ಮೈಸೂರಿನಲ್ಲಿರಲು ವಸತಿ ಸೌಕರ್ಯಗಳನ್ನು ಏರ್ಪಡಿಸಿದರು. ಅನೇಕ ಗ್ರಂಥಗಳು ಇವರಿಗೆ ಕಂಠಸ್ಥವಾಗಿದ್ದುವು. ಇವರ ವ್ಯಾಖ್ಯಾನಗಳು ವಿದ್ವತ್ಪೂರ್ಣವಾಗಿದ್ದುವು. ಆಗಿನ ಕಾಲದಲ್ಲಿ ಇವರ ವಾಚನಗಳನ್ನು ಕೇಳಲು ಐದು ಸಾವಿರ ಜನರು ಸೇರುತ್ತಿದ್ದರು.

೧೬. ಬಿ. ಎಸ್. ವೆಂಕಟೇಶಯ್ಯನವರು

ಇವರು ಸಂಗೀತ ಸಾಹಿತ್ಯಗಳ ನೆಲೆಯಾಗಿದ್ದ ಮನೆತನದಲ್ಲಿ ಹುಟ್ಟಿದರು. ಇವರ ಮಾತಾಮಹರಾಗಿದ್ದ ವಿದ್ವಾನ್ ವೆಂಕಟೇಶಶಾಸ್ತ್ರಿಗಳು ಬೇಗಡೆ ಕೆಂಪೇಗೌಡರ ಆಪ್ತರಾಗಿದ್ದು ನಾಲ್ವಡಿ ಕೃಷ್ಣರಾಜ ಒಡೆಯರ್‌ರವರಿಂದ ತೋಡಾಗಳನ್ನು ಪಡೆದಿದ್ದರು. ವೆಂಕಟೇಶಯ್ಯನವರು ವಿದ್ವಾನ್ ಸುಬ್ಬರಾಯಪ್ಪನವರಲ್ಲಿ ಸಂಗೀತ ಪಿಟೀಲು ವಾದ್ಯಗಳನ್ನು ಅಭ್ಯಾಸ ಮಾಡುತ್ತಿದ್ದರು. ಪರಿಷತ್ತಿನಲ್ಲಿ ಭಾರತದ ಬಿಂದೂರಾಯರು ೧೯೩೫ರಲ್ಲಿ ನಡೆಸುತ್ತಿದ್ದ ಗಮಕ ತರಗತಿಗಳಲ್ಲಿ ಶಿಕ್ಷಣವನ್ನು ಪಡೆದಿದ್ದರು. ಇವರ ಕಾವ್ಯವಾಚನಗಳು ಆಸ್ಥಾನ ವಿದ್ವಾನ್ ನವನವ ಕಾಳಿದಾಸ ಶ್ರೀ ನಂಜನಗೂಡು ಶ್ರೀಕಂಠಶಾಸ್ತ್ರಿಗಳ ಮತ್ತು ಕವಿ ವೆಂಕಟಸುಬ್ಬ ಭಾರತಿಗಳ ವ್ಯಾಖ್ಯಾನದೊಂದಿಗೆ ಅನೇಕ ವರ್ಷಗಳು ನಡೆದು ಜನರ ಮನ್ನಣೆಯನ್ನು ಪಡೆದಿದ್ದುವು. ಇವರು ನಾಟಕ ಚಿತ್ರಕಲೆಗಳಲ್ಲಿಯೂ ಪರಿಶ್ರಮವನ್ನು ಹೊಂದಿದ್ದರು. ಇವರು ೩೦-೧೧-೧೯೭೦ರಲ್ಲಿ ನಿಧನರಾದರು.

೧೭. ಕಳಲೆ ಸಂಪತ್ಕುಮಾರಾಚಾರ್ಯರು, ಬೆಂಗಳೂರು

ಇವರ ಜನನ ಸುಮಾರು ೧೯೦೬ರಲ್ಲಿ. ಇವರ ತಂದೆಯವರು ಕಳಲೆ ಗುಂಜಾ ಗೋಪಾಲಾಚಾರ್ಯರು, ತಾಯಿ ರಂಗಮ್ಮನವರು. ಇವರು ಬಿ. ಎ., ಬಿ. ಟಿ., ಪದವೀಧರರು. ಬೆಂಗಳೂರಿನ ಎಸ್. ಎಲ್. ಎನ್. ಪ್ರೌಢಶಾಲಾ ಉಪಾಧ್ಯಾಯರಾಗಿದ್ದರು. ಸಂಗೀತದ ಕೇಳ್ಮೆ ಮತ್ತು ಸ್ವಂತ ಪರಿಶ್ರಮದಿಂದ ಸಂಗೀತದ ಮೇಲೆ ಒಳ್ಳೆಯ ಪ್ರಭುತ್ವವನ್ನು ಪಡೆದಿದ್ದರು. ಅಮೋಘವಾದ ಗೌಳ ಶಾರೀರವನ್ನು ಹೊಂದಿದ್ದು ಅನೇಕ ಹಿಂದೂಸ್ತಾನಿ ರಾಗಗಳನ್ನು ತಮ್ಮ ವಾಚನದಲ್ಲಿ ಬಳಸಿ ಉತ್ಕೃಷ್ಟ ಗಮಕಿಗಳೆನಿಸಿದರು. ಕಾವ್ಯವಾಚನ ಕಲೆಯಲ್ಲಿ ಇವರಿಗೆ ಸ್ಫೂರ್ತಿಯು ಶ್ರೀ ಕೃಷ್ಣಗಿರಿ ಕೃಷ್ಣರಾಯರ ವಾಚನಗಳಿಂದ ಉಂಟಾಯಿತು. ಇವರ ಕಾವ್ಯ ವಾಚನ, ದೇವರನಾಮಗಳ ಮತ್ತು ಭಾವಗೀತೆಗಳ ಹಾಡುಗಾರಿಕೆಗಳಲ್ಲಿ ಇರುತ್ತಿದ್ದ ಓಜಸ್ಸು ಠೇಂಕಾರ ಮತ್ತು ಗತ್ತುಗಳು ನಾಡಿನ ಅನೇಕ ಸ್ಥಳಗಳಲ್ಲಿ ವಿದ್ವತ್ ಶ್ರೋತೃಗಳನ್ನು ಚಕಿತರನ್ನಾಗಿ ಮಾಡಿದವು. ಇವರ ಗಮಕ ಕಲಾಸೇವೆ ನಾಡಿಗೆ ಸುಮಾರು ಕಾಲು ಶತಮಾನದ ಕಾಲ ಸಂದಿದೆ. ಇವರು ಪರಿಷತ್ತಿನ ಗಮಕ ತರಗತಿಗಳನ್ನು ಕೆಲವು ವರ್ಷಗಳ ಕಾಲ ನಡೆಸಿದರು. ಇವರ ಕಾವ್ಯವಾಚನವು ಒಂದು ರೀತಿಯಲ್ಲಿ ವಿಶಿಷ್ಟವೆನಿಸಿ ಗುಡು ಗಮಕ ಎನಿಸಿಕೊಂಡಿತ್ತು. ಶ್ರೋತೃ ವರ್ಗವನ್ನು ಮುಗ್ಧರನ್ನಾಗಿ ಮಾಡುವುದು, ಕರುಣರಸದ ಮಡುವಿನಲ್ಲಿ ಮುಳುಗಿಸಿ ಕಣ್ಣೀರಿಡುವಂತೆ ಮಾಡುವುದು, ವೀರರಸದ ವೈಖರಿಯಲ್ಲಿ ಮೈಯುಬ್ಬುವಂತೆ ಮಾಡುವುದು ಇವರಿಗೆ ಸಾಧ್ಯವಾಗಿದ್ದಿತು. ಜನತೆಯು ಇವರಿಗೆ ಗಮಕ ವಿದ್ವಾನ್ ಎಂಬ ಬಿರುದನ್ನೂ ಮತ್ತು ಮದರಾಸ್ ಸಂಗೀತ ಸಭೆಯವರು ಮೆಚ್ಚಿ "ಶ್ಲೋಕ ಸಂಗೀತ" ಎಂಬ ಬಿರುದುಗಳನ್ನಿತ್ತು ತನ್ನ ಕೃತಜ್ಞತೆಯನ್ನು ವ್ಯಕ್ತಪಡಿಸಿದ್ದಾರೆ. ಇವರ ದೇವರನಾಮಗಳನ್ನೂ, ಭಾವಗೀತೆಗಳನ್ನೂ, ಕಾವ್ಯವಾಚನವನ್ನೂ 'The Musical Process Limited' ಸಂಸ್ಥೆಯು ಧ್ವನಿಮುದ್ರಿಕೆ ಮಾಡಿಕೊಂಡಿದೆ. ಇವರ ಕಾರ್ಯಕ್ರಮಗಳನ್ನು ಆಕಾಶವಾಣಿ ಮದ್ರಾಸ್ ಕೇಂದ್ರದವರು ಪ್ರಸಾರ ಮಾಡುತ್ತಿದ್ದರು. ಇವರು ೫-೧೨-೧೯೫೬ರಲ್ಲಿ ವಿಧಿವಶರಾಗಿ ಗಮಕ ಕಲೆಯ ಧ್ವಜವನ್ನು ಇಳಿಸಿದಂತಾಯಿತು. ಇವರ ಶಿಷ್ಯರಲ್ಲಿ ಖ್ಯಾತರಾದವರು ಗಮಕಿ ಎಂ. ಎಸ್. ಚಂದ್ರಶೇಖರಯ್ಯನವರು ಮತ್ತು ಗಮಕಿ ಶ್ರೀ ಟಿ. ಆರ್. ಜಯರಾಯರು. ಶ್ರೀ ಆಚಾರ್ಯರು ಮಯೂರಧ್ವಜ ಚಲನ ಚಿತ್ರದಲ್ಲಿ ನಾಯಕನ ಪಾತ್ರವನ್ನು ವಹಿಸಿದ್ದರು.

೧೮. ಎಂ.ಎಸ್. ಚಂದ್ರಶೇಖರಯ್ಯನವರು, ಬೆಂಗಳೂರು

ಇವರು ಮಂಡ್ಯ ಜಿಲ್ಲೆಯ ಮಾದಾಪುರದಲ್ಲಿ ೧೯೧೪ರಲ್ಲಿ ಜನಿಸಿದರು. ಇವರ ತಂದೆ ಸುಬ್ಬಯ್ಯನವರು; ತಾಯಿ ಸುಬ್ಬಲಕ್ಷ್ಮಮ್ಮನವರು. ಇವರು ನ್ಯಾಷನಲ್ ಮಿಡಲ್ ಸ್ಕೂಲಿನಲ್ಲಿ ಉಪಾಧ್ಯಾಯರಾಗಿದ್ದರು. ಗಮಕ ಕಲೆಯನ್ನು ಸಂ. ಗೋ. ಬಿಂದೂರಾಯರಲ್ಲಿಯೂ ಮತ್ತು ಕಳಲೆ ಸಂಪತ್ಕುಮಾರಾಚಾರ್ಯರಲ್ಲಿಯೂ ಕಲಿತು ಸುಮಾರು ೨೫ ವರ್ಷಗಳ ಕಾಲ ಪರಿಷತ್ತಿನಲ್ಲಿ ಗಮಕ ತರಗತಿಗಳನ್ನು ನಡಸುತ್ತಿದ್ದರು. ಇವರಿಗೆ ಸಹೃದಯ ವಿದ್ವಾಂಸರಿಂದ 'ಗಮಕ ವಿದ್ವಾನ್' ಮತ್ತು 'ಗಮಕ ಕೋವಿದ' ಎಂಬ ಪ್ರಶಸ್ತಿಗಳು ಲಭಿಸಿದ್ದುವು. ೧೫-೬-೧೯೬೫ರಲ್ಲಿ ಇವರು ಕಣ್ಮರೆಯಾಗಿ ಇವರ ಸೇವೆ ಗಮಕ ಕಲೆಗೆ ಇಲ್ಲದೆ ಹೋಯಿತು.

೧೯. ವೈ. ಎಂ. ಚಂದ್ರಯ್ಯನವರು, ಬಳ್ಳಾರಿ

ಇವರು ೧೯೧೯ರಲ್ಲಿ ಬಳ್ಳಾರಿ ಜಿಲ್ಲೆಯ ಏಳುಗಂಚಿ ಗ್ರಾಮದಲ್ಲಿ ಜನಿಸಿದರು. ತಂದೆ ಪ್ರಸಿದ್ಧ ಜ್ಯೋತಿಷ್ಕರಾದ ಸಾಲೆ ಚನ್ನಬಸವಯ್ಯನವರು_ತಾಯಿ ಚನ್ನವೀರಮ್ಮನವರು. ಇವರ ಸೋದರರು ಸಂಗೀತಗಾರರೂ ಗಮಕಿಗಳೂ ಪ್ರಸಿದ್ಧ ನಟರೂ ಆಗಿರುವರು. ಇವರ ವಿದ್ಯಾಭ್ಯಾಸ ಪ್ರಾಥಮಿಕ ಶಾಲೆಯ ಮಟ್ಟದ್ದು. ಇವರೂ ಜ್ಯೋತಿಷ್ಕರೇ. ಇವರು ಗಮಕಾಭ್ಯಾಸಮಾಡಿದುದು ಪ್ರಸಿದ್ಧ ಗಮಕಿಗಳಾದ ಜೋಳದ ರಾಶಿ ಶ್ರೀ ಕೆ. ದೊಡ್ಡಣ್ಣಗೌಡರಲ್ಲಿ. ಇವರು ಬಳ್ಳಾರಿ ರಾಘವಾಚಾರ್ಯರ ನಾಟಕ ಕಂಪನಿಯಲ್ಲಿ ಪಾತ್ರ ವಹಿಸುತ್ತಿದ್ದರು. ಇವರಿಗೆ ಕರ್ಣಾಟಕ ಸಂಗೀತದಲ್ಲಿ ೨೦ ವರ್ಣ ಕೀರ್ತನೆಗಳ ಅಭ್ಯಾಸವಾಗಿದೆ. ೨೫ ವರ್ಷಗಳಿಂದಲೂ ಕಾವ್ಯವಾಚನ ಮಾಡುತ್ತಿರುವರು. ಇವರು ಗಮಕಿಗಳು ಮಾತ್ರವೇ ಅಲ್ಲದೆ ನಟರೂ ದಿಗ್ದರ್ಶಕರೂ ನಾಟಕ ಬರಹಗಾರರೂ ಪುರಾಣ ಪ್ರವಚನಕಾರರೂ ಆಗಿದ್ದರು. ಭಾವಗೀತೆ, ಭಕ್ತಿಗೀತೆ, ಜನಪದ ಗೀತೆಗಳನ್ನು ಬಹು ಮನೋಹರವಾಗಿ ಹಾಡುತ್ತಿದ್ದರು. ಬಿ. ಕೆ. ವೀರಣ್ಣ ಎಂಬುವರು ಇವರ ಶಿಷ್ಯರು. ಇವರ ಹಾಡುಗಾರಿಕೆ ಮತ್ತು ನಾಟಕಗಳು ಮದರಾಸ್ ಆಕಾಶವಾಣಿ ಕೇಂದ್ರದಿಂದ ಪ್ರಸಾರವಾಗಿವೆ. ಇವರ ಕಾವ್ಯವಾಚನವನ್ನು ಕೊಲಂಬಿಯಾ ರಿಕಾರ್ಡ್ಸ್ ಕಂಪೆನಿಯವರು ಮುದ್ರಿಸಿಕೊಂಡಿರುವರು. ಇವರು ಸುಮಾರು ಹನ್ನೊಂದು ಚಲನಚಿತ್ರ

ಗಳಲ್ಲಿ ಅಭಿನಯಿಸಿರುವರು. ಸರ್ಕಾರದ ಸಂಸ್ಕೃತಿ ಪ್ರಸಾರ ಇಲಾಖೆಯ ಮೂಲಕವೂ ಅನೇಕ ಕಾರ್ಯಕ್ರಮಗಳನ್ನು ನಡೆಸಿದ್ದರು. ಇವರಿಗೆ ಕಂಪ್ಲಿಯ ಶ್ರೀ ಓದ್ನೋ ಕರಿಬಸವಯ್ಯನವರ ಶಿವಾನುಭವ ಸಂಸ್ಥೆ 'ಪೌರಾಣಿಕ ರತ್ನ' ಎಂಬ ಪ್ರಶಸ್ತಿಯ ನ್ನಿತ್ತು ಗೌರವಿಸಿದೆ.

೨೦. ಕೆ. ವಿ. ಸಂಪತ್ಕುಮಾರ್, ಬೆಂಗಳೂರು

ಇವರು ೧೯೧೯ರ ಅಕ್ಟೋಬರ್ ತಿಂಗಳಿನಲ್ಲಿ ತುಮಕೂರು ಜಿಲ್ಲಾ ತುರುವೇ ಕೆರೆ ತಾಲ್ಲೂಕು ಮಾಯಸಂದ್ರದಲ್ಲಿ ಜನಿಸಿದರು. ಇವರ ತಂದೆ ಶ್ರೀ ಕೆ. ವೆಂಕಟರಾಮ ಅಯ್ಯಂಗಾರ್ರವರು; ತಾಯಿ ಶ್ರೀಮತಿ ಸೀತಮ್ಮನವರು. ಇವರ ಸಾಮಾನ್ಯ ವಿದ್ಯಾಭ್ಯಾಸ ಎಸ್.ಎಸ್.ಎಲ್.ಸಿ. ಇವರು ಸಂಗೀತವನ್ನು ಶ್ರೀ ಬೆಳಕವಾಡಿ ವರದರಾಜಯ್ಯಂಗಾರ್ಯರಲ್ಲಿ ಕಲಿತರು. ಗಮಕವನ್ನು ಕಳಲೆ ಸಂಪತ್ಕುಮಾರಾಚಾರ್ರವರಲ್ಲಿ ಕಲಿತು ಗಮಕ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದರು. ಮುಂದೆ ಇವರ ಸಹಪಾಠಿಗಳಾಗಿದ್ದ ಗಮಕಿ ಎಂ. ಎಸ್. ಚಂದ್ರಶೇಖರಯ್ಯನವರ ಜೊತೆಯಲ್ಲಿ ಗಮಕಾಭ್ಯಾಸವನ್ನು ಮುಂದುವರಿಸಿದರು. ಇವರಿಗೆ ಸಾಹಿತ್ಯ ಸಂಸ್ಕೃತವನ್ನು ಕಲಿಸಿದವರು ಇವರ ತಂದೆಯವರೇ. ಇವರ ಸ್ವಂತ ಅಧ್ಯಯನವು ವಿಶಾಲವಾದುದು. ವೇದಾಂತ ಮತ್ತು ಶಾಸ್ತ್ರಗಳನ್ನು ರಾಜಾಜಿನಗರದ ವೇ|| ಬ್ರಂ|| ಶ್ರೀ|| ಎಸ್. ವಿ. ಶಾಮಭಟ್ಟರಲ್ಲಿ ಅಭ್ಯಾಸ ಮಾಡುತ್ತಿದ್ದರು. ಇವರಿಗೆ ಷಟ್ಪದೀ ಕಾವ್ಯಗಳನ್ನೂ ಚಂಪೂ ಕಾವ್ಯಗಳನ್ನೂ ವಾಚನ ಮಾಡಲು ಬಹಳ ಆಸಕ್ತಿ ಯಿದ್ದಿತು. ಇವರಿಗೆ ಮುಕುಂದ ಮಾಲಾಸ್ತೋತ್ರಗಳನ್ನು ಮತ್ತು ವೇದಾಂತ ದೇಶಿಕರ ರಘುವೀರ ಗದ್ಯವನ್ನು ಓದಲು ಬಹಳ ಶ್ರದ್ಧಾಸಕ್ತಿಗಳಿದ್ದುವು. ಇವರ ವಾಚನಕಾರ್ಯಕ್ರಮಗಳು ಅನೇಕ ಸಲ 'ಆಕಾಶವಾಣಿ'ಯಲ್ಲಿ ಪ್ರಸಾರವಾಗಿದ್ದುವು. ೧೭-೩-೧೯೭೮ರಂದು ಅಕಾಲ ಮರಣಕ್ಕೆ ತುತ್ತಾದರು.

೨೧. ಮಣೇಗಾರ್ ನರಸಿಂಹಾಚಾರ್ಯರು

ಇವರ ಸ್ಥಳ ಕೃಷ್ಣರಾಜಪೇಟೆ ತಾಲ್ಲೂಕು ಬೂಕನಕೆರೆ ಹೋಬಳಿ ಮಾಚಿಗ್ಗೋನಹಳ್ಳಿ. ಇವರ ತಂದೆ ಭಾಗವತ ಕಾಳಾಚಾರ್ಯರು. ಅವರು ಯಕ್ಷ ಗಾನದ ಉಪಾಧ್ಯಾಯರು. ನರಸಿಂಹಾಚಾರ್ಯರು ಬಾಲ್ಯದಲ್ಲಿ ಕೂಲಿಮಠದಲ್ಲಿ

ಓದಿದರು. ರಾಮಾಯಣ, ಮಹಾಭಾರತ, ಭಾಗವತ ತ್ರಿಕಾಂಡ ಅಮರ ಇವರಿಗೆ ಕಂಠಪಾಠವಾಗಿದ್ದುವು. ತಂದೆಯವರ ಜೊತೆಯಲ್ಲಿ ಹಿಮ್ಮೇಳ ಹಾಡುತ್ತಿದ್ದರು. ಮುಂದೆ ತಂದೆಯವರಂತೆಯೇ ಯಕ್ಷಗಾನ ನಾಟಕಗಳನ್ನು ಕಲಿಸುತ್ತಿದ್ದರು. ಸೊಗಸಾಗಿ ಹಾಡುತ್ತಿದ್ದರು. ಶಾರೀರ ಸುಂದರ. ನಾಟಕಗಳಲ್ಲಿ ಸ್ತ್ರೀ ಪಾತ್ರವನ್ನು ಚೆನ್ನಾಗಿ ಅಭಿನಯಿಸುತ್ತಿದ್ದರು. ರಾಗ ಮತ್ತು ತಾಳಗಳ ಪರಿಚಯವಿದ್ದುದರಿಂದ ಕಾವ್ಯ ವಾಚನದ ಮೇಲೆ ತುಂಬಾ ಒಲವು ಉಂಟಾಯಿತು. ಎಂತಹ ಕಠಿಣ ಗ್ರಂಥವನ್ನಾದರೂ ಓದಿ ಅರ್ಥ ಮಾಡಿಕೊಳ್ಳುವ ಶಕ್ತಿ ಇವರಿಗಿತ್ತು. ರಾಮಾಯಣ ಮಹಾಭಾರತಗಳಿಂದ ಕಾವ್ಯವಾಚನ ಮಾಡುತ್ತಿದ್ದರು. 'ಪ್ರಹ್ಲಾದ ಚರಿತ್ರೆ' ಇವರಿಗೆ ಬಹಳ ಪ್ರಿಯವಾಗಿತ್ತು. ರಾಮಮಂದಿರಗಳಲ್ಲಿ ವಾಚನ, ಭಜನೆ ನಡೆಸುತ್ತಿದ್ದರು. ದೇವರಲ್ಲಿ ಶ್ರದ್ಧಾ ಭಕ್ತಿಗಳಿದ್ದುವು. ಇವರಿಗೆ ಜ್ಯೋತಿಷ್ಯದಲ್ಲೂ ತಕ್ಕಮಟ್ಟಿನ ಪರಿಶ್ರಮವಿದ್ದಿತು. ಗಮಕ ಕಲಾಸೇವೆಯಲ್ಲಿ ಇವರು ೩೦-೪೦ ವರ್ಷ ಕಳೆದಿರುತ್ತಾರೆ. ಇವರು ತಮ್ಮ ೬೦ನೆಯ ವಯಸ್ಸಿನಲ್ಲಿ ದೈವಾಧೀನರಾದರು.

೨೨. ಬಂಡಯ್ಯನವರು, ಗುಡದೂರು, ಬಳ್ಳಾರಿ ಜಿಲ್ಲೆ

ಇವರು ಯಾರಲ್ಲಿ ಸಂಗೀತವನ್ನು ಅಭ್ಯಾಸ ಮಾಡಿದರೆಂಬುದು ತಿಳಿಯದು. ಆದರೆ ಇವರು ಎಲ್ಲಿ ಪುರಾಣ ನಡೆದರೂ ಅಲ್ಲಿ ಇದ್ದೇ ಇರುತ್ತಿದ್ದರು. ಇವರಿಗೆ ಪುರಾಣದ ಬಂಡಯ್ಯನವರೆಂದು ಹೆಸರಿತ್ತು. ಪುರಾಣವಾಚನವೇ ಪ್ರಧಾನವಾದರೂ ಗಮಕವಾಚನವನ್ನು ಹವ್ಯಾಸವಾಗಿ ಮಾಡಿಕೊಂಡಿದ್ದರು. ಇವರನ್ನು ನವಣೇ ಬಂಡಯ್ಯನವರೆಂದೂ ಕರೆಯುತ್ತಿದ್ದರು; ಏಕೆಂದರೆ ಹಣಕ್ಕೆ ಬದಲಾಗಿ ನವಣೆ ಧಾನ್ಯವನ್ನು ಸುಭಾವನೆಯಾಗಿ ಪಡೆಯುತ್ತಿದ್ದರು.

೨೩. ಚಾಕಬಂಡೆ ಸುಬ್ಬಣ್ಣನವರು

ಇವರು ಸಂಗೀತ ಸಾಹಿತ್ಯಗಳನ್ನು ಅಭ್ಯಾಸ ಮಾಡಿದ್ದರು. ಸಾಹಿತ್ಯದಲ್ಲಿ ಉತ್ತಮ ಪಾಂಡಿತ್ಯವನ್ನು ಸಂಪಾದಿಸಿದ್ದರು. ಪುರಾಣವನ್ನು ಚೆನ್ನಾಗಿ ಓದುತ್ತಿದ್ದರು. ಆಧ್ಯಾತ್ಮಿಗಳಾಗಿದ್ದರು. ಸುಮತಿ ಶತಕವನ್ನು ಕನ್ನಡಿಸಿದ್ದರು. ಗಮಕ, ಪ್ರವಚನ, ಕವಿತೆಗಳಿಂದ ಜನಾದರಣೀಯರಾಗಿದ್ದರು.

೨೪. ವೀರಬಸಯ್ಯನವರು, ಯೇಳುಬೆಂಚಿ, ಬಳ್ಳಾರಿ ಜಿಲ್ಲೆ.

ಇವರು ಕುಡಿತಿಸಿಕಟ್ಟೆಯ್ಯನವರ ಮಕ್ಕಳು. ಅವರಿಂದ ಸಂಗೀತ ಸಾಹಿತ್ಯಗಳ ಅಭ್ಯಾಸ ಮಾಡಿರಬೇಕು. ಸಂಸ್ಕೃತ ಸುಭಾಷಿತ ರತ್ನ ಭಾಂಡಾಗಾರವು ಇವರಿಗೆ ಹೃದ್ಗತವಾಗಿದ್ದಿತು. ಉತ್ತಮವಾಗಿ ಹಾಡುತ್ತಿದ್ದರು. ಅಷ್ಟೇ ಸೊಗಸಾಗಿ ಕಾವ್ಯವನ್ನೋದುತ್ತಿದ್ದರು. ಸುಪ್ರಸಿದ್ಧ ಕೀರ್ತನಕಾರರು ಮತ್ತು ಪೌರಾಣಿಕರೆಂಬ ಹೆಸರನ್ನು ಪಡೆದಿದ್ದರು. ಉಪಮಾನ ಶಿಖಾಮಣಿಗಳಾಗಿದ್ದರು. ಇವರು ಸರ್ವ ದರ್ಶನ ತೀರ್ಥ ಪಂಡಿತ ವೈ. ನಾಗೇಶಶಾಸ್ತ್ರಿಗಳ ಒಡನಾಡಿಗಳಾಗಿದ್ದರು.

೨೫. ಬಳ್ಳಾರಿ ಅಮರೆಯ್ಯನವರು

ಇವರು ಬಳ್ಳಾರಿ ಜಿಲ್ಲೆಯ ಏಳುಬೆಂಚಿಗೆ ಸೇರಿದವರು. ಜ್ಯೋತಿಷ್ಯ ವಿದ್ವಾನ್ ಸಾಲಿ ಚನ್ನಬಸಯ್ಯನವರ ಮಕ್ಕಳು. ಇವರು ಚಿಕ್ಕಂದಿನಲ್ಲೇ ತಮ್ಮ ಬಂಧುಗಳಾದ ಅಲಬನೂರು ಪೊಂಪಯ್ಯ ಗವಾಯಿಗಳಲ್ಲಿ ತಂಬೂರಿ ಶ್ರುತಿಯಲ್ಲಿ ಸಂಗೀತಾಭ್ಯಾಸ ಮಾಡಿದರು. ಇವರಿಗೆ ನೂರಾರು ರಾಗಗಳ ವಿಸ್ತಾರವಾದ ಪರಿಚಯವಿತ್ತು. ಕಾವ್ಯಗಳನ್ನು ಬಹು ಸರಾಗವಾಗಿ ಓದಿ ಅರ್ಥೈಸುವ ಪ್ರತಿಭೆ ಇವರಲ್ಲಿದ್ದಿತು. ನಿರರ್ಗಳವಾಗಿ ವಾಚನ ಮಾಡುತ್ತಿದ್ದರು. ರಸಪೋಷಣೆ ಮಾಡಿ, ವಿವಿಧ ರಾಗಗಳನ್ನು ಬಳಸಿ ಓದಿ ರಸಿಕರನ್ನು ತಲೆದೂಗಿಸುವ ಶಕ್ತಿ ಇವರಲ್ಲಿದ್ದಿತು. ಬಳ್ಳಾರಿ ಸಮೀಪದ ಶೀಗರಗದ್ದೆಯಲ್ಲಿ ನಡೆದ ಬಸವ ಪುರಾಣಕ್ಕೆ ಹಾಡುಗಾರರು ಇವರಾದರೆ ದಾವಣಗೆರೆಯ ಚಂದ್ರಶೇಖರಶಾಸ್ತ್ರಿಗಳು ಅರ್ಥೈಸುವವರು. ಇಂದಿಗೂ ಜನರು ಅದನ್ನು ನೆನಪಿಸಿಕೊಳ್ಳುತ್ತಾರೆ. ಅಷ್ಟು ಜನಾದರಣೀಯರಾಗಿದ್ದವರು ಅಮರೆಯ್ಯನವರು.

ಬಳ್ಳಾರಿ ಜಿಲ್ಲೆಯಲ್ಲಿ ಹೆಸರುವಾಸಿಯಾಗಿದ್ದ ಇತರ ಕಲಾವಿದರು : (೧) ಜೋಳದರಾಶಿಯಲ್ಲಿ ಉಪಾಧ್ಯಾಯರಾಗಿದ್ದ ಷಡಕ್ಷರಪ್ಪನವರು. ಇವರು ಉತ್ತಮ ಗಮಕಿಗಳು ಮತ್ತು ಜೋಳದ ರಾಶಿ ದೊಡ್ಡನಗೌಡರ ಗುರುಗಳು. (೨)

ದಿವಂಗತ ವಿಡಪನಕಲ್ಲು ಹನುಮಂತಪ್ಪನವರು: ಇವರು ಕಗ್ಗಲ್ಲಲ್ಲಿ ವಾಸವಾಗಿದ್ದರು. ಸಂಗೀತದ ಮನೆತನಕ್ಕೆ ಸೇರಿದವರು. ಸಾಹಿತ್ಯದಲ್ಲಿ ನಿಷ್ಣಾತರು. ನಾಟಕಕ್ಕೆ ಬೇಕಾದ ಪದಗಳನ್ನು ರಚಿಸುತ್ತಿದ್ದರು. ಜೋಳದರಾಶಿ ದೊಡ್ಡನಗೌಡರಿಗೆ ಪ್ರಾರಂಭದ ಬೈಲಾಟದ ಮಾಸ್ತರು ಇವರು. (೩) **ದಿವಂಗತ ಕಾತರಿಕೆ ಚನ್ನಪ್ಪನವರು**: ಇವರು ಉತ್ತಮ ಗಮಕಿಗಳೂ, ಶ್ರೇಷ್ಠ ಪ್ರವಚನಕಾರರೂ ಮತ್ತು ಮಹಾ ರಸಿಕರೂ ಆಗಿದ್ದರೆಂದು ಜನರು ಹೇಳುತ್ತಾರೆ. (೪) **ದಿವಂಗತ ಲಕ್ಕುಂಡಿ ವೆಂಕೋಬರಾಯರು**: ಸುಪ್ರಸಿದ್ಧ ಗಮಕಿಗಳು. (೫) ಇವರ ತಮ್ಮಂದಿರು **ಶಾಮರಾಯರೂ** ಶ್ರೇಷ್ಠ ಗಮಕಿಗಳಾಗಿದ್ದರಂತೆ. (೬) **ದಿವಂಗತ ಚಂದ್ರಮೌಳಿರಾಯರು** ಸುಪ್ರಸಿದ್ಧ ಗಮಕಿಗಳಾಗಿದ್ದರು.

೨೬. ರಾಯಚೂಟಿ ಶಾಸ್ತ್ರಿಗಳು, ಮೈಸೂರು

ಇವರು ವಾಚನ ಮಾಡುತ್ತಿದ್ದರೆ ಶ್ರೋತೃಗಳು ಮುಗ್ಧರಾಗಿ ಕೇಳುತ್ತಿದ್ದರು. ಮಳೆಯ ಹನಿಗಳು ಛಾವಣಿಗೆ ಹೊದಿಸಿದ್ದ ಜಿಂಕ್‌ಶೀಟುಗಳ ಮೇಲೆ ಬಿದ್ದು ಟಪಟಪ ಶಬ್ದ ಮಾಡುತ್ತಿದ್ದರೆ ಅದರ ತಾಳದ ಗತಿಯನ್ನೇ ಅನುಸರಿಸಿ ಇವರು ಹಾಡುತ್ತಿದ್ದರಂತೆ. ಬೇಹಾಗ್ ರಾಗವನ್ನು ಹಾಡುವುದರಲ್ಲಿ ಇವರಿಗೆ ವಿಸ್ಮಯಕರವಾದ ಪರಿಣತಿಯಿದ್ದಿತು.

೨೭. ಕುರುಡು ತಮ್ಮಯ್ಯನವರು, ಮೈಸೂರು

ಇವರು ಕುರುಡ ಮೂಗರ ಪಾಠಶಾಲೆಯಲ್ಲಿ ವ್ಯಾಸಂಗವನ್ನು ಮಾಡಿ ಬ್ರೈಲ್ ಲಿಪಿಯಲ್ಲಿ ಬರೆದ ಭಾರತವನ್ನು ಸುಶ್ರಾವ್ಯವಾಗಿ ವಾಚನ ಮಾಡುತ್ತಿದ್ದರು.

ಮೈಸೂರಿನ ಇತರ ಸ್ಮರಣೀಯ ಗಮಕಿಗಳು ಸಾಹುಕಾರ್ ಸುಬ್ಬರಾಯರು, ವೆಂಕಟಸುಬ್ಬಾಶಾಸ್ತ್ರಿಗಳು ಮತ್ತು ಕೆಂಪನಪುರದ ನರಸಿಂಹಾಚಾರ್ಯರು. ದಿವಂಗತ ಶ್ರೀ ಗರುಡನಗಿರಿ ನಾಗೇಶರಾಯರು ಪ್ರಸಿದ್ಧ ಅಭಿನಯಕಾರರಾದ ನಾಟಕದ ನಾಗೇಶರಾಯರು. ಇವರು ದಶವಿಧ ಗಮಕಗಳನ್ನೂ ತಮ್ಮ ವಾಚನಗಳಲ್ಲಿ ಬಳಸುತ್ತಿದ್ದರು. ಇವರು ಯಾವ ಪದ್ಯಗಳನ್ನು ಯಾವ ರಾಗದಲ್ಲಿ ಯಾವ ಮೋಡಿಯಲ್ಲಿ ಹಾಡುವರೆಂಬುದು ಎಂತಹ ವಿದ್ವತ್ ಶ್ರೋತೃಗಳಿಗೂ ಸಹ ಊಹಿಸುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ.

೨೮. ಕೆ. ಎನ್. ಬಸವಾರಾಧ್ಯ, ಬೂದಿಗುಪ್ಪೆ

ಇವರು ೧೯೩೭ರಲ್ಲಿ ಜನಿಸಿದರು. ಇಂಟರ್‌ವರೆಗೂ ವಿದ್ಯಾಭ್ಯಾಸ ಮಾಡಿರುತ್ತಾರೆ. ಇವರಿಗೆ ವೇದಾಂತ ಜ್ಯೋತಿಷಗಳಲ್ಲಿಯೂ ತಕ್ಕಮಟ್ಟಿನ ಪರಿಶ್ರಮವಿದೆ. ಇವರು ಈಗ್ಗೆ ೫೦ ವರ್ಷಗಳ ಹಿಂದೆಯೇ ಮೈಸೂರಿನಲ್ಲಿ ಪ್ರಸಿದ್ಧರಾಗಿದ್ದ ಗಮಕಿ ಭಾರತದ ಪೇವುಡು ಶಾಸ್ತ್ರಿಗಳಲ್ಲಿ ಗಮಕವನ್ನು ಅಭ್ಯಾಸ ಮಾಡಿದರು. ವೈಣಿಕ ಶಿಖಾಮಣಿ ಶೇಷಣ್ಣನವರಲ್ಲಿ ಕೆಲವು ಕಾಲ ಸಂಗೀತವನ್ನು ಕಲಿತರು. ಇವರು ವಿದ್ಯಾರ್ಥಿ ದೆಸೆಯಿಂದಲೂ ಎಂದರೆ ೬೦ ವರ್ಷಗಳಿಂದ ಕಾವ್ಯವಾಚನ ಮಾಡುತ್ತಿರುತ್ತಾರೆ. ವೈದಿಕ ವೃತ್ತಿ ಪುರಾಣ ಕಾವ್ಯವಾಚನ ವ್ಯಾಖ್ಯಾನಗಳೇ ಇವರ ನಿರಂತರ ವೃತ್ತಿಯಾಗಿದೆ. ಇವರಿಗೆ ಯಥೇಚ್ಛವಾಗಿ ಶಿಷ್ಯಸಂಪತ್ತೂ ಇದೆ. ಸಂಸ್ಕೃತಿ ಪ್ರಸಾರದ ಇಲಾಖೆಯ ನಿರ್ದೇಶದಂತೆ ಮೈಸೂರು ಜಿಲ್ಲೆಯಲ್ಲಿ ಅನೇಕ ಕಾವ್ಯವಾಚನ, ವ್ಯಾಖ್ಯಾನ ಕಾರ್ಯಕ್ರಮಗಳನ್ನು ನಡೆಸಿರುವರು.

೨೯. ಟಿ. ವಿ, ಸುಬ್ಬರಾಯರು, ಬೆಂಗಳೂರು

ಇವರು ೧೦-೧೨-೧೯೩೭ರಲ್ಲಿ ನೆಲಮಂಗಲ ತಾಲ್ಲೂಕು ತ್ಯಾಮಗೊಂಡ್ಲುವಿನಲ್ಲಿ ಜನಿಸಿದರು. ತಂದೆ ಪಂಡಿತ ವೆಂಕಟಸುಬ್ಬಯ್ಯನವರು, ತಾಯಿ ಸೀತಮ್ಮನವರು. ಇವರು ಎಸ್.ಎಸ್.ಎಲ್.ಸಿ. ಮತ್ತು ಡಿ. ಕಾಂ., ಮಾಡಿಕೊಂಡು ಸರ್ಕಾರದಲ್ಲಿ ಲೆಕ್ಕಪರಿಶೋಧಕರಾಗಿದ್ದು ನಿವೃತ್ತರಾಗಿರುವರು. ಸಂಗೀತ ಪರಿಚಯವಿದೆ. ತಮ್ಮ ಸೋದರಮಾವಂದಿರಾದ ಶ್ರೀ ಸುಬ್ರಹ್ಮಣ್ಯಯ್ಯನವರಲ್ಲಿ ಸಂಗೀತವನ್ನು ಕಲಿತರು. ಇವರಿಗೆ ಕನ್ನಡ ಸಾಹಿತ್ಯದಲ್ಲಿ ಅಭಿರುಚಿಯಿದೆ. ವ್ಯಾಖ್ಯಾನ ಮಾಡಬಲ್ಲರು. ಕತೆ, ಕವಿತೆಗಳ ರಚನೆಯಲ್ಲಿಯೂ ಪರಿಶ್ರಮವುಂಟು. ವಿದ್ಯಾರ್ಥಿ ದೆಸೆಯಲ್ಲೇ ವಾಚನ ಕಲೆಯಲ್ಲಿ ಆಸಕ್ತಿಯಿದ್ದಿತು. ಇವರ ಗಮಕ ಅಭ್ಯಾಸಕ್ಕೆ ನೆರವಾದ ಗುರುಗಳು ಶ್ರೀ ಎಂ. ರಾಘವೇಂದ್ರರಾಯರು. ಇವರು ಗಮಕ ಪ್ರವೇಶ ಮತ್ತು ಪ್ರೌಢ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುತ್ತಾರೆ. ಗ್ರಾಮಾಂತರಗಳಲ್ಲಿಯೂ ನಗರಗಳಲ್ಲಿಯೂ, ಗದುಗಿನ ಭಾರತ, ಜೈಮಿನಿ ಭಾರತ, ತೊರವೆ ರಾಮಾಯಣ, ಹರಿಶ್ಚಂದ್ರ ಕಾವ್ಯ, ಬಸವಣ್ಣನವರ ವಚನಗಳು ಮತ್ತು ಕೆಲವು ಚಂಪೂ ಗ್ರಂಥಗಳಿಂದ ವಾಚನ ಮಾಡಿರುವರು. ಸಂಸ್ಕೃತಿ ಪ್ರಚಾರ ಇಲಾಖೆಯ ಆಶ್ರಯದಲ್ಲಿ

ಶಿವಮೊಗ್ಗಾ, ತುಮಕೂರು, ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಅನೇಕ ಕಡೆ ವಾಚನಗಳನ್ನು ನಡಸಿರುವರು.

೨೦. ಎಸ್. ಶ್ರೀನಿವಾಸಯ್ಯ, ತಗಡೂರು

ಇವರ ಜನನ ೧೮೯೮ರಲ್ಲಿ ನಂಜನಗೂಡು ತಾಲ್ಲೂಕು ತಗಡೂರಿನಲ್ಲಿ. ಇವರು ಸಂಗೀತ ಅಧ್ಯಾಪಕರಾಗಿರುವರು. ಕನ್ನಡ ಲೋಯರ್ ಸೆಕೆಂಡರಿವರೆಗೆ ವಿದ್ಯಾಭ್ಯಾಸ ಮಾಡಿರುತ್ತಾರೆ. ಸಂಗೀತವನ್ನು ಮೂಗೂರಿನ ಪುಟ್ಟಬಸಪ್ಪ, ರಂಗಾಚಾರ್ ಹಾಗೂ ತಂಜಾವೂರಿನ ರಾಮಚಂದ್ರಸ್ವಾಮಿ, ಜಗನ್ನಾಥ ಭಟ್ಟ ಗೋಸ್ವಾಮಿ ಮತ್ತು ಪಾಪಾ ವೆಂಕಟರಾಮಯ್ಯರಲ್ಲಿ ಸುಮಾರು ೫ ವರ್ಷಗಳ ಕಾಲ ಅಭ್ಯಾಸ. ಸಂಗೀತ ಸೀನಿಯರ್ ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾಗಿರುವರು. ಹತ್ತು ವರ್ಷದ ಬಾಲ್ಯದಲ್ಲಿಯೇ ಇವರು ತಮ್ಮ ತಂದೆಯವರಲ್ಲಿ ಪದ್ಯವಾಚನವನ್ನು ಅಭ್ಯಾಸ ಮಾಡಿದರು. ಟಿ. ನರಸೀಪುರದಲ್ಲಿ ಸುಮಾರು ೧೫ ವರ್ಷಗಳಿಂದಲೂ ಭಾರತ, ರಾಮಾಯಣ, ಭಾಗವತ, ಶಂಕರ ವಿಜಯ, ಚೆನ್ನಬಸವಪುರಾಣ, ದೇವೀ ಮಹಾತ್ಮೆ ಮುಂತಾದ ಕಾವ್ಯಗಳನ್ನು ವಾಚನ ಮಾಡುತ್ತಿರುವರು.

೨೧. ಎಸ್. ಸೀತಾರಾಮಶಾಸ್ತ್ರಿಗಳು, ಚಳ್ಳಕೆರೆ

ಇವರು ೨೨-೮-೧೮೯೯ರಲ್ಲಿ ಚಳ್ಳಕೆರೆ ತಾಲ್ಲೂಕು ನಾಯಕನಹಟ್ಟಿ ಗ್ರಾಮದಲ್ಲಿ ಜನಿಸಿದರು. ಇವರ ತಂದೆ ಹರಿಕಥಾವಿದ್ವಾಂಸರಾಗಿದ್ದ ಶ್ರೀ ಯೋಗಾನಂದ ಶಾಸ್ತ್ರಿಗಳು. ಮಾಧ್ಯಮಿಕ ಶಿಕ್ಷಣವನ್ನು ಪಡೆದ ಇವರು ತಮ್ಮ ಸೋದರ ಮಾವಂದಿರೂ ಮತ್ತು ಗಮಕಿಗಳೂ ಆಗಿದ್ದ ಶ್ರೀಕಂಠ ದೀಕ್ಷಿತರಲ್ಲಿ ಪೋಷಣೆ ಪ್ರೋತ್ಸಾಹ ಮತ್ತು ಕಾವ್ಯವಾಚನಾಭ್ಯಾಸವನ್ನು ಪಡೆದರು. ಸಂಗೀತವನ್ನು ಸುಮಾರು ಐದು ವರ್ಷಗಳ ಕಾಲ ಹೊಳೇನರಸೀಪುರದ ಶ್ರೀ ತಮ್ಮಯ್ಯನವರ ಬಳಿ ಅಭ್ಯಾಸ ಮಾಡಿದರು. ಸಂಗೀತ ಪಾಠವನ್ನು ಹೇಳುವುದು ಇವರ ವೃತ್ತಿಯಾಗಿದೆ. ಗಮಕ ಕಲೆಯ ಪ್ರಭಾವ ಇವರ ಮೇಲೆ ಆದುದು ಭಾರತದ ಬಿದೂರಾಯರ ವಾಚನಗಳನ್ನು ಕೇಳಿ. ಶೃಂಗೇರಿ ಮಠಾಧೀಶ್ವರರಾಗಿದ್ದ ಶ್ರೀ ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳವರ ಸಮ್ಮುಖದಲ್ಲಿಯೂ ಮತ್ತು ಸೊಂಡೂರು ಆಸ್ಥಾನದಲ್ಲಿಯೂ ವಾಚನಗಳನ್ನು ನಡೆಸಿ ಮನ್ನಣೆಯನ್ನು ಪಡೆದಿರುವರು.

೩೨. ಕೆ. ಎಲ್. ನಾರಾಯಣರಾಯರು, ಬೆಂಗಳೂರು

ಇವರು ೧೫-೬-೧೯೦೨ರಲ್ಲಿ ಬೇಲೂರು ತಾಲ್ಲೂಕು ದೊಡ್ಡಕೋಡಿಹಳ್ಳಿಯಲ್ಲಿ ಜನಿಸಿದರು. ತಂದೆ ಶ್ರೀ ರಾಮಚಂದ್ರಯ್ಯನವರು. ತಾಯಿ ಶ್ರೀಮತಿ ತಿಪ್ಪಮ್ಮನವರು. ಸಂಗೀತದಲ್ಲಿ ೨೦ ವರ್ಷಗಳ ಅನುಭವವಿದೆ. ಕನ್ನಡ ಸಾಹಿತ್ಯದಲ್ಲಿ ಅಭಿರುಚಿಯಿದೆ, ವ್ಯಾಖ್ಯಾನ ಮಾಡಬಲ್ಲರು. ಇವರ ತಂದೆಯವರೂ ಜೈಮಿನಿ ಭಾರತವನ್ನು ಓದುತ್ತಿದ್ದರು. ಇದನ್ನು ಕೇಳಿ ಪ್ರಭಾವಿತರಾಗಿ ಗಮಕ ಅಭ್ಯಾಸ ಮಾಡಲು ಪ್ರಾರಂಭಿಸಿ ೧೯೩೩ರಲ್ಲಿ ಗಮಕ ಪರೀಕ್ಷೆಯಲ್ಲಿ ತೇರ್ಗಡೆಯಾದರು. ಆಗ್ಗೆ ಇವರ ಗುರುಗಳು ಸಂ. ಗೋ. ಬಿಂದೂರಾಯರು. ಹಾವೇರಿಯ ಆನಂದವನದ ಮಠ, ಬೆಂಗಳೂರಿನಲ್ಲಿ ಬ್ರಹ್ಮ ಚೈತನ್ಯ ಮಂದಿರ, ಚಾಮರಾಜಪೇಟೆ ಶ್ರೀರಾಮ ಮಂದಿರ, ಸಿದ್ಧಾರೂಢ ಮಠ ಮುಂತಾದೆಡೆಗಳಲ್ಲಿ ಆಗಾಗ್ಗೆ ಇವರ ಕಾವ್ಯವಾಚನವು ನಡೆಯುತ್ತಿರುತ್ತದೆ. ಇವರಿಗೆ ಗದುಗಿನ ಭಾರತ ಮತ್ತು ಜೈಮಿನಿ ಭಾರತಗಳೆಂದರೆ ವಾಚನ ಮಾಡಲು ಬಲು ಇಷ್ಟ.

೩೩. ರು. ನಾ. ಗುಂಡುರಾಮಯ್ಯನವರು, ಬೆಂಗಳೂರು

ಇವರು ೫-೧೨-೧೯೦೨ರಲ್ಲಿ ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕು ರುದ್ರಪಟ್ಟಣದಲ್ಲಿ ಜನಿಸಿದರು. ಇವರ ತಂದೆ ನಾರಣಪ್ಪನವರು, ತಾಯಿ ಶ್ರೀಮತಿ ಭಾಗೀರಥಮ್ಮನವರು. ಇವರು ಉಭಯ ಭಾಷಾ ವಿದ್ವಾಂಸರಾಗಿದ್ದು ಪ್ರೌಢಶಾಲೆಯಲ್ಲಿ ಕನ್ನಡ ಪಂಡಿತರಾಗಿ ಸೇವೆಸಲ್ಲಿಸಿ, ನಿವೃತ್ತರಾಗಿರುವರು. ಪತ್ರಿಕೋದ್ಯಮದಲ್ಲಿಯೂ ಇವರು ಸೇವೆ ಸಲ್ಲಿಸುತ್ತಿರುವರು. ಇವರು ಬಾಲ್ಯದಲ್ಲಿ ಅಕ್ಕ ಪಕ್ಕದ ಮನೆಗಳಲ್ಲಿದ್ದ ಪ್ರಸಿದ್ಧ ಸಂಗೀತ ವಿದ್ವಾಂಸರ ಹಾಡುಗಾರಿಕೆಯನ್ನು ಕೇಳಿ ತಕ್ಕ ಮಟ್ಟಿನ ಅಭ್ಯಾಸದಿಂದ ಸುಮಾರು ೩೦ ರಾಗಗಳನ್ನು ಸ್ಫುಟವಾಗಿ ಹಾಡಬಲ್ಲರು. ಇವರು ಶ್ರೇಷ್ಠ ವಾಙ್ಮಿಗಳೇ ಅಲ್ಲದೆ 'ನೀತಿರಾಮಾಯಣ', 'ಸರಳ ಭಾರತ', 'ಆದರ್ಶ ರಾಷ್ಟ್ರ ಭಕ್ತರು', ಲಕ್ಷ್ಮೀಶ ಪ್ರತಿಭೆ', 'ವ್ಯಾಕರಣ ಚಂದ್ರಿಕೆ' ಮುಂತಾದ ಅನೇಕ ಗ್ರಂಥಗಳನ್ನು ರಚಿಸಿರುವರು. ಇವರ ಗ್ರಂಥಗಳು ಸರಕಾರದ ಮನ್ನಣೆಯನ್ನು ಪಡೆದು ಪಠ್ಯ ಪುಸ್ತಕಗಳಾಗಿ ಆರಿಸಲ್ಪಟ್ಟಿವೆ. ಬಾಲ್ಯದಲ್ಲಿ ಪ್ರತಿದಿನ ಸಾಯಂಕಾಲ ಶ್ರೀ ರಾಮಸ್ವಾಮಿ ಅಯ್ಯಂಗಾರ್ ಮತ್ತು ಪಂಡಿತ ಕೃಷ್ಣಶಾಸ್ತ್ರಿಗಳು ನಡೆಸುತ್ತಿದ್ದ

ಕಾವ್ಯ ವಾಚನಗಳಿಗೆ ಪಂಡಿತ ಶಾಮಾಶಾಸ್ತ್ರಿಗಳು ವ್ಯಾಖ್ಯಾನ ಮಾಡುತ್ತಿದ್ದರು. ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಶ್ರೀ ಗೌರೀದೇವರು ಶಾಸ್ತ್ರಿಗಳ ವಾಚನವನ್ನೂ ತಮ್ಮ ಮನೆಯಲ್ಲಿಯೇ ಆಗಾಗ್ಗೆ ಭಾರತ ವಾಚನವನ್ನು ಮಾಡುತ್ತಿದ್ದ ಬಿಂದೂರಾಯರು ಮತ್ತು ಕೃಷ್ಣರಾಯರ ವಾಚನಗಳನ್ನೂ ಕೇಳಿ ಪ್ರಭಾವಿತರಾಗಿ ಬಿಂದೂರಾಯರನ್ನು ತಮ್ಮ ಗುರುಗಳೆಂದು ಸ್ವೀಕರಿಸಿದರು. ಇವರು ಸುಮಾರು ೨೦ ವರ್ಷಕ್ಕೂ ಮೀರಿ ಅನೇಕ ಪ್ರಾಂತ್ಯಗಳಲ್ಲಿ ಕಾವ್ಯವಾಚನಗಳನ್ನು ನಡೆಸಿರುವರು. ಸಂಸ್ಕೃತಿ ಪ್ರಸಾರ ಇಲಾಖೆಯಲ್ಲಿ ಹಾಸನ ಜಿಲ್ಲೆಯ ಅನೇಕ ಸ್ಥಳಗಳಲ್ಲಿ ವಾಚನ ಮಾಡಿರುವರು. ಪರಿಷತ್ತಿನ ಗಮಕ ತರಗತಿಗಳ ಅಧ್ಯಾಪಕರಾಗಿ ಆರು ವರ್ಷಗಳ ಕಾಲ ಸೇವೆ ಸಲ್ಲಿಸಿರುವರು. ಇವರು ಪರಿಷತ್ತಿನ ಗಮಕ ಸಮಿತಿಯ ಸದಸ್ಯರಾಗಿಯೂ ತಮ್ಮ ಸೇವೆಯನ್ನು ಮುಂದುವರಿಸುತ್ತಿರುವರು.

೩೪. ಬಾಳಗಂಚಿ ನಂಜುಂಡಯ್ಯನವರು

ಇವರು ಹಾಸನ ಜಿಲ್ಲೆಯ ಚನ್ನರಾಯ ಪಟ್ಟದ ತಾಲ್ಲೂಕು ಬಾಳಗಂಚಿ ಗ್ರಾಮದಲ್ಲಿ ೧೯೦೩ನೇ ಇಸವಿಯಲ್ಲಿ ಜನಿಸಿದರು. ಇವರ ತಂದೆ ಶ್ರೀ ವೆಂಕಟಪತಯ್ಯನವರು. ತಾಯಿ ಲಕ್ಷ್ಮೀದೇವಮ್ಮನವರು. ಆಗಿನ ಲೋಯರ್ ಸೆಕೆಂಡರಿ ಓದಿ ಶ್ಯಾನುಭೋಗಿಕೆಯನ್ನು ನೋಡಿಕೊಳ್ಳುತ್ತಿದ್ದು ಈಗ ಆ ವೃತ್ತಿಯಿಂದ ನಿವೃತ್ತರಾಗಿದ್ದಾರೆ. ಇವರಿಗೆ ವರ್ಣ ಕೃತಿಗಳನ್ನು ಹಾಡುವಷ್ಟರ ಮಟ್ಟಿನ ಸಂಗೀತ ಜ್ಞಾನವಿದೆ. ಸುಮಾರು ೫೦ ವರ್ಷಗಳ ಕಾಲದಿಂದಲೂ ಕಾವ್ಯವಾಚನದ ಅನುಭವವಿದೆ. ಇವರು ವ್ಯಾಖ್ಯಾನವನ್ನೂ ಮಾಡಬಲ್ಲರು. ಪ್ರಖ್ಯಾತ ಸಂಗೀತ ವಿದ್ವಾಂಸರಿಂದ ಶ್ರೀ ಚನ್ನಕೇಶವಯ್ಯನವರ ಚಿಕ್ಕಪ್ಪಂದಿರ ಮಕ್ಕಳು ಶ್ರೀ ಸುಬ್ಬರಾಯರೆಂಬವರು ಇವರಿಗೆ ಸಂಗೀತವನ್ನು ಕಲಿಸಿರುವರು. ಗಮಕಿ ಹೆಚ್. ರಾಮಕೃಷ್ಣಶಾಸ್ತ್ರಿಗಳು ಗಮಕ ಕಲೆಯ ಪರಿಚಯವನ್ನು ಮಾಡಿಸಿದರು. ಗಮಕಿ ಶ್ರೀ ಎಂ. ರಾಘವೇಂದ್ರರಾಯರು ಇವರಲ್ಲಿ ಅಡಗಿದ್ದ ಗಮಕ ಕಲೆಯ ವಿಕಾಸಕ್ಕೆ ಕಾರಣರಾಗಿರುವರು. ೧೯೩೫–೩೭ರಲ್ಲಿ ಸಂ. ಗೋ. ಬಿಂದೂರಾಯರು ನಡಸುತ್ತಿದ್ದ ಗಮಕ ತರಗತಿಯಲ್ಲಿ ಕ್ರಮವಾಗಿ ಅಭ್ಯಾಸಮಾಡಿ ಪ್ರಶಸ್ತಿಯನ್ನು ಗಳಿಸಿರುವರು. ಕರ್ಣಾಟಕ ಸಂಘಗಳು, ವೀರಶೈವ ಸಮಾಜದವರು ಮುಂತಾದ ಸಂಘ ಸಂಸ್ಥೆಗಳು ಆಚರಿಸಿದ ಜಯಂತ್ಯುತ್ಸವಗಳ ಸಂದರ್ಭಗಳಲ್ಲಿ ಕಾವ್ಯವಾಚನವನ್ನು ನಡೆಸಿರುವರು. ಇವರ ವಾಚನವನ್ನು ಮೆಚ್ಚಿದ ಸಮಾಜದವರು ಇವರಿಗೆ ಪದಕವನ್ನಿತ್ತು ಮನ್ನಿಸಿರುವರು. ಇವರ ವಾಚನ

ಗಳು ಹಾಸನ, ಮೈಸೂರು, ಮಂಡ್ಯ ಮತ್ತು ಬೆಂಗಳೂರು ಜಿಲ್ಲೆಯ ಅನೇಕ ಸ್ಥ
ಗಳಲ್ಲಿ ನಡೆದಿವೆ. ಇವರು ಲೇಖಕರಾಗಿ ಶ್ರೀಮದ್ಭಗವದ್ಗೀತೆಯನ್ನು ಕನ್ನಡ
ಭಾಮಿನೀಷಟ್ಪದಿಯಲ್ಲಿ ರಚಿಸಿರುವರು. ಅದಲ್ಲದೆ ಪೂಜ್ಯ ಶಂಕರಭಗವತ್ಪಾದರವ
ಸುಪ್ರಭಾತ ಮತ್ತು ನಕ್ಷತ್ರ ಪದ್ಯಮಾಲಿಕಾ ಹಾಗೂ ಅನೇಕ ದೇವತಾ ಸ್ತೋತ್ರ
ಗಳನ್ನಲ್ಲದೆ ಕುಮಾರವ್ಯಾಸ ಲಕ್ಷ್ಮೀಶ ಮೊದಲಾದ ಜನಪ್ರಿಯ ಕನ್ನಡ ಕವಿಗ
ಕೀರ್ತನೆಗಳನ್ನು ರಚಿಸಿರುವರು. ಅವು ಪ್ರಕಟವಾಗಿವೆ. ಇವರಿಗೆ 'ಗಮಕ ಕಲಾ
ಚತುರ' ಎಂಬ ಪ್ರಶಸ್ತಿಯನ್ನು ಸಹೃದಯ ಶ್ರೋತೃಗಳು ನೀಡಿ ಸನ್ಮಾನಿಸಿರುವರು.

೩೫. ಕೆ. ಟಿ. ರಾಮಸ್ವಾಮಿ ಅಯ್ಯಂಗಾರ್, ಬಿ.ಎ. ಬಿಟಿ.

ಇವರು ೧೯೦೩ರಲ್ಲಿ ಬೆಂಗಳೂರಿನಲ್ಲಿ ಜನಿಸಿದರು. ಸೆಂಟ್ರಲ್ ಕಾಲೇಜಿನಲ್ಲಿ
ವ್ಯಾಸಂಗಮಾಡಿ ಬಿ.ಎ., ಪದವೀಧರರಾದರು. ೧೯೪೭ರಲ್ಲಿ ಬಿ.ಟಿ. ಪದವಿಯನ್ನು
ಗಳಿಸಿದರು. ೧೯೫೭ರಲ್ಲಿ ತುಮಕೂರು ಹೈಸ್ಕೂಲು ಮುಖ್ಯೋಪಾಧ್ಯಾಯರಾಗಿ
ನಿವೃತ್ತಿ ಹೊಂದಿದರು. ಅನಂತರ ಮೈಸೂರಿನ ಸಮೀರ ಟ್ರೈನಿಂಗ್ ಕಾಲೇಜಿನಲ್ಲಿ
ಉಪಾಧ್ಯಾಯರಾಗಿ, ಹೆಡ್ಮಾಸ್ಟರ್ ಆಗಿ ೧೯೬೦ರಲ್ಲಿ ಆ ಕೆಲಸದಿಂದ ನಿವೃತ್ತರಾ
ದರು. ೧೯೪೭ರಲ್ಲಿ ಪರಿಷತ್ತಿನ ಗಮಕ ತರಗತಿಗೆ ಸೇರಿ ಪ್ರಥಮ ದರ್ಜೆಯಲ್ಲಿ
ಉತ್ತೀರ್ಣರಾದರು. ಗಮಕ ಶಿಕ್ಷಣದ ಗುರುಗಳು ಕಳಲೆ ಸಂಪತ್ಕುಮಾರಾ
ಚಾರ್ಯರು. ಪರೀಕ್ಷಕರು ಶ್ರೀ ಬಿ. ಎಂ. ಶ್ರೀಕಂಠಯ್ಯನವರು. ೧೯೩೪ರಿಂದ
ಶ್ರೀ ಎಂ. ಎಸ್. ಲಕ್ಷ್ಮೀನರಸಿಂಹ ಅಯ್ಯಂಗಾರ್‌ರವರಲ್ಲಿಯೂ ೧೯೪೭ರಲ್ಲಿ
ಬೆಳಕವಾಡಿ ವರದರಾಜ ಅಯ್ಯಂಗಾರ್ರವರಲ್ಲಿಯೂ ಸಂಗೀತವನ್ನು ಅಭ್ಯಾಸ ಮಾಡಿ
ಮದ್ರಾಸಿನ ಎ. ಐ. ಆರ್. ಕೇಂದ್ರದ ಶಾಸ್ತ್ರೀಯ ಸಂಗೀತದ ಆರ್ಟಿಸ್ಟ್ ಆಗಿ
ದ್ದರು. ಕನ್ನಡ ಪಠ್ಯ ಪುಸ್ತಕಗಳ ಅಭ್ಯಾಸದಿಂದ ಕನ್ನಡದ ಮೇಲಿನ ವ್ಯಾಮೋಹ
ವುಂಟಾಗಿ ವ್ಯಾಸಂಗ ಮಾಡುತ್ತಿರುವರು. 'ರಾಜಾಜಿ', 'ತಿಲಕ್', 'ಗಾಂಧಿ-
ತಿಲಕ್' ಜೀವನ ಚರಿತ್ರೆಗಳಲ್ಲದೆ ಇನ್ನೂ ಅನೇಕ ಪುಸ್ತಕಗಳನ್ನೂ ಪ್ರಬಂಧ
ಗಳನ್ನೂ ರಚಿಸಿರುತ್ತಾರೆ. ಕವಿತೆಗಳು, ಸಣ್ಣ ಕಾವ್ಯಗಳೂ ಇವರಿಂದ ರಚಿತವಾಗಿವೆ.
೧೯೬೯ರಲ್ಲಿ ಇವರ 'ಗಮಕ ಕಲೆ' ಎಂಬ ಪುಸ್ತಕವನ್ನು ಪರಿಷತ್ತಿನವರು ಸ್ವೀಕರಿಸಿ
ರುತ್ತಾರೆ. ಅದಕ್ಕೆ ಸರ್ಕಾರದ ಉದಾರ ಸಹಾಯವು ಲಭಿಸಿರುತ್ತದೆ. ಇವರಿಗೆ
ಶ್ರೀಯುತರುಗಳಾದ ಗಮಕಿ ಬಿಂದೂರಾಯರು, ಕೃಷ್ಣಗಿರಿ ಕೃಷ್ಣರಾಯರು, ಸುಪ್ರ
ಸಿದ್ಧ ಸಾಹಿತಿಗಳಾದ ಮಾಸ್ತಿಯವರು, ಪುತಿನ, ಡಿ. ವಿ. ಜಿ, ಬೇಂದ್ರೆ, ವಿ. ಸೀ,

ಅ.ನ.ಕೃ. ಮುಂತಾದವರ ಮತ್ತು ಸಂಗೀತ ವಿದ್ವಾನ್ ಮತ್ತು ಉದ್ದಾಮ ಪಂಡಿತರಾದ ರಾಳ್ಳಪಳ್ಳಿ ಅನಂತ ಕೃಷ್ಣಶರ್ಮ ಇವರುಗಳ ಪರಿಚಯ, ಪ್ರಶಂಸೆ, ಪ್ರೋತ್ಸಾಹಗಳು ಲಭಿಸಿವೆ. ೧೯೭೦ರಲ್ಲಿ ಬೆಂಗಳೂರು ಸಂಸ್ಕೃತ ಕಾಲೇಜಿನಲ್ಲಿ ಉಪಾಧ್ಯಾಯರುಗಳಿಗೆ ಗಮಕ ಶಿಕ್ಷಣದ ನಿರ್ದೇಶಕರಾಗಿದ್ದರು. ಆಕಾಶವಾಣಿಯಲ್ಲಿ, ಪರಿಷತ್ತಿನಲ್ಲಿ, ಹೋಬಳಿಗಳಲ್ಲಿ, ಶಿವಮೊಗ್ಗ ಮತ್ತು ಮೈಸೂರು ಕರ್ಣಾಟಕ ಸಂಘಗಳಲ್ಲಿ ಕಾವ್ಯವಾಚನ ಮಾಡಿದ್ದಾರೆ. ಗಮಕ ಕಲೆಯನ್ನು ಕುರಿತು ಕನ್ನಡ ಇಂಗ್ಲೀಷು ಗಳಲ್ಲಿ ಪ್ರಬಂಧಗಳನ್ನು ಬರೆದಿರುತ್ತಾರೆ.

೩೬. ಎಂ. ಎಸ್. ಅನಂತ ಪದ್ಮನಾಭರಾಯರು

ಇವರು ೬-೯-೧೯೦೩ರಲ್ಲಿ ಜನಿಸಿದರು. ಇವರ ಮಾತಾ ಪಿತೃಗಳು ನರಸಮ್ಮನವರು ಮತ್ತು ಶೇಷಗಿರಿರಾಯರು.

ಇವರು ಇಂಗ್ಲೀಷ್ ಮತ್ತು ಕನ್ನಡ ಶೀಘ್ರಲಿಪಿಗಳ ಪರಿಣತರಾಗಿ ಕೊಡಗು ನ್ಯಾಯ ವಿಧಾಯಕ ಸಭೆಯ ಮುಖ್ಯ ವರದಿಗಾರರಾಗಿದ್ದು ಈಗ ವಿಶ್ರಾಂತರಾಗಿರುವರು. ಇವರು ಪ್ರೌಢಶಾಲೆಯಲ್ಲಿ ವಿದ್ಯಾರ್ಥಿಯಾಗಿದ್ದಾಗಲೇ ಅಂದರೆ ೧೯೨೨ರಲ್ಲಿ ಶಾಲಾ ಮುಖ್ಯೋಪಾಧ್ಯಾಯರಾಗಿದ್ದ ಪಂಜೆ ಮಂಗೇಶರಾಯರ ಪ್ರಭಾವಕ್ಕೆ ಒಳಗಾಗಿ ಪದ್ಯಗಳನ್ನು ಅನೇಕ ರಾಗಗಳಲ್ಲಿ ಹಾಡುವುದನ್ನು ಕಲಿತು ಅವರ ಪ್ರಶಂಸೆಗೆ ಪಾತ್ರರಾದರು. ಆಗ ತಾನೇ ಪ್ರಕಟವಾಗುತ್ತಿದ್ದ ಮೈಸೂರು ಓರಿಯಂಟಲ್ ರಿಸರ್ಚ್ ಇಲಾಖೆಯ ಕುಮಾರವ್ಯಾಸಭಾರತದ ಭಾಗಗಳಿಂದ ಕಾವ್ಯವಾಚನವನ್ನು ಮಾಡಿ ಶ್ರೀ ಪಂಜೆ ಮಂಗೇಶರಾಯರ ಪ್ರಶಂಸೆಯನ್ನೂ ಮೆಚ್ಚಿಗೆಯನ್ನೂ ಪಡೆಯುತ್ತಿದ್ದರು. ಸಾಹಿತ್ಯ ಮತ್ತು ಕಾವ್ಯವಾಚನ ಕಲೆಯಲ್ಲಿ ಮಾರ್ಗದರ್ಶಕರೂ ಪ್ರೋತ್ಸಾಹಕರೂ ಶ್ರೀ ಪಂಜೆಯವರೇ. ಮುಂದೆ ೧೯೪೦ರಲ್ಲಿ ಕೃಷ್ಣಗಿರಿ ಕೃಷ್ಣರಾಯರಲ್ಲಿಯೂ ೧೯೪೨ರಲ್ಲಿ ಕಳಲೆ ಸಂಪತ್ಕುಮಾರಾಚಾರ್ಯರಲ್ಲಿಯೂ ಮತ್ತು ಬಿಂದೂರಾಯರಲ್ಲಿಯೂ ಗಮಕ ಕಲೆಯ ಅಭ್ಯಾಸವನ್ನು ಮುಂದುವರಿಸಿದರು. ಇವರಿಗೆ ಉತ್ತಮ ಶಾರೀರವು ಹಾಗೂ ತಕ್ಕಮಟ್ಟಿನ ಸಂಗೀತ ಜ್ಞಾನವೂ ಇದ್ದು ಇವರ ವಾಚನಗಳು ಜನಾದರಣೀಯವಾಗಿವೆ. ವಿದ್ವಾಂಸರಾದ ಬಿ. ಎಂ. ಶ್ರೀ. ಮತ್ತು ಕವಿವರ್ಯ ದ. ರಾ. ಬೇಂದ್ರೆಯವರ ನೇತೃತ್ವದಲ್ಲಿ ಇವರ ವಾಚನಗಳು ೧೯೪೧-೪೬ರಲ್ಲಿ ನಡೆದಿವೆ. ಕನ್ನಡ ಸಾಹಿತ್ಯ ಪರಿಷತ್ತಿನಿಂದ ನಿಯೋಜಿತರಾಗಿ ಉತ್ತರ ಕರ್ಣಾಟಕದಲ್ಲಿಯೂ ಮಂಗಳೂರು, ಬೆಂಗಳೂರು, ಉಡುಪಿ, ಮಂಡ್ಯ ಮುಂತಾದ

ಕಡೆಗಳಲ್ಲಿ ಕಾವ್ಯವಾಚನಗಳನ್ನು ನಡಸಿ ಮಹಾಜನರ ಅಭಿಮಾನಕ್ಕೆ ಪಾತ್ರರಾಗಿ ರುವರು. ಇವರು ಮಡಕೇರಿ ಮತ್ತು ಬಿಜಾಪುರಗಳಲ್ಲಿ ಗಮಕ ತರಗತಿಗಳನ್ನು ನಡೆಸಿ ಅನೇಕ ಶಿಷ್ಯರನ್ನು ಗಮಕ ಪರೀಕ್ಷೆಗಳಿಗೆ ಸಿದ್ಧಗೊಳಿಸಿರುವರು. ಇವರು ಅನೇಕ ಕಾವ್ಯಗಳನ್ನೂ ಬರೆದು ಪ್ರಕಟಿಸಿರುವರು. ಅವುಗಳಲ್ಲಿ 'ಕರ್ಣ'—೧೯೫೨ರ ಮದರಾಸ್ ವಿಶ್ವವಿದ್ಯಾನಿಲಯದ ಬಿ.ಎ. ಪರೀಕ್ಷೆಗೆ ಪಠ್ಯಪುಸ್ತಕವಾಗಿದ್ದಿತು. ಇವರ 'ತುಳಸೀದಾಸ ರಾಮಾಯಣ'ಕ್ಕೆ ೧೯೫೧ರಲ್ಲಿ ದೇವರಾಜ ಬಹದ್ದೂರ್ ಪ್ರಥಮ ಬಹುಮಾನವು ದೊರೆತಿದೆ. ಮಹಾಭಾರತದ ಕೊನೆಯ ಎಂಟು ಪರ್ವಗಳನ್ನು ಸುಮಾರು ೭೨೦೦ ಪದ್ಯಗಳು—ಬರೆದಿರುವರು. ವಾರ್ಧಕ ಷಟ್ಪದೀಕಾವ್ಯವಾದ 'ಶ್ರೀಮನ್ಮಧ್ವಚರಿತಮಾನಸ' ಇವರ ಒಂದು ಬೃಹದ್‌ಗ್ರಂಥ. ಇವಲ್ಲದೆ ಅನೇಕ ಕಿರುಗವನಗಳು ಸಣ್ಣಕತೆಗಳು ಇವರಿಂದ ರಚಿತವಾಗಿ ಪ್ರಕಟವಾಗಿವೆ. ಕಾವ್ಯರಚನೆ ಮತ್ತು ಕಾವ್ಯಗಾಯನ ಇವರ ಜೀವನದಲ್ಲೇ ಮೇಳೈಸಿದೆ. ಇವರು ಸುಮಾರು ೧೯೫೩ರಿಂದ ಪರಿಷತ್ತಿನ ಕಾರ್ಯಕಾರಿ ಸಮಿತಿಯ ಸದಸ್ಯರಾಗಿಯೂ ಗಮಕ ಸಮಿತಿಯ ಸದಸ್ಯರಾಗಿಯೂ, ಪ್ರದೇಶ ಸಮಿತಿಯ ಸದಸ್ಯರಾಗಿಯೂ ಸೇವೆ ಸಲ್ಲಿ ಸಿರುವರು. ಮಡಕೇರಿ ಕರ್ಣಾಟಕ ಸಂಘದ ಕಾರ್ಯದರ್ಶಿಯಾಗಿಯೂ ಮುಂದೆ ಅದರ ಉಪಾಧ್ಯಕ್ಷರಾಗಿಯೂ ಇದ್ದು ಕೊಡಗಿನ ಬೇರೆ ಬೇರೆ ಕಡೆಗಳಲ್ಲಿ ಕರ್ಣಾಟಕ ಸಂಘಗಳನ್ನು ಸ್ಥಾಪಿಸಲು ಕಾರಣರಾಗಿರುವರು.

೩೭. ಪಿ. ಹೆಚ್. ಸೀತೂರಾಯರು

ಇವರು ೧೯೦೮ರಲ್ಲಿ ಜನ್ಮ ತಾಳಿದರು. ಇವರು ಬಿ.ಎ. ಪದವೀಧರರಾಗಿ ರೈಲ್ವೆ ಇಲಾಖೆಯಲ್ಲಿ ಅಕೌಂಟ್ಸ್ ಆಫೀಸರಾಗಿ ನಿವೃತ್ತರಾಗಿದ್ದರು. ಬಾಲ್ಯ ದಿಂದಲೂ ದಾಸಸಾಹಿತ್ಯ ಮತ್ತು ಗಮಕ ಕಲೆಗಳಲ್ಲಿ ಅಭಿರುಚಿಯಿದ್ದು ಅಭ್ಯಾಸ ಮಾಡಿದ್ದರೂ ಸಹ ನಿವೃತ್ತರಾದನಂತರ ಗಮಕಿ ಕೃಷ್ಣಗಿರಿ ಕೃಷ್ಣರಾಯರಲ್ಲಿ ಕ್ರಮ ವಾಗಿ ಗಮಕ ಶಿಕ್ಷಣವನ್ನು ಪಡೆದರು. ಮದರಾಸಿನಲ್ಲಿ ಕರ್ಣಾಟಕ ಸಂಘದ ಆಶ್ರಯ ದಲ್ಲಿ ಸುಮಾರು ಒಂದು ವರ್ಷಕಾಲ ಕಾವ್ಯವಾಚನ ಮಾಡಿದರು. ಜಯನಗರದ ವನಿತಾ ಸದನದಲ್ಲಿ ಗಮಕ ತರಗತಿಗಳನ್ನು ನಡೆಸಿದರು. ಇವರಿಂದ ರಚಿಸಲ್ಪಟ್ಟ ಗಮಕ ರೂಪಕಗಳು ಮತ್ತು ದಾಸಸಾಹಿತ್ಯವನ್ನು ಆಧರಿಸಿ ರಚಿತವಾದ ರೂಪಕ ಗಳು 'ಆಕಾಶವಾಣಿ'ಯಲ್ಲಿ ಪ್ರಸಾರವಾಗಿವೆ. ೧೯೭೦ನೇ ಮೇ ತಿಂಗಳಿನಲ್ಲಿ ಸಂಸ್ಕೃತಿ ಮತ್ತು ಸಾಹಿತ್ಯ ಇಲಾಖೆಯ ಆಶ್ರಯದಲ್ಲಿ ಪ್ರಾಥಮಿಕ ಶಾಲಾ ಉಪಾಧ್ಯಾಯರಿ

ಗಾಗಿ ವ್ಯವಸ್ಥಿತವಾದ ತರಬೇತಿ ಕೇಂದ್ರದಲ್ಲಿ ದಾಸ ಸಾಹಿತ್ಯ ಮತ್ತು ಗಮಕ ತರತಿಗಳನ್ನು ನಡೆಸಿದರು. ಪರಿಷತ್ತು ನಡೆಸುತ್ತಿರುವ ಗಮಕ ಪರೀಕ್ಷೆಗಳಿಗೆ ಪರೀಕ್ಷಕರಾಗಿ ಸೇವೆ ಸಲ್ಲಿಸಿದರು.

೩೮. ಕೆ. ಎಸ್. ವೆಂಕಟೇಶಯ್ಯ, ಬೆಂಗಳೂರು

ಇವರು ೧೯೦೮ನೇ ಆಗಸ್ಟ್ ತಿಂಗಳಲ್ಲಿ ಕೃಷ್ಣರಾಜಪೇಟೆ ತಾಲ್ಲೋಕು ಕುಪ್ಪಹಳ್ಳಿ ಗ್ರಾಮದಲ್ಲಿ ಜನಿಸಿದರು. ತಂದೆ ಶ್ರೀನಿವಾಸಶಾಸ್ತ್ರಿಗಳು, ತಾಯಿ ತಿಮ್ಮಮ್ಮನವರು. ಎಸ್.ಎಸ್.ಎಲ್.ಸಿ. ಆಗಿದೆ. ಇವರ ಉದ್ಯೋಗ ವ್ಯವಸಾಯ, ವ್ಯಾಪಾರ, ಕಂಟ್ರಾಕ್ಟ್. ಶ್ರೀ ಚಾಮುಂಡೇಶ್ವರಿ ಕರ್ಣಾಟಕ ನಾಟಕ ಸಭಾ ಕಂಪೆನಿಯಲ್ಲಿ ೩೦ ವರ್ಷ ರಂಗಭೂಮಿಯ ಸೇವೆ ಮಾಡಿರುವರು. ಮೈಸೂರು ಆಸ್ಥಾನ ವಿದ್ವಾಂಸರಾಗಿದ್ದ ಶ್ರೀ ಕೆ. ವಾಸುದೇವಾಚಾರ್ಯರು ಮತ್ತು ಶ್ರೀ ಎನ್. ಚನ್ನಕೇಶವಯ್ಯಂಗಾರ್ಯರಲ್ಲಿ ನಾಲ್ಕು ವರ್ಷ ಸಂಗೀತಾಭ್ಯಾಸ ಮಾಡಿರುವರು. ಕನ್ನಡ ಸಾಹಿತ್ಯದಲ್ಲೂ ಅಭಿಮಾನವಿದೆ. ಕಾವ್ಯವಾಚನ ಮತ್ತು ವ್ಯಾಖ್ಯಾನಗಳೆರಡರಲ್ಲೂ ೩೦ ವರ್ಷಗಳ ಪೂರ್ಣ ಅನುಭವವಿದೆ. ವಿದ್ಯಾರ್ಥಿ ದೆಸೆಯಲ್ಲಿ ಉಪಾಧ್ಯಾಯರಾಗಿದ್ದ ದೇವುಡು ಶಾಸ್ತ್ರಿಗಳು ಕಾವ್ಯವಾಚನ ಮಾಡುತ್ತಿದ್ದುದನ್ನು ಕೇಳಿ ಸ್ಫೂರ್ತಿಗೊಂಡರು. ಇವರ ಅಜ್ಜಿ ಮೀನಾಕ್ಷಮ್ಮನವರೇ ಇವರಿಗೆ ಗಮಕದ ಗುರುಗಳು. ಅವರು ಒಳ್ಳೆಯ ವ್ಯಾಖ್ಯಾನಕಾರರಾಗಿದ್ದರು. ಅವರಿಂದ ಪ್ರೋತ್ಸಾಹಿತರಾಗಿ ಗದುಗಿನ ಭಾರತವನ್ನು ವಾಚನ ಮಾಡಿದರು. ಕಾಶಿ ವಿಶ್ವವಿದ್ಯಾಲಯ, ಜಬ್ಬಲ್ಪುರ, ಭೂಪಾಲ್, ಬೊಂಬಾಯಿ ಮುಂತಾದ ಅನೇಕ ಕಡೆಗಳಲ್ಲಿ ಕಾವ್ಯವಾಚನ ಮಾಡಿರುತ್ತಾರೆ. ಕಳೆದ ೨೪ ವರ್ಷಗಳಿಂದ ಮತ್ತೂರು, ಶಿವಮೊಗ್ಗ, ಅರಸೀಕೆರೆ, ಬಾಣಾವರ, ಬೆಂಗಳೂರು, ಮಾಲೂರುಗಳಲ್ಲಿ ಗಮಕ ಪ್ರವೇಶ ಮತ್ತು ಪ್ರೌಢ ತರಗತಿಗಳನ್ನು ನಡೆಸಿರುತ್ತಾರೆ. ಸಂಸ್ಕೃತಿ ಪ್ರಚಾರ ಕಾರ್ಯದಲ್ಲಿಯೂ ಪಾಲ್ಗೊಂಡಿದ್ದರು. ಆಕಾಶವಾಣಿಯಲ್ಲಿ ೧೬ ವರ್ಷ ಇವರ ಕಾವ್ಯವಾಚನ ನಡೆದಿರುತ್ತೆ. ದಾವಣಗೆರೆಯಲ್ಲಿ ಹದಿನಾಲ್ಕು ತಿಂಗಳ ಕಾಲ ಕಾವ್ಯವಾಚನ ಮಾಡಿ "ಗಮಕ ಕಲಾ ಪ್ರವೀಣ" ಎಂಬ ಪ್ರಶಸ್ತಿ ಪಡೆದಿರುತ್ತಾರೆ. ಅರಸೀಕೆರೆಯಲ್ಲಿ ೧೬ ತಿಂಗಳ ಕಾಲ ಶ್ರೀರಾಮ ಸೇವಾ ಮಂಡಲಿಯ ಆಶ್ರಯದಲ್ಲಿ ವಾಚನ ನಡಸಿದ್ದಾರೆ. ಶ್ರೀ ಶೃಂಗೇರಿ ಜಗದ್ಗುರುಗಳ ಸನ್ನಿಧಾನದಲ್ಲಿ ವಾಚನ ವ್ಯಾಖ್ಯಾನಗಳೆರಡನ್ನೂ ಮಾಡಿ ಬಹುಮಾನಿತರಾಗಿರುತ್ತಾರೆ.

೩೯. ಭಾರತದ ಲಲಿತಮ್ಮನವರು, ಬೆಂಗಳೂರು

ಇವರಿಗೆ ೭೦ ವರ್ಷಗಳಾಗಿವೆ. ಇವರ ಯಜಮಾನರು ಶ್ರೀ ಎಂ. ಸುಬ್ರಹ್ಮಣ್ಯ ಶಾಸ್ತ್ರಿಗಳು. ಈ ದಂಪತಿಗಳು ನಾಟಕ ಶಿರೋಮಣಿ ವರದಾಚಾರ್ಯರ ನಾಟಕಗಳನ್ನು ತಪ್ಪದೆ ನೋಡುತ್ತಿದ್ದು ವರದಾಚಾರ್ಯರು ಗಮಕಬದ್ಧವಾಗಿ ಹಾಡುತ್ತಿದ್ದ ಕಂದ, ವೃತ್ತ, ಹಾಡುಗಳ ಮೋಡಿಗೆ ಮುಗ್ಧರಾಗಿದ್ದರು. ಸಾಹಿತ್ಯ ಸಂಗೀತಗಳಲ್ಲಿ ನಿಷ್ಣಾತರಾಗಿದ್ದ ಶಾಸ್ತ್ರಿಗಳು ಲಲಿತಮ್ಮನವರಿಗೆ ಆಚಾರ್ಯರ ಹಾಡುಗಾರಿಕೆಯ ಹೆಚ್ಚುಗಾರಿಕೆ, ಗಮಕ ಮುಂತಾದುವನ್ನು ತೋರಿಸಿಕೊಡುತ್ತಿದ್ದರು. ಆಚಾರ್ಯರ ಹಾಡುಗಾರಿಕೆಯ ಕೇಳ್ಮೆ ಮತ್ತು ಪತಿಯಿಂದ ದೊರೆತ ಶಿಕ್ಷಣದಿಂದ ಲಲಿತಮ್ಮನವರು ಕಾವ್ಯವಾಚನದಲ್ಲಿ ಆಸಕ್ತಿಯನ್ನು ಬೆಳಸಿಕೊಂಡರು. ವಿದ್ವಾಂಸರ ಮುಂದೆ ತಾವು ಕಾವ್ಯವಾಚನ ಮಾಡಬೇಕೆಂಬ ಅಭಿಲಾಷೆಯನ್ನು ವ್ಯಕ್ತಪಡಿಸಿದಾಗ ಶಾಸ್ತ್ರಿಗಳವರು ಬಿಡಾರಂ ಕೃಷ್ಣಪ್ಪನವರು, ಸಂಗೀತರತ್ನ ವಾಸುದೇವಾಚಾರ್ಯರು, ಗಾನವಿಶಾರದ ಚಿಕ್ಕರಾಮರಾಯರು ಮುತ್ತಯ್ಯ ಭಾಗವತರ ಮನೆಯಲ್ಲಿ ನೆರೆದಿದ್ದಾಗ ಈಕೆಗೆ ಕಾವ್ಯವಾಚನಮಾಡಲು ಅವಕಾಶವನ್ನು ಕಲ್ಪಿಸಿ ಅಂತಹ ಘನ ವಿದ್ವಾಂಸರ ಮೆಚ್ಚಿಗೆಯನ್ನು ಪಡೆಯುವಂತೆ ಮಾಡಿದರು. ಅಂದಿನಿಂದ ಅಂದರೆ ಸುಮಾರು ೧೯೨೪–೨೫ರಿಂದ ಅರ್ಧ ಶತಮಾನಗಳ ಕಾಲ ಈಕೆಯು ವಾಚನ ಮಾಡುತ್ತಿರುವರು. ಇವರ ವಾಚನಗಳು ಮಹಾರಾಜಾ ಕಾಲೇಜು ಕರ್ನಾಟಕ ಸಂಘದಲ್ಲಿಯೂ ಮೈಸೂರಿನ ತಾತಯ್ಯನವರಾದ ಶ್ರೀ ಎಂ. ವೆಂಕಟಕೃಷ್ಣಯ್ಯನವರ ಷಷ್ಠಿಪೂರ್ತಿ ಸಮಾರಂಭದಲ್ಲಿಯೂ, ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿಯೂ ನಡೆದಿವೆ. ಮೈಸೂರು ಅರಮನೆಯಲ್ಲಿಯೂ ಕೂಡ ಲಲಿತಮ್ಮನವರ ಭಾರತ ವಾಚನವು ನಡೆಯಿತು. ಈಕೆಯ ಕಾವ್ಯವಾಚನವನ್ನು ಮಹಾಜನಗಳಿಗೆ ದೊರಕಿಸಿದ ಕೀರ್ತಿಯು ಮೈಸೂರಿನ ವನಿತಾ ಸಮಾಜಕ್ಕೂ ಮತ್ತು ತಿರಿಚಾನೂರಿನ ಮಧ್ವ ಸಿದ್ಧಾಂತ ಅಭಿವೃದ್ಧಿ ಕಾರಿಣೀ ಸಭೆಗೂ ಸಲ್ಲಬೇಕು. ಮೈಸೂರಿನಲ್ಲಿ ಆಕಾಶವಾಣಿ' ಕೇಂದ್ರವು ಪ್ರಾರಂಭವಾದಾಗ ಹಾಡಿನ ನಾಗಮ್ಮನವರ ಮತ್ತು ಲಲಿತಮ್ಮನವರ ಕಾವ್ಯವಾಚನಗಳು ತಪ್ಪದೆ ಪ್ರಸಾರವಾಗುತ್ತಿದ್ದುವು. ಸಂಸ್ಕೃತಿ ಪ್ರಸಾರ ಇಲಾಖೆಯ ಆಶ್ರಯದಲ್ಲಿಯೂ ಕಾವ್ಯವಾಚನ ಕಾರ್ಯಕ್ರಮಗಳನ್ನು ಅನೇಕ ಗ್ರಾಮಾಂತರ ಪ್ರದೇಶಗಳಲ್ಲಿ ನಡಸಿರುವರು. ಲಲಿತಮ್ಮನವರು ಹರಿಕಥೆಗಳನ್ನೂ ಕೀರ್ತನೆಗಳನ್ನೂ ಮಾಡುತ್ತಿರುವಾಗ ಅವನ್ನು ಕೇಳಿದ ಸಂಗೀತ ವಿದ್ವಾನ್ ಟೈಗರ್

ವರದಾಚಾರ್ಯರು, ಯುವರಾಜರಾಗಿದ್ದ ಕಂಠೀರವ ನರಸಿಂಹರಾಜ ಒಡೆಯರ್‌ರವರು ಮತ್ತು ದಿವಾನ್ ಮಿರ್ಜಾಸಾಹೇಬರವರು ಸಂತೋಷದಿಂದ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದರು. ಶ್ರೀಯುತ ಮಾಸ್ತಿಯವರ ರಚನೆ 'ತಿರುಪಾಣಿ' ಗೀತರೂಪಕವು ರಂಗದ ಮೇಲೆ ಸಾಕಷ್ಟು ಪ್ರಭಾವವನ್ನು ಬೀರದಿದ್ದಾಗ ಇವರು 'ತಿರುಪಾಣಿ' ನಾಟಕವನ್ನು ತಾವು ವಾಚನಮಾಡಿ ಅದರ ಸೌಂದರ್ಯವನ್ನು ಜನರು ಗುರುತಿಸುವಂತೆ ಮಾಡಿದರು. ಮದರಾಸ್ ಆಕಾಶವಾಣಿ ಕೇಂದ್ರದವರು ಇವರಿಂದ 'ತಿರುಪಾಣಿ'ಯ ವಾಚನವನ್ನು ಏರ್ಪಡಿಸಿ ಪ್ರಸಾರ ಮಾಡಿದರು. 'ಶಬರಿಗಾದನು ಅತಿಥಿ ದಾಶರಥಿ' ಭಾಗದ ವಾಕ್ಚಿತ್ರವನ್ನು ಮಾಡಲು ವಯಸ್ಕರ ಶಿಕ್ಷಣ ಸಮಿತಿಯು ನಿಶ್ಚಯಿಸಿದಾಗ ಇವರು ಶಬರಿಯ ಪಾತ್ರವನ್ನು ನಿರ್ವಹಿಸಿದರು ಇವರು ಗಮಕ ತರಗತಿಗಳನ್ನೂ ನಡೆಸಿ, ಅನೇಕ ಉತ್ತಮ ಶಿಷ್ಯರನ್ನು ತಯಾರು ಮಾಡಿರುವರು.

೪೦. ಮನ್ನಾರು ಕೃಷ್ಣಯ್ಯನವರು

ಇವರು ೧೯೦೬ನೇ ಇಸವಿಯಲ್ಲಿ ನಂಜನಗೂಡು ತಾಲ್ಲೂಕಿನ ಹುಲ್ಲಹಳ್ಳಿಯಲ್ಲಿ ಜನಿಸಿದರು. ಇವರ ತಾಯಿ ಮಹಾಲಕ್ಷಮ್ಮ, ತಂದೆ ನಂಜಪ್ಪನವರು. ಕನ್ನಡ ಮತ್ತು ಇಂಗ್ಲೀಷ್ ಲೋಯರ್ ಸೆಕೆಂಡರಿಯನ್ನು ಮುಗಿಸಿಕೊಂಡು ತಮ್ಮ ಗ್ರಾಮದಲ್ಲಿ ಶ್ಯಾನುಭೋಗರಾಗಿಯೂ ಮತ್ತು ಬ್ರಾಂಚ್ ಪೋಸ್ಟ್‌ಮಾಸ್ಟರಾಗಿಯೂ ಇರುವರು. ಇವರ ತಂದೆಯವರು ಪ್ರಸಿದ್ಧ ಗಮಕಿಗಳೂ ಮತ್ತು ಪಿಟೀಲುವಾದಕರೂ ಆಗಿದ್ದರು. ಇವರ ಚಿಕ್ಕಪ್ಪಂದಿರುಗಳು ಶ್ರೀಯುತ ಸುಬ್ಬರಾಯ ಮತ್ತು ರಾಯಣ್ಣ ಎಂಬುವರು ಅಲ್ಲಿ ಸ್ಕೂಲ್‌ಮಾಸ್ಟರ್ ಆಗಿದ್ದ ಶ್ರೀ ಎಚ್.ಎನ್. ಕೃಷ್ಣಪ್ಪ ಎಂಬುವರು ಕೀರ್ತನಕಾರರಾಗಿದ್ದರೂ ಸಹ ಕಾವ್ಯವಾಚನವನ್ನು ಮಾಡುತ್ತಿದ್ದವರು. ಅವರಿಂದ ಪ್ರಭಾವಿತರಾದ ಇವರ ವಾಚನ ಕಲೆಯು ಇವರ ತಂದೆಯವರಿಂದಲೇ ಮೊದಲು ಪರಿಷ್ಕೃತವಾಯಿತು. ಇವರಿಗೂ ಪಿಟೀಲು ವಾದನದಲ್ಲಿ ಪರಿಶ್ರಮವಿದೆ. ಇವರು ಗಮಕ ವಾಚನ ಕಲೆಯನ್ನು ಶ್ರೀ ಹೆಚ್.ಎಂ. ರಾಮಾರಾಧ್ಯರಲ್ಲಿ ಅಭ್ಯಾಸ ಮಾಡಿರುವರು. ಇವರಿಗೆ ಕನ್ನಡದ ಷಟ್ಪದೀ ಮತ್ತು ಚಂಪೂ ಕಾವ್ಯಗಳಲ್ಲಿ ಪರಿಣತಿಯಿದೆ. ಇವರು ಮೈಸೂರು ಸರ್ಕಾರದ ಸಂಸ್ಕೃತಿ ಪ್ರಚಾರದ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಮೈಸೂರು, ನಂಜನಗೂಡು, ಪಾಂಡವಪುರ, ಮೇಲುಕೋಟೆ ಮುಂತಾದ ಸ್ಥಳಗಳಲ್ಲಿ ವಾಚನ ಕಾರ್ಯಕ್ರಮವನ್ನು ನಡೆಸಿರುವರು. ಇವರ

ವಾಚನಕಲೆ ಮತ್ತು ಕೀರ್ತನ ಕಲೆಗಳನ್ನು ಮೆಚ್ಚಿ, ಡಿ.ಇ.ಓ.ರವರು ಮತ್ತು ಅಲ್ಲಲ್ಲಿನ ಸಂಘ ಸಂಸ್ಥೆಗಳು ಮೆಚ್ಚಿಗೆಯನ್ನು ವ್ಯಕ್ತಪಡಿಸಿವೆ.

೪೧. ಎಂ. ಎಸ್. ವೆಂಕಟಸುಬ್ಬಯ್ಯ, ಅರಕಲಗೂಡು

ಇವರು ಹಾಸನ ಜಿಲ್ಲಾ ಅರಕಲಗೂಡು ತಾಲ್ಲೂಕು ಮಲತಮ್ಮನ ಹಳ್ಳಿಯಲ್ಲಿ ೨-೧-೧೯೧೬ ರಲ್ಲಿ ಜನಿಸಿದರು. ತಂದೆ ಪಟೇಲ್ ಸುಬ್ರಾಯರು, ತಾಯಿ ಸುಬ್ಬಮ್ಮನವರು. ಲೋಯರ್ ಸೆಕೆಂಡರಿ ಆಗಿದೆ. ಉದ್ಯೋಗ ವ್ಯವಸಾಯ. ಸಂಗೀತದ ಪರಿಚಯವಿದೆ. ಕನ್ನಡ ಸಾಹಿತ್ಯದಲ್ಲಿ ಅಭಿರುಚಿಯನ್ನು ಹೊಂದಿದ್ದಾರೆ. ವ್ಯಾಖ್ಯಾನವನ್ನೂ ಮಾಡಬಲ್ಲರು. ಇವರು ದಿವಂಗತ ಪಂಡಿತ ಶ್ರೀ ಶ್ರೀನಿವಾಸ ಶಾಸ್ತ್ರಿಗಳಲ್ಲಿ ಗಮಕ ಕಲೆಯನ್ನು ಅಭ್ಯಾಸ ಮಾಡಿದರು. ಅವರು ಉತ್ತಮ ಪಂಡಿತರು, ವಾಗ್ಮಿಗಳು, ಗಮಕ ಕಲೋಪಾಸಕರು ಮತ್ತು ವ್ಯಾಖ್ಯಾನಕಾರರೂ ಆಗಿದ್ದರು. ಅವರಲ್ಲಿ ಗಮಕ ಕಲೆಯನ್ನು ಕಲಿತ ಶ್ರೀಯುತರು ರಾಮನಾಥಪುರ, ಸಂತೆ ಮರೂರು, ಅರಕಲಗೂಡು, ನರಸೀಪುರ ಮುಂತಾದೆಡೆಗಳಲ್ಲಿ ವಾಚನ ಮಾಡಿರುವರು. ಕುಮಾರವ್ಯಾಸ ಭಾರತ, ಲಕ್ಷ್ಮೀಶ ಭಾರತ, ನರಹರಿಯ ಪ್ರಹ್ಲಾದ ಚರಿತ್ರೆ, ಚೆನ್ನಬಸವ ಪುರಾಣ, ತೊರವೆಯ ರಾಮಾಯಣ, ಸಿದ್ಧರಾಮ ಚರಿತ್ರೆ, ಹರಿಶ್ಚಂದ್ರ ಕಾವ್ಯ, ರಾಜಶೇಖರ ವಿಳಾಸ ಮತ್ತು ಅಕ್ಕಮಹಾದೇವಿಯ ವಚನಗಳು—ಇವರಿಗೆ ಅತ್ಯಂತ ಪ್ರಿಯವಾದ ಕಾವ್ಯಗಳು. ರಾಮೋತ್ಸವ ಗಣೇಶೋತ್ಸವ, ಶಂಕರ ಜಯಂತ್ಯುತ್ಸವ ಸಮಾರಂಭಗಳಲ್ಲಿ ಅನೇಕ ಕಡೆ ವಾಚನ ಮಾಡಿರುವರು.

೪೨. ಕೆ. ಎನ್. ಚಂದ್ರಶೇಖರಯ್ಯನವರು, ಬೆಂಗಳೂರು

ಇವರು ೨೦-೪-೧೯೧೬ರಲ್ಲಿ ಜನಿಸಿದರು. ಇವರ ತಂದೆ ಶ್ರೀ ಕೋಡನಾಡು ನಂಜುಂಡಪ್ಪನವರು, ತಾಯಿ ಶ್ರೀಮತಿ ತಿಮ್ಮಮ್ಮನವರು. ಇವರು ಬಿ. ಎ. ಪದವೀಧರರಾಗಿ ಪೋಲೀಸ್ ಇಲಾಖೆಯಲ್ಲಿ ಐ.ಜಿ.ಪಿ.ಯವರ ಕಛೇರಿಯಲ್ಲಿ ಮ್ಯಾನೇಜರ್ ಆಗಿದ್ದು ನಿವೃತ್ತರಾಗಿರುವರು. ತಮ್ಮ ಇಳಿವಯಸ್ಸಿನಲ್ಲಿ ಗಮಕ ಕಲೆಯಲ್ಲಿ ಆಸಕ್ತಿಯನ್ನು ಹೊಂದಿ ೧೯೭೬ರಲ್ಲಿ ಶ್ರೀಮಾನ್ ಎನ್. ಎಸ್. ನಾರಾಯಣ ಮೂರ್ತಿಯವರಲ್ಲಿ ಕಾವ್ಯವಾಚನವನ್ನು ಅಭ್ಯಾಸ ಮಾಡಿ ೧೯೭೨-೭೩ರಲ್ಲಿ ನಡೆದ

ಗಮಕ ಪ್ರವೇಶ ಮತ್ತು ಪ್ರೌಢಪರೀಕ್ಷೆಗಳಲ್ಲಿಯೂ ಕುಳಿತು ಉತ್ತೀರ್ಣರಾಗಿರುವರು. ಇವರಿಗೆ ಸುಮಾರು ೩೦ ರಾಗಗಳ ಸಂಚಾರಗಳ ಪರಿಚಯವಿದೆ.

೪೩. ವೆಂಕಟಜೀರಯ್ಯ

ಇವರು ಮಂಡ್ಯ ಜಿಲ್ಲೆಯ ಮಳವಳ್ಳಿಯಲ್ಲಿ ೬-೬-೧೯೦೬ರಲ್ಲಿ ಜನಿಸಿದರು. ಇವರ ತಂದೆ ಶ್ರೀ ರಾಮಾನುಜೀಯರ್-ತಾಯಿ ನರಸಮ್ಮ. ಲೋಯರ್ ಸೆಕೆಂಡರಿ ಅಪ್‌ಗ್ರೇಡ್ ಪ್ರೈಮರಿ ಸ್ಕೂಲ್ ಮುಖ್ಯೋಪಾಧ್ಯಾಯರಾಗಿದ್ದು ಸದ್ಯದಲ್ಲಿ ನಿವೃತ್ತರಾಗಿರುವರು. ಇವರಿಗೆ ಸಂಗೀತ ಜೂನಿಯರ್ ಪರೀಕ್ಷೆಯಾಗಿದ್ದು ವರ್ಣ ಕೀರ್ತನೆಗಳ ಹಾಡುಗಾರಿಕೆಯಲ್ಲಿ ೩೦ ವರ್ಷಗಳ ಅನುಭವವಿರುತ್ತೆ. ಬಾಲ್ಯದಿಂದ ತಮ್ಮ ಹಿರಿಯರ ಕಾವ್ಯವಾಚನಗಳಿಂದ ಪ್ರಭಾವಿತರಾದ ಇವರು ಷಟ್ಪದೀ ಮತ್ತು ಚಂಪೂ ಕಾವ್ಯಗಳನ್ನು ವಾಚನ ಮಾಡುತ್ತಿರುವರು. ಸಂಸ್ಕೃತಿ ಪ್ರಚಾರ ಇಲಾಖೆಯ ಕಾರ್ಯಕ್ರಮಗಳಲ್ಲಿ ಮೂರು ವರ್ಷಗಳ ಕಾಲ ಭಾಗವಹಿಸಿ ಮಳವಳ್ಳಿ ತಾಲ್ಲೋಕಿನಲ್ಲಿ ಕಾವ್ಯವಾಚನ ಮಾಡಿರುವರು. ಉತ್ಸವ ಸಮಾರಂಭಗಳಲ್ಲಿ ಭಾಗವಹಿಸಿ, ಕಾವ್ಯವಾಚನವನ್ನು ಮಾಡಿ, ಸಹೃದಯರಿಂದ ಮೆಚ್ಚಿಗೆಯನ್ನು ಪಡೆದಿರುವರು.

೪೪. ಟಿ. ಎಸ್. ವಾಸುದೇವರಾವ್, ರಾಮನಗರಂ.

ಇವರು ಕೋಲಾರ ಜಿಲ್ಲೆಯ ಬಾಗೇಪಲ್ಲಿಯಲ್ಲಿ ೫-೮-೧೯೦೬ರಂದು ಜನಿಸಿದರು. ಇವರ ತಂದೆ ತಳಗವಾರದ ಸೀತಾರಾಮಯ್ಯನವರು-ತಾಯಿ ಸುಬ್ಬಮ್ಮನವರು. ಹೈಸ್ಕೂಲ್ ಮಟ್ಟದ ಶಿಕ್ಷಣವನ್ನು ಪಡೆದು ವಕೀಲರ ಗುಮಾಸ್ತೆಯಾಗಿರುವರು. ಉತ್ಕೃಷ್ಟ ಕಾವ್ಯ ವಾಚನಗಳನ್ನು ಕೇಳಿ ತಾವೂ ಗಮಕ ಕಲೆಯಲ್ಲಿ ಆಸಕ್ತಿಯನ್ನು ಹೊಂದಿದರು. ಗ್ರಾಮಾಂತರ ಪ್ರದೇಶಗಳಲ್ಲಿ ಕುಮಾರವ್ಯಾಸ ಭಾರತ, ಜೈಮಿನಿ ಭಾರತ, ಶಂಕರ ವಿಜಯ ಮತ್ತು ರಾಮಾಯಣ ದರ್ಶನಂ ಕಾವ್ಯಗಳನ್ನು ವಾಚನ ಮಾಡುತ್ತಿರುವರು. ಇವರ ವಾಚನಗಳು ಸಹೃದಯರ ಪ್ರಶಂಸೆಯನ್ನು ಪಡೆದಿವೆ.

೪೫. ವೆಂಕಟಸುಬ್ಬಯ್ಯ, ಮುಳ್ಳೂರು ಹೆಗ್ಗಡದೇವನಕೋಟೆ ತಾಲ್ಲೂಕು

ಇವರು ನಿವೃತ್ತ ಅಧ್ಯಾಪಕರು. ೧೫-೩-೧೯೧೭ರಲ್ಲಿ ಮುಳ್ಳೂರಿನಲ್ಲಿ ಜ... ಸಿದರು. ಶ್ರೀಮತಿ ನಂಜಮ್ಮ ಮತ್ತು ಶ್ರೀ ದೇವಪ್ಪನವರು ಇವರ ಮಾತಾಪಿತೃಗಳು ಸಂಗೀತ ಪಾಠ ಆಗಿದಿಲ್ಲದ್ದರೂ ಶ್ರುತಿಜ್ಞಾನ, ರಾಗ, ತಾಳಗಳ ಪರಿಚಯವಿದೆ ದಾಸ ಸಾಹಿತ್ಯವನ್ನು ಹಾಡಬಲ್ಲರು. ಇವರಿಗೆ ಕನ್ನಡ ಸಾಹಿತ್ಯದಲ್ಲಿ ತುಂಬಾ ಅ... ರುಚಿಯಿದೆ. ಕಥೆ ಕವಿತೆಗಳನ್ನು ರಚಿಸಿರುತ್ತಾರೆ. ಇವರ "ಶ್ರೀರಾಮ ಭಕ್ತಿ ಶತಕ" ಮತ್ತು "ಜಿನಭಜನ ಮಂಜರಿ" ಪ್ರಕಟವಾಗಿವೆ. ಮಾಸ ಪತ್ರಿಕೆಗಳಲ್ಲಿ ಹತ್ತಾರು ಲೇಖನಗಳೂ ಕವನಗಳೂ ಪ್ರಕಟವಾಗಿವೆ. ತಮ್ಮ ೧೮ನೇ ವಯಸ್ಸಿನಿಂದ ಗಮಕ ಕಲೆಯನ್ನು ಅಭ್ಯಾಸ ಮಾಡಿರುತ್ತಾರೆ. ಇದಕ್ಕೆ ಅವರ ತಂದೆಯವರೇ ಗುರುಗಳು ಅವರು ನುರಿತ ಸಂಗೀತಗಾರರೂ, ತಬಲ ಮೃದಂಗಗಳನ್ನು ನುಡಿಸುವವರೂ ಆ... ದ್ದರು. ದಾಸ ಸಾಹಿತ್ಯವನ್ನು ಅಭ್ಯಾಸ ಮಾಡಿದ್ದರು. ಅವರ ಮಕ್ಕಳಾದ ಶ್ರೀ... ಯುತರಿಗೆ ಗದುಗಿನ ಭಾರತ, ಜೈಮಿನಿ ಭಾರತ, ಹರಿಶ್ಚಂದ್ರ ಕಾವ್ಯ, ತೊರವೆ ರಾಮಾಯಣ ಮತ್ತು ರಾಮಾಯಣ ದರ್ಶನಂ ಮುಂತಾದ ಕಾವ್ಯಗಳು ಬಲು ಇಷ್ಟ. ವಾಚನ ವ್ಯಾಖ್ಯಾನಗಳನ್ನು ಮಾಡುವುದರಲ್ಲಿ ಸುಮಾರು ೪೫ ವರ್ಷಗಳ ಅನುಭವವಿದೆ. ಸಂಸ್ಕೃತ ಸಾಹಿತ್ಯ ಇಲಾಖೆಯ ಆಶ್ರಯದಲ್ಲಿ ಸುಮಾರು ಇಪ್ಪತ್ತು ಕಡೆ ಕಾವ್ಯವಾಚನ ಮಾಡಿರುತ್ತಾರೆ. ಎಷ್ಟೋ ಸಂಘಗಳು ಸಭೆ ಸಮಾರಂಭಗಳಲ್ಲಿ ವಾಚನ ಕಾರ್ಯಕ್ರಮ ನಡೆಸಿದ್ದಾರೆ. ಡಾ|| ಹರ್ಡೇಕರ್ ಮಂಜಪ್ಪನವರಿಂದ 'ಕವಿತಾನಂದ' ಎಂಬ ಪ್ರಶಸ್ತಿ ದೊರಕಿದೆ. ಇತರ ಸಂಸ್ಥೆಗಳೂ ಇವರನ್ನು ಗೌರವಿಸಿವೆ.

೪೬. ನಾಡಿಗ ಸುಬ್ಬರಾವ್, ಮಲೇಬೆನ್ನೂರು

ಇವರು ೧೯೧೮ರಲ್ಲಿ ಜನಿಸಿದರು ಇವರು ಶಾನುಭೋಗ ಮನೆತನಕ್ಕೆ ಸೇ... ದವರು. ಇವರ ಮನೆತನಕ್ಕೆ ನಾಡಿಗ, ದೇಶಪಾಂಡೆ ಎಂಬ ಹೆಸರುಗಳು ಕವಯಿತ್ರಿ ಯಾಗಿದ್ದ ಹೆಳವನ ಕಟ್ಟೆ ಗಿರಿಯಮ್ಮನವರಿಂದ ಬಂದಿವೆ. ಗಮಕ ಕಲೆಯು ಹಿ... ಯರ ಕಾಲದಿಂದಲೂ ಇವರಿಗೆ ಬಂದ ಬಳುವಳಿ. ಸುಮಾರು ಒಂದು ವೈ...

ಸಮೀಪದಲ್ಲಿ ನತೋಮಾರ್ನ ಹಳ್ಳಿಯಲ್ಲಿ ಶ್ರೀ ಹೆಳವನಕಟ್ಟೆ ರಂಗನಾಥ ದೇವಾಲಯದ ಪಕ್ಕದಲ್ಲಿ ಶ್ರೀ ಶ್ರೀ ಶಂಕರಲಿಂಗ ಭಗವಾನ್ ಸರಸ್ವತೀ ಸ್ವಾಮಿಗಳವರು ಇವರ ಕೈಲಿ ಕುಮಾರವ್ಯಾಸ ಭಾರತ, ಜೈಮಿನಿ ಭಾರತ, ತೊರವೆ ರಾಮಾಯಣ ಮುಂತಾದ ಕಾವ್ಯಗಳನ್ನು ನಿರಂತರವಾಗಿ ವಾಚನಮಾಡಿಸಿ ಇವರಿಗೆ ಕಾವ್ಯ ವಾಚನ ಪರಿಣತಿಯು ಲಭ್ಯವಾಗುವಂತೆ ಮಾಡಿದರು. ಇವರು ಸುಮಾರು ೩೫ ವರ್ಷಗಳಿಂದಲೂ ಕುಮಾರವ್ಯಾಸ ಭಾರತವನ್ನು ವಾಚನ ಮಾಡುತ್ತಿರುವರು. ಪ್ರೌಢ ವಿದ್ಯಾಭ್ಯಾಸದ ಜೊತೆಗೆ ಸುಮಾರು ೨೦ ರಾಗಗಳ ಸ್ಪಷ್ಟವಾದ ತಿಳಿವಳಿಕೆಯು ಇವರಿಗಿದೆ. ಕುಮಾರವ್ಯಾಸ ಕವಿಯ ವಂಶಜರೊಡನೆ ಬಾಂಧವ್ಯವನ್ನು ಹೊಂದಿರುವ ಇವರು ಪ್ರತಿವರ್ಷ ನಡೆಯುವ ಕುಮಾರವ್ಯಾಸ ಜಯಂತಿ ಸಂದರ್ಭದಲ್ಲಿ ಕೋಳಿವಾಡಕ್ಕೆ ಹೋಗಿ ತಮ್ಮ ವಾಚನದಿಂದ ಸೇವೆಸಲ್ಲಿಸುತ್ತಿರುವರು. ಇವರು ಸಮಗ್ರ ಕಾವ್ಯವಾಚನ ವ್ಯಾಖ್ಯಾನಗಳನ್ನು ಉತ್ತರ ಕರ್ನಾಟಕದ ಅನೇಕ ಭಾಗಗಳಲ್ಲಿ ನಡೆಸುತ್ತಿರುವರು.

೪೭. ಸಿ. ವೀರಭದ್ರಶೆಟ್ಟಿ, ಚನ್ನರಾಯಪಟ್ಟಣ

ಇವರು ೧೯೦೮ನೇ ಇಸವಿಯಲ್ಲಿ ಚನ್ನರಾಯಪಟ್ಟಣದಲ್ಲಿ ಹುಟ್ಟಿದರು. ತಂದೆ ವೀರಶೆಟ್ಟರು, ತಾಯಿ–ವೀರಮ್ಮನವರು. ಮಾಧ್ಯಮಿಕ ಶಾಲೆಯ ಮೂರನೆಯ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುವರು. ರಾಗ ಜ್ಞಾನವಿದೆ, ಸುಶ್ರಾವ್ಯವಾದ ಕಂಠವಿದೆ, ಹಾಡುಗಾರಿಕೆಯಲ್ಲಿ ಪರಿಣತಿ ಪಡೆದಿದ್ದಾರೆ. ೧೯೩೭ರಿಂದ ಗಮಕ ಕಲೆಯಲ್ಲಿ ಆಸಕ್ತಿ ಮೂಡಿತು. ಅನೇಕ ಹಿರಿಯರ ಸಮ್ಮುಖದಲ್ಲಿ ವಾಚನ ಮಾಡಿ ಅವರ ಪ್ರೋತ್ಸಾಹವನ್ನು ಸಂಪಾದಿಸಿಕೊಂಡಿರುತ್ತಾರೆ. ೪೦ ವರ್ಷಗಳಿಂದ ವಾಚನ ಅನುಭವ ಪಡೆದಿದ್ದಾರೆ, ಗಮಕ ಶಿಕ್ಷಣವನ್ನೂ ಕೊಟ್ಟಿದ್ದಾರೆ. ಈಗಲೂ ಚನ್ನರಾಯಪಟ್ಟಣದ ಗಮಕ ತರಗತಿಗೆ ಪಾಠ ಹೇಳುತ್ತಿದ್ದಾರೆ. ಆಕಾಶವಾಣಿಯಲ್ಲೂ ಇವರ ವಾಚನ ಕಾರ್ಯಕ್ರಮ ನಡೆದಿದೆ. ಅನೇಕ ಸಭೆ ಸಮ್ಮೇಳನಗಳಲ್ಲಿ ವಾಚನ ಮಾಡಿ ಪ್ರಶಸ್ತಿ ಗಳಿಸಿರುತ್ತಾರೆ.

೪೮. ಕಡಬ ನಂಜುಂಡಯ್ಯ, ತುಮಕೂರು

ಇವರು ೧೯೦೯ರಲ್ಲಿ ಜನಿಸಿದರು. ಆಗಿನ ಎಸ್. ಎಸ್. ಎಲ್. ಸಿ. ಪರೀಕ್ಷೆಯನ್ನು ಮುಗಿಸಿಕೊಂಡು ಲಾಯರ್ ಗುಮಾಸ್ತೆಯಾಗಿ ಇದ್ದರು. ತಮ್ಮ

೩೦ನೇ ವಯಸ್ಸಿನಲ್ಲಿ ಗಮಕಿ ರಾಮಕೃಷ್ಣಶಾಸ್ತ್ರಿಗಳಲ್ಲಿ ಶಿಷ್ಯವೃತ್ತಿಮಾಡಿ ಗಮಕ ವನ್ನು ಅಭ್ಯಾಸ ಮಾಡಿದರು. ನಾಟಕಕಾರರಾಗಿ ಸುಮಾರು ೧೫೦ ನಾಟಕಗಳನ್ನು ಆಡಿಸಿ ತಾವೂ ಅಭಿನಯಿಸಿರುವರು. ೧೯೬೦-೬೧ರ ಸುಮಾರಿನಲ್ಲಿ ಪರಿಷತ್ತಿನ ಲ್ಲಿಯೂ ಸಹ ಇವರ ಕಾವ್ಯವಾಚನವು ನಡೆದಿದೆ. ಸರ್ಕಾರದ ಸುಸ್ಸೃತಿ ಪ್ರಸಾರ ವಿಭಾಗದ ಆದೇಶದಂತೆ ನಾಡಿನ ಅನೇಕ ಊರುಗಳಲ್ಲಿ ಇವರು ಕಾವ್ಯವಾಚನ ಕಾರ್ಯಕ್ರಮಗಳನ್ನು ನಡೆಸಿರುವರು.

೪೯. ರಾಮೇಗೌಡರು, ಮಿರ್ಲೆ

ಇವರು ೧೯೦೯ರಲ್ಲಿ ಮಿರ್ಲೆಗ್ರಾಮದ ಒಂದು ಬಡ ಕುಟುಂಬದಲ್ಲಿ ಜನ್ಮ ತಾಳಿದರು. ಮಿಡಲ್ ಸ್ಕೂಲ್ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ೧೯೬೮ರ ವರೆಗೆ ಶಾಲಾ ಉಪಾಧ್ಯಾಯರಾಗಿದ್ದು ವಿಶ್ರಾಂತಿ ಪಡೆದು ಈಗ ವ್ಯವಸಾಯದಲ್ಲಿ ನಿರತರಾಗಿರುತ್ತಾರೆ. ಗಮಕ ಕಲೆಯನ್ನು ಶ್ರೀ ಬಿ. ಎಸ್. ಎಸ್. ಕೌಶಿಕರವರಲ್ಲಿ ಅಭ್ಯಸಿಸಿ ಸುಮಾರು ೧೦-೧೨ ರಾಗಗಳಲ್ಲಿ ಸಾಮಾನ್ಯ ಪರಿಶ್ರಮವನ್ನು ಪಡೆದರು. ಕನ್ನಡ ಸಾಹಿತ್ಯ ಪರಿಷತ್ತಿನವರು ನಡೆಸುವ ಗಮಕ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ರುತ್ತಾರೆ. ೧೪-೧೫ ವರ್ಷಗಳಿಂದ ಕಾವ್ಯವಾಚನ ಮಾಡುತ್ತಿರುತ್ತಾರೆ.

೫೦. ಜಿ. ಕೆ. ನರಸಿಂಹಸ್ವಾಮಿ, ಜಾವಗಲ್

ಇವರು ೩೦-೬-೧೯೧೦ರಲ್ಲಿ ಅರಸೀಕೆರೆ ತಾಲ್ಲೂಕು ಜಾವಗಲ್ಲಿನಲ್ಲಿ ಜನಿಸಿ ದರು. ಇವರ ತಂದೆತಾಯಿಗಳು ಶ್ರೀ ಜೆ. ಕೃಷ್ಣಪ್ಪನವರು ಮತ್ತು ಶ್ರೀಮತಿ ವೆಂಕಮ್ಮನವರು. ಇಂಟರ್ಮೀಡಿಯಟ್ ಕೋರ್ಸ್ ಮುಗಿಸಿರುತ್ತಾರೆ. ಸಂಗೀತದ ಸ್ಥೂಲ ಪರಿಚಯವನ್ನು ಹೊಂದಿದ್ದಾರೆ. ಕನ್ನಡ ಸಾಹಿತ್ಯದಲ್ಲಿ ಉತ್ಕಟವಾದ ಅಭಿ ರುಚಿಯಿದೆ. ಕನ್ನಡ ವಾಚನಕ್ಕೆ ವ್ಯಾಖ್ಯಾನ ಮಾಡಬಲ್ಲರು. ರಾಮನಾಥ ಪುರದ ಪ್ರಸಿದ್ಧ ಕೀರ್ತನಕಾರರೂ ಗಮಕಿಗಳೂ ಆಗಿದ್ದ ಶ್ರೀ ಟಿ. ಸೂರ್ಯನಾರಾಯಣಪ್ಪ ನವರು ಇವರ ಗಮಕ ಅಭ್ಯಾಸದ ಗುರುಗಳು. ಅವರ ತಂದೆಯವರೂ ದೇವರನಾಮ ಗಳನ್ನು ಹಾಡುತ್ತಿದ್ದುದು ಇವರಿಗೆ ಸ್ಫೂರ್ತಿದಾಯಕವಾಗಿತ್ತು. ಕುಮಾರವ್ಯಾಸ ಭಾರತ,ಜೈಮಿನಿ ಭಾರತವೆಂದರೆ ಇವರಿಗೆ ಬಲು ಇಷ್ಟ. ಶ್ರೀಲಕ್ಷ್ಮೀಕೇಶವಶಾಸ್ತ್ರಿಗಳು ಕೂಡ ಇವರ ಗಮಕ ಗುರುಗಳು. ಕೋಣನೂರು ಶಾಸ್ತ್ರಿಗಳಲ್ಲಿಯೂ ಗಮಕವನ್ನು

ಅಭ್ಯಾಸ ಮಾಡಿರುತ್ತಾರೆ. ಹಾಸನ ಜಿಲ್ಲೆಯ ಅನೇಕ ಸ್ಥಳಗಳಲ್ಲಿ ಉತ್ಸವ ಕಾಲಗಳಲ್ಲಿ, ಶಾಲಾ ಕರ್ನಾಟಕ ಸಂಘಗಳಲ್ಲಿ ಇವರ ಕಾವ್ಯವಾಚನ ಕಾರ್ಯಕ್ರಮಗಳು ನಡೆಯುತ್ತಲಿವೆ.

೩೧. ಜೋಳದ ರಾಶಿ ಕೆ. ದೊಡ್ಡಣ್ಣಗೌಡರು

ಇವರು ೨೭-೭-೧೯೧೦ ರಲ್ಲಿ ಬಳ್ಳಾರಿಯ ಜೋಳದ ರಾಶಿ ಗ್ರಾಮದಲ್ಲಿ ಜನಿಸಿದರು. ಇವರ ತಂದೆ ಶ್ರೀ ಪಂಪನಗೌಡರು,ತಾಯಿ ಶ್ರೀಮತಿ ರುದ್ರಮ್ಮನವರು. ಇವರಿಗೆ ಕೇವಲ ಬಾಲ್ಯದಲ್ಲಿಯೇ ಇತರರ ಧ್ವನಿಯನ್ನು ಅನುಕರಣಮಾಡುವ ಶಕ್ತಿಯಿದ್ದಿತು. ಇವರು ಐದಾರು ವರುಷದವರಿರುವಾಗಲೇ ನಾಟಕಗಳಲ್ಲಿ ಬಾಲಕರ ಪಾತ್ರವನ್ನು ಅಭಿನಯಿಸುತ್ತಿದ್ದರು. ಪ್ರಾರಂಭ ಶಿಕ್ಷಣ ಹಾವಳಿಗಿ ಷಡಕ್ಷರಯ್ಯನವರು ಮತ್ತು ರುದ್ರಯ್ಯನವರಲ್ಲಿ ನಡೆದು ಮುಂದೆ ಪ್ರೌಢವಿದ್ಯಾಭ್ಯಾಸವು ಪಂಡಿತರಾದ ಸರ್ವದರ್ಶನತೀರ್ಥ ಶ್ರೀ ವೈ. ನಾಗೇಶಶಾಸ್ತ್ರಿಗಳು, ಭಾಸ್ಕರಾಚಾರ್ಯ, ರಾಮಚಂದ್ರಸ್ವಾಮಿಗಳು, ರಾವಾಡ ವೆಂಕಟರಾಮಶಾಸ್ತ್ರಿಗಳು 'ಕಾವ್ಯತೀರ್ಥ' ಇವರುಗಳಲ್ಲಿ ನಡೆಯಿತು. ಇವರು ಸಂಗೀತವನ್ನು ವಿಡುಪನಕಲು ಶ್ರೀ ಹನುಮಂತಪ್ಪನವರು, ಕಿಡಿಗಣ್ಣಯ್ಯನವರು, ಟಿ. ಕುಮಾರಸ್ವಾಮಿಯವರು ಮತ್ತು ಪಿಟೀಲು ರಾಘವೇಂದ್ರರಾಯರಲ್ಲಿ ಅಭ್ಯಾಸಮಾಡಿದರು. ಇವರು ಉತ್ತಮಶ್ರೇಣಿಯ ನಟರೂ ಆಗಿದ್ದು ಪ್ರಸಿದ್ಧ ಬಳ್ಳಾರಿ ಶ್ರೀ ಟಿ. ರಾಘವಾಚಾರ್ಯರಲ್ಲಿ ಅಭಿನಯ ಕಲೆಯನ್ನು ಕಲಿತರು. ನಾಟಕಗಳಲ್ಲಿ ಹಾಡುಗಳಿಗೆ ಮತ್ತು ಪದ್ಯಗಳಿಗೆ ಎಷ್ಟು ಮಾತ್ರ ಸಂಗೀತವು ಸಾಕು, ಗಮಕಗಳು ಯಾವ ರೀತಿ ಪ್ರಯೋಗವಾಗಬೇಕು ಎಂಬುದನ್ನು ಶ್ರೀ ರಾಘವಾಚಾರ್ಯರಿಂದ ಕಲಿತುಕೊಂಡರು. ವೆಲುಗುಂಡೆ ಶಾಸ್ತ್ರಿಗಳು ವಾಚನಮಾಡುತ್ತಿದ್ದ ಬಸವಪುರಾಣ, ಪ್ರಭುಲಿಂಗಲೀಲೆ, ರಾಜಶೇಖರವಿಳಾಸ ಮುಂತಾದ ಕಾವ್ಯಗಳನ್ನು ಕೇಳಿ ಇವರು ಕಾವ್ಯವಾಚನದಲ್ಲಿ ಆಸಕ್ತಿಯನ್ನು ಹೊಂದಿ, ಅವರಿಂದ ಮಾರ್ಗದರ್ಶನವನ್ನು ಪಡೆದರು. ಹಾಗೆಯೇ ವಿಜಯನಗರದ ಶ್ರೀ ಸುಬ್ರಹ್ಮಣ್ಯ ಶಾಸ್ತ್ರಿಗಳು ವಾಚನ ಮಾಡುತ್ತಿದ್ದ ಆಂಧ್ರ ರಂಗನಾಥ ರಾಮಾಯಣಮು ವಾಚನಗಳನ್ನು ಕೇಳಿ ಅವರಲ್ಲಿ ಶಿಷ್ಯವೃತ್ತಿಯನ್ನು ಅಂಗೀಕರಿಸಿ ತೆಲುಗು ಕಾವ್ಯಗಳ ವಾಚನವನ್ನು ಕಲಿತರು. ಇವರ ಕಲಾಸೇವೆಯು ಕಾವ್ಯವಾಚನಗಳಲ್ಲಿಯೂ ಮತ್ತು ರಂಗಭೂಮಿಯಮೇಲೆಯೂ ಇವರು ೧೬ ವರ್ಷದವರಿರುವಾಗಲೇ ಪ್ರಕಾಶಕ್ಕೆ ಬಂದು ಉತ್ತಮ ಕಲಾವಿದರೆನಿಸಿಕೊಂಡರು. ಹರಿಶ್ಚಂದ್ರ ಕಾವ್ಯ,

ಪ್ರಭುಲಿಂಗಲೀಲೆ, ರಾಜಶೇಖರವಿಳಾಸ, ಶರಣಲೀಲಾಮೃತ ಮತ್ತು ಸಿದ್ಧರಾಮ ಪುರಾಣಗಳು ಇವರಿಗೆ ಪ್ರಿಯವಾದವು. ಗದುಗಿನ ಭಾರತ ಮತ್ತು ಜೈಮಿನಿ ಭಾರತಗಳು ಅಚ್ಚುಮೆಚ್ಚು. ಇವರ ವಾಚನಗಳು ಉತ್ತರ ಕರ್ನಾಟಕದ ಅನೇ ಭಾಗಗಳಲ್ಲಿಯೂ, ಬೆಂಗಳೂರಿನಲ್ಲಿಯೂ ನಡೆದು ಶ್ರೋತೃಗಳ ಮನ್ನಣೆಯನ್ನ ಪಡೆದಿವೆ. ೧೯೫೨ ರಲ್ಲಿ ಇವರ ಕಾವ್ಯವಾಚನಗಳು ಧಾರವಾಡದಲ್ಲಿ ನಡೆದು ಮುರುಘಾ ಮಠಾಧೀಶರಾದ ಮೃತ್ಯುಂಜಯಸ್ವಾಮಿಗಳಿಂದ "ಗಮಕಕಲಾನಿಧಿ" ಎಂಬ ಪ್ರಶಸ್ತಿಯು ಇವರಿಗೆ ದೊರೆಯಿತು. ಇವರ ವಾಚನ ಮತ್ತು ಅಭಿನಯ ಗಳನ್ನು ಕಳೆಯೇರಿಸಿ ಇವರಿಗೆ ಬಲಭುಜದಂತೆ ಇದ್ದವರು ಸುಮಾರು ೩೦ ವರ್ಷಗಳ ಕಾಲ ಹಾರ್ಮೋನಿಯಂ ನುಡಿಸುತ್ತಿದ್ದ ಶ್ರೀ ಕುಮಾರಸ್ವಾಮಿಯವರು. ಇವರು ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ವಿಶೇಷ ಪರಿಣತಿಯನ್ನು ಹೊಂದಿ ಉಭಯ ಭಾಷೆಗಳಲ್ಲಿಯೂ ಅನೇಕ ಗ್ರಂಥಗಳನ್ನು ರಚಿಸಿರುವರು. ಇವರ ಸಾಹಿತ್ಯ ರಚ ನೆಯು ನಾನಾ ಪ್ರಕಾರಗಳಿಂದ ಕೂಡಿವೆ. ಅವುಗಳಲ್ಲಿ ಲಾವಣಿಗಳು, ಹಾಡುಗಳು ಭಾವಗೀತೆಗಳು, ನಾಟಕಗಳು, ಭಕ್ತಿಗೀತೆಗಳು, ವಚನಗಳು, ಜೀವನಚರಿತ್ರೆ ಮುಂತಾದುವು ಸ್ವಂತರಚನೆ ಮತ್ತು ಅನುವಾದಗಳ ಮೂಲಕ ಕನ್ನಡ ಸಾಹಿ ತ್ಯದ ಸಿರಿಯನ್ನು ಹೆಚ್ಚಿಸಿವೆ. ಇವರ ವಿಮರ್ಶಾಪೂರ್ಣ ಗ್ರಂಥ "ಕಲಾ"ವನ್ನು ಬಳ್ಳಾರಿ ಜಿಲ್ಲಾ ಕನ್ನಡ ನಾಟಕ ಪರಿಷತ್ತು ಪ್ರಕಟಿಸಿದೆ. ಇವರ ಭಕ್ತಿಗೀತೆ ಗಳನ್ನೂ, ವಚನಗಳನ್ನೂ, ಶರಣರ ಜೀವನ ಚರಿತ್ರೆಗಳನ್ನೂ ಧಾರವಾಡದ ಮುರುಘಾ ಮಠದವರು ಪ್ರಕಟಿಸಿರುವರು. "ನಾಟ್ಯಕಲಾಪೂರ್ಣ ರಾಘವ" ಎಂಬ ಪರಿಚಯ ಗ್ರಂಥವನ್ನು ಕರ್ನಾಟಕ ರಾಜ್ಯ ಸಂಗೀತ-ನಾಟಕ ಅಕಾಡೆಮಿ ಯವರು ೧೯೭೨ ರಲ್ಲಿ ಪ್ರಕಟಿಸಿರುವರು. "ಬೊಮ್ಮಾಯಣ" ಎನ್ನುವುದು ಹಾಸ್ಯ ಪ್ರಬಂಧಗಳನ್ನು ಹೊಂದಿದ ಪ್ರಕಟಣೆ. ಇವರ ಕಲಾ ಸೇವೆಗೆ ಮೆಚ್ಚಿ ಮಹಾ ಜನರು ಇವರಿಗೆ "ಗಮಕ ಕಲಾ ಪ್ರವೀಣ" ಎಂಬ ಬಿರುದನ್ನಿತ್ತು ಮನ್ನಿಸಿರುವರು. ಇವರು ಸೊಲ್ಲಾಪುರದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ನಡೆದ ಪ್ರಥಮ ಕಲಾ ಗೋಷ್ಠಿಯ ಅಧ್ಯಕ್ಷರಾಗಿದ್ದರು. ಹಾಗೆಯೇ ಬೆಂಗಳೂರಿನಲ್ಲಿ ನಡೆದ ಅಖಿಲಕರ್ನಾ ಟಕ ಪ್ರಥಮ ಗಮಕ ಸಮ್ಮೇಳನದಲ್ಲಿಯೂ ಅಧ್ಯಕ್ಷತೆಯನ್ನು ವಹಿಸಿದ್ದರು. ಇವರ ಕಲಾಭಿಜ್ಞತೆಯನ್ನು ಮೆಚ್ಚಿ ಸಂಗೀತ ನಾಟಕ ಲಲಿತಕಲಾ ಮತ್ತು ಸಾಹಿತ್ಯ ಅಕಾಡೆಮಿಯವರು ರಾಜ್ಯ ಪ್ರಶಸ್ತಿಯನ್ನಿತ್ತು ಇವರನ್ನು ಗೌರವಿಸಿರುವರು.

೫೨. ಮಿರ್ಲೆ ಸುಬ್ರಹ್ಮಣ್ಯಶಾಸ್ತ್ರಿಗಳು, ಮೈಸೂರು

ಶ್ರೀಯುತರು ಮೈಸೂರು ಜಿಲ್ಲೆ ಮಿರ್ಲೆಯಲ್ಲಿ ವಿಕಾರಿನಾಮಸಂವತ್ಸರದ ಆಷಾಢ ಬಹುಳ ಪಾಡ್ಯಮಿಯಂದು ೧೯೦೦ ನೇ ಇಸವಿಯಲ್ಲಿ ಜನಿಸಿದರು. ಶ್ರೀ ವೆಂಕಟಶಾಸ್ತ್ರಿ ಮತ್ತು ಶ್ರೀಮತಿ ನರಸಮ್ಮ ಇವರ ತಂದೆ ತಾಯಿಗಳು. ಇವರ ಸಾಮಾನ್ಯ ವಿದ್ಯಾಭ್ಯಾಸ ಎಸ್. ಎಸ್. ಎಲ್. ಸಿ.ವರೆಗೆ. ಇವರು ಗೌರೀದೇವುಡುಶಾಸ್ತ್ರಿಗಳಲ್ಲಿ ಹದಿನಾಲ್ಕುವರ್ಷಗಳ ಕಾಲ ಗುರುಕುಲ ಸೇವೆಮಾಡಿ ಅವರ ಅನುಗ್ರಹವನ್ನು ಸಂಪಾದಿಸಿದ್ದರು. ಗುರುಗಳು ಇವರನ್ನು ಕಾವ್ಯವಾಚನ ಮಾಡುವಂತೆ ಪ್ರೋತ್ಸಾಹಿಸಿದರು. ಗುರುಗಳು ದೈವಾಧೀನರಾದನಂತರ ಅವರು ಪ್ರವಚನಗಳನ್ನು, ವಾಚನವನ್ನು ಮಾಡುತ್ತಿದ್ದ ಸ್ಥಳಗಳಲ್ಲಿ ಅವರ ಶಿಷ್ಯರಾದ ಶ್ರೀ ಶಾಸ್ತ್ರಿಗಳು ಕಾರ್ಯಕ್ರಮಗಳನ್ನು ಮುಂದುವರಿಸಿದರು. ಗ್ರಾಮಾಂತರ ಪ್ರದೇಶ ಗಳಲ್ಲಿ, 'ಆಕಾಶವಾಣಿ'ಯಲ್ಲಿ ಕಾರ್ಯಕ್ರಮಗಳನ್ನು ನಡೆಸಿದ್ದರು. ಮುಖ್ಯಮಂತ್ರಿ ಗಳಾಗಿದ್ದ ಶ್ರೀ ಹನುಮಂತಯ್ಯನವರ ಅಧಿಕಾರದ ಅವಧಿಯಲ್ಲಿ ಸಂಸ್ಕೃತಿ ಪ್ರಸಾರ ಕಾರ್ಯಕ್ರಮಗಳಿಗೆ ನಿಯೋಜಿತರಾಗಿದ್ದರು. ಶೃಂಗೇರಿ ಶ್ರೀಗಳವರ ದಿವ್ಯಸಮ್ಮುಖ ದಲ್ಲಿ ೨೦-೫-೬೬ ರಿಂದ ೨೨-೬-೬೬ ರ ವರೆಗೆ ವಾಚನ ನಡೆಸಿ ಗುರುಗಳ ಅಮೃತ ಹಸ್ತದಿಂದ "ಗಮಕ ಕಲಾ ಕೋವಿದ" ಪ್ರಶಸ್ತಿಯನ್ನೂ ಶಾಲುಜೋಡಿ ಮತ್ತು ಆಶೀರ್ವಾದಗಳನ್ನೂ ಪಡೆದರು. ದಸರಾ ವಸ್ತುಪ್ರದರ್ಶನಗಳಲ್ಲಿಯೂ ಇವರ ಕಾವ್ಯ ವಾಚನ ಕಾರ್ಯಕ್ರಮಗಳು ನಡೆದು ಇವರಿಗೆ ಪ್ರಶಸ್ತಿ ಪತ್ರಗಳು ಕೊಡಲ್ಪಟ್ಟುವು. ಶ್ರೀ ಶಾಸ್ತ್ರಿಗಳು ೬-೬-೧೯೭೦ ರಲ್ಲಿ ದೈವಾಧೀನರಾದರು.

೫೩. ಪಂಡಿತ ಶ್ರೀ ಹು. ಮ. ರಾಮಾರಾಧ್ಯರು, ಬೆಂಗಳೂರು

ಇವರು ದಿನಾಂಕ ೬-೪-೧೯೦೭ ರಂದು ಮೈಸೂರು ಜಿಲ್ಲಾ ನಂಜನಗೂಡು ತಾಲ್ಲೂಕು ಹುಲ್ಲಹಳ್ಳಿ ಗ್ರಾಮದಲ್ಲಿ ಜನಿಸಿದರು. ಇವರ ಮಾತಾಪಿತೃಗಳು ಶ್ರೀಮತಿ ಪಾರ್ವತಮ್ಮ ಮತ್ತು ಶ್ರೀ ಮಲ್ಲಾರಾಧ್ಯರು. ಮೈಸೂರು ಕನ್ನಡ ಪಂಡಿತ ಪರೀಕ್ಷೆ ಯಲ್ಲಿ ತೇರ್ಗಡೆ ಹೊಂದಿ, ಶಿಕ್ಷಣ ಇಲಾಖೆಯಲ್ಲಿ ಪ್ರೌಢಶಾಲಾ ಕನ್ನಡ ಪಂಡಿತ ವೃತ್ತಿಯಲ್ಲಿದ್ದರು. ಆಸ್ಥಾನ ವಿದ್ವಾನ್ ಬೆಳಕವಾಡಿ ಶ್ರೀನಿವಾಸ ಅಯ್ಯಂಗಾರ್ರವರ

ಬಳಿಯಲ್ಲಿ ಸಂಗೀತವನ್ನು ಅಭ್ಯಾಸಮಾಡಿದ್ದು, ಕಾಲಕ್ರಮೇಣ ಪ್ರಸಿದ್ಧ ಕೀರ್ತನಕಾರರಾದರು. ಅವರಿಗೆ ಸಾಹಿತ್ಯದಲ್ಲಿ ಬಹಳಷ್ಟು ಅಭಿರುಚಿಯಿದ್ದಿತು. ಕಾವ್ಯವಾಚನ ಮಾಡಬಲ್ಲವರಾಗಿದ್ದರು. ಕತೆ, ಕವಿತೆಗಳೇ ಅಲ್ಲದೆ ನಾಟಕಗಳು ಮತ್ತು ಗಮಕ ರೂಪಕಗಳ ರಚನೆಯಲ್ಲಿಯೂ ಪರಿಶ್ರಮ ಹೊಂದಿದ್ದರು. ಹಲವಾರು ಗಮಕ ರೂಪಕಗಳನ್ನು ಸಿದ್ಧಪಡಿಸಿ, ಗ್ರಂಥಗಳನ್ನು ಸಂಪಾದಿಸಿದರು. 'ಸಾಹಿತ್ಯ ಕೌಮುದಿ' ಮತ್ತು 'ಶ್ರೀರಾಮ ಮಹಾತ್ಮೆ' ಇವು ಇವರ ಸಂಪಾದಿತ ಗ್ರಂಥಗಳು. ಲಾಕ್ಷಾಭವನ, ಅಲ್ಲಮಪ್ರಭು, ಗಿರಿಜಾಕಲ್ಯಾಣ, ರಾಜಸೂಯ, ಗದಾಯುದ್ಧ ಮುಂತಾದ ಹಲವಾರು ಗಮಕ ರೂಪಕಗಳನ್ನು ರಚಿಸಿ ಆ ಕ್ಷೇತ್ರಕ್ಕೆ ಅಮೋಘವಾದ ಸೇವೆಯನ್ನು ಸಲ್ಲಿಸಿರುತ್ತಾರೆ. ಬೆಂಗಳೂರಿಗೆ ವರ್ಗವಾಗಿ ಬಂದನಂತರ ದಿವಂಗತ ಎಂ. ಆರ್. ಶ್ರೀನಿವಾಸಮೂರ್ತಿಯವರು ಪರಿಷತ್ತಿಗೆ ಅಧ್ಯಕ್ಷರಾಗಿದ್ದ ಕಾಲದಲ್ಲಿ ಪರಿಷತ್ತಿನಲ್ಲಿ ಇವರ ಕಾವ್ಯವಾಚನವು ನಡೆಯಿತು. ಸುಮಾರು ೧೯೫೩ರಿಂದ ೧೯೭೨ ರ ವರೆಗೆ ಅವಿಚ್ಛಿನ್ನವಾಗಿ ಮಲ್ಲೇಶ್ವರದ ಗಾಂಧೀ ಸಾಹಿತ್ಯ ಸಂಘದಲ್ಲಿ ಗಮಕ ತರಗತಿಗಳನ್ನು ನಡೆಸಿ ನೂರಾರು ಮಂದಿ ಶಿಷ್ಯರನ್ನು ತಯಾರುಮಾಡಿರುವರು. 'ಆಕಾಶವಾಣಿ'ಯಿಂದ ಸುಮಾರು ೧೦–೧೫ ವರ್ಷಗಳಿಂದಲೂ ಶ್ರೀಯುತರ ಕಾವ್ಯವಾಚನ ಕಾರ್ಯಕ್ರಮಗಳು ಪ್ರಸಾರವಾಗುತ್ತಿದ್ದವು. ನಾಡಿನ ಹಲವಾರು ಕಡೆಗಳಲ್ಲಿ ಕಾವ್ಯವಾಚನವೇ ಅಲ್ಲದೆ ಶಿವಕಥೆ, ಹರಿಕಥೆ, ಕೀರ್ತನೆಯ ಕಾರ್ಯಕ್ರಮಗಳನ್ನು ನಡೆಸಿ ಸಹೃದಯರ ಮನವನ್ನು ತಣಿಸಿದರು. ನಾಟಕಗಳಲ್ಲಿಯೂ ಪಾತ್ರವಹಿಸುತ್ತಿದ್ದರು, ಶ್ರೋತೃಗಳ ಗೌರವಾದರಗಳಿಗೆ ಪಾತ್ರರಾಗಿದ್ದರು. ಅರಮನೆ–ಗುರುಮನೆಗಳು, ಅನೇಕ ಸಂಘಸಂಸ್ಥೆಗಳು ಶ್ರೀಯುತರಿಗೆ ಪ್ರಶಸ್ತಿಗಳನ್ನಿತ್ತು ಸನ್ಮಾನಿಸಿದ್ದವು. ನಾಡಿನ ಸಹೃದಯರು ಇವರಿಗೆ "ಗಮಕ ಕಲಾಪ್ರಪೂರ್ಣ" ಎಂಬ ಪ್ರಶಸ್ತಿಯನ್ನಿತ್ತು ಗೌರವಿಸಿದರು. ಕನ್ನಡ ಸಾಹಿತ್ಯ ಪರಿಷತ್ತಿನ ಸುವರ್ಣ ಮಹೋತ್ಸವ ಸಂದರ್ಭದಲ್ಲಿ ಸನ್ಮಾನಿತರಾದ ಇವರು ಪರಿಷತ್ತಿನ ಗಮಕ ಶಿಕ್ಷಣ ಸಮಿತಿಯ ವ್ಯವಸ್ಥಾಪಕರಾಗಿದ್ದು ಮೂರು ವರ್ಷಗಳ ಕಾಲ ಸೇವೆ ಸಲ್ಲಿಸಿದರು. ರಾಜ್ಯ ಸಾಹಿತ್ಯ ಅಕಾಡೆಮಿಯು ೧೯೭೦ ರಲ್ಲಿ ಶ್ರೀಯುತರಿಗೆ ಪ್ರಶಸ್ತಿಯನ್ನಿತ್ತು ಗೌರವಿಸಿತು. ಶ್ರೀಯುತರು ಪರಿಷತ್ತು ಅಖಿಲ ಕರ್ನಾಟಕ ಗಮಕಿಗಳ ಸಮ್ಮೇಳನವನ್ನು ನಡೆಸುವುದರಲ್ಲಿ ನೆರವಾಗಿದ್ದರು. ಸರ್ಕಾರಿ ಸೇವೆಯಿಂದ ನಿವೃತ್ತರಾದ ಸ್ವಲ್ಪಕಾಲದಲ್ಲಿಯೇ ಶ್ರೀಯುತ ರಾಮಾರಾಧ್ಯರು ೧೯೭೩ ನೇ ಡಿಸೆಂಬರ್ ೨೦ ನೇ ತಾರೀಖು ಗುರುವಾರದಂದು ದೈವಾಧೀನರಾದರು.

೫೪. ರಾಂಪುರ ರಾಮಾಶಾಸ್ತ್ರಿಗಳು

ಇವರು ೧೯೧೨ ರಲ್ಲಿ ಹೊಸಪೇಟೆಯಲ್ಲಿ ಜನಿಸಿದರು. ಇವರ ಸಾಮಾನ್ಯ ವಿದ್ಯಾಭ್ಯಾಸ ಎಸ್.ಎಸ್.ಎಲ್.ಸಿ. ೧೯೩೬ರಲ್ಲಿ 'ಕನ್ನಡ ಕಾವ' ಪರೀಕ್ಷೆಯಲ್ಲಿ ತೇರ್ಗಡೆಯಾದರು. ಉತ್ತಮ ಶಾರೀರವನ್ನು ಪಡೆದಿರುವ ಇವರು ೧೯೩೦ರಿಂದಲೂ ಕಾವ್ಯವಾಚನ ಮಾಡುತ್ತಿರುವರು. ಗಮಕಿ ಬಿಂದೂರಾಯರು, ಸಂಪತ್ಕುಮಾರಾಚಾರ್ಯರು ಮತ್ತು ಚಂದ್ರಶೇಖರಯ್ಯನವರೇ ಮುಂತಾದ ಹಿರಿಯ ಗಮಕಿಗಳು ಹೊಸಪೇಟೆಗೆ ದಯಮಾಡಿಸಿ ನಡೆಸಿಕೊಡುತ್ತಿದ್ದ ಕಾವ್ಯವಾಚನಗಳಿಂದ ಪ್ರಭಾವಿತರಾದರು. ನ್ಯಾಯಾಂಗದ ಇಲಾಖೆಯಲ್ಲಿ ಉದ್ಯೋಗದಲ್ಲಿರುವ ಇವರು ೧೯೬೪ರಲ್ಲಿ ಚಿತ್ರದುರ್ಗಕ್ಕೆ ವರ್ಗವಾದ ಅವಕಾಶವನ್ನು ಬಳಸಿಕೊಂಡು ಬಿಂದೂರಾಯರಲ್ಲಿ ಕ್ರಮವಾಗಿ ಗಮಕವನ್ನು ಕಲಿತರು. ಹೊಸಪೇಟೆಯಲ್ಲಿರುವ ಶ್ರೀರಾಮ ಭಜನ ಸಂಘದಲ್ಲಿ ಹಾಡುತ್ತಿದ್ದ ಇವರಿಗೆ ಅಲ್ಲಿಗೆ ಆಗಾಗ್ಗೆ ಭೇಟಿಯನ್ನು ಕೊಡುತ್ತಿದ್ದ ಕನ್ನಡ ಸಾಹಿತ್ಯಾಕಾಶದ ಧ್ರುವತಾರೆಗಳೆನಿಸಿದ ದ.ರಾ. ಬೇಂದ್ರೆ, ಮಾಸ್ತಿಯವರು, ಬಿ. ಎಂ. ಶ್ರೀ, ಎಂ. ಆರ್. ಶ್ರೀ, ಅ. ನ. ಕೃ ಮುಂತಾದವರು ಗಮಕವನ್ನು ಕಲಿಯಲು ಪ್ರೋತ್ಸಾಹವಿತ್ತರು. ಬಾಲಕರೇ ಸೇರಿ ನಡೆಸುತ್ತಿದ್ದ ಕರ್ಣಾಟಕ ಬಾಲಕರ ಸಂಘದಲ್ಲಿನ ಕಾರ್ಯಕ್ರಮಗಳಲ್ಲಿ ಇವರ ಕಾವ್ಯವಾಚನಕ್ಕೆ ಒನ್ಸ್ ಮೋರ್‌ಗಳೂ ಬಹುಮಾನಗಳೂ ನಿಶ್ಚಿತವಾಗಿದ್ದುವು. ಮುಂದೆ ಕನ್ನಡಾಂಧ್ರ ಭಾಷೆಗಳ ವಿದ್ವಾಂಸರಾದ ಶ್ರೀ ವೈದೂರು ತಿರುಮಲಾಚಾರ್ಯರು ಇವರ ವಾಚನವನ್ನು ಕೇಳಿ ಪ್ರೋತ್ಸಾಹವಿತ್ತು ಇವರ ಉತ್ಕರ್ಷೆಗೆ ನಾಂದಿಯನ್ನು ಹಾಡಿದರು. ಇವರು ಧಾರವಾಡ ಮತ್ತು ಬೆಂಗಳೂರಿನ 'ಆಕಾಶವಾಣಿ' ಕೇಂದ್ರಗಳಿಂದ ಕಾವ್ಯವಾಚನ ಕಾರ್ಯಕ್ರಮಗಳನ್ನು ಕೊಡುತ್ತಿರುವರು. ಇವರ ಸಂಗೀತಾಭ್ಯಾಸ ಶ್ರೀ ಭೀಮಸೇನಾಚಾರ್ಯರಲ್ಲಿ. ೧೯೬೦ರಲ್ಲಿ ಹಂಪೆಯ ವಿರೂಪಾಕ್ಷನ ಸನ್ನಿಧಿಯಲ್ಲಿ ಹರಿಹರನ ರಕ್ಷಾಶತಕ ವಾಚನ ಮಾಡುವ ಸಂದರ್ಭವೊದಗಿದಾಗ ಅಂದು ಉಪಸ್ಥಿತರಿದ್ದ ಸೆಷನ್ಸ್ ಜಡ್ಜ್, ಕೋ. ಚನ್ನಬಸಪ್ಪನವರು ಮತ್ತು ಅಧ್ಯಕ್ಷತೆ ವಹಿಸಿದ್ದ ಸೆಷನ್ಸ್ ಜಡ್ಜ್ ಟಿ. ಹೆಚ್. ಎಂ. ಸದಾಶಿವಯ್ಯನವರು ಪ್ರಶಂಸಿಸಿ 'ಗಮಕಕಲಾ ವಿಶಾರದ' ಎಂಬ ಬಿರುದನ್ನು ಕೊಟ್ಟಿರುವರು. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಚೀಫ್ ಕ್ಯಾಷಿಯರ್ ಆಗಿರುವ ಬೆಂಗಳೂರಿನ ಹೆಚ್. ಎಸ್. ರಾಮಚಂದ್ರರಾಯರು ಸ್ವಯಂ ಗಮಕಿಗಳಾಗಿದ್ದು ಕಾವ್ಯ

ವಾಚನದಲ್ಲಿ ವಿಶೇಷ ಆಸಕ್ತಿಯನ್ನು ಹೊಂದಿರುವರು. ಅವರ ಸಹಕಾರದಿಂದ ರಾಮಾಶಾಸ್ತ್ರಿಗಳ ಭಾರತ ವಾಚನ ನಡೆದ ಸಂದರ್ಭದಲ್ಲಿ ಶ್ರೋತೃಗಳು ಇವರಿಗೆ 'ಗಮಕ ಕಲಾನಿಧಿ'ಯೆಂಬ ಪ್ರಶಸ್ತಿಯನ್ನಿತ್ತು ಪ್ರಶಂಸಿಸಿರುವರು. ೧೯೬೬ರಿಂದಲೂ ಇವರಲ್ಲಿ ಗಮಕವನ್ನು ಅಭ್ಯಾಸ ಮಾಡಿದವರು ಪ್ರವೇಶ, ಪ್ರೌಢ ಪರೀಕ್ಷೆಗಳಲ್ಲಿ ಉತ್ತಮ ಶ್ರೇಣಿಗಳಲ್ಲಿ ಉತ್ತೀರ್ಣರಾಗಿ ರ್‍ಯಾಂಕ್ ಪಡೆದಿರುವರು. ಇವರು ಕೇಂದ್ರ ಸರ್ಕಾರದ Song and Drama Divisionನಲ್ಲಿಯೂ ಮತ್ತು ಸಾಹಿತ್ಯ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯಕ್ರಮಗಳ ಮೂಲಕವೂ ತಮ್ಮ ಸಾಹಿತ್ಯಾರಾಧನೆ ಯನ್ನು ನಡೆಸುತ್ತಿರುವರು.

೫೫. ಕೆ. ಎಲ್. ನಾರಾಯಣರಾವ್, ಬೆಂಗಳೂರು

ಇವರು ೧೯೧೨ನೇ ಇಸವಿಯಲ್ಲಿ ಬೆಂಗಳೂರಿನ ಚಾಮರಾಜಪೇಟೆಯಲ್ಲಿ ಜನಿಸಿದರು.ಇವರು ಗಮಕ ಕಲಾಚಾರ್ಯ ಶ್ರೀ ಸಂ.ಗೋ. ಬಿಂದೂರಾಯರ ಶಿಷ್ಯ ರಾಗಿ ೧೯೩೯ರಲ್ಲಿ ಗಮಕ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುತ್ತಾರೆ. ಇವರು ವಿಶ್ರಾಂತ ಕೇಂದ್ರ ಸರ್ಕಾರೀ ನೌಕರರಾಗಿದ್ದಾರೆ. ಜೂನಿಯರ್ ಸಂಗೀತ ಪರೀಕ್ಷೆಯೂ ಆಗಿರುತ್ತೆ. ಸಂಸ್ಕೃತ ಭಾಷಾ ಪರಿಚಯುವನ್ನೂ ಹೊಂದಿರುತ್ತಾರೆ. ಸ್ವಂತ ಉಪಯೋಗಕ್ಕಾಗಿ ಗಮಕ ಕಲೆಯನ್ನು ಅಭ್ಯಾಸ ಮಾಡುತ್ತಿದ್ದಾರೆ.

೫೬. ಕೆ. ಎಸ್. ಸುಬ್ರಹ್ಮಣ್ಯ, ಚಾಮರಾಜನಗರ

ಇವರು ೧೯೧೭ರಲ್ಲಿ ಚಾಮರಾಜನಗರದಲ್ಲಿ ಜನಿಸಿದರು. ಇವರ ಸಾಮಾನ್ಯ ವಿದ್ಯಾಭ್ಯಾಸ ಲೋಯರ್ ಸೆಕೆಂಡರಿ. ಸರ್ಕಾರದ ಇಲಾಖೆಯಲ್ಲಿ ರಿಜಿಸ್ಟ್ರೇಷನ್ ಹೆಡ್ ಗುಮಾಸ್ತರಾಗಿದ್ದು ನಿವೃತ್ತರಾಗಿರುವರು. ಇವರು ಗಮಕ ಕಲೆಯನ್ನು ಕಲಿತದ್ದು ವಿದ್ವಾಂಸರಾದ ಶ್ರೀ ಕಳಲೆ ಸಂಪತ್ಕುಮಾರಾಚಾರ್ಯ ಅವರಲ್ಲಿ. ಗಮಕ ವಿದ್ವಾಂಸರಾಗಿದ್ದ ಹನುಮನಾಳ ಸಿದ್ದೇಗೌಡರೂ ಇವರಿಗೆ ಗಮಕದ ವಿಷಯ ವಾಗಿ ಮಾರ್ಗದರ್ಶನ ನೀಡಿದ್ದರು. ಇವರಿಗೆ ಹಲವಾರು ರಾಗಜ್ಞಾನಗಳ ಪರಿಚಯ ವಿದೆ. ಮೈಸೂರು, ಹಾಸನ ಜಿಲ್ಲೆಗಳ ಅನೇಕ ಸ್ಥಳಗಳಲ್ಲಿ ಇವರ ಕಾವ್ಯವಾಚನ ಕಾರ್ಯಕ್ರಮಗಳು ಸುಮಾರು ೪೦ ವರ್ಷಗಳಿಂದಲೂ ನಡೆದಿವೆ. ಗುರುಪೀಠ ಗಳಿಂದಲೂ ಸುಹೃದ್ಗೋಷ್ಠಿಗಳಿಂದಲೂ ಇವರ ಗಮಕ ವಾಚನವು ಪ್ರಶಂಸಿತ

ವಾಗಿವೆ. ಷಟ್ಪದೀ ಕಾವ್ಯಗಳನ್ನು ವಾಚನ ಮಾಡುವುದರಲ್ಲಿ ಹೆಚ್ಚು ಆಸಕ್ತಿ. ಇವರಲ್ಲಿ ಅನೇಕ ವಿದ್ಯಾರ್ಥಿಗಳು ಕಾವ್ಯವಾಚನ ಕಲೆಯನ್ನು ಅಭ್ಯಾಸ ಮಾಡಿರುವರು.

೫೭. ನಾಡಿಗ ನಾರಾಯಣರಾಯರು, ಮಲೇಬೆನ್ನೂರು

ಇವರು ೧೯೧೭ರಲ್ಲಿ ಚಿತ್ರದುರ್ಗಾ ಜಿಲ್ಲಾ ಹರಿಹರ ತಾಲ್ಲೂಕು ಮಲೇಬೆನ್ನೂರಿನಲ್ಲಿ ಜನಿಸಿದರು. ಇವರು ಇಂಟರ್‌ಮೀಡಿಯಟ್‌ವರೆಗೂ ಓದಿ ತಮ್ಮ ಆನುವಂಶಿಕ ವೃತ್ತಿಯಾದ ಶ್ಯಾನುಭೋಗಿಕೆಯನ್ನು ನಡೆಸುತ್ತಿದ್ದರು. ಊರಿನ ಭಜನ ಮಂದಿರಗಳಲ್ಲಿ ಸೇರಿಕೊಂಡು ಸ್ವಲ್ಪ ರಾಗ ಜ್ಞಾನವನ್ನು ಪಡೆದು ಹಾಡು, ಕೀರ್ತನೆಗಳವರೆಗೆ ಸುಶ್ರಾವ್ಯವಾಗಿ ಹಾಡಬಲ್ಲರು. ಹೈಸ್ಕೂಲು ವಿದ್ಯಾರ್ಥಿ ದೆಸೆಯಲ್ಲಿದ್ದಾಗ ಭಾರತ ಬಿಂದೂರಾಯರ ಹಾಗೂ ಅದೇ ಊರಿನ ಸಿ. ವಿ. ಹನುಮಂತರಾಯರ ಭಾರತ ಪಠಣವನ್ನು ಕೇಳಿ ತಾವೂ ಸಹಭಾರತ ವಾಚನವನ್ನು ರೂಢಿಸಿಕೊಂಡರು. ಕಾಲೇಜು ದಿನಗಳಲ್ಲಿ ಕಾವ್ಯವಾಚನ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನವನ್ನು ಗಳಿಸಿರುವರು. ಸಂಸ್ಕೃತಿ ಪ್ರಸಾರ ಇಲಾಖೆಯವರ ಕಾರ್ಯಕ್ರಮಗಳಲ್ಲಿಯೂ ಪಾಲ್ಗೊಂಡು ಶಾಲೆಗಳಲ್ಲಿಯೂ ಸಾರ್ವಜನಿಕ ಸಂಸ್ಥೆಗಳಲ್ಲಿಯೂ ಭಾರತ ವಾಚನ ಮಾಡಿರುವರು. ಷಟ್ಪದೀ ಕಾವ್ಯಗಳೇ ಅಲ್ಲದೆ ಸಾಂಗತ್ಯ, ವಚನ, ರಗಳೆ ಕಾವ್ಯಗಳ ವಾಚನದಲ್ಲಿಯೂ ಆಸಕ್ತಿಯಿದೆ.

೫೮. ಎಲ್. ನಾಗೇಶರಾಯರು, ಬೆಂಗಳೂರು

ಇವರು ೨೬–೧–೧೯೧೭ರಲ್ಲಿ ಶಿವಮೊಗ್ಗಾ ಜಿಲ್ಲೆಯ ಶಿಕಾರಿಪುರದಲ್ಲಿ ಜನಿಸಿದರು. ಇವರ ತಂದೆ ಶೇಷಯ್ಯನವರು, ತಾಯಿ ಅಚ್ಚಮ್ಮನವರು. ಇವರು ಬಿ.ಎ. ಪದವೀಧರರಾಗಿ ಮೈಸೂರು ಸರ್ಕಾರದ ಅಂಡರ್ ಸೆಕ್ರೆಟರಿಯಾಗಿ ಉದ್ಯೋಗದಲ್ಲಿದ್ದು ೧೯೭೭ರಲ್ಲಿ ನಿವೃತ್ತರಾಗಿ ಈಗ ಕರ್ನಾಟಕ ಭೂದಾನ ಯಜ್ಞ ಬೋರ್ಡಿನ ಮುಖ್ಯಾಧಿಕಾರಿಗಳಾಗಿರುವರು. ಶ್ರೇಷ್ಠ ಸಂಗೀತ ವಿದ್ವಾಂಸರ ಸಂಗೀತ ಕಛೇರಿಗಳನ್ನು ಕೇಳಿ ತಾವೂ ಹಾಡುವ ಹವ್ಯಾಸವನ್ನು ಬೆಳೆಸಿಕೊಂಡಿರುವರು. ಸುಮಾರು ೫೦ ವರ್ಷಗಳಿಂದಲೂ ಕಾವ್ಯವಾಚನ ಮಾಡುತ್ತಿರುವರು. ಇವರ ತಂದೆಗೆ ಯಕ್ಷಗಾನದಲ್ಲಿ ವಿಶೇಷ ಆಸಕ್ತಿಯಿದ್ದು ಇವರ ಮನೆಯಲ್ಲಿ ತಾಳ ಮದ್ದಳೆ ಪ್ರಸಂಗಗಳು ನಡೆಯುತ್ತಿದ್ದವು. ಅವರು ಕೂಡ ಹಾಡುತ್ತಿದ್ದರು. ತಂದೆಯವರೇ ಇವರಿಗೆ

ಪದ್ಯ ಶ್ಲೋಕಗಳನ್ನು ಹಾಡಲು ಕಲಿಸಿದವರು. ಕಾವ್ಯವಾಚನವನ್ನು ತಂದೆಯ ರಿಂದಲೇ ಕಲಿತರು. ಮುಂದೆ ೧೯೩೦-೩೧ರಲ್ಲಿ ಕೃಷ್ಣಗಿರಿ ಕೃಷ್ಣರಾಯರು ನಡೆಸ ತ್ತಿದ್ದ ಗಮಕ ತರಗತಿಗಳಲ್ಲಿ ವ್ಯಾಸಂಗ ಮಾಡಿದರು. ಇವರಿಗೆ ಷಟ್ಪದೀ ಕಾವ ಗಳು ಮತ್ತು ರನ್ನ ಪಂಪರ ಚಂಪೂ ಕಾವ್ಯಗಳು ಬಹು ಪ್ರಿಯವಾದವು. ಮೊದಲ ಗಮಕ ಪಾಠವನ್ನು ಕಲಿಸಿದವರು ಭಾರತದ ಬಿಂದೂರಾಯರು. ಕಳ ಸಂಪತ್ಕುಮಾರಾಚಾರ್ಯ ಅವರು ಇವರ ವಾಚನದ ಮೇಲೆ ಪ್ರಭಾವ ಬೀರಿರುವರು ೧೯೩೫_೩೬ರಲ್ಲಿ ಗಮಕ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರು. ಸುಸ್ಕೃತಿ ಪ್ರಸಾ ರದ ಇಲಾಖೆಯ ಆಶ್ರಯದಲ್ಲಿ ಶಿವಮೊಗ್ಗಾ ಜಿಲ್ಲೆಯ ಅನೇಕ ಊರುಗಳಲ್ಲಿ ಕಾವ ವಾಚನವನ್ನು ನಡೆಸಿರುವರು. ಆಕಾಶವಾಣಿಯಿಂದಲೂ ಇವರ ಕಾರ್ಯಕ್ರಮಗಳ ಪ್ರಸಾರವಾಗಿವೆ. ಬೆಂಗಳೂರಿನಲ್ಲಿ ಅನೇಕ ಸಂಘಸಂಸ್ಥೆಗಳಲ್ಲಿಯೂ ಮಿತ್ರ ಗೋಷ್ಠಿಗಳಲ್ಲಿಯೂ ಸೊಂಡೇಕೊಪ್ಪದ ಕೇಶವ ದೇವಾಲಯದಲ್ಲಿಯೂ ಮತ್ತು ಮೈಸೂರು ದಸರಾ ವಸ್ತುಪ್ರದರ್ಶನದಲ್ಲಿಯೂ ಇವರ ಕಾವ್ಯವಾಚನ ಕಾರ್ಯಕ್ರಮ ಗಳು ನಡೆದಿವೆ. ಇವರು ಪರಿಷತ್ತಿನ ಗಮಕ ಸಮಿತಿಯ ಸದಸ್ಯರಾಗಿ ಸೇವ ಸಲ್ಲಿಸುತ್ತಿರುವರು.

೫೯. ಎನ್. ಚನ್ನಬಸಪ್ಪ

ಇವರು ೪-೪_೧೯೧೭ರಲ್ಲಿ ಜನಿಸಿದರು. ಇವರ ತಂದೆ ನಂಜುಂಡಪ್ಪನವರು. ತಾಯಿ ಗಂಗಮ್ಮನವರು. ಸಾಮಾನ್ಯ ವಿದ್ಯಾಭ್ಯಾಸ ಇಂಟರ್‌ಮೀಡಿಯಟ್‌ವರೆ ಗಿದೆ. ಶಾಲಾಮುಖ್ಯೋಪಾಧ್ಯಾಯರಾಗಿ ನಿವೃತ್ತರಾಗಿರುವರು. ಇವರಿಗೆ ಉತ್ತಮ ಶಾರೀರವಿದ್ದುದರಿಂದ ಬಾಲ್ಯದಿಂದಲೂ ದಾಸರ ಪದಗಳನ್ನೂ ಭಾವಗೀತೆಗಳನ್ನೂ ಹಾಡುವ ಅಭ್ಯಾಸ ಮಾಡಿರುವರು. ಕಾವ್ಯವಾಚನದ ಅಭ್ಯಾಸವೂ ಇದೆ. ಶಾಲಾ ಕಾಲೇಜುಗಳಲ್ಲಿಯೂ, ಸಂಘಸಂಸ್ಥೆಗಳಲ್ಲಿಯೂ ಮಠಗಳಲ್ಲಿಯೂ ಜಾತ್ರೆ ಉತ್ಸವ ಗಳ ಸಂದರ್ಭದಲ್ಲಿ ವಾಚನ ಮಾಡಿ ಗುರುಪೀಠದವರಿಂದಲೂ, ಸಹೃದಯರಿಂದಲೂ ಪ್ರಶಂಸಿತರಾಗಿರುವರು. ಸಂಸ್ಕೃತಿ ಪ್ರಸಾರ ಯೋಜನೆಯಲ್ಲಿ ಭಾಗವಹಿಸಿ ಕೋಲಾರ ಮತ್ತು ತುಮಕೂರು ಜಿಲ್ಲೆಯ ಅನೇಕ ಊರುಗಳಲ್ಲಿ ಕಾವ್ಯವಾಚನ ಕಾರ್ಯ ಕ್ರಮವನ್ನು ನಡೆಸಿರುವರು. ಶ್ರಾವಣಮಾಸದಲ್ಲಿ ಸಿದ್ಧಗಂಗಾ ಮಠ ಮತ್ತು ಕರಿಬಸವದೇವರ ಮಠಗಳಲ್ಲಿ ಪ್ರಭುಲಿಂಗಲೀಲೆ, ಶರಣಲೀಲಾಮೃತಗಳನ್ನು ವಾಚನ ಮಾಡಿರುವರು. ಸುಮಾರು ೨೦ ವರ್ಷಗಳಿಂದ 'ಆಕಾಶವಾಣಿಯಲ್ಲಿ' ಇವರ ಜಾನಪದ ಗೀತೆಗಳು, ಕಾವ್ಯವಾಚನಗಳ ಪ್ರಸಾರವಾಗುತ್ತಿದೆ.

೬೦. ಜಯಲಕ್ಷ್ಮಿ ಗಣೇಶಮೂರ್ತಿ, ಮೈಸೂರು

ಇವರು ಮಂಡ್ಯ ಜಿಲ್ಲೆ, ಕೃಷ್ಣರಾಜಪೇಟೆ ತಾಲ್ಲೂಕು ಹೇಮಗಿರಿಯಲ್ಲಿ ೧೯೧೨ರಲ್ಲಿ ಜನಿಸಿದರು. ಇವರ ತಂದೆ ಶ್ರೀನಿವಾಸಯ್ಯನವರು, ತಾಯಿ ಶ್ರೀಮತಿ ಲಕ್ಷ್ಮೀ ದೇವಮ್ಮನವರು. ಹೈಸ್ಕೂಲು ಶ್ರೇಣಿಯವರೆಗೆ ಸಾಮಾನ್ಯ ವಿದ್ಯಾಭ್ಯಾಸ ಮಾಡಿರುವರು. ಸಂಗೀತ ಸಾಹಿತ್ಯಗಳಲ್ಲಿ ನಿಷ್ಣಾತರಾಗಿದ್ದವರ ಮನೆತನದಲ್ಲಿ ಜನಿಸಿದ ಇವರಿಗೆ ಉತ್ತಮ ಶಾರೀರವೂ ಹಾಡುವುದರಲ್ಲಿ ಆಸಕ್ತಿಯೂ ಬಾಲ್ಯದಿಂದಲೂ ಇದ್ದವು. ಇವರ ತಾಯಿಯವರು ದೇವರನಾಮಗಳನ್ನೂ ಯಕ್ಷಗಾನದ ಹಾಡುಗಳನ್ನೂ ಕಲಿಸಿದರು. ಇವರ ತಾತಂದಿರಾದ ಶ್ರೀ ತಮ್ಮಯ್ಯಶಾಸ್ತ್ರಿಗಳು ಅಮರ ಮತ್ತು ಅನೇಕ ಸಂಸ್ಕೃತ ಪ್ರಾರ್ಥನಾ ಶ್ಲೋಕಗಳನ್ನು ಹಾಡುವುದನ್ನು ಕಲಿಸಿದ್ದರು. ಇವರು ಎಂಟು ವರ್ಷದವರಾಗಿದ್ದಾಗಲೇ ಪ್ರಾರ್ಥನಾ ಪದ್ಯಗಳನ್ನೂ ಶ್ಲೋಕಗಳನ್ನೂ ಸಭೆಗಳಲ್ಲಿ ಲೀಲಾಜಾಲವಾಗಿ ಹಾಡುತ್ತಿದ್ದರು. ಇವರಿಗೆ ಸಂಗೀತ ವಿದ್ವಾಂಸರಾದ ವೆಂಕಟಸುಬ್ಬಯ್ಯನವರು ಸಂಗೀತವನ್ನು ಕಲಿಸಿದರು. ಇವರು ಅನೇಕ ಷಟ್ಪದೀ ಕಾವ್ಯಗಳನ್ನೂ ದೇವರನಾಮ ಮತ್ತು ಯಕ್ಷಗಾನದ ಹಾಡುಗಳನ್ನೂ, ಜಯದೇವ ಕವಿಯ ಅಷ್ಟಪದಿಗಳನ್ನೂ ಉತ್ಕೃಷ್ಟವಾಗಿ ಹಾಡುವರು. ಸುಮಾರು ೨೦ ವರ್ಷಗಳಿಂದ ಕಾವ್ಯವಾಚನಗಳನ್ನು ಮಾಡುತ್ತಿರುವರು. ಕೀರ್ತನೆಗಳನ್ನು, ಹರಿಕಥಾ ಕಾಲಕ್ಷೇಪಗಳನ್ನು ನಾಡಿನ ಅನೇಕ ಪ್ರದೇಶಗಳಲ್ಲಿಯೂ ಕೊಡಗು, ಮೈಸೂರು, ಶಿವಮೊಗ್ಗಾ, ತುಮಕೂರು, ಬೆಂಗಳೂರು, ಚಿತ್ರದುರ್ಗಾ ಜಿಲ್ಲೆಗಳಲ್ಲಿಯೂ ನಡೆಸಿರುವರು. ವಾಚನದ ಜೊತೆಗೆ ಉಚಿತ ವ್ಯಾಖ್ಯಾನವನ್ನೂ ಮಾಡಬಲ್ಲವರಾಗಿದ್ದು ಅನೇಕ ಹಾಡುಗಳನ್ನೂ ಕವನಗಳನ್ನೂ ರಚಿಸಿರುವರು. ಸರ್ಕಾರದ ಸಂಸ್ಕೃತಿ ಪ್ರಸಾರ ಕಾರ್ಯಕ್ರಮಗಳಲ್ಲಿಯೂ ಮತ್ತು ಆಕಾಶವಾಣಿಯಲ್ಲಿಯೂ ಇವರ ಕೀರ್ತನೆ, ಕಾವ್ಯವಾಚನ ಕಾರ್ಯಕ್ರಮಗಳು ನಡೆದಿವೆ. ಇವರಿಗೆ ತಿರುಮಕೂಡಲು ನರಸೀಪುರದ ಮಹಾಜನಗಳು "ಗಮಕ ಸರಸ್ವತಿ" ಎಂಬ ಬಿರುದನ್ನೂ, ೧೯೬೮ರಲ್ಲಿ ಮೈಸೂರಿನ ವಿದ್ವಜ್ಜನರು "ಗಮಕ ಕಲಾ ಕೋವಿದೆ" ಎಂಬ ಬಿರುದನ್ನೂ, ದಯಪಾಲಿಸಿರುವರು. ಇವರಿಗೆ ಕಲಾಭಿವೃದ್ಧಿಯಲ್ಲಿ ಉತ್ತೇಜನ ಸ್ಫೂರ್ತಿಗಳನ್ನಿತ್ತವರು ಇವರ ಯಜಮಾನರಾದ ಶ್ರೀ ಆರ್. ಎ. ಗಣೇಶಮೂರ್ತಿಯವರು ಮತ್ತು ಇವರ ಗಮಕ ಗುರುಗಳಾದ ಶ್ರೀ ಕೃಷ್ಣಗಿರಿ ಕೃಷ್ಣರಾಯರು.

೬೧· ಹೆಚ್. ಕೆ. ನರಸಿಂಹಮೂರ್ತಿ, ಹುಲಿಯೂರುದುರ್ಗ

ಇವರು ೧೭–೭–೧೯೧೩ರಂದು ಜನಿಸಿದರು. ತಂದೆ ಕೃಷ್ಣಪ್ಪನವರು, ತಾಯಿ ನಂಜಮ್ಮನವರು. ಎಸ್. ಎಸ್. ಎಲ್. ಸಿ. ತೇರ್ಗಡೆಯಾಗಿರುತ್ತೆ. ಉಪಾಧ್ಯಾಯವೃತ್ತಿಯಲ್ಲಿದ್ದರು. ವಿದ್ಯಾರ್ಥಿದೆಸೆಯಿಂದ ಕಾವ್ಯವಾಚನದಲ್ಲಿ ಆಸಕ್ತಿಯಿದ್ದಿತು. ಗದುಗಿನ ಭಾರತ, ಜೈಮಿನಿ ಭಾರತ, ಹರಿಶ್ಚಂದ್ರ ಕಾವ್ಯಗಳನ್ನು ಅಭ್ಯಾಸ ಮಾಡಿದರು. ಅನೇಕ ಸಂಘ ಸಂಸ್ಥೆಗಳಲ್ಲಿ ಸಂಸ್ಕೃತಿ ಪ್ರಸಾರ ಕಾರ್ಯಕ್ರಮಗಳಲ್ಲಿ ವಾಚನ ಮಾಡಿರುತ್ತಾರೆ. ಇವರನ್ನು ಉತ್ತಮ ಉಪಾಧ್ಯಾಯರೆಂದು ಪರಿಗಣಿಸಿ ೧೯೭೦ರಲ್ಲಿ ಇವರಿಗೆ ರಾಜ್ಯಪ್ರಶಸ್ತಿ ನೀಡಿ ಗೌರವಿಸಲಾಯಿತು.

೬೨. ಹೆಚ್. ಎಸ್. ಶ್ರೀನಿವಾಸಶಾಸ್ತ್ರಿ, ಚನ್ನಪಟ್ಟಣ

ಇವರು ಕಾನಕಾನಹಳ್ಳಿ (ಕನಕಪುರ) ತಾಲ್ಲೂಕು ಟಿ. ಹೊಸಹಳ್ಳಿಯಲ್ಲಿ ೭–೧೦–೧೯೧೨ರಲ್ಲಿ ಜನಿಸಿದರು. ತಂದೆ ಹೆಚ್. ಸಂಜೀವಭಟ್ಟರು, ತಾಯಿ– ಶ್ರೀಮತಿ ಗೌರಮ್ಮನವರು. ಎಸ್. ಎಸ್. ಎಲ್. ಸಿ. ಮತ್ತು ಮೈಸೂರು ಕನ್ನಡ ಪಂಡಿತ ಪರೀಕ್ಷೆಗಳನ್ನು ಮಾಡಿಕೊಂಡಿರುವರು. ಕನ್ನಡ ಪಂಡಿತರಾಗಿದ್ದು ಉದ್ಯೋಗದಿಂದ ನಿವೃತ್ತರಾಗಿರುವರು. ಕ್ರಮವಾಗಿ ಸಂಗೀತ ಪಾಠವಾಗಿರದಿದ್ದರೂ ಸಂಗೀತವನ್ನು ಅರ್ಥಮಾಡಿಕೊಳ್ಳಬಲ್ಲರು. ಕನ್ನಡ ಸಾಹಿತ್ಯದ ಬಗ್ಗೆ ಅಭಿರುಚಿಯಿದೆ. ಯಥಾಮತಿ ವ್ಯಾಖ್ಯಾನ ಮಾಡಬಲ್ಲರು. ತಮ್ಮ ತಾಯಿಯವರಿಗೆ ರಾಮಾಯಣ ಭಾರತಗಳನ್ನು ಕೇಳಬೇಕೆಂಬ ಆಸಕ್ತಿಯಿದ್ದುದು ಇವರಲ್ಲಿ ಗಮಕ ಕಲೆಯ ಬಗೆಗೆ ಇದ್ದ ಸುಪ್ತ ಶಕ್ತಿಯನ್ನು ಕೆರಳಿಸಿತು. ಹಾಗಾಗಿ ಮೇಲಿನ ಕಾವ್ಯಗಳ ಜೊತೆಗೆ ಅದ್ಭುತ ರಾಮಾಯಣ, ರಾಮಾಶ್ವಮೇಧ, ರಾಮಪಟ್ಟಾಭಿಷೇಕ, ಹರಿಶ್ಚಂದ್ರ ಕಾವ್ಯ ಇತ್ಯಾದಿಗಳನ್ನು ಅಭ್ಯಾಸ ಮಾಡಿದರು. ಕಾವ್ಯವಾಚನದಲ್ಲಿ ಸುಮಾರು ಮೂವತ್ತು ವರ್ಷಗಳ ಅನುಭವವಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಕಾವ್ಯವಾಚನ ಮಾಡಿರುವರು. ಸಂಸ್ಕೃತಿ ಪ್ರಸಾರ ಇಲಾಖೆಯು ಏರ್ಪಡಿಸಿದ್ದ ಕಾರ್ಯಕ್ರಮಗಳಲ್ಲಿ ರಾಮನಗರ ತಾಲ್ಲೋಕಿನ ಹಲವಾರು ಗ್ರಾಮಗಳಲ್ಲಿ ಕಾವ್ಯವಾಚನ ಮಾಡಿರುವರು. ಇತ್ತೀಚೆಗೆ ಚನ್ನಪಟ್ಟಣದ ಕಸ್ತೂರಿಬಾ ಮಹಿಳಾ ಸಮಾಜದ ಆಶ್ರಯದಲ್ಲಿ ಗಮಕ ತರಗತಿಯನ್ನು ಪ್ರಾರಂಭಿಸಿರುವರು. ರಾಮನಗರದ ಮಹಿಳಾ ಸೇವಾ

ಸಮಾಜದಲ್ಲಿ ೧೨ ವರ್ಷಗಳ ಕಾಲ ನಾನಾ ಕಾವ್ಯಗಳನ್ನು ವಾಚನ ಮಾಡಿರುವರು. ಚನ್ನಪಟ್ಟಣ ಗೋಖಲೆ ಸಾರ್ವಜನಿಕ ಸಂಸ್ಥೆಯ ಆಶ್ರಯದಲ್ಲಿ, ಶ್ರೀ ನೀಲಕಂಠೇಶ್ವರ ದೇವಾಲಯದ ದಿವ್ಯ ಜೀವನ ಸಂಘದ ಆಶ್ರಯದಲ್ಲಿ ಜೈಮಿನಿ ಭಾರತದ ಮೇಲೆ ಮೂವತ್ತು ಉಪನ್ಯಾಸಗಳನ್ನು ಕೊಟ್ಟಿರುವರು.

೬೩. ವಿ. ನಾರಾಯಣ ಶಾಸ್ತ್ರಿ, ಮೈಸೂರು

ಇವರು ೧೯೧೩ರಲ್ಲಿ ಮೈಸೂರಿನಲ್ಲಿ ಜನಿಸಿದರು. ಎಸ್. ಎಸ್. ಎಲ್. ಸಿ. ಪರೀಕ್ಷೆ ಮಾಡಿದ್ದಾರೆ. ಚಿಕ್ಕಂದಿನಿಂದಲೂ ಕಾವ್ಯವಾಚನ ಮತ್ತು ಕೀರ್ತನೆಗಳನ್ನು ಕೇಳಿ, ಗಮಕ ಕಲೆಯಲ್ಲಿ ಅಭಿರುಚಿಯನ್ನು ಪಡೆದರು. ಅನುಕರಣ ಸಾಮರ್ಥ್ಯವುಳ್ಳ ಇವರನ್ನು ನೆರೆಹೊರೆಯಲ್ಲಿದ್ದ ಬಿಡಾರಂ ಕೃಷ್ಣಪ್ಪನವರು, ದೇವುಡು ಶಾಸ್ತ್ರಿಗಳು, ಸುಬ್ರಹ್ಮಣ್ಯಶಾಸ್ತ್ರಿಗಳು ಪ್ರೋತ್ಸಾಹಿಸಿ ಸಂಗೀತವನ್ನೂ, ಪದ್ಯವಾಚನವನ್ನೂ ಕಲಿಸಿದರು. ಗಮಕಿ ಮಾಯಿಗೌಡರು ಪುರಾಣದ ತಮ್ಮಯ್ಯನವರು ಮತ್ತು ದೇವೇಂದ್ರಪ್ಪನವರು ನಡೆಸುತ್ತಿದ್ದ ಮಾರುತಿ ಉತ್ಸವದಲ್ಲಿ ಇವರ ಕಾವ್ಯವಾಚನಗಳು ತಪ್ಪದೆ ನಡೆಯುತ್ತಿದ್ದುವು. ಸುಮಾರು ೩೦ ವರ್ಷಗಳಿಂದ ಕಾವ್ಯವಾಚನವನ್ನು ನಡೆಸುತ್ತಿರುತ್ತಾರೆ. ಹರಿಕಥಾ ವಿದ್ವಾನ್ ರಾಮಕೃಷ್ಣಶಾಸ್ತ್ರಿಗಳು ೧೯೩೪ರಲ್ಲಿಯೇ ಇವರ ಆಸಕ್ತಿಯನ್ನು ವಿಶೇಷವಾಗಿ ಕೀರ್ತನೆಗಳ ಕಡೆಗೆ ತಿರುಗಿಸಿದರು. ಇವರ ವಾಚನಗಳು 'ಆಕಾಶವಾಣಿ'ಯಲ್ಲಿ ಪ್ರಸಾರಿತವಾಗಿವೆ. ಸಾರ್ವಜನಿಕರಿಂದ ಇವರ ಸೇವೆಯನ್ನು ಮೆಚ್ಚಿ ಬಿನ್ನವತ್ತಳೆ, ಪ್ರಶಸ್ತಿಗಳು ಕೊಡಲ್ಪಟ್ಟಿವೆ.

೬೪. ಬಿ. ಪಿ. ವಿಶ್ವೇಶ್ವರಯ್ಯ, ಮೈಸೂರು

ಇವರು ೧೯೧೩ರಲ್ಲಿ ಮೈಸೂರಿನಲ್ಲಿ ಜನಿಸಿದರು. ಇವರು ಬಿ.ಎ., ಬಿ.ಟಿ. ಪದವೀಧರರಾಗಿ ಹೈಸ್ಕೂಲಿನಲ್ಲಿ ಉಪಾಧ್ಯಾಯರಾಗಿರುವರು. ಸಂಗೀತವನ್ನು ಕೇಳುವುದರಿಂದಲೇ ಅದರಲ್ಲಿ ಗಾಢವಾದ ಆಸಕ್ತಿ ಬೆಳೆದುಬಂದಿದೆ. ಕಾಲೇಜಿನ ದಿನಗಳಲ್ಲಿಯೇ ಕೃಷ್ಣಗಿರಿ ಕೃಷ್ಣರಾಯರು ನಡೆಸುತ್ತಿದ್ದ ಗಮಕ ತರಗತಿಗಳಲ್ಲಿ ಅಭ್ಯಾಸ ಮಾಡಿದರು. 'ಆಕಾಶವಾಣಿ'ಯಲ್ಲಿಯೂ ಆಗಾಗ್ಗೆ ಕಾವ್ಯವಾಚನ ಮಾಡುತ್ತಿರುವರು. ಇವರ ಪತ್ನಿ ಶ್ರೀಮತಿ ಬಿ. ವಿ. ಇಂದಿರಮ್ಮನವರೂ ಸಹ ವೀಣೆ ನಾರಾಯಣ ಐಯ್ಯರ್ ಮತ್ತು ಟಿ. ಆರ್. ಶ್ರೀನಿವಾಸನ್‌ರವರಲ್ಲಿ ಸಂಗೀತವನ್ನು ಅಭ್ಯಾಸ

ಮಾಡಿರುವರು. ಈ ದಂಪತಿಗಳು ಸುಮಾರು ೩೦ ವರ್ಷಗಳಿಂದಲೂ ಕಾವ್ಯವಾಚನ ಮತ್ತು ಸಂಗೀತ ಕಾರ್ಯಕ್ರಮಗಳನ್ನು 'ಆಕಾಶವಾಣಿ'ಯ ಮೂಲಕ ನಡೆಸುತ್ತಿರುವರು.

೬೫. ಸಿ. ಕೆ. ಪುಟ್ಟಣ್ಣಯ್ಯ, ಕೃಷ್ಣರಾಜನಗರ

ಇವರು ಕೃಷ್ಣರಾಜನಗರ ತಾಲ್ಲೂಕು ಚುಂದಗಾಲು ಎಂಬಲ್ಲಿ ೨-೨-೧೯೧೩ರಲ್ಲಿ ಜನಿಸಿದರು. ತಂದೆ ಕಾಳಾಚಾರ್ಯರು, ತಾಯಿ ಕಾಳಮ್ಮನವರು. ಇವರ ಭಾವ ಶ್ರೀ ಶೇಕದಾರ್ ಶಿಂಗರಾಚಾರ್ ಎಂಬುವರು ಇವರಿಗೆ ವಿದ್ಯಾರ್ಜನೆಗೆ ಸಹಾಯ ಮಾಡಿದರು. ಅವರು ಪಿಟೀಲು ವಾದನದಲ್ಲಿ ಮತ್ತು ಕಾವ್ಯವಾಚನದಲ್ಲಿ ಉತ್ತಮ ಪಾಂಡಿತ್ಯವನ್ನು ಸಂಪಾದಿಸಿದ್ದರು. ಅವರ ಪ್ರಭಾವ ಇವರ ಮೇಲೆ ಉಂಟಾಯಿತು. ಇವರಿಗೆ ರಾಗ-ತಾಳಗಳ ಪರಿಚಯವೂ ಇರುತ್ತೆ. ಕಾವ್ಯವಾಚನ ವ್ಯಾಖ್ಯಾನಗಳಲ್ಲದೆ ನಾಟಕದಲ್ಲಿ ಪಾತ್ರವಹಿಸುವುದರಲ್ಲಿಯೂ ತುಂಬಾ ಆಸಕ್ತಿಯಿರುತ್ತೆ. ೧೯೩೭ರಲ್ಲಿ ಇವರಿಗೆ ಉಪಾಧ್ಯಾಯರ ಕೆಲಸ ಸಿಕ್ಕಿತು. ಬೆಳಕವಾಡಿ ಶ್ರೀನಿವಾಸ ಅಯ್ಯಂಗಾರ್ಯರು ಇವರ ಸಂಗೀತದ ಗುರುಗಳು, ಸಂಗೀತ ಜೂನಿಯರ್ ದ್ವಿತೀಯ ದರ್ಜೆಯಲ್ಲಿ ಪಾಸಾಗಿರುತ್ತೆ. ೧೯೪೯-೫೦ರಲ್ಲಿ ಮಂಡ್ಯದಲ್ಲಿ ಶ್ರೀ ಕೃಷ್ಣಗಿರಿ ಕೃಷ್ಣರಾಯರು ನಡೆಸುತ್ತಿದ್ದ ಗಮಕ ತರಗತಿಗಳಿಗೆ ಸೇರಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದರು. ಆಶುಕವಿಗಳಾಗಿದ್ದಾರೆ, ದಸರಾವಸ್ತು ಪ್ರದರ್ಶನದಲ್ಲಿ, ಸುಸ್ಕೃತಿ ಪ್ರಸಾರ ಯೋಜನೆಯಲ್ಲಿ ಕಾವ್ಯವಾಚನ ಮಾಡಿ ಪ್ರಶಸ್ತಿ ಪಡೆದಿರುತ್ತಾರೆ. "ಉಪಾಧ್ಯಾಯವಾಣಿ" ಎಂಬ ಮಾಸ ಪತ್ರಿಕೆಯ ಸಂಪಾದಕರಾಗಿರುತ್ತಾರೆ. ಆಕಾಶವಾಣಿಯಲ್ಲೂ ಇವರ ಕಾವ್ಯವಾಚನ ಅನೇಕಬಾರಿ ನಡೆದಿರುತ್ತೆ. ಉತ್ತಮ ಲೇಖಕರೂ ಪ್ರಕಟಣಕಾರರೂ ಆಗಿರುತ್ತಾರೆ.

೬೬. ಓ. ಎಂ. ಚೌಡಯ್ಯನವರು, ಕೊಳ್ಳೇಗಾಲ

ಇವರು ೧೩-೧೧-೧೯೧೩ರಲ್ಲಿ ಜನಿಸಿದರು. ಶ್ರೀ ಒಂಟೆ ಮಾದೇಶಯ್ಯನವರು. ಮತ್ತು ಶ್ರೀಮತಿ ಪುಟ್ಟವೀರಮ್ಮನವರು ಇವರ ಮಾತಾಪಿತೃಗಳು. ತಂದೆಯವರ ಕಸುಬು ನೇಯಿಗೆ. ಸುಮಾರು ೧೧ನೇ ವರ್ಷದ ವೇಳೆಗೆ ಚೌಡಯ್ಯನವರು ತಂದೆ ತಾಯಿಗಳನ್ನು ಕಳೆದುಕೊಂಡು ವಿದ್ಯಾರ್ಜನೆಯನ್ನು ಬಹು ಕಷ್ಟದಿಂದ ಮಾಡಿದರು.

ಪೂಜ್ಯ ಶಾಂತಾನಂದಸ್ವಾಮಿಗಳಲ್ಲಿ ೨ ವರ್ಷ ಸಂಸ್ಕೃತ ಕಲಿತು ವ್ಯಾಕರಣ, ಭಗವದ್ಗೀತೆ, ಕಾವ್ಯ, ಸಂಹಿತೆಗಳು ಮುಂತಾದುವನ್ನು ಅಭ್ಯಸಿಸಿದರು. ಕೊಳ್ಳೇಗಾಲದ ಶ್ರೀ ಭಟ್ಟು ರಂಗಯ್ಯನವಶಲ್ಲಿ ೧೦ ವರ್ಷ ಕಾಲ ಜ್ಯೋತಿಷ ಶಾಸ್ತ್ರಾಭ್ಯಾಸ ಮಾಡಿದರು. ಈಗ ಅದೇ ಶ್ರೀಯುತರ ವೃತ್ತಿಯಾಗಿದೆ. ತಮ್ಮೂರಿನ ಶ್ರೀ ಎಂ. ರಾಮಯ್ಯನವರಿಂದ ಕಾವ್ಯವಾಚನ ಮಾಡುವ ರೀತಿಯನ್ನು ಕಲಿತರು. ಅವರೇ ಇವರ ಗಮಕ ಗುರುಗಳು. ಅಲ್ಲಿನ ಪ್ರಸಿದ್ಧ ಸಂಗೀತ ವಿದ್ವಾಂಸರಾದ ಮುರಾರಿ ರಂಗಯ್ಯ ಎಂಬುವರಲ್ಲಿ ಒಂದು ವರ್ಷ ಸಂಗೀತ ಅಭ್ಯಾಸಮಾಡಿ ಸ್ವರಜತಿಗಳವರೆಗೆ ಕಲಿತರು. ಅನಂತರ ಶ್ರೀ ಕೆ. ಆರ್. ರಂಗಸ್ವಾಮಯ್ಯನವರಲ್ಲಿ ಸಂಗೀತಪಾಠ ಮುಂದುವರಿಸಿ ದೇವರನಾಮಗಳನ್ನು ಹಾಡುವುದನ್ನೂ ಕಲಿತರು. ಶ್ರೀಯುತರು ಕಾವ್ಯವಾಚನ ಹರಿಕೀರ್ತನಗಳನ್ನು ಮಾಡುತ್ತಿರುತ್ತಾರೆ. ಸಣ್ಣ ಪುಟ್ಟ ಕವನಗಳನ್ನು ಬರೆದಿರುತ್ತಾರೆ. ಗಮಕ ಕಲೆಯಲ್ಲಿ ವಿದ್ಯಾರ್ಥಿಗಳನ್ನು ಉತ್ತಮವಾಗಿ ತಯಾರು ಮಾಡಿರುತ್ತಾರೆ. ಕೆಲವು ಶಿಷ್ಯರು ವ್ಯಾಖ್ಯಾನಕಾರರೂ ಆಗಿರುತ್ತಾರೆ. ಶ್ರೀಯುತರು ಕನ್ನಡ, ತೆಲುಗು ಸಂಸ್ಕೃತ ಕಾವ್ಯಗಳಿಗೆ ವ್ಯಾಖ್ಯಾನ ಮಾಡುತ್ತಿದ್ದಾರೆ. ಪೋತನಾಮಾತ್ಯನ ಶ್ರೀಮದಾಂಧ್ರ ಭಾಗವತಕ್ಕೆ ಈಗ ವ್ಯಾಖ್ಯಾನ ಮಾಡುತ್ತಿದ್ದಾರೆ. ವಾರ್ಷಿಕ ಸಮಾರಂಭಗಳಲ್ಲಿ ವ್ಯಾಖ್ಯಾನಗಳು ನಡೆಯುತ್ತಲೇ ಇರುತ್ತವೆ.

೬೭. ಕೇರಳಾಪುರದ ಸುಬ್ಬರಾಯರು

ಇವರು ೧೯೧೪ ರಲ್ಲಿ ಹಾಸನ ಜಿಲ್ಲೆಯ ಕೇರಳಾಪುರದಲ್ಲಿ ಜನಿಸಿದರು. ಲೋಯರ್ ಸೆಕೆಂಡರೀ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರು. ಬಾಲ್ಯದಲ್ಲಿಯೇ ಸಂಗೀತದಲ್ಲಿ ಆಸಕ್ತಿಯನ್ನು ಹೊಂದಿ ಸ್ವಂತ ಪರಿಶ್ರಮದಿಂದಲೇ ಕಾವ್ಯವಾಚನವನ್ನು ರೂಢಿಸಿಕೊಂಡು ಸುಮಾರು ತಮ್ಮ ೧೩ ನೆಯ ವಯಸ್ಸಿನಿಂದಲೇ ಸ್ವಗ್ರಾಮದಲ್ಲಿ ಕಾವ್ಯವಾಚನಮಾಡುತ್ತಿದ್ದರು. ಸಂಗೀತಭೂಷಣ ಆರ್. ವಿ. ಶ್ರೀಕಂಠಯ್ಯನವರಿಂದ ಕಾವ್ಯವಾಚನಕ್ಕೆ ಪೂರಕವಾಗುವಷ್ಟು ಸಂಗೀತವನ್ನು ಕಲಿತಿರುವರು. ಈಚೆಗೆ ಗಮಕಿ ಶ್ರೀ ಎಂ. ರಾಘವೇಂದ್ರರಾಯರು ಗಮಕ ಕಲೆಯನ್ನು ಪರಿಷ್ಕಾರವಾಗಿ ತಿಳಿಸಿ ಮಾರ್ಗದರ್ಶನ ಮಾಡಿದರು. ಇವರು ಸರ್ಕಾರದ ಸಂಸ್ಕೃತಿ ಪ್ರಸಾರದ ಮೂಲಕವಾಗಿಯೂ ಕಾವ್ಯವಾಚನ ಕ್ರಮಗಳನ್ನು ನಡೆಸಿರುವರು. 'ಆಕಾಶವಾಣಿ'

ಯಲ್ಲಿಯೂ ಇವರ ಕಾವ್ಯವಾಚನ ಕಾರ್ಯಕ್ರಮಗಳು ಪ್ರಸಾರವಾಗಿವೆ. ಇವ
ಅನೇಕ ಶಿಷ್ಯರನ್ನು ತಯಾರುಮಾಡಿರುವರು.

೭೮. ಕೆ. ಶಾಮಯ್ಯಂಗಾರ್ಯರು, ಭದ್ರಾವತಿ

ಇವರು ೧೯೧೧ರಲ್ಲಿ ಮೇಲುಕೋಟೆಯಲ್ಲಿ ಜನಿಸಿದರು. ಇವರ ತಂ
ಯವರು ಕರಿಮಾಣಿಕ್ಯಂ ಶ್ರೀನಿವಾಸ ಅಯ್ಯಂಗಾರ್ ಅವರು. ಇಂಟರ್ ಮೀಡಿಯಟ
ವರೆಗೂ ವಿದ್ಯಾಭ್ಯಾಸಮಾಡಿರುವರು. ಮೈಸೂರಿನಲ್ಲಿದ್ದಾಗ ಗಮಕಿ ಶ್ರೀ ಸಂಪತ
ಮಾರಾಚಾರ್ಯರಿಂದ ಗಮಕ ಕಲೆಯ ಪರಿಚಯವನ್ನು ಪಡೆದರು. ಸಂಗೀತವನ
ಶಾಸ್ತ್ರೋಕ್ತವಾಗಿ ಅಭ್ಯಾಸಮಾಡಿಲ್ಲವಾದರೂ ದೈವದತ್ತವಾದ ರಾಗಜ್ಞಾನವನ
ಹೊಂದಿರುವರು. ಈಗ ಭದ್ರಾವತಿಯ ಕಬ್ಬಿಣ ಕಾರ್ಖಾನೆಯ ಸಹಕಾರ ಸಂ
ದಲ್ಲಿ ಉದ್ಯೋಗದಲ್ಲಿರುವರು. ಆತ್ಮಾನಂದಕ್ಕಾಗಿ ಗಮಕ ಕಲೆಯನ್ನು ಅಭ್ಯಾ
ಮಾಡಿದರು. ೩೦ ವರ್ಷಗಳಿಂದ ಭದ್ರಾವತಿಯ ಮಹಾ ಜನಗಳ ಆದರ
ಪ್ರೋತ್ಸಾಹವು ಇವರಿಗಿದೆ. ಸಂಸ್ಕೃತಿ ಪ್ರಸಾರಯೋಜನೆಯ ಕಾವ್ಯವಾಚನ ಕಾಯ
ಕ್ರಮಗಳನ್ನೂ ನಡೆಸಿರುವರು. ನಾಟಕ ಕಲಾ ವಿಲಾಸಿ ಸಂಸ್ಥೆಗಳಲ್ಲಿ ಪಾತ್ರವಹಿ
ಉತ್ತಮ ನಟರೆಂಬ ಹೆಸರನ್ನು ಗಳಿಸಿರುವರು. ಬೆಂಗಳೂರಿನ 'ಆಕಾಶವಾಣಿ
ಯಲ್ಲೂ ಇವರ ಕಾವ್ಯವಾಚನ ಕಾರ್ಯಕ್ರಮಗಳು ನಡೆದಿವೆ. ಕೆಲವು ಮಂದಿ ಶಿಷ
ರನ್ನೂ ಗಮಕ ಕಲೆಯಲ್ಲಿ ತಯಾರುಮಾಡಿರುವರು.

೭೯. ಎಂ. ರಾಘವೇಂದ್ರರಾಯರು, ಬೆಂಗಳೂರು

ಇವರು ೭–೮–೧೯೧೧ರಲ್ಲಿ ಮಂಡ್ಯ ಜಿಲ್ಲೆಯ ಪಾಂಡವಪುರದಲ್ಲಿ ಜನಿಸಿದರು
ಇವರ ತಂದೆ ಮೈಸೂರು ಶ್ರೀ ನೀಲಕಂಠ ಕೇಶವರಾಯರು ಮತ್ತು ತಾಯಿ
ಶ್ರೀಮತಿ ವೆಂಕಟಲಕ್ಷ್ಮಮ್ಮನವರು. ಇವರು ಇಂಟರ್ಮೀಡಿಯಟ್ ಮತ್ತು ಟಿ. ಸಿ
ಎಚ್. ಮುಗಿಸಿಕೊಂಡು ವಿದ್ಯಾ ಇಲಾಖೆಯಲ್ಲಿ ಉದ್ಯೋಗದಲ್ಲಿದ್ದು ನಿವೃತ್
ರಾಗಿರುವರು. ಇವರ ತಂದೆಯವರು ಉತ್ತಮ ಗಮಕಿಗಳಾಗಿದ್ದು ಅವರ ಪ್ರಭಾ
ದಿಂದ ತಮ್ಮ ಹತ್ತನೆಯ ವಯಸ್ಸಿನಿಂದಲೇ ಕಾವ್ಯವಾಚನವನ್ನು ಕಲಿತರು. ಇವರಿ
ಸಂಗೀತದ ಸಾಮಾನ್ಯ ಪರಿಚಯವೂ, ಉತ್ತಮ ಶಾರೀರವೂ ಇದ್ದು ಗಮಕ ಕ
ಯನ್ನು ಸ್ವಂತ ಅಭ್ಯಾಸದಿಂದ ಮುಂದುವರಿಸಿದರು. ಪ್ರಸಿದ್ಧ ಕವಿ ಗಮಕಿ
'ಅಭಿನವ ಕಾಳಿದಾಸ' ಆಸ್ಥಾನ ವಿದ್ವಾನ್ ಶ್ರೀ ಬಸವಪ್ಪಶಾಸ್ತ್ರಿಗಳ ಮಿತ್ರರು

ಸಂಗೀತ ಸಾಹಿತ್ಯ ನಿಷ್ಣಾತರೂ ಆಗಿದ್ದ ಶ್ರೀ ಉಪಾಧ್ಯಾಯ ನಂಜಪ್ಪನವರ ಶಿಷ್ಯರಾಗಿದ್ದ ಮೈಸೂರಿನ ಜವಳಿ ಅಂಗಡಿ ಶ್ರೀಮಾನ್ ತಮ್ಮಯ್ಯನವರಲ್ಲಿ ಗಮಕ ಅಭ್ಯಾಸವನ್ನು ಮುಂದುವರಿಸಿದರು. ಇವರ ಕಾವ್ಯವಾಚನವು ನಾಡಿನ ಅನೇಕ ಕಡೆಗಳಲ್ಲಿ ಸುಮಾರು ೪೦ ವರ್ಷಗಳಿಂದಲೂ ನಡೆಯುತ್ತಲೇ ಇವೆ. ಇವರು ೧೯೪೭–೪೮ ರಿಂದಲೂ ಪರಿಷತ್ತಿನಲ್ಲಿ ಗಮಕ ತರಗತಿಗಳನ್ನು ನಡೆಸಿ, ಗಮಕ ಪರೀಕ್ಷೆಗಳ ವ್ಯವಸ್ಥೆಗೆ ಮಾರ್ಗದರ್ಶನವನ್ನು ನೀಡುತ್ತಲಿರುವರು. ಸರ್ಕಾರದ ಸಂಸ್ಕೃತಿ ಪ್ರಚಾರ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಮಂಡ್ಯ ಮತ್ತು ತುಮಕೂರು ಜಿಲ್ಲೆಗಳಲ್ಲಿ ಕಾವ್ಯವಾಚನ ಮಾಡಿರುವರು. 'ಆಕಾಶವಾಣಿ'ಯ ಬೆಂಗಳೂರು ಕೇಂದ್ರದಿಂದ ಇವರ ಕಾವ್ಯವಾಚನಗಳು ಸುಮಾರು ಹತ್ತು ವರ್ಷಗಳಿಂದಲೂ ಪ್ರಸಾರವಾಗುತ್ತಲಿವೆ. ಪರಿಷತ್ತು ನಡೆಸುವ ಸಾಹಿತ್ಯೋತ್ಸವ, ಸಮ್ಮೇಳನಗಳಲ್ಲಿ ಕಾವ್ಯವಾಚನಗಳನ್ನು ನಡೆಸಿರುವರು. ಈಗ ಪರಿಷತ್ತಿನ ಗಮಕ ವಿಭಾಗದ ಸಂಚಾಲಕರಾಗಿ ಗಮಕ ಕಲೆಯ ಪ್ರಚಾರಕ್ಕೆ ಸೇವೆಯನ್ನು ಸಲ್ಲಿಸುತ್ತಿರುವರು. ಇವರಿಗೆ ವಿದ್ವಾಂಸರ ಮತ್ತು ಸಹೃದಯರ ಮನ್ನಣೆಯೂ ಮತ್ತು ೧೯೭೪ ರಲ್ಲಿ ಸರ್ಕಾರದ ಸಾಹಿತ್ಯ ಅಕಾಡೆಮಿಯಿಂದ ಗಮಕ ಕಲೆಗಾಗಿ ಪ್ರಶಸ್ತಿಯೂ ಲಭಿಸಿವೆ. ಇವರಿಗೆ ರನ್ನ, ಪಂಪ. ಕುಮಾರವ್ಯಾಸ ಮತ್ತು ಲಕ್ಷ್ಮೀಶರ ಕೃತಿಗಳು ಪ್ರಿಯವಾದವು. ಇವರು ಉತ್ತಮ ಲೇಖಕರೂ ಆಗಿದ್ದು "ಗಮಕಿ", "ಕಾವ್ಯಗಾಯನ ಕಲಾ ಸಂಗ್ರಹ" ಎಂಬ ಗಮಕ ಕಲೆಯ ಲಕ್ಷಣ ಗ್ರಂಥಗಳನ್ನೂ 'ಸತ್ಯದೇವಚರಿತೆ', 'ವಾಸುದೇವ ವಿಜಯ', 'ವೆಂಕಟೇಶ ವಿಜಯ', 'ಗಮಕ ಗೀತೆಗಳು', 'ಶ್ರೀ ರಾಘವೇಂದ್ರ ಗುರುಕೀರ್ತನ ಮಾಲಿಕಾ', 'ಗಮಕ ಪ್ರಚಾರಬೋಧಿನಿ' ಮತ್ತು 'ಗಮಕ ಪ್ರವೇಶದಾಯಿನಿ, ಎಂಬ ಗ್ರಂಥಗಳನ್ನೂ ರಚಿಸಿರುವರು. ಪರಿಷತ್ತಿನ ಅಧ್ಯಕ್ಷರಾದ ಶ್ರೀ ಜಿ. ನಾರಾಯಣರವರ ಪ್ರೋತ್ಸಾಹ ಮತ್ತು ವಿಶ್ವಾಸದಿಂದ ಪಂಚವಾರ್ಷಿಕಯೋಜನೆಯಲ್ಲಿ ಗಮಕ ಸಮಿತಿಯ ಮೂಲಕ ಕಲೆಯ ಅಭಿವೃದ್ಧಿಗಾಗಿ ಸೇವೆ ಸಲ್ಲಿಸುತ್ತಿರುವರು.

೭೩. ಪಿ. ಸೀತಾರಾಮರಾಯರು, ಚಿತ್ರದುರ್ಗ

ಇವರು ೪–೮–೧೯೧೫ ರಲ್ಲಿ ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲ್ಲೂಕು, ದೇವಸಮುದ್ರದಲ್ಲಿ ಜನಿಸಿದರು. ಇವರ ತಂದೆ ಶ್ರೀ ಪಿ. ಪುಟ್ಟವೆಂಕಟಪ್ಪನವರು, ತಾಯಿ ಶ್ರೀಮತಿ ಸಾವಿತ್ರಮ್ಮನವರು. ಇವರು ಎಸ್.ಎಸ್.ಎಲ್.ಸಿ. ಮತ್ತು ವಿ.ಟಿ.ಸಿ. ಪರೀಕ್ಷೆಗಳನ್ನು ಮಾಡಿಕೊಂಡು ಪ್ರಾಥಮಿಕ ಶಾಲಾ

ಮುಖ್ಯೋಪಾಧ್ಯಾಯರಾಗಿ ಸೇವೆಸಲ್ಲಿಸಿ, ಈಚೆಗೆ ನಿವೃತ್ತರಾಗಿರುವರು. ಬಾ
ದಿಂದಲೂ ಸಂಗೀತದಲ್ಲಿ ಆಸಕ್ತಿಯನ್ನು ಹೊಂದಿದ್ದ ಇವರು ವರ್ಣ, ಕೃ
ಕೀರ್ತನೆಗಳನ್ನು ಹಾಡುವಷ್ಟರ ಅನುಭವವನ್ನು ಪಡೆದಿರುವರು. ಉಪಾಧ್ಯಾ
ವೃತ್ತಿಯಲ್ಲಿದ್ದ ಇವರು ಪಠ್ಯಗ್ರಂಥಗಳಲ್ಲಿನ ಪದ್ಯಗಳನ್ನು ರಾಗವಾಗಿ ಹುಡುಗ
ಹೇಳುವುದನ್ನು ಕಲಿಸಿ ತಾವೂ ಸ್ವಂತ ಪರಿಶ್ರಮದಿಂದ ಕಾವ್ಯವಾಚನಗಳ
ಮಾಡುವರು. ೧೯೩೦ ರಿಂದಲೂ ಇವರು ವಾಚನ ವ್ಯಾಖ್ಯಾನಗಳನ್ನು ಗ್ರಾಮಾ
ತರಗಳಲ್ಲಿಯೂ ಅನೇಕ ಸಂಘಸಂಸ್ಥೆಗಳಲ್ಲಿಯೂ ಉತ್ಸವ ಸಮಾರಂಭಗಳಲ್ಲಿಯ
ನಡೆಸುತ್ತಲಿರುವರು. ಇವರಿಗೆ ಗಮಕ ಕಲೆಯಲ್ಲಿ ಸೂಕ್ತ ರೀತಿಯಲ್ಲಿ ಮಾ
ದರ್ಶನಮಾಡಿದವರು, ಹೈಸ್ಕೂಲು ಕನ್ನಡ ಪಂಡಿತರಾಗಿದ್ದ ಶ್ರೀ ಸಿ. ರಾಮಚಂ
ಶರ್ಮರವರು. ೧೯೭೧–೭೨ ರ ಗಮಕ ಪರೀಕ್ಷೆಗೆ ಕುಳಿತು ಉತ್ತೀರ್ಣರಾಗಿರುವರ
ಸಂಸ್ಕೃತಿ ಪ್ರಸಾರದ ಇಲಾಖೆಯ ಆಶ್ರಯದಲ್ಲಿ ಇವರು ಗುಲ್ಬರ್ಗ, ರಾಯಚೂ
ಮುಂತಾದ ಕಡೆಗಳಲ್ಲಿನ ಕನ್ನಡ ಸಂಘ ಸಂಸ್ಥೆಗಳಲ್ಲಿಯೂ ಶಾಲಾ ಕಾಲೇ
ಗಳಲ್ಲಿಯೂ ಕಾವ್ಯವಾಚನ ನಡೆಸಿರುವರು. ಷಟ್ಪದೀ ಕಾವ್ಯವಾಚನಗಳಲ್ಲಿ ಇವರ
ಹೆಚ್ಚು ಒಲವು. ಇವರು ಉತ್ತಮ ಲೇಖಕರಾಗಿದ್ದು ಶಾಲೆಯ ಹುಡುಗರು ಸ
ಅಭಿನಯಿಸಲು ಯೋಗ್ಯವಾದ 'ಮಿತ್ರಸಂಗ್ರಹ', 'ಸತ್ಯಮೇವಜಯತೆ', 'ಮೃತ್ಯು
ಜಯ' ಮತ್ತು 'ನವಯೌವನ' ಮುಂತಾದ ನಾಟಕಗಳನ್ನು ರಚಿಸಿ ತಾವೂ ಸ
ಅಭಿನಯಿಸಿರುವರು. ಇವರ ಈಚಿನ ಕೃತಿಗಳು 'ಹರಿಭಕ್ತ ಸಾರ್ವಭೌಮ' ಮತ್ತ
'ಭಕ್ತ ಜಯದೇವ'.

೭೧. ಟಿ. ವೆಂಕಟಪ್ಪನವರು, ಮಾಲೂರು

ಇವರ ಜನನ ಮಾಲೂರಿನಲ್ಲಿ ೧೫–೧೨–೧೯೧೫ ರಲ್ಲಿ. ತಾಯಿ ಶ್ರೀಮ
ನರಸಮ್ಮ, ತಂದೆ ಶ್ರೀ ಹೆಚ್. ತಿಮ್ಮಯ್ಯದಾಸ್. ಇವರು ಬಿ.ಎಸ್‌ಸಿ. ಪದವಿ
ಧರರು. ನಿವೃತ್ತ ಅಧ್ಯಾಪಕರು. ಸಂಗೀತದ ಪರಿಚಯವಿದೆ. ಸಾಹಿತ್ಯದಲ್ಲಿ
ಅದರಲ್ಲಿಯೂ ಮಹಾ ಕಾವ್ಯಗಳಲ್ಲಿ ಇವರಿಗೆ ಅಪಾರವಾದ ಆಸಕ್ತಿ ಮತ್ತು ಅ
ರುಚಿ. ವಾಚನ ವ್ಯಾಖ್ಯಾನಗಳೆರಡನ್ನೂ ಸ್ವತಃ ಮಾಡಬಲ್ಲರು. ನಾಟಕಗಳನ
ರಚಿಸಿರುವರು. ಕೆಲವು ಉತ್ತಮ ಲೇಖನಗಳನ್ನೂ ಬರೆದಿರುವರು. "ಲಕ್ಷ್ಮೀಶ
ಕಾವ್ಯ ವೈಭವ" ಎಂಬುದು ಒಂದು ಅಧ್ಯಯನ ಲೇಖನ. ವಿದ್ಯಾರ್ಥಿ ದೆಸೆಯಲ್ಲಿಯೆ
ಅಂದರೆ ಸುಮಾರು ೪೫ ವರ್ಷಗಳ ಹಿಂದೆಯೇ ಗಮಕಿ ಸಂಪತ್ಕುಮಾರಾಚಾರ್ಯ
ವಾಚನಗಳನ್ನು ಕೇಳಿ ಪುಳಕಿತರಾಗಿ ತಾವೂ ಕಾವ್ಯಗಾಯನ ಮಾಡಬೇಕೆಂ

ಆಸೆಯನ್ನು ಹೊಂದಿದರು. ತಂದೆಯವರಿಂದ ವಾಚನವನ್ನು ಕಲಿತರು. ಪ್ರಸಿದ್ಧ ಗಮಕಿಗಳಾದ ರಾಘವೇಂದ್ರರಾಯರು, ರಾಮಾರಾಧ್ಯರು, ಶಕುಂತಲಾಬಾಯಿ ಪಾಂಡುರಂಗರಾಯರುಗಳ ವಾಚನಗಳನ್ನು ಕೇಳಿ ಪಾಂಡಿತ್ಯವನ್ನು ವೃದ್ಧಿಪಡಿಸಿಕೊಂಡರು. ಗ್ರಾಮಾಂತರ ಪ್ರದೇಶಗಳಲ್ಲಿ, ಮಾಲೂರಿನಲ್ಲಿ, ದೊಡ್ಡ ಕಡತೂರು, ಕುಡಿಯನೂರು ಮುಂತಾದ ಸ್ಥಳಗಳಲ್ಲಿ ಗದುಗಿನ ಭಾರತ, ಜೈಮಿನಿ ಭಾರತ, ಹರಿಶ್ಚಂದ್ರ ಕಾವ್ಯವಾಚನ ನಡೆಸಿದ್ದಾರೆ. ಸರ್ಕಾರದ ವತಿಯಿಂದಲೂ ಅನೇಕ ಕಡೆ ವಾಚನ ಮಾಡಿ ಜನಮನಗಳನ್ನು ರಂಜಿಸಿದ್ದಾರೆ. ಕುವೆಂಪುರವರ "ರಾಮಾಯಣ ದರ್ಶನಂ" ಕಾವ್ಯದ ಪಾರಾಯಣವನ್ನು ೩ ತಿಂಗಳ ಕಾಲ ನಿತ್ಯ ಪಾರಾಯಣ ನಡೆಸಿದ್ದಾರೆ. ೧೯೫೨ರಲ್ಲಿ ಗಮಕ ತರಗತಿ ನಡೆಸಿದ್ದರು. ೩-೧೧-೧೯೬೮ರಲ್ಲಿ ಮಾಲೂರಿನ ಕನ್ನಡ ಸಂಘದವರು ಇವರಿಗೆ ಸನ್ಮಾನ ಪತ್ರ, ಗಂಧದ ವಿಗ್ರಹ ಮತ್ತು ಶಾಲನ್ನು ಇತ್ತು ಗೌರವಿಸಿರುತ್ತಾರೆ. ೧೯೭೫ರಲ್ಲಿ ಮಾಲೂರಿನ ನಾಗರಿಕರಿಂದ ಅಭಿನಂದನಾ ಪತ್ರ ಮತ್ತು ಶಾಲನ್ನು ಪಡೆದಿರುತ್ತಾರೆ.

೭೨. ಬಿ. ವಿ. ವೆಂಕಟಾಚಲಯ್ಯ

ಇವರು ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆಯಲ್ಲಿ ೫-೨-೧೯೧೮ರಲ್ಲಿ ಜನಿಸಿದರು. ಇವರ ತಂದೆ ಶ್ರೀ ಬಿ. ಎ. ವೆಂಕಟರಾಮಯ್ಯ, ತಾಯಿ ನಂಜಮ್ಮನವರು. ಇವರು ಬಿ. ಎ. ಮಟ್ಟದವರೆಗೂ ವ್ಯಾಸಂಗ ಮಾಡಿರುವರು. ಜೂನಿಯರ್ ಸಂಗೀತ ಪರೀಕ್ಷೆವರೆಗೂ ಪಾಠವಾಗಿದೆ. ಕೀರ್ತನೆ ವರ್ಣಗಳನ್ನು ಹಾಡುವ ಅನುಭವ ೩೦ ವರ್ಷಗಳಿಂದಲೂ ಇದೆ. ಗಮಕ ವಿದ್ವಾನ್ ಶ್ರೀ ಕೃಷ್ಣಗಿರಿ ಕೃಷ್ಣರಾಯರಲ್ಲಿ ಗಮಕವನ್ನು ಕಲಿತಿರುವರು. ಸಂಸ್ಕೃತಿ ಪ್ರಸಾರ ಇಲಾಖೆಯ ಕಾರ್ಯಕ್ರಮಗಳಲ್ಲಿಯೂ ಭಾಗವಹಿಸಿ ಕನಕಪುರ, ಸಾತನೂರು, ಅತ್ತಿಬೆಲೆ, ಆನೇಕಲ್, ಮಳವಾಡಿಗಳಲ್ಲಿ ಕಾವ್ಯವಾಚನ ಮಾಡಿರುವರು. ಗದುಗಿನ ಭಾರತ, ಜೈಮಿನಿ ಭಾರತ, ಹರಿಶ್ಚಂದ್ರ ಕಾವ್ಯಗಳ ವಾಚನವು ಇವರಿಗೆ ಪ್ರಿಯವಾದುವು. ಸಹೃದಯ ಶ್ರೋತೃಗಳಿಂದ ಪ್ರಶಂಸೆಯನ್ನು ಪಡೆದಿರುವರು.

೭೩. ಬಿ. ಎಸ್. ಎಸ್. ಕೌಶಿಕ್‌ರವರು, ಮೈಸೂರು

ಇವರು ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕು ಬಸವಾಪಟ್ಟಣದಲ್ಲಿ ೨೫-೪-೧೯೧೮ರಂದು ಜನಿಸಿದರು. ಇವರ ತಂದೆ ಸುಬ್ಬಯ್ಯನವರು, ತಾಯಿ

ಶ್ರೀಮತಿ ಸುಬ್ಬಮ್ಮನವರು. ಸಾಮಾನ್ಯ ವಿದ್ಯಾಭ್ಯಾಸ ,ಎಸ್.ಎಸ್.ಎಲ್.ಸಿ
ಶಾರದಾ ವಿಲಾಸ ಪ್ರಥಮ ದರ್ಜೆ ಕಾಲೇಜಿನ ಗ್ರಂಥಪಾಲಕರಾಗಿದ್ದು ಈಚೆಗ
ಉದ್ಯೋಗದಿಂದ ನಿವೃತ್ತರಾಗಿರುವರು. ಕೋಳ್ಮೆಯ ಸಂಗೀತ ಪರಿಚಯವ
ಸುಮಾರು ೪೦ ವರ್ಷದಿಂದಲೂ ಇದೆ. ಇವರ ತಾಯಿಯವರು ಸುಶ್ರಾವ್ಯವಾಗಿ
ಹಾಡುತ್ತಿದ್ದರು. ಅವರಿಂದ ಪ್ರಭಾವಿತರಾಗಿ ಇವರು ಪದ್ಯಗಳನ್ನೂ ಹಾಡುಗಳನ್ನೂ
ರಾಗವಾಗಿ ಹಾಡುತ್ತಿದ್ದರು. ಇವರಿಗೆ ಗಮಕ ಕಲೆಯನ್ನು ತಿಳಿಸಿ ಮಾರ್ಗದರ್ಶನ
ಮಾಡಿದವರು ಶ್ರೀ ಕೃಷ್ಣಗಿರಿ ಕೃಷ್ಣರಾಯರು. ಇವರು ಕಾವ್ಯವಾಚನ ಮತ್ತು
ವ್ಯಾಖ್ಯಾನವನ್ನು ಮಾಡುವರು. ಇವರು ಅಳವಡಿಸಿಕೊಂಡು ಪ್ರದರ್ಶಿಸಿರುವ
'ಕುಂತೀಕರ್ಣ', 'ಸತ್ಯಹರಿಶ್ಚಂದ್ರ' ಮೊದಲಾದ ಗಮಕ ರೂಪಕಗಳು ಪ್ರೇಕ್ಷಕರ
ಅಭಿಮಾನ ಮತ್ತು ಪ್ರಶಂಸೆಗಳಿಗೆ ಪಾತ್ರವಾಗಿವೆ. ಮೈಸೂರು ದಸರಾ ವಸ್ತು
ಪ್ರದರ್ಶನದವರು ೧೯೫೬ರಲ್ಲಿ ಏರ್ಪಡಿಸಿದ್ದ ಗಮಕ ವಾಚನ ಸ್ಪರ್ಧೆಯಲ್ಲಿ
ಪ್ರಪ್ರಥಮವಾಗಿ ಸ್ಪರ್ಧಿಸಿ ಪ್ರಥಮ ಬಹುಮಾನವನ್ನು ಪಡೆದಿರುವರು. ಮೈಸೂರಿ
ನಲ್ಲಿ ಶ್ರೀ ವಾಲ್ಮೀಕಿ ಗಮಕ ಪಾಠಶಾಲೆಯನ್ನು ತೆರೆದು ಸುಮಾರು ಇಪ್ಪತ್ತು ವರ್ಷ
ದಿಂದಲೂ ಗಮಕ ತರಗತಿಗಳನ್ನು ನಡೆಸಿ ಅನೇಕ ಉತ್ತಮ ವರ್ಗದ ಗಮಕ
ಶಿಷ್ಯರನ್ನು ತರಪೇತು ಮಾಡಿರುವರು. ಸುಮಾರು ಹತ್ತು ವರುಷಗಳಿಂದಲೂ
ಕರ್ನಾಟಕದ ಅನೇಕ ಭಾಗಗಳಲ್ಲಿ ಇವರ ಕಾವ್ಯವಾಚನಗಳು ನಡೆದಿರುವುದಲ್ಲದೆ
ಜೆಂಷೆಡ್ಪುರ, ರೂರ್ಕೆಲಾ, ಕಾಶಿ ಮತ್ತು ಬೊಂಬಾಯಿಗಳಲ್ಲಿಯೂ ಇವರ ಕಾವ್ಯ
ವಾಚನ, ವ್ಯಾಖ್ಯಾನ ಕಾರ್ಯಕ್ರಮಗಳು ನಡೆದಿವೆ. ಇವರು ಉತ್ತಮ ಕವಿಗಳೂ
ಆಗಿದ್ದು ಅನೇಕ ಗಮಕ ರೂಪಕಗಳನ್ನು ಅಳವಡಿಸಿರುವುದೇ ಅಲ್ಲದೆ 'ಶ್ರೀ ಶಂಕರ
ವಿಜಯ ಸಂಗ್ರಹ', 'ಶ್ರೀ ಗುರು ರಾಘವೇಂದ್ರ ವಿಜಯ ಸಂಗ್ರಹ', 'ಶ್ರೀ ಆಂಡಾಳ್
ದೇವಿ ಮಹಿಮಾದರ್ಶ' ಮುಂತಾದ ಸ್ವಂತ ಕೃತಿಗಳನ್ನೂ ರಚಿಸಿರುವರು. ಇವರ
ಬೃಹತ್ ಷಟ್ಪದೀ ಕಾವ್ಯವು ಸುಮಾರು ೧೦೦೦ ಪದ್ಯಗಳಿಗೂ ಮೀರಿದ್ದು
'ಶ್ರೀ ಗುರುರಾಘವೇಂದ್ರ ಮಹಿಮಾದರ್ಶ' ಪ್ರಕಟಣೆಗೆ ಸಿದ್ಧವಾಗಿದೆ. ಸುಮಾರು
ನಾಲ್ಕು ವರ್ಷದಿಂದ ಇವರ ಕಾರ್ಯಕ್ರಮಗಳು ಆಕಾಶವಾಣಿಯಲ್ಲಿ ಪ್ರಸಾರವಾಗಿವೆ.
ಸರ್ಕಾರದ ಸಾಹಿತ್ಯ ಪ್ರಚಾರ ಇಲಾಖೆಯ ಮೂಲಕವೂ ಇವರ ಕಾರ್ಯಕ್ರಮ
ಗಳು ನಡೆದಿವೆ. ಮೈಸೂರು ನಗರದ ಬೆಳ್ಳಿಕಟ್ಟೆಗೆ ರಾಮಮಂದಿರದಲ್ಲಿ ಇವರ
ಕಾರ್ಯಕ್ರಮಗಳು ೧೯೬೮ರಲ್ಲಿ ನಡೆದು ಇವರಿಗೆ 'ಗಮಕ ಕಲಾ ಪ್ರವೀಣ' ಎಂಬ
ಬಿರುದನ್ನು ಇತ್ತಿರುವರು. ೧೯೭೦ರಲ್ಲಿ ಸೊಪ್ಪಿನಕೊಳದ ಬೀದಿಯ ರೇಣುಕಾ
ಜಯಂತಿ ಸಮಿತಿಯವರು 'ಗಮಕ ಕಲಾ ಕೋಕಿಲ' ಎಂದೂ, ಬೆಂಗಳೂರ

ಮಲ್ಲೇಶ್ವರದ ಭಜನ ಸಭೆಯು ಶ್ರೀರಾಮ ಮಂದಿರದಲ್ಲಿ 'ಗಮಕ ಕವಿತಾ ವನಜ ಭಾಸ್ಕರ' ಎಂದೂ, ೧೯೭೦ರಲ್ಲಿ ಪ್ರಶಸ್ತಿಯನ್ನಿತ್ತಿರುವರು. ಮೈಸೂರು ಅರಮನೆಯಲ್ಲಿ ಭಾರತ ವಾಚನವು ಇವರಿಂದ ಒಂಭತ್ತು ತಿಂಗಳ ಕಾಲ ನಡೆದು, ಕೇಳಿ ಆನಂದಿಸಿದ ಮಹಾರಾಜರವರು ಒಂದು ನವರತ್ನದ ಉಂಗುರ, ಜೋಡಿಶಾಲು ಮತ್ತು ೫೦೦ ರೂಪಾಯಿಗಳನ್ನಿತ್ತು ಗೌರವಿಸಿರುವರು. ಕರ್ನಾಟಕ ಸರ್ಕಾರದ ಸಾಹಿತ್ಯ ಅಕಾಡೆಮಿಯವರು ೧೯೭೮ರ ರಾಜ್ಯಪ್ರಶಸ್ತಿಯನ್ನು ಇತ್ತು ಗೌರವಿಸಿರುವರು. ಇವರ ಸಹೃದಯತೆ ಮತ್ತು ಕಲಾಭಿಮಾನದ ಕುರುಹೆಂಬಂತೆ ಸ್ವಪ್ರೇರಣೆಯಿಂದಲೂ ಮತ್ತು ಸ್ವಂತ ಧನವ್ಯಯದಿಂದಲೂ ಸತ್ಕಾರ ಸಮಾರಂಭಗಳನ್ನು ಏರ್ಪಡಿಸಿ ೮೧ ಜನ ನಾನಾ ಕಲಾವಿದರನ್ನು ಶಾಲು ಜೋಡಿಗಳನ್ನಿತ್ತು ಗೌರವಿಸಿರುವರು.

೭೪. ಬಿ. ಜಿ. ಗರುಡಾಚಾರ್, ಭದ್ರಾವತಿ

ಇವರು ೨೫-೫-೧೯೧೮ರಂದು ಬಿಂಡಿಗನವಿಲೆಯಲ್ಲಿ ಜನಿಸಿದರು. ಶ್ರೀ ಬಿ. ವಿ. ಗೋವಿಂದಯ್ಯಂಗಾರ್ ಮತ್ತು ಶ್ರೀಮತಿ ಗರುಡಮ್ಮ ಇವರ ಮಾತಾಪಿತೃಗಳು. ಇವರ ಸಾಮಾನ್ಯ ವಿದ್ಯಾಭ್ಯಾಸ ಇಂಟರ್‌ಮೀಡಿಯಟ್. ಮೈಸೂರು ಕಾಗದದ ಕಾರ್ಖಾನೆಯಲ್ಲಿ ಅಕೌಂಟ್ಸ್ ಆಫೀಸರಾಗಿದ್ದು ಈಗ ನಿವೃತ್ತರಾಗಿದ್ದಾರೆ. ದಿವಂಗತ ಕಳಲೆ ಸಂಪತ್ಕುಮಾರಾಚಾರ್ಯರು ಶ್ರೀ ಗರುಡಾಚಾರ್ಯರ ಗಮಕ ಕಲಾಭ್ಯಾಸಕ್ಕೆ ಮಾನಸಿಕ ಗುರುಗಳು. ಮೈಸೂರು ಸರ್ಕಾರದ ಸಂಸ್ಕೃತಿ ಪ್ರಸಾರ ಕಾರ್ಯಕ್ರಮಗಳಿಗೆ ಗಮಕಿಗಳಾಗಿ ಆರಿಸಲ್ಪಟ್ಟು ಮಲೆನಾಡಿನ ಅನೇಕ ಕಡೆಗಳಲ್ಲಿ ರಾಮಾಯಣ ದರ್ಶನಂ, ಕುಮಾರವ್ಯಾಸ ಭಾರತ, ಜೈಮಿನಿ ಭಾರತಗಳಿಂದ ವಾಚನಗಳನ್ನು ನಡೆಸಿರುತ್ತಾರೆ ಮತ್ತು ಈಗಲೂ ನಡೆಸುತ್ತಾರೆ. ಬೆಂಗಳೂರು ಮತ್ತು ಮೈಸೂರು ಆಕಾಶವಾಣಿ ಕೇಂದ್ರಗಳಿಂದಲೂ ಇವರ ಕಾವ್ಯವಾಚನ ಕಾರ್ಯಕ್ರಮಗಳು ಬಿತ್ತರಿಸಲ್ಪಟ್ಟಿವೆ. ದೇವಂಗಿ ಮತ್ತು ಶಿವಮೊಗ್ಗೆಗಳಲ್ಲಿ ರಾಷ್ಟ್ರಕವಿ ಕುವೆಂಪುರವರ ಅಭಿನಂದನಾ ಸಮಾರಂಭಗಳು ನಡೆದ ಸಂದರ್ಭದಲ್ಲಿ ಇವರು ಕುವೆಂಪುರವರ ಸಮ್ಮುಖದಲ್ಲಿ ರಾಮಾಯಣ ದರ್ಶನಂ ಕಾವ್ಯವಾಚನ ಮಾಡುವ ಸೌಭಾಗ್ಯವನ್ನು ಪಡೆದಿದ್ದರು. ೧೯೫೨ರಲ್ಲಿ ಮುಂಬೈ ಕರ್ನಾಟಕ ಸಂಘದ ಆಶ್ರಯದಲ್ಲಿ ನಡೆದ ಶ್ರೀ ರಾಮಾಯಣದರ್ಶನಂ ಅಖಿಲ ಕರ್ನಾಟಕ ವಾಚನ ಸ್ಪರ್ಧೆಯಲ್ಲಿ ಭದ್ರಾವತಿ ಕರ್ನಾಟಕ ಸಂಘದ ಪ್ರತಿನಿಧಿಗಳಾಗಿ ಭಾಗವಹಿಸಿ, ವಿಜೇತ

ರಾಗಿ ಸುಂದರ ಪರ್ಯಾಯಪಾರಿತೋಷಕ ರಜತಕರಂಡವನ್ನು ಪಡೆದು ಸಂಘ
ಕೀರ್ತಿಯನ್ನು ತಂದುಕೊಟ್ಟಿರುವರು.

೭೫. ಟಿ. ಎಸ್. ರತ್ನಮ್ಮ, ಬೆಂಗಳೂರು

ಇವರು ೨೪-೮-೧೯೧೬ರಲ್ಲಿ ಜನಿಸಿದರು. ಇವರ ತಂದೆ ಶ್ರೀ ಶ್ಯಾ
ರಾಯರು, ತಾಯಿ ಶ್ರೀಮತಿ ಲಕ್ಷ್ಮೀನರಸಮ್ಮನವರು. ಇವರು ಎಸ್. ಎಸ್
ಎಲ್. ಸಿ., ಟಿ. ಸಿ. ಹೆಚ್. ಮತ್ತು ಕನ್ನಡ ಪಂಡಿತ ಪರೀಕ್ಷೆಗಳನ್ನು ಮಾ
ಕೊಂಡು ಉಪಾಧ್ಯಾಯನಿಯಾಗಿರುವರು. ಇವರಿಗೆ ಕೀರ್ತನೆ, ದೇವರನಾಮಗಳನ
ಹಾಡುವಷ್ಟು ಸಂಗೀತ ಜ್ಞಾನವಿದೆ. ವಿಶೇಷ ಸಾಹಿತ್ಯಾಭಿರುಚಿಯಿದ್ದು ವಾಚ
ಮತ್ತು ವ್ಯಾಖ್ಯಾನಗಳನ್ನು ಮಾಡಬಲ್ಲರು. ಲೇಖಕಿಯರಾಗಿ ಕೆಲವು ಕಥೆಗಳನ್ನೂ
ಪ್ರಬಂಧಗಳನ್ನೂ ಪ್ರಾಸಂಗಿಕ ಕವನಗಳನ್ನೂ ರಚಿಸಿರುವರು. ಇವರ ತಂದೆಯ
ವರು ತಾವು ಓದುತ್ತಿದ್ದ ನಳಚರಿತ್ರೆಯನ್ನು ರಾಗಮಾರ್ಗದಲ್ಲಿ ಇವರಿಗೆ ಬಾಲ
ದಲ್ಲಿಯೇ ಕಲಿಸಿದ್ದರು. ಮುಂದೆ ಗಮಕಿ ಶ್ರೀ ಆರ್. ಶಂಕರನಾರಾಯಣರವರ
ಕಾವ್ಯವಾಚನವನ್ನು ಕಲಿತು ಗಮಕ ಪ್ರವೇಶ ಮತ್ತು ಪ್ರೌಢ ಪರೀಕ್ಷೆಗಳ
ಉತ್ತೀರ್ಣರಾದರು. ಇವರ ಕಾವ್ಯವಾಚನ ಕಾರ್ಯಕ್ರಮಗಳು ಉತ್ಸವ ಸಮಾ
ರಂಭಗಳಲ್ಲಿ ಶಾಲೆಗಳಲ್ಲಿಯೂ ಸಂಘಗಳಲ್ಲಿಯೂ ಸಹೃದಯರ ಮನೆಗಳಲ್ಲಿಯೂ
ನಡೆಯುತ್ತಿವೆ. ಇವರಿಗೆ ಸಾಹಿತ್ಯದಲ್ಲಿ ಆಸಕ್ತಿಯನ್ನು ಕೆರಳಿಸಿದವರು ಮುಖ್ಯೋ
ಪಾಧ್ಯಾಯರಾಗಿದ್ದ ಮುಂದೆ ಪರಿಷತ್ತಿನ ಅಧ್ಯಕ್ಷರಾದ ದಿ|| ಎಂ. ಆರ್. ಶ್ರೀನಿವಾ
ಮೂರ್ತಿಗಳು. ಇವರು ವಿದ್ಯಾರ್ಥಿನಿಯರನ್ನು ಕೂಡಿಕೊಂಡು ಕಾರ್ಯಕ್ರಮ
ಗಳನ್ನು 'ಆಕಾಶವಾಣಿ'ಯಲ್ಲಿ ಕೊಟ್ಟಿರುವರು.

೭೬. ಡಿ. ಎಸ್. ಶ್ರೀನಿವಾಸರಾಯರು, ಬೆಂಗಳೂರು

ಇವರು ೧-೧೦-೧೯೧೬ರಲ್ಲಿ ಜನಿಸಿದರು. ಶ್ರೀಮತಿ ಭಾಗೀರಥಮ್ಮನವರ
ಮತ್ತು ಶ್ರೀ ಚೌಬೀನಿ ದಿಬ್ಬೂರು ಸುಬ್ಬರಾಯರು ಇವರ ಮಾತಾಪಿತೃಗಳು
ಇಂಟರ್ಮೀಡಿಯಟ್ ಮುಗಿಸಿಕೊಂಡು ಐ. ಟಿ. ಐ. ಕಾರ್ಖಾನೆಯಲ್ಲಿ ಉದ್ಯೋ
ದಲ್ಲಿರುತ್ತಾರೆ. ಇವರ ಮನೆ ಮತ್ತು ಇವರು ಸುಳಿದಾಡುತ್ತಿದ್ದ ಕಡೆಗಳಲ್ಲಿ ಕನ್ನ
ಸಾಹಿತ್ಯ, ಸಂಗೀತ, ಗಮಕ ವಾಚನ ವ್ಯಾಖ್ಯಾನಗಳ ಸೌರಭದಿಂದ ಕೂಡಿ

ವಾತಾವರಣವಿದ್ದಿತು. ಸುಮಾರು ೪೫ ವರ್ಷಗಳಿಗೂ ಹೆಚ್ಚು ಕಾಲದ ಶ್ರವಣ ಮನನಗಳು ಇವರ ಮನಸ್ಸಿನ ಮೇಲೆ ಅಚ್ಚಳಿಯದ ಅಚ್ಚೊತ್ತಿವೆ. ಹಿಂದಿನ ಮಹಾ ವ್ಯಕ್ತಿಗಳು ನಡೆಸುತ್ತಿದ್ದ ರಸರಾಗರಂಜಿತ, ಭಾವಪೂರ್ಣ ವಾಚನಗಳನ್ನು ಕೇಳಿ ಮನವು ಸಂಸ್ಕಾರಗೊಂಡಿದೆ. ಮನೆಯಲ್ಲಿ ಇವರ ತಂದೆಯವರೇ ಆಂಧ್ರ ಭಾಗವತದ ವಾಚನವು ಶ್ರದ್ಧಾ ಸಕ್ತಿಗಳಿಂದ ನಡೆಯುತ್ತಿದ್ದುದನ್ನು ಕೇಳಿದ್ದಾರೆ. ಕನ್ನಡ ಭಾರತ ಜೈಮಿನಿ ಭಾರತ, ಧ್ರುವ ಚರಿತ್ರೆ, ಗಜೇಂದ್ರ ಮೋಕ್ಷ, ವಾಮನಾವತಾರ ಭಾಗಗಳು ಇವರ ತಾಯಿಯವರಿಗೆ ಪರಮ ಪ್ರಿಯವಾಗಿದ್ದುವು. ಸಂಸ್ಕೃತದಲ್ಲಿ ಉತ್ತಮ ಪಾಂಡಿತ್ಯವಿದೆ. ಇವರಿಗೆ ವಿದ್ಯಾರ್ಥಿ ದೆಸೆಯಲ್ಲಿ ಆದ ಒಂದು ಅನುಭವವು ಕನ್ನಡ ಮಹಾಕಾವ್ಯಗಳನ್ನು ವ್ಯಾಸಂಗ ಮಾಡಿ ಅದರಲ್ಲಿ ಪಾಂಡಿತ್ಯವನ್ನೇ ಸಂಪಾದಿಸ ಬೇಕೆಂಬ ಕೆಚ್ಚನ್ನು ಇವರಲ್ಲಿ ಉಂಟುಮಾಡಿತು. ಅಂದು ಮೊದಲಾದ ವ್ಯಾಸಂಗ ಇನ್ನೂ ಮುಗಿದಿಲ್ಲ. ಗಮಕ ಪ್ರಪಂಚದಲ್ಲಿ ಕಾಲಿಡಲು ದಿವಂಗತ ಕಳಲೆ ಸಂಪತ್ಕು ಮಾರಾಚಾರ್ಯರು ಮತ್ತು ಕೃಷ್ಣಗಿರಿ ಕೃಷ್ಣರಾಯರ ವಾಚನಗಳಿಂದ ಉಂಟಾದ ಆಕರ್ಷಣೆ ಕಾರಣ. ಅವರಲ್ಲಿ ಕಲಿತು, ಗಮಕಿ ರಾಘವೇಂದ್ರರಾಯರಲ್ಲಿ ಅಭ್ಯಾಸ ಮುಂದುವರಿಸಿ, ವೀಣೆ ರಾಜಾರಾಯರ ಸಂಗೀತ ತರಗತಿಗಳಿಗೆ ಸೇರಿ ಪ್ರವೇಶ ಪರೀಕ್ಷೆ ಯಲ್ಲಿ ಉತ್ತೀರ್ಣರಾದರು. ಸಂದರ್ಭದ ಅಗತ್ಯವಿದ್ದಂತೆ ರಸಪೋಷಣೆ ಮಾಡಬಲ್ಲ, ಶ್ರೋತೃಗಳ ಸಹೃದಯರ ಮನಸೆಳೆಯುವಂತೆ ವಾಚನ ವ್ಯಾಖ್ಯಾನಗಳನ್ನು ಮಾಡ ಬಲ್ಲ ಶಕ್ತಿ ಇವರಿಗಿದೆ. ಕ್ಲಿಷ್ಟ ಕಾವ್ಯಗಳನ್ನು ಆರಿಸಿಕೊಂಡು ಪಾಠ ಹೇಳುವ ಉತ್ಸಾಹ ಇವರಿಗೆ. ಸಾಹಿತಿಗಳಿಗೆ, ಗಮಕಿಗಳಿಗೆ, ಸಹೃದಯರಿಗೆ ಸುಪರಿಚಿತರು ಶ್ರೀ ದಿಬ್ಬೂರು ಶ್ರೀನಿವಾಸರಾಯರು. ಇವರ ವಾಚನ ವ್ಯಾಖ್ಯಾನಗಳು ಅನೇಕ ಕಡೆ ನಡೆದಿವೆ. ಸುಮಾರು ೧೯೭೦ರಲ್ಲಿ ಶ್ರೀಮನ್ನಿಡುಮಾಮಿಡಿ ಮಠಾಧೀಶರಾದ ಡಾ|| ಜ. ಚ. ನಿ.ಯವರ ಸಮ್ಮುಖದಲ್ಲಿ ಆಗ ಪ್ರಚಾರ ಇಲಾಖೆಯ ಉಪ ನಿರ್ದೇ ಶಕರಾಗಿದ್ದ ಶ್ರೀ ಚನ್ನಬಸಪ್ಪನವರ ವ್ಯಾಖ್ಯಾನದೊಂದಿಗೆ ರಾಜಶೇಖರವಿಳಾಸ ಕಾವ್ಯವಾಚನ ಮಾಡಿದ ಸಂದರ್ಭದಲ್ಲಿ ಶ್ರೀಗಳವರು ತಾವೇ ಸಂಪಾದಿಸಿದ್ದ ಮಾದಿ ರಾಜ ಶತಕ ಕಾವ್ಯದ ಪ್ರತಿಯೊಂದನ್ನಿತ್ತು ಗೌರವಿಸಿ, ಪ್ರಶಂಸಿಸಿರುವರು.

೭೭. ಕಮಲಾಕ್ಷಮ್ಮ, ಸುತ್ತೂರು

ಇವರು ಚಾಮರಾಜನಗರದ ತಾಲ್ಲೂಕು ಕುಪೇರಿನಲ್ಲಿ ೪-೧೨-೧೯೧೬ರಲ್ಲಿ ಹುಟ್ಟಿದರು. ತಾಯಿ ಲಕ್ಷ್ಮಿದೇವಮ್ಮ, ತಂದೆ ಎಲ್. ದೇವಚಂದ್ರ ಪಂಡಿತರು.

ಏಳನೇ ತರಗತಿಯವರೆಗೆ ಓದಿದ್ದಾರೆ. ಸಂಗೀತದಲ್ಲಿ ವರ್ಣ, ಕೃತಿ, ಕೀರ್ತನೆಗಳನ್ನು ಹಾಡುವಷ್ಟು ಅನುಭವವಿರುತ್ತದೆ. ಕನ್ನಡ ಸಾಹಿತ್ಯದಲ್ಲಿ ಅಭಿರುಚಿಯಿರುತ್ತ ಮೈಸೂರಿನ ಭಾರತದ ಕೃಷ್ಣರಾಯರು ಇವರಲ್ಲಿ ಗಮಕ ಕಲೆಯ ಅಭಿರುಚಿ ಮತ್ತು ಅಭಿವೃದ್ಧಿಗೆ ಕಾರಣರು; ಇತರರು ಶ್ರೀ ಶಂಕರನಾರಣಪ್ಪನವರು, ಹಾಗೂ ದಿವಂಗತ ತಂದೆ ಶ್ರೀ ದೇವಚಂದ್ರ ಪಂಡಿತರು. ೧೯೫೫ರಲ್ಲಿ ಮೈಸೂರಿನಲ್ಲಿ ಗಮಕ ಪ್ರವೇಶವನ್ನು ಪ್ರಥಮ ಶ್ರೇಣಿಯಲ್ಲಿ ಪಾಸ್ ಮಾಡಿದರು. ಬೆಂಗಳೂರು ಆಕಾಶ ವಾಣಿಯಲ್ಲಿ ೧೯೫೭ರ ಲಾಗಾಯ್ತು ೧೯೭೮ರವರೆಗೆ ಕಾವ್ಯವಾಚನ ನಡೆಸಿರುತ್ತಾರೆ. ಹಾಗೂ ಸುತ್ತೂರು, ಕುದೇರು, ಕೇರಳಗಳಲ್ಲಿಯೂ ವಿಶೇಷ ಪೂಜಾಸಮಾರಂಭ ಗಳಲ್ಲಿಯೂ ವಾಚನ ಮಾಡಿರುವರು. ೧೯೫೫ರಲ್ಲಿ ಸುತ್ತೂರಿನಲ್ಲಿ ಶ್ರೀ ಶಿವರಾತ್ರೀ ಶ್ವರ ಗಮಕ ಪಾಠಶಾಲೆಯಲ್ಲಿ ಗಮಕ ತರಗತಿಯನ್ನು ನಡೆಸಿರುವರು. ವೃದ್ಧಾಪ್ಯದ ಸಲುವಾಗಿ ಈಗ ಸುತ್ತೂರಿನಲ್ಲಿ ಮಠದ ಕೆಲವು ಬಾಲಕಿಯರಿಗೆ ಗಮಕ ಕಲಿ ಯಲು ಸಹಾಯ ಮಾಡುತ್ತಿರುತ್ತಾರೆ. ಇವರು ಕಾವ್ಯವಾಚನ ಮಾಡಿದ ಗುರು ಮನೆ ಮತ್ತು ಅರಮನೆಗಳಿಂದ ಅರ್ಹತಾಪತ್ರವೂ ಸನ್ಮಾನವೂ ದೊರೆತಿವೆ.

೭೮. ರಾಜಮ್ಮ ಕಲ್ಲೋಳಿ ಮಠ, ಬೆಂಗಳೂರು

ಇವರಿಗೆ ಸುಮಾರು ೬೦ ವಯಸ್ಸು. ಇವರ ತಂದೆ ಶ್ರೀ ಎಂ.ಎನ್. ಮಾದಪ್ಪ ನವರು, ತಾಯಿ ಶ್ರೀಮತಿ ಕೆಂಪದೇವಮ್ಮ. ಇವರ ತಂದೆಯವರಿಗೆ ಗಮಕ, ಸಂಗೀತ, ಹರಿಕಥೆ, ನಾಟಕಗಳಲ್ಲಿ ತುಂಬಾ ಆಸಕ್ತಿ. ರಾಜಮ್ಮನವರು ಬಾಲ್ಯ ದಲ್ಲಿಯೇ ಕಿವಿಯ ಮೇಲೆ ಬಿದ್ದ ಹಾಡುಗಳನ್ನು ತಾವೂ ಹಾಡುತ್ತಿದ್ದರಂತೆ. ತಾಯಿಯನ್ನು ಚಿಕ್ಕಂದಿನಲ್ಲಿಯೇ ಕಳೆದುಕೊಂಡು ಅಜ್ಜನ ಮನೆಯನ್ನು ಸೇರಿದರು. ಅಜ್ಜ ಶ್ರೀ ತಿಮ್ಮಪ್ಪಯ್ಯನವರಿಗೆ ಸಂಗೀತ ಸಾಹಿತ್ಯಗಳಲ್ಲಿ ಬಹಳ ಆಸಕ್ತಿ. ಮೊಮ್ಮ ಗಳಿಗೂ ಸಹ ವೀಣೆ ನಾರಾಯಣಸ್ವಾಮಿ ಅಯ್ಯರ್ ಶಾಲೆಯಲ್ಲಿ ಸಂಗೀತವನ್ನು ಕಲಿಸಿದರು. ಸಂಗೀತದ ಗುರುಗಳು ಆಸ್ಥಾನ ವಿದ್ವಾನ್ ಬೆಳಕವಾಡಿ ಶ್ರೀನಿವಾಸಯ್ಯಂ ಗಾರ್ಯರು. ಹನ್ನೆರಡು ವರ್ಷದ ಕಿರಿಯರಾಗಿದ್ದಾಗಲೇ ಕಾವ್ಯವಾಚನ ಕಲೆಯನ್ನು ಪ್ರಸಿದ್ಧ ಗಮಕಿಗಳೂ ನಟರೂ ಆಗಿದ್ದ ಗೌರೀದೇವುಡು ಶಾಸ್ತ್ರಿಗಳಲ್ಲಿ ಅಭ್ಯಾಸ ಮಾಡಿದರು. ಇವರು ಕುವೆಂಪು ವಿರಚಿತ ವಾಲ್ಮೀಕಿಯ ಭಾಗ್ಯ ನಾಟಕದಲ್ಲಿ ಸೀತೆಯ ಪಾತ್ರವನ್ನು ಅಭಿನಯಿಸಿ ಪ್ರೇಕ್ಷಕರ ಮೆಚ್ಚಿಗೆಯನ್ನು ಪಡೆದರು. ಮಹಾ ರಾಜಾ ಕಾಲೇಜಿನಲ್ಲಿ ಬಿ.ಎ. ಓದುತ್ತಿದ್ದಾಗ ಸಂಗೀತಕ್ಕೆ ಗಾನ ವಿಶಾರದ ತಿಟ್ಟೀ

ಕೃಷ್ಣಯ್ಯಂಗಾರ್ರವರೂ ಮತ್ತು ಸಾಹಿತ್ಯಕ್ಕೆ ಶ್ರೀಮತಿ ಡಿ. ಚಂಪಾಬಾಯಿ, ಶ್ರೀ ತೀ. ನ. ಶ್ರೀಕಂಠಯ್ಯನವರು ಮತ್ತು ಶ್ರೀ ಡಿ. ಎಲ್. ನರಸಿಂಹಾಚಾರ್ ಅವರುಗಳು ಬರುತ್ತಿದ್ದರು. ಸಂಗೀತ ಸಾಹಿತ್ಯಗಳ ಗುರುಗಳ ಹೆಸರನ್ನು ಕೇಳಿದಾಗಲೇ ಈಕೆಗೆ ಯಾವ ಬಗೆಯ ವೈದುಷ್ಯವಿದೆಯೆನ್ನುವುದು ಸ್ಪಷ್ಟವಾಗುತ್ತದೆ. ಇವರು ಗದುಗಿನ ಭಾರತ, ಜೈಮಿನಿ ಭಾರತ, ರಾಜಶೇಖರ ವಿಳಾಸ ಮತ್ತು ನಾಗವರ್ಮನ ಕಾದಂಬರೀ ಕಾವ್ಯಗಳನ್ನು ವಾಚನ ಮಾಡುತ್ತಿದ್ದರು. ಇವರು ೧೯೪೫ ರಿಂದ ೫೦ರ ವರೆಗೆ ನಾಡಿನ ಅನೇಕ ಕರ್ನಾಟಕ ಸಂಘಗಳ ಆಹ್ವಾನಗಳನ್ನು ಮನ್ನಿಸಿ ಕಾವ್ಯ ವಾಚನ ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿರುವರು. ಗುಲ್ಬರ್ಗಾ ಸಾಹಿತ್ಯ ಸಮ್ಮೇಳನಕ್ಕೆ ಆಹ್ವಾನಿತರಾಗಿ ಹೋಗಿ ಕಾವ್ಯವಾಚನ ಮಾಡಿರುವರು. ಚಿತ್ರದುರ್ಗದಲ್ಲಿ ಬಸವ ಜಯಂತಿ ಉತ್ಸವಗಳಲ್ಲಿ ಮುರುಘಾ ಮಠದಲ್ಲಿ ಪ್ರಭುಲಿಂಗ ಲೀಲೆಯನ್ನು ವಾಚನಮಾಡಿ 'ಕಾವ್ಯವಾಚನ ಪ್ರವೀಣೆ' ಎಂಬ ಪ್ರಶಸ್ತಿಯನ್ನು ಪಡೆದಿರುವರು. ಇವರು ೧೯೫೦ರಲ್ಲಿ ಮೈಸೂರು 'ಆಕಾಶವಾಣಿ'ಯ ಕೇಂದ್ರದಲ್ಲಿ ಉದ್ಯೋಗಕ್ಕೆ ಸೇರಿ ಸಂಗೀತ ವಿಭಾಗದ ಅಸಿಸ್ಟೆಂಟ್ ಡೈರೆಕ್ಟರಾಗಿ ಬೆಂಗಳೂರು ಕೇಂದ್ರದಲ್ಲಿ ಸೇವೆಯನ್ನು ಸಲ್ಲಿಸಿ ಈಚೆಗೆ ನಿವೃತ್ತರಾಗಿರುವರು.

೭೯. ನಂ. ಅಶ್ವತ್ಥನಾರಾಯಣ

ಚಾಮರಾಜನಗರದಲ್ಲಿ ೩-೯-೧೯೧೭ರಲ್ಲಿ ಜನಿಸಿದರು. ತಂದೆ ಕೀರ್ತಿಶೇಷರಾದ ಗಮಕ ವಿದ್ವಾನ್ ನಂಜುಂಡಯ್ಯನವರು. ತಾಯಿ ಶ್ರೀಮತಿ ಪುಟ್ಟನಂಜಮ್ಮನವರು. ಇವರ ವಿದ್ಯಾರ್ಹತೆ ಎಸ್. ಎಸ್. ಎಲ್. ಸಿ., ವಿ. ಟಿ. ಸಿ., ಸಂಕ್ಷಿಪ್ತ ಬಿ. ಇಡಿ., ಕನ್ನಡ ಜಾಣ; ಮೈಸೂರು ಕನ್ನಡ ಪಂಡಿತ ಪರೀಕ್ಷೆ ಮತ್ತು ಗಮಕ ಪ್ರವೇಶ ಮತ್ತು ಪ್ರೌಢ ಪರೀಕ್ಷೆಗಳು ಆಗಿವೆ. ೩೫ ವರ್ಷಗಳ ಕಾಲ ಸರ್ಕಾರಿ ಶಾಲೆಗಳಲ್ಲಿ ಕನ್ನಡ ಬೋಧಕರಾಗಿದ್ದು ನಿವೃತ್ತರಾಗಿದ್ದಾರೆ. ಇವರಿಗೆ ಸಂಗೀತದ ಪರಿಚಯವೂ ಸಾಕಷ್ಟಿದೆ. ವರ್ಣ, ಕೃತಿ, ಕೀರ್ತನೆಗಳನ್ನು ಹಾಡಬಲ್ಲರು. ವಿ.ಟಿ.ಸಿ. ವ್ಯಾಸಂಗದಲ್ಲಿ ಸಂಗೀತವನ್ನು ಐಚ್ಛಿಕವಾಗಿ ಆರಿಸಿಕೊಂಡಿದ್ದರು. ಬೆಳಕವಾಡಿ ಶ್ರೀನಿವಾಸಯ್ಯಂಗಾರ್ಯರು ಇವರ ಸಂಗೀತದ ಗುರುಗಳು. ಕನ್ನಡ ಸಾಹಿತ್ಯದಲ್ಲಿ ತುಂಬಾ ಅಭಿರುಚಿಯಿದೆ. ಅನೇಕ ಕಾವ್ಯಗಳು ಇವರಿಗೆ ಮುಖೋದ್ಗತವಾಗಿವೆ. ಕಾವ್ಯಗಳಿಗೆ ನಿರರ್ಗಳವಾಗಿ ವ್ಯಾಖ್ಯಾನ ಕೊಡುವ ಮತ್ತು ವಿಮರ್ಶಿಸುವ ಶಕ್ತಿಯನ್ನು ಪಡೆದಿರುತ್ತಾರೆ. ಕತೆ, ಕವಿತಾ ರಚನೆಯಲ್ಲಿ ಪರಿಶ್ರಮವಿದೆ. ವಿಮರ್ಶಾತ್ಮಕ

ಲೇಖನಗಳನ್ನೂ ಪ್ರಕಟಿಸಿರುತ್ತಾರೆ. ಇವರಿಗೆ ಚಿಕ್ಕಂದಿನಲ್ಲೇ ಗಮಕಕಲೆಯಲ್ಲಿ ಆಸ
ಮೂಡಿಬಂದಿತು. ಏಕೆಂದರೆ ಇವರ ತಂದೆಯವರೂ ಅಣ್ಣಂದಿರೂ ಗಮಕ ಕಲೆಯ
ಎತ್ತಿದ ಕೈ. ಉತ್ತಮ ಕಾವ್ಯಗಳ ಶ್ರವಣ ಸಂಸ್ಕಾರವೂ ಇವರಿಗಿದೆ. ಈ ಕಲೆ
ಕರಗತವಾಗಿ ಸಿದ್ಧಿಸಲು ಅನೇಕ ವರ್ಷ ಕಾಲ ಶ್ರದ್ಧೆಯಿಂದ ಅಭ್ಯಾಸಮಾಡಿದ
ಮೈಸೂರಿನಲ್ಲಿ ದಿವಂಗತ ಕೃಷ್ಣಗಿರಿ ಕೃಷ್ಣರಾಯರ 'ಕುಮಾರವ್ಯಾಸ ಗುರುಕು
ದಲ್ಲಿಯೂ ಬೆಂಗಳೂರಿನಲ್ಲಿ ಗಮಕಿ ರಾಘವೇಂದ್ರರಾಯರಲ್ಲಿಯೂ ಶಿಷ್ಯರಾಗಿದ್ದ
ದಿವಂಗತ ಗಮಕಿ ಕೃಷ್ಣರಾಯರೊಡನೆ ಸುತ್ತಾಡಿ, ಕಾವ್ಯವಾಚನವನ್ನು ನಡೆ
ಗೋವಿಂದಪೈಗಳೇ ಮುಂತಾದವರ ಪರಿಚಯ, ಕೃಪೆಗಳನ್ನು ಪಡೆದರು. ಮೈಸೂ
ಸರ್ಕಾರದ ಸಂಸ್ಕೃತಿ ಪ್ರಸಾರ ಇಲಾಖೆಯ ಆಶ್ರಯದಲ್ಲಿ ರಾಜ್ಯದ ಅನೇಕ ಸ್ಥ
ಗಳಲ್ಲಿ ಕಾವ್ಯವಾಚನ ನಡೆಸಿ ಕಲಾ ಸೇವೆ ಮಾಡಿರುವರು. ಪರಿಷತ್ತಿನ ಗಮ
ಶಿಕ್ಷಣ ತರಗತಿಗಳಲ್ಲಿ ಮೈಸೂರು, ಹಾಸನ, ದಾವಣಗೆರೆಗಳಲ್ಲಿ ೨೦ ವರ್ಷಗಳಿಂ
ಅಧ್ಯಾಪಕರಾಗಿ ಕೆಲಸ ಮಾಡಿದ್ದಾರೆ. ಮೈಸೂರು, ಬೆಂಗಳೂರು ಆಕಾಶವಾ
ಗಳಲ್ಲಿ ೧೦ ವರ್ಷಗಳ ಕಾಲ ಕಾರ್ಯಕ್ರಮವನ್ನು ನಡೆಸಿರುತ್ತಾರೆ. ಅನೇಕ ಕ
ಗಳಲ್ಲಿ ಕಾವ್ಯವಾಚನಮಾಡಿ ಕೀರ್ತಿಶಾಲಿಗಳಾಗಿರುವರು. ಕನ್ನಡ ಸಾಹಿತ
ಪರಿಷತ್ತಿನಲ್ಲಿ, ದರ್ಬಾರುಭಕ್ಷಿ ಶ್ರೀ ಹೆಚ್. ಎಲ್. ದೇವರಾಜೇ ಅರಸ್‌ರವ
ಬಂಗ್ಲೆಯಲ್ಲಿ ರಾಜಬಂಧುಗಳ ಸಮ್ಮುಖದಲ್ಲಿ, 'ಸುಧರ್ಮ' ಮಂದಿರದಲ್ಲಿ ಪ್ರಪಂ
ವಿಶ್ವವಿದ್ಯಾನಿಲಯ ಗೋಷ್ಠಿಯಲ್ಲಿ ದಿ. ಶ್ರೀ ಡಿ. ಎಲ್. ಎನ್.ರವರ ಇಂಗ್ಲೀಷ
ವ್ಯಾಖ್ಯಾನದೊಂದಿಗೆ, ಮಂಜೇಶ್ವರದಲ್ಲಿ, ಪೂನಾದಲ್ಲಿ ಬೇಂದ್ರೆಯವರ ಅಧ್ಯಕ್ಷತ
ಯಲ್ಲಿ, ಕೋಳಿವಾಡದಲ್ಲಿ, ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗ
ಆಶ್ರಯದಲ್ಲಿ ಅನೇಕ ಸ್ಥಳಗಳಲ್ಲಿ ಇವರ ಕಾವ್ಯವಾಚನ ಕಾರ್ಯಕ್ರಮಗಳ
ಯಶಸ್ವಿಯಾಗಿ ನಡೆದಿವೆ. ಗುಬ್ಬಿ ಚಿದಂಬರಾಶ್ರಮದ ಸ್ವಾಮಿಗಳವರ ದಿವ್ಯಹಸ್ತ
ದಿಂದ 'ಗಮಕ ವಿದ್ವಾನ್' ಪ್ರಶಸ್ತಿಯನ್ನು, ಇತರ ಅನೇಕ ಕಡೆಗಳಲ್ಲಿ ಗೌರವ
ಸಂಭಾವನೆ, ಪ್ರಶಸ್ತಿ ಪತ್ರಗಳನ್ನು ಪಡೆದಿರುತ್ತಾರೆ. ಶ್ರೀಯುತರು ಗೋವಿಂದ
ಪೈಗಳನ್ನು ಕುರಿತು ಕೆಲವು ನೆನಪುಗಳು, ಕುಮಾರವ್ಯಾಸ ಭಾರತದಲ್ಲಿ ಕೆಲವ
ರಮಣೀಯ ಸನ್ನಿವೇಶಗಳು, ಭಾಮಿನಿ ಷಟ್ಪದಿಯ ಭಜಗೋವಿಂದ ಸ್ತೋತ್ರ
ಪ್ರಾರ್ಥನೆ (ಕವಿತೆ), ಭಕ್ತಿ ಭಾಂಡಾರಿ ಬಸವಣ್ಣನವರು, ಶ್ರೀ ಶಂಕರ ಭಗವತ್ಪಾ
ದರು ಮುಂತಾದ ಕೆಲವು ಲೇಖನಗಳನ್ನೂ ಬರೆದಿದ್ದಾರೆ.

೮೦. ಗುಡಿಬಂಡೆಯ ಶ್ರೀ ಬಿ. ಎಸ್. ರಾಮಾಚಾರ್

ಇವರು ೧೯೧೭ ನೇ ಇಸವಿಯಲ್ಲಿ ಗುಡಿಬಂಡೆ ಗ್ರಾಮದಲ್ಲಿ ಜನಿಸಿದರು. ೧೯೩೮ ನೆಯ ಇಸವಿಯಲ್ಲಿ ಇವರ ಕಾವ್ಯವಾಚನ ಕುವೆಂಪುರವರ "ದೋಣಿ ಸಾಗಲಿ" ಎಂಬ ಗೀತೆಯನ್ನು ಹಾಡುವುದರ ಮೂಲಕ ಪ್ರಾರಂಭವಾಯಿತು. ಇವರ ತಾಯಿ ತಂದೆ, ಅಜ್ಜಿ ಎಲ್ಲಾ ಚೆನ್ನಾಗಿ ಹಾಡುತ್ತಿದ್ದರು. ಕಳೆದ ಮುವತ್ತು ವರುಷಗಳಿಂದ ಭಾವಗೀತೆ, ದೇವರನಾಮ, ಜಾನಪದಗೀತೆ, ಭಾರತ ರಾಮಾಯಣಗಳನ್ನು ಹಾಡುತ್ತ ಬಂದಿರುತ್ತಾರೆ. ಸಂಗೀತದಲ್ಲಿ ಸ್ವರ, ರಾಗ, ತಾಳ ಜ್ಞಾನವನ್ನು ಪಡೆದಿರುತ್ತಾರೆ. ಚೆನ್ನಾಗಿ ಪಿಟೀಲು ಬಾರಿಸುತ್ತಿದ್ದರು, ತ್ಯಾಗರಾಜರ ಕೀರ್ತನೆಗಳನ್ನು ಚೆನ್ನಾಗಿ ಹಾಡುತ್ತಿದ್ದರು. ಆದರೆ ದ. ರಾ. ಬೇಂದ್ರೆಯವರ ಪ್ರಭಾವದಿಂದ ಇವರ ಒಲವು ಕಾವ್ಯಗಾಯನದತ್ತ ಹರಿಯಿತು. ಇದಕ್ಕೆ ಸಿದ್ಧವನಹಳ್ಳಿ ಕೃಷ್ಣಶರ್ಮರ ಬೆಂಬಲವೂ ಸಿಕ್ಕಿತು. ಹತ್ತಾರು ಸಾಹಿತ್ಯ ಮೇಳ, ಶಾಲಾ ಕಾಲೇಜುಗಳಲ್ಲಿ ಭಾಗವಹಿಸಿರುತ್ತಾರೆ. ಮಹಾ ಕಾವ್ಯಗಳನ್ನು ತಮ್ಮದೇ ಆದ ಶೈಲಿಯಲ್ಲಿ ಗಮಕಿಸುವ ಗಮ್ಮತ್ತು ಇವರಿಗಿದೆ. ಅನೇಕ ಭಾಷೆ, ಸಾಹಿತ್ಯಗಳ ಪರಿಚಯವಿದ್ದು ಹೊರ ಪ್ರಾಂತ್ಯಗಳಲ್ಲಿಯೂ ಅವರವರ ಸಾಹಿತ್ಯದಿಂದಲೇ ಆಯ್ದ ಭಾಗಗಳನ್ನು ಉತ್ತಮವಾಗಿ ವಾಚನ ಮಾಡಬಲ್ಲರು. ಜನಪದಗೀತೆ, ಭಾವಗೀತೆ, ವಚನಗಳು, ದಾಸರ ಪದ, ಭಾರತ, ರಾಮಾಯಣ, ಕೀರ್ತನೆ, ಭಜನೆ, ನವ್ಯಕಾವ್ಯ ಮುಂತಾದ ವೈವಿಧ್ಯಮಯ ಕಾರ್ಯಕ್ರಮ ಇವರದು. ಕವಿತಾಸಾಮರ್ಥ್ಯವೂ ಇವರಲ್ಲಿದೆ. 'ಬಿಸ್ರಾ' ಇವರ ಕಾವ್ಯನಾಮ. ಮೈಸೂರು ಸರ್ಕಾರದ ಸಂಸ್ಕೃತಿ ಪ್ರಸಾರದ ಅಂಗವಾಗಿ ನಾಡಿನಲ್ಲೆಲ್ಲಾ ಅಡ್ಡಾಡಿರುವರು. ದೇಶಭಕ್ತಿಗೀತೆಗಳು, ಅಣಕವಾಡುಗಳನ್ನು ಕಟ್ಟಿರುವರು. 'ಸ್ವಾತಂತ್ರ್ಯ ಕಿನ್ನರಿ', 'ಮಧುಚಂದನ' ಮುಂತಾದ ಪುಸ್ತಕಗಳನ್ನು ಪ್ರಕಾಶಿಸಿರುತ್ತಾರೆ. ಗೀತ ರೂಪಕಗಳನ್ನು ಹಾಡಿ, ಆಡಿ ತೋರಿಸಿದ್ದಾರೆ. ಉದ್ದಾಮ ಪಂಡಿತರಾಗಿದ್ದ ಎಂ. ಆರ್. ಶ್ರೀ., ತೀ.ನಂ.ಶ್ರೀ ಮುಂತಾದವರ ಸಲಹೆಯನ್ನು ಪಡೆಯುವ ಸೌಭಾಗ್ಯ ಇವರದಾಗಿತ್ತು.

೮೧. ಟಿ. ಲಕ್ಷ್ಮಣರಾಯರು, ಬೆಂಗಳೂರು

ಇವರು ೧೯೧೭ ರಲ್ಲಿ ಚಿಂತಾಮಣಿಯಲ್ಲಿ ಜನ್ಮ ತಾಳಿದರು. ಇವರ ಸಾಮಾನ್ಯ ವಿದ್ಯಾಭ್ಯಾಸ ಲೋಯರ್ ಸೆಕೆಂಡರಿ ಪರೀಕ್ಷೆ. ೧೯೪೦ ರಿಂದ ಕೈಕಸುಬಿ

ನಿಂದ ಜೀವನ ನಿರ್ವಹಣೆ ಮಾಡುತ್ತಿರುವರು. ಉಪಾಧ್ಯಾಯ ವೃತ್ತಿಯಲ್ಲಿದ್ದ ಇವರ ತಂದೆಯವರಿಗೆ ಸಂಗೀತದಲ್ಲಿ ಬಹಳ ಪ್ರೇಮವಿದ್ದಿತು. ಅವರ ಮಕ್ಕಳಾ ಇವರಿಗೂ ಬಾಲ್ಯದಿಂದ ಸಂಗೀತ ಸಾಹಿತ್ಯ ಮುಂತಾದುವುಗಳಲ್ಲಿ ಬಹು ಆಸಕ್ತಿ ಯಿದ್ದಿತು. ಈಗ ಬೆಂಗಳೂರಿಗೆ ಬಂದು ಖಾದಿ ಸಂಸ್ಥೆಯಲ್ಲಿ ಕೆಲಸಮಾಡುತ್ತಿರ ವರು. ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾವ್‌ರವರು ಕಾವ್ಯವಾಚ ಮಾಡಿದುದನ್ನು ಕೇಳಿ ಗಮಕ ಕಲೆಯ ಕಡೆಗೆ ಇವರ ಮನಸೆಳೆಯಿತು. ಶ್ರೀಯು ಕಳಲೆ ಸಂಪತ್ಕುಮಾರಾಚಾರ್‌ರವರು ಇವರ ಗಮಕ ಕಲೆಯ ಕಲಿಕೆಗೆ ಗುರುಗಳು ಗಮಕಿ ಶ್ರೇಷ್ಠರಾದ ರಾಮಾರಾಧ್ಯರು, ಅನ್ನಪೂರ್ಣಮ್ಮ ರಘುಪತಿಶಾಸ್ತ್ರಿಗಳ ಇವರ ವಾಚನಗಳಿಂದ ಮನಸ್ಸು ಸ್ಫೂರ್ತಿಗೊಂಡಿತು. ಕಾವ್ಯ ಪ್ರಚಾರಮಂಡ ಯಲ್ಲಿ ನಡೆಯುತ್ತಿದ್ದ ಗಮಕ ತರಗತಿಗೆ ಸೇರಿ, ಶ್ರೀ ಪದ್ಮನಾಭರಾಯರ ಶಿಷ್ಯರಾಗಿ ಮಿಕ್ಕ ೧೧ ಜನ ಶಿಷ್ಯರೂ ಇವರೂ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಬೆಂಗಳೂರ ನಗರ, ಚಿಕ್ಕಬಳ್ಳಾಪುರ, ಕೋಲಾರದ ಅನೇಕ ಸ್ಥಳಗಳಲ್ಲಿ, ಶ್ರೀರಾಮಮಂದಿ ದಲ್ಲಿ, ಮಲ್ಲೇಶ್ವರದ ಸಿದ್ಧಾಶ್ರಮದಲ್ಲಿ, ಶ್ರೀರಾಮಚೈತನ್ಯಸ್ವಾಮಿಯವರ ಸನ್ನಿಧಿ ಯಲ್ಲಿ ಕಾವ್ಯವಾಚನಗಳನ್ನು ನಡೆಸಿ ಭಕ್ತಾದಿಗಳ ಆದರಕ್ಕೆ, ಪ್ರಶಂಸೆಗೆ ಪಾತ್ರ ರಾಗಿರುವರು.

೮೨. ಬಿ. ನರಸಿಂಗಶೆಟ್ಟಿ, ಮಂಡ್ಯ

ಇವರು ೧೩-೪-೧೯೧೮ರಲ್ಲಿ ಮದ್ದೂರು ತಾಲ್ಲೂಕು ಬಿದಿರಕೋಟೆ ಗ್ರಾಮ ದಲ್ಲಿ ಜನಿಸಿದರು. ಇವರ ತಂದೆ ಶ್ರೀ ಚೆನ್ನಸೆಟ್ಟರು. ಇವರು ಕನ್ನಡ ಲೋಯರ್ ಸೆಕೆಂಡರಿಯನ್ನು ಮುಗಿಸಿಕೊಂಡು ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯ ರಾಗಿರುವರು. ಇವರ ಗಮಕಾಭ್ಯಾಸವು ಪ್ರಾರಂಭದಲ್ಲಿ ಕೌಡ್ಲೆ ಗ್ರಾಮದ ನಾರಾಯಣಶೆಟ್ಟರಲ್ಲಿ ನಡೆಯಿತು. ಕೀರ್ತನೆಯವರೆಗೂ ಸಂಗೀತ ಪಾಠಗಳು ನಡೆದು ಸೀನಿಯರ್ ಸಂಗೀತ ಪರೀಕ್ಷೆವರೆಗೆ ಅಭ್ಯಾಸ ಮಾಡಿರುತ್ತಾರೆ. ಸುಮಾರು ೧೫ ವರ್ಷಗಳಿಂದಲೂ ಕಾವ್ಯವಾಚನವನ್ನು ನಡೆಸುತ್ತಿರುವರು. ಇವರಿಗೆ ನಾಟಕ ಗಳನ್ನು ಆಡುವುದರಲ್ಲಿಯೂ ಪಾತ್ರವಹಿಸುವುದರಲ್ಲಿಯೂ ಪರಿಶ್ರಮವುಂಟು.

೮೩. ಪಿ. ಗುಂಡದಪ್ಪನವರು

ಇವರು ೧೧-೮-೧೯೧೮ರಲ್ಲಿ ಬೆಳಲಗೆರೆ ಗ್ರಾಮ (ಬಸವಾಪಟ್ಟಣ ತಾಲ್ಲೂಕು) ದಲ್ಲಿ ಜನಿಸಿದರು. ಇವರ ತಂದೆ ಶ್ರೀ ಪುಟ್ಟಬಸಪ್ಪನವರು, ತಾಯಿ ಚನ್ನಬಸಮ್ಮ

ನವರು. ಇವರು ಎಸ್.ಎಸ್.ಎಲ್.ಸಿ. ಮಾಡಿಕೊಂಡು ಹಿಂದಿಯಲ್ಲಿ ರಾಷ್ಟ್ರಭಾಷಾ ಮತ್ತು ಶಿವಾನುಭವದ 'ಭೂಷಣ' ಪರೀಕ್ಷೆಗಳಲ್ಲಿಯೂ ಉತ್ತೀರ್ಣರಾಗಿ ಶಾಲಾ ಉಪಾಧ್ಯಾಯರಾಗಿರುವರು. ಇವರಿಗೆ ಹೊಳೆಲಿಂಗದ ಹಳ್ಳಿಯ ವಿದ್ವಾಂಸರಾಗಿದ್ದ ವೀರಸಂಗಯ್ಯನವರಿಂದ ಗಮಕ ಮತ್ತು ಸಂಗೀತದ ಪಾಠವಾಗಿದ್ದಿತು. ವಿದ್ವಾನ್ ಕರಿಬಸಪ್ಪಶಾಸ್ತ್ರಿಗಳವರಲ್ಲಿ ಛಂದಸ್ಸು, ಸಾಹಿತ್ಯ ಮತ್ತು ಕಾವ್ಯವಾಚನಗಳನ್ನು ಕಲಿತರು. ಭಾರತ, ರಾಮಾಯಣ, ಪ್ರಭುಲಿಂಗಲೀಲೆ ಮುಂತಾದ ಷಟ್ಪದೀ ಕಾವ್ಯಗಳನ್ನೂ ರಾಜಶೇಖರ ವಿಳಾಸ, ವೃಷಭೇಂದ್ರ ವಿಜಯ, ಶಬರಶಂಕರ ವಿಲಾಸ ಮುಂತಾದ ಚಂಪೂ ಗ್ರಂಥಗಳನ್ನೂ ಹರಿಹರನ ರಗಳೆಗಳನ್ನೂ ವಾಚನ ಪ್ರವಚನ ಮಾಡುವರು. ಸಂಸ್ಕೃತಿ ಪ್ರಸಾರ ಇಲಾಖೆಯ ನಿರ್ದೇಶನದಂತೆ ಶಿವಮೊಗ್ಗಾ ಕರ್ನಾಟಕ ಸಂಘ, ಚಿಕ್ಕಮಗಳೂರು, ಚಿತ್ರದುರ್ಗ, ಬಳ್ಳಾರಿ ಮುಂತಾದೆಡೆಗಳಲ್ಲಿ ಕಾವ್ಯವಾಚನಗಳನ್ನು ಮಾಡಿರುವರು. ಇವರ ಕಾವ್ಯವಾಚನ ಪ್ರವಚನಾದಿಗಳು ಧಾರವಾಡ, ಚಿತ್ರದುರ್ಗ, ಗಿರಿಯಾಪುರ, ಹಾರನಹಳ್ಳಿ, ಹೊನ್ನಾಳಿ, ನ್ಯಾಮತಿ, ಜೆನ್ನಗಿರಿ ಮುಂತಾವೆಡೆಗಳಲ್ಲಿ ನಡೆಯುತ್ತಿರುತ್ತವೆ. ಶ್ರೀಶೈಲ ಜಗದ್ಗುರು ಮಠಾದೀಶರು "ಆಶುಕವಿತಾ ಕವಿಮಣಿ ಭೂಷಣ" ಎಂಬ ಬಿರುದನ್ನೂ ಹೊನ್ನಾಳಿ ಸಂಸ್ಥಾನದ ಮಠದ ಮೃತ್ಯುಂಜಯ ಮಹಾಸ್ವಾಮಿಗಳವರು ಮಠದ ಆಸ್ಥಾನ ವಿದ್ವಾನ್ ಮತ್ತು "ವಚನ ಪುರಾಣ ಪ್ರವಚನ ಪ್ರವೀಣ" ಎಂಬ ಬಿರುದನ್ನೂ ಇತ್ತು ಇವರನ್ನು ಮನ್ನಿಸಿರುವರು. ಇವರು ಹೊನ್ನಾಳಿ ಚನ್ನೇಶ್ವರ ಗಾನ ಕಲಾ ಸಂಘದ ಅಧ್ಯಕ್ಷರಾಗಿದ್ದುಕೊಂಡು ಗಮಕ ಸಂಗೀತ ಮತ್ತು ಸಾಹಿತ್ಯಗೋಷ್ಠಿಗಳನ್ನು ನಡೆಸುತ್ತಿರುವರು. ಇವರು ಅನೇಕ ಲಾವಣಿಗಳನ್ನೂ ಮತ್ತು "ಮುರುಘೆ ರಾಜೇಂದ್ರವಿಜಯ", "ಶ್ರೀ ಹೆಬ್ಬಾಳ ರುದ್ರಮುನೀಶ್ವರಸ್ವಾಮಿ ಚರಿತಂ" ಮುಂತಾದ ಗದ್ಯ ಗ್ರಂಥಗಳನ್ನೂ, 'ಸಿಂಗಲ್ ಟೀಚರ್' ಎಂಬ ನಾಟಕವನ್ನೂ ಬರೆದಿರುವರು.

೮೪. ಸರೋಜಮ್ಮ ಅನಂತರಾಮಯ್ಯ

ಇವರು ೧೯೧೮ನೇ ಅಕ್ಟೋಬರ್ ಮಾಹೆ ೧೮ನೇ ತಾರೀಖು ತುಮಕೂರಿನಲ್ಲಿ ಜನಿಸಿದರು. ತಂದೆ ಶ್ರೀ ಸೀತಾರಾಮಯ್ಯ, ತಾಯಿ ಶ್ರೀಮತಿ ಗೌರಮ್ಮನವರು. ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದಾರೆ. ಸಂಗೀತದ ಪರಿಚಯವಿದೆ. ವೀಣೆ ಕೃಷ್ಣಯ್ಯಂಗಾರ್ಯರು, ಹಾರ್ಮೋನಿಯಂ ಶ್ರೀನಿವಾಸ ರಾಯರು, ಪಿಟೀಲು ಬಿ. ಕೇಶವಮೂರ್ತಿಗಳು ಇವರಲ್ಲಿ ೧೧ ವರ್ಷಕಾಲ ಅಭ್ಯಾಸ

ಮಾಡಿರುತ್ತಾರೆ. ಕನ್ನಡ ಸಾಹಿತ್ಯದಲ್ಲಿ ತಕ್ಕನುಷ್ಟಿಗೆ ಅಭಿರುಚಿಯಿದೆ. ಕಾವ್ಯ ವಾಚನಕ್ಕೆ ವ್ಯಾಖ್ಯಾನ ಮಾಡಬಲ್ಲರು. ಕತೆ ಕವನಗಳನ್ನು ರಚಿಸಿ ಪ್ರಕಟಿಸಿರು ತ್ತಾರೆ. ೨೫ ವರ್ಷಗಳ ಹಿಂದೆ ಗಮಕ ಕಲಾವಿದೆ ಶ್ರೀಮತಿ ರಂಗನಾಯಕಮ್ಮನವ ರಲ್ಲಿ ಗಮಕ ಅಭ್ಯಾಸಮಾಡಿದರು. ಪ್ರೌಢ ವ್ಯಾಸಂಗವು ಶ್ರೀ ರಾಘವೇಂದ್ರರಾಯ ರಲ್ಲಿ ನಡೆಯಿತು. ಗದುಗಿನ ಭಾರತ, ಜೈಮಿನೀ ಭಾರತ, ಇವೆರಡೂ ಇವರಿಗೆ ಇಷ್ಟ ವಾದ ಕಾವ್ಯಗಳು. ಗಮಕ ಪ್ರೌಢವನ್ನು ಪ್ರಥಮ ದರ್ಜೆಯಲ್ಲಿ ಪಾಸು ಮಾಡಿರು ತ್ತಾರೆ. ಗಮಕ ಶಿಕ್ಷಣ ತರಗತಿಗಳನ್ನು ನಡೆಸಿರುತ್ತಾರೆ. ಬೆಂಗಳೂರು ಆಕಾಶವಾಣಿ ಯಲ್ಲಿ ಹತ್ತಾರು ಬಾರಿ ಕಾವ್ಯವಾಚನ ಮಾಡಿರುತ್ತಾರೆ. ಇದಲ್ಲದೆ ಸಾರ್ವಜನಿಕ ವಿದ್ಯಾಸಂಸ್ಥೆಗಳು, ರಾಮೋತ್ಸವ, ಸಾಹಿತ್ಯ ಸಂಘಗಳು, ಗುರುಮನೆಗಳಲ್ಲಿ ಕಾವ್ಯ ವಾಚನಮಾಡಿ ಗುರುಗಳ ಕೃಪೆಗೆ ಪಾತ್ರರಾಗಿರುತ್ತಾರೆ ಮತ್ತು ಜನಾನುರಾಗವನ್ನು ಸಂಪಾದಿಸಿರುತ್ತಾರೆ. ಇವರ ಗಮಕ ಕಲಾ ಸೇವೆಯನ್ನು ಮೆಚ್ಚಿ ತಿರುಪತಿ ಮಹಾ ಕೋಟಿ ಯಾಗಸಮಿತಿಯವರು ಇವರಿಗೆ "ಗಮಕ ವಿಶಾರದೆ" ಎಂಬ ಬಿರುದನ್ನು ದಯಪಾಲಿಸಿದ್ದಾರೆ.

೮೫. ಭಾಗವತ ನೀಲಾವರ ರಾಮಕೃಷ್ಣಯ್ಯ

ಇವರು ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ ತಾಲ್ಲೂಕು ನೀಲಾವರ ಗ್ರಾಮ ದಲ್ಲಿ ೧೯-೫-೧೯೧೯ರಂದು ಜನಿಸಿದರು. ಇವರ ತಂದೆ ಶ್ರೀ ಸೋಮೇಶಯ್ಯ ನವರು. ಇವರು ಎಂ. ಜಿ. ಎಂ. ಕಾಲೇಜಿನ ಯಕ್ಷಗಾನ ಕಲಾ ಕೇಂದ್ರದ ಭಾಗವತ ಶಿಕ್ಷಕರೂ ಮತ್ತು ಡಾ|| ಶಿವರಾಮ ಕಾರಂತರ ಯಕ್ಷರಂಗ, ಅಂತರರಾಷ್ಟ್ರೀಯ ಯಕ್ಷಗಾನ 'ಬ್ಯಾಲೆ' ಭಾಗವತರೂ ಆಗಿದ್ದಾರೆ. ಇವರು ತಮ್ಮ ಚಿಕ್ಕತಂದೆ ಭಾಗವತ ಶಿವರಾಮಯ್ಯನವರ ಶಿಷ್ಯರಾಗಿ ಯಕ್ಷಗಾನವನ್ನು ಕಲಿತು ಭಾಗವತರಾದರು. ಮದ್ದಳೆಗಾರರಾಗಿ ದಶಾವತಾರ ಮೇಳಗಳಲ್ಲಿ ೩೦ ವರ್ಷಕಾಲ ದುಡಿದಿರುವರು. ಇವರಿಂದ ಸಂಗೀತ, ಭಾಗವತಿಕೆ, ಮದ್ದಳೆಗಳ ಶಿಕ್ಷಣವನ್ನು ನೂರಾರು ಜನ ಶಿಷ್ಯರು ಪಡೆದಿರುವರು. ಬ್ರಹ್ಮಾವರ ಮತ್ತು ಉಡುಪಿಯ ಯಕ್ಷಗಾನ ಕೇಂದ್ರ ಗಳಲ್ಲಿ ಪ್ರಧಾನ ಶಿಕ್ಷಕರಾಗಿರುವರು. ಸುಮಾರು ೫೦ ರಾಗಗಳನ್ನು ಅಭ್ಯಾಸ ಮಾಡಿ ಹಾಡುಗಾರರಾಗಿರುವಂತೆಯೇ ಹಾರ್ಮೋನಿಯಂ, ತಬಲಾ ವಾದನಗಳನ್ನೂ ಅಭ್ಯಸಿಸಿರುತ್ತಾರೆ. ಭಾರತ, ರಾಮಾಯಣ, ದೇವತಾಸ್ತುತಿಗಳು, ಚೂರ್ಣಿಕೆ ಮುಂತಾದುವನ್ನು ಉತ್ಕೃಷ್ಟವಾಗಿ ಹಾಡಬಲ್ಲರು.

೮೭. ಎನ್. ಎಸ್. ರಾಮಸ್ವಾಮಿ ಅಯ್ಯರ್, ಬೆಂಗಳೂರು

ಇವರು ೬-೯-೧೯೧೯ರಲ್ಲಿ ಮೈಸೂರಿನಲ್ಲಿ ಜನಿಸಿದರು. ಇವರ ತಂದೆ ಶ್ರೀ ಎನ್. ಶ್ರೀಕಂಠಯ್ಯನವರು, ತಾಯಿ ಶ್ರೀಮತಿ ಲಕ್ಷಮ್ಮನವರು. ಇವರು ಎಂ.ಎ., ಬಿ.ಟಿ. ಪದವೀಧರರಾಗಿದ್ದು ಸಾಗರದ ಜೂನಿಯರ್ ಕಾಲೇಜಿನ ಪ್ರಿನ್ಸಿಪಾಲರಾಗಿದ್ದು ನಿವೃತ್ತರಾಗಿರುವರು. ಇವರಿಗೆ ಬಾಲ್ಯದಿಂದಲೂ ಕೇಳ್ಮೆಯುಬಲದಿಂದ ರಾಗ ಮಾರ್ಗದಲ್ಲಿ ಪದ್ಯಗಳನ್ನು ಹಾಡಿಕೊಳ್ಳುವ ಅಭ್ಯಾಸವಿತ್ತು. ಪ್ರೌಢಶಾಲೆಯ ವಿದ್ಯಾರ್ಥಿಯಾಗಿದ್ದಾಗ ಇವರ ಗುರುಗಳಾಗಿದ್ದ ಶ್ರೀ ಜಿ. ವೆಂಕಟಸುಬ್ಬಯ್ಯನವರು ಸಾಹಿತ್ಯಾಭ್ಯಾಸಕ್ಕೆ ಪ್ರೋತ್ಸಾಹವಿತ್ತು ಮಾರ್ಗದರ್ಶನ ಮಾಡಿದರು. ಶ್ರೀ ಕೃಷ್ಣಗಿರಿ ಕೃಷ್ಣರಾಯರು ಮತ್ತು ಶ್ರೀ ಕಳಲೆ ಸಂಪತ್ಕುಮಾರಾಚಾರ್ಯರ ವಾಚನಗಳನ್ನು ಕೇಳಿ ಕೇಳಿ ಆ ಮಾರ್ಗದಲ್ಲಿಯೇ ಕಾವ್ಯವಾಚನ ಮಾಡುವುದು ಮತ್ತು ಭಾವಗೀತೆಗಳನ್ನು ಹಾಡುವುದನ್ನು ಅಭ್ಯಾಸ ಮಾಡಿಕೊಂಡಿರುವರು. ಸಂಸ್ಕೃತಿ ಪ್ರಸಾರ ಇಲಾಖೆಯ ನಿರ್ದೇಶನದ ಮೇರೆಗೆ ೧೯೫೫-೫೬ರಲ್ಲಿ ರಾಮನಗರ ತಾಲ್ಲೂಕಿನ ಗ್ರಾಮಾಂತರ ಪ್ರದೇಶಗಳಲ್ಲಿ ಕಾವ್ಯವಾಚನಗಳನ್ನು ನಡೆಸಿರುವರು. ಕೊಪ್ಪ, ಶೃಂಗೇರಿ, ಗುಬ್ಬಿ, ಭದ್ರಾವತಿಗಳಲ್ಲಿ ಅಲ್ಲಿನ ತಮ್ಮ ಉದ್ಯೋಗಾವಧಿಯಲ್ಲಿ ಸತತವಾಗಿ ಕಾವ್ಯವಾಚನಗಳನ್ನು ನಡೆಸಿ ಶ್ರೋತೃಗಳ ಪ್ರಶಂಸೆಯನ್ನು ಪಡೆದರು. ೧೯೬೦ರಲ್ಲಿ ದೆಹಲಿಯ ಕರ್ಣಾಟಕ ಸಂಘ, ಭಾರತೀ ಸಂಘದಲ್ಲಿಯೂ ವಾಚನ ಕಾರ್ಯಕ್ರಮಗಳನ್ನು ನಡೆಸಿದುದೇ ಅಲ್ಲದೆ, ಅಲ್ಲಿನ ರಾಮಕೃಷ್ಣಾಶ್ರಮದಲ್ಲಿ ತಾವು ನಡೆಸಿದ ವಾಚನಕ್ಕೆ ಇಂಗ್ಲೀಷಿನಲ್ಲಿ ವ್ಯಾಖ್ಯಾನವನ್ನು ನಡೆಸಿ ಪ್ರಶಂಸೆಯನ್ನು ಪಡೆದಿರುವರು. ದೆಹಲಿಯಲ್ಲಿ ವಾಸಿಸುತ್ತಿರುವ ಇವರ ಗುರುಗಳಾದ ಶ್ರೀ ಕೆ. ವಿ. ರಾಘವಾಚಾರ್ಯರ ಮನೆಯಲ್ಲಿ ೧೯೬೬ನೇ ಫೆಬ್ರವರಿಯಲ್ಲಿ ವಿಶೇಷ ಆಹ್ವಾನದ ಮೇಲೆ ಆಗಮಿಸಿದ್ದ ಶ್ರೋತೃಗಳ ಸಮ್ಮುಖದಲ್ಲಿ ವಾಚನ ಮಾಡಿ ಪ್ರಶಂಸಿತರಾಗಿರುವರು. ಇವರು ಭದ್ರಾವತಿಯಲ್ಲಿ ಗಮಕ ತರಗತಿಗಳನ್ನು ನಡೆಸಿರುವರು. ಪರಿಷತ್ತಿನ ಗಮಕ ಪರೀಕ್ಷೆಗಳಿಗೆ ಪರೀಕ್ಷಕರಾಗಿ ಭದ್ರಾವತಿ, ಬೆಂಗಳೂರು, ದಾವಣಗೆರೆ ಮುಂತಾದ ಕಡೆ ಸೇವೆ ಸಲ್ಲಿಸಿರುವರು. ರನ್ನ ಕವಿಯ ಶತಮಾನೋತ್ಸವ ಸಂದರ್ಭದಲ್ಲಿ ಮಹಾರಾಜ ಕಾಲೇಜು ನಡೆಸಿದ ವಾಚನ ಸ್ಪರ್ಧೆಯಲ್ಲಿ ಶ್ರೀ ಸೇಡಿಯಾಪು ಕೃಷ್ಣಭಟ್ಟರ ಅಧ್ಯಕ್ಷತೆಯಲ್ಲಿ ಅಜಿತನಾಥ ಪುರಾಣವನ್ನು ಮೆಚ್ಚಿಗೆಯಾಗಿ ಪಡೆದಿರುವರು. ಷಟ್ಪದೀ ಕಾವ್ಯಗಳು ಮಾತ್ರವಲ್ಲದೆ ಪ್ರೌಢ ಚಂಪೂ ಕಾವ್ಯಗಳನ್ನೂ ವಾಚನ ಮಾಡಬಲ್ಲರು.

೮೭. ಹೆಚ್. ಕೆ. ರಾಮಸ್ವಾಮಿಯವರು, ತಿಪಟೂರು

ಇವರು ೨-೧೧-೧೯೩೨ರಲ್ಲಿ ತಿಪಟೂರು ತಾಲ್ಲೂಕು ಹೀಚನೂರಿನಲ್ಲಿ ಜ
ಸಿದರು. ಇವರ ತಂದೆ ಕೃಷ್ಣಪ್ಪನವರು, ತಾಯಿ ಶ್ರೀಮತಿ ನಾಗಮ್ಮನವರು. ಇವ
ಎಸ್. ಎಸ್. ಎಲ್. ಸಿ. ಮತ್ತು ಅಕೌಂಟ್ಸ್ ಪರೀಕ್ಷೆಗಳನ್ನು ಮಾಡಿಕೊಂ
ಸದ್ಯದಲ್ಲಿ ತಿಪಟೂರಿನ ಕಲ್ಪತರು ಕಾಲೇಜಿನಲ್ಲಿ ಉದ್ಯೋಗದಲ್ಲಿರುವರು. ಇ
ತಾಯಿಯವರು ಸಂಗೀತ ಬಲ್ಲವರಾಗಿದ್ದು ಹಾಡುಗಳನ್ನು ಹಾಡುತ್ತಿದ್ದ ಪ್ರಭಾ
ಇವರ ಮೇಲೆ ಅತಿಶಯವಾಗಿತ್ತು. ಬಾಲ್ಯದಲ್ಲಿಯೇ ಸಂಗೀತ ವಿದ್ವಾಂಸರಾ
ಹೆಚ್. ಕೃಷ್ಣಶಾಸ್ತ್ರಿಗಳವರು ಇವರಿಗೆ ಸಂಗೀತ ಪಾಠವನ್ನು ಕಲಿಸಿದರು. ಇವ
ಉತ್ತಮ ಶಾರೀರವಿದ್ದು ಪಠ್ಯಪದ್ಯಗಳನ್ನು ರಾಗವಾಗಿ ಹಾಡಬಲ್ಲವರಾಗಿ ಶಾಲೆ
ಸಂತೋಷ ಕೂಟ ಮತ್ತು ಉತ್ಸವಗಳಲ್ಲಿ ಪ್ರಾರ್ಥನೆ ಮತ್ತು ಪದ್ಯಗಳ ವಾಚ
ವನ್ನು ಮಾಡಿ ಮೆಚ್ಚಿಕೆಯನ್ನು ಪಡೆಯುತ್ತಿದ್ದರು. ೧೯೪೩ರಲ್ಲಿ ತಿಪಟೂರ
ಪ್ರೌಢ ಶಾಲೆಯಲ್ಲಿ ಒಂದು ಸಲ ಕಳಲೆ ಸಂಪತ್ಕುಮಾರಾಚಾರ್ಯರ ಕಾವ್ಯವಾಚ
ವನ್ನು ಕೇಳಿ ಆಕರ್ಷಿತರಾದರು. ಮುಂದೆ ಶ್ರೀ ಎಂ. ಎಸ್. ಚಂದ್ರಶೇಖರಯ್ಯನ
ರಲ್ಲಿ ಗಮಕವನ್ನು ಅಭ್ಯಾಸಮಾಡಿದರು. ಗಮಕ ಪರೀಕ್ಷೆಯಲ್ಲಿ ದ್ವಿತೀಯ ಶ್ರೇ
ಯಲ್ಲಿ ಉತ್ತೀರ್ಣರಾದರು. ಗಮಕಿ ರಾಘವೇಂದ್ರರಾಯರು ಮತ್ತು ಕೃಷ್ಣಗಿ
ಕೃಷ್ಣರಾಯರು ಇವರಿಗೆ ಕಾವ್ಯವಾಚನ ಕಲೆಯಲ್ಲಿ ಮಾರ್ಗದರ್ಶನವನ್ನು ನೀಡಿ
ವರು. ಶ್ರೀ ಎಸ್. ಪ್ರಹ್ಲಾದರಾಯರು ಎಂ.ಎ., ಮತ್ತು ಶ್ರೀ ಬಿ. ಕೆ. ತಿ
ರಾಮಯ್ಯನವರು ಎಂ.ಎ., ಇವರಲ್ಲಿ ಸಾಹಿತ್ಯವನ್ನು ಅಭ್ಯಸಿಸಿರುವರು. ಇವ
ಕಾವ್ಯವಾಚನ ಕಾರ್ಯಕ್ರಮಗಳು 'ಆಕಾಶವಾಣಿಯ' ಹೈದರಾಬಾದು, ಬೆಂಗಳೂ
ಮತ್ತು ಮೈಸೂರು ಕೇಂದ್ರಗಳಿಂದ ಪ್ರಸಾರವಾಗಿವೆ. ಸರ್ಕಾರದ ಸಂಸ್ಕೃತಿ ಪ್ರಸಾ
ಯೋಜನೆಯಲ್ಲಿಯೂ ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗ ಆಶ್ರ
ದಲ್ಲಿಯೂ ಸುಮಾರು ೨೦ ವರ್ಷಕ್ಕೂ ಮೀರಿ ಗಮಕ ಕಲೆಗೆ ಸೇವೆ ಸ
ಸಿರುವರು. ತಿಪಟೂರಿನಲ್ಲಿ ೮ ವರ್ಷಗಳಿಂದಲೂ ಚಿಕ್ಕಮಗಳೂರಿನಲ್ಲಿ ಸುಮಾರು
ವರ್ಷಗಳ ಕಾಲವೂ ಗಮಕ ತರಗತಿಗಳನ್ನು ನಡಸಿರುವರು. ಅಲ್ಲದೆ ಗಮಕ ಕಲ
ರಾಧನೆಯ ಮಹೋತ್ಸವಗಳನ್ನು ನಡಸುತ್ತಿರುವರು. ಸಿ. ಕೆ. ವೆಂಕಟರಾಮಯ
ನವರು, ಪ್ರಾಧ್ಯಾಪಕರುಗಳಾದ ತೀ. ನಂ. ಶ್ರೀ, ಎಸ್.ವಿ. ರಂಗಣ್ಣ, ಜಿ. ವೆಂಕ
ಸುಬ್ಬಯ್ಯ ಮತ್ತು ಗಮಕಿ ರಾಘವೇಂದ್ರರಾಯರು, ಜಯರಾಯರು, ನ
ಅಶ್ವತ್ಥನಾರಾಯಣರು, ಬಿ. ಎಸ್. ಎಸ್. ಕೌಶಿಕ್‌ರವರು, ಸಾಲಿಗ್ರಾ

ಶ್ರೀಕಂಠಶಾಸ್ತ್ರಿಗಳು, ಲಕ್ಷ್ಮೀನರಸಿಂಹಶಾಸ್ತ್ರಿಗಳು ಮತ್ತು ಶ್ರೀಮತಿ ಗೌರಮ್ಮ ನಾಗರಾಜ್ ಮುಂತಾದವರು ಇವರ ಗಮಕ ಕಲಾಸೇವೆಯನ್ನು ಕಂಡು, ಮೆಚ್ಚಿ, ಪ್ರೋತ್ಸಾಹಿಸಿರುವರು.

೮೮. ಹೋ. ಲೀ. ಸಂಗಯ್ಯನವರು, ಹೊಳಲು, ಮಂಡ್ಯ ಜಿಲ್ಲೆ

ಇವರು ೧೯೩೦ರಲ್ಲಿ ಮಂಡ್ಯ ತಾಲ್ಲೂಕು ಹೊಳಲು ಗ್ರಾಮದಲ್ಲಿ ಜನಿಸಿದರು. ಇವರು ಹೈಯರ್ ಸೆಕೆಂಡರಿ ತರಗತಿಯವರೆಗೆ ವ್ಯಾಸಂಗ ಮಾಡಿ ಸ್ವಗ್ರಾಮದಲ್ಲಿ ಶಾನುಭೋಗರಾಗಿದ್ದು ಈಗ ಗ್ರಾಮದ ಲೆಕ್ಕಾಧಿಕಾರಿಯಾಗಿರುವರು. ಇವರ ತಂದೆಯವರು ಗದುಗಿನ ಭಾರತ, ತೊರವೆ ರಾಮಾಯಣ ಮತ್ತು ಜೈಮಿನೀ ಭಾರತಗಳನ್ನು ವಾಚನ ಮಾಡುತ್ತಿದ್ದರು. ಅವರ ಸಂಗಡ ವ್ಯಾಖ್ಯಾನಕ್ಕೆ ಕೂಡುತ್ತಿದ್ದ ಶ್ರೀ ಅಂಗಡಿ ಅಣ್ಣಯ್ಯಗೌಡರು ಇವರಿಗೆ ಗಮಕದ ಗುರುಗಳು. ಇವರು ೧೯೫೪ರಿಂದಲೂ ಕಾವ್ಯವಾಚನವನ್ನು ತಮ್ಮ ಮತ್ತು ಸುತ್ತಮುತ್ತಲಿನ ಗ್ರಾಮಗಳಲ್ಲಿ ಮಾಡುತ್ತಿರುವರು. ಇವರಲ್ಲಿಯೇ ಕಾವ್ಯವಾಚನವನ್ನು ಅಭ್ಯಾಸಮಾಡಿದ ಅರ್ಚಕ ಗಂಗಸ್ವಾಮಿಯವರು ಇವರೊಡನೆ ವಾಚನವ್ಯಾಖ್ಯಾನಗಳಲ್ಲಿ ಸಹಕರಿಸುತ್ತಿರುವರು. ಇವರು ಸರ್ಕಾರದ ಸಾಹಿತ್ಯ ಸಂಸ್ಕೃತಿ ಪ್ರಚಾರದ ಇಲಾಖೆಯ ಆಶ್ರಯದಲ್ಲಿ ಅನೇಕ ಕಡೆಗಳಲ್ಲಿ ಕಾವ್ಯವಾಚನ ಕಾರ್ಯಕ್ರಮವನ್ನು ನಡೆಸಿರುವರು.

೮೯. ಮಂಡಿಕಲ್ ಅಶ್ವತ್ಥನಾರಾಯಣರಾಯರು

ಇವರು ೯-೫-೧೯೩೦ರಲ್ಲಿ ಜನಿಸಿದರು. ಇವರ ತಂದೆ ಸುಬ್ಬರಾಯರು, ತಾಯಿ ಶೇಷಮಾಂಬ. ಇವರ ಜನ್ಮಸ್ಥಳ ಕೋಲಾರ ಜಿಲ್ಲಾ ಚಿಕ್ಕಬಳ್ಳಾಪುರದ ತಾಲ್ಲೂಕಿನ ಮಂಡಿಕಲ್ಲು ಗ್ರಾಮ. "ಅನ್ನಿ ವಿದ್ಯಲಕು ವರಗಲ್ಲು ಮಂಡಿಕಲ್ಲು" ಎಂದು ಖ್ಯಾತಿ ಪೆತ್ತ ಈ ಗ್ರಾಮದಲ್ಲಿ ಸುಸಂಸ್ಕೃತ ವಂಶದಲ್ಲಿ ಇವರ ಜನನ. ವಿದ್ವಾಂಸರಿಂದ ಶೋಭಿತವಾದ ಮನೆತನ. ಸಾಹಿತ್ಯ ಲೋಕದಲ್ಲಿ ಬಹುಶ್ರುತವೆನಿಸಿದ ಮೇಘ ಪ್ರತಿ ಸಂದೇಶ ಕಾವ್ಯವನ್ನು ರಚಿಸಿದ ಆಸ್ಥಾನ ವಿದ್ವಾನ್ ಮಂಡಿಕಲ್ ರಾಮಾಶಾಸ್ತ್ರಿಗಳು ಈ ವಂಶಜರೇ. ಇವರಿಗೆ ಸಹಜವಾಗಿಯೇ ಕನ್ನಡ, ತೆಲುಗು ಮತ್ತು ಸಂಸ್ಕೃತ ಭಾಷೆಗಳಲ್ಲಿ ಪರಿಣತಿಯಿದೆ. ಇವರು ಮುಳಬಾಗಲ್ ತಾಲ್ಲೂಕು ಆವನೀ ಗ್ರಾಮದಲ್ಲಿ ಪ್ರಾಥಮಿಕ ಶಾಲಾಶಿಕ್ಷಕರಾಗಿರುವರು. ಇವರು

ಉತ್ತಮ ಗಮಕಿಗಳು, ಕೀರ್ತನಕಾರರು, ವ್ಯಾಖ್ಯಾತೃಗಳು, ನಾಟ್ಯನಾಟಕಗ
ಲ್ಲಿಯೂ ಸಮರ್ಥರು. ೧೯೫೭ರಲ್ಲಿ ಮಂಡ್ಯದಲ್ಲಿ ನಡೆದ ಶ್ರೀ ರಾಮಾಯಣದರ್ಶನ
ಮಹಾಕಾವ್ಯದ ವಾಚನ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನವನ್ನು ಕೀರ್ತಿಶೇಷರಾ
ಶ್ರೀ ಅ. ನ. ಕೃ.ರವರ ಅಮೃತಹಸ್ತದಿಂದ ಪಡೆದರು. ಇವರ ಕಾವ್ಯವಾಚನ ಶ್ರ
ರಾಗರಂಜನೆಯಿಂದ ಕೂಡಿ ಉತ್ಕೃಷ್ಟವೆನಿಸಿದೆ. ಇವರು ಪ್ರಸಿದ್ಧ ಲೇಖಕರ
ಮತ್ತು ಕವಿಗಳೂ ಆಗಿದ್ದಾರೆ. ಭಜಗೋವಿಂದ ಸ್ತೋತ್ರದ ವಿಶೇಷಾರ್ಥ
ವೇದಾಂತ ಡಿಂಡಿಮ, ಉಪದೇಶ ಪಂಚರತ್ನ ಮತ್ತು ಪಾತಂಜಲಿ ಯೋಗಸೂ
ಗಳ ಕನ್ನಡ ವಿವರಣೆ ಇವು ಅನುವಾದಿತ ಗ್ರಂಥಗಳು. ಅಭಯಬೋಧಾಮೃ
ಅಹಿಂಸೆಯ ಪುಷ್ಪ, ಗಾಂಧೀ ಸ್ತೋತ್ರಮಾಲಾ ಮತ್ತು ಸಿರಿಗನ್ನಡ ಭಾವಗೀ
ಗಳು ಸ್ವಂತಕೃತಿಗಳು. ಇವರ ಹರಿಕಥಾ ಪ್ರಸಂಗಗಳು ಹಾಗೂ ಕಾವ್ಯವಾಚ
ಕಾರ್ಯಕ್ರಮಗಳು ವಿಶೇಷವಾಗಿ ಜನಾದರಣೆಯನ್ನು ಪಡೆದಿವೆ.

೯೦. ಹೇರೂರು ನರಸಮ್ಮ ಸುಬ್ಬರಾವ್

ಇವರು ಶಿಕಾರೀಪುರದಲ್ಲಿ ೧೯೨೦ನೇ ನವಂಬರ್‌ನಲ್ಲಿ ಜನಿಸಿದರು. ಶ್ರೀ
ಹೆಚ್. ಎಂ. ಮಂಜಯ್ಯ ಮತ್ತು ಶ್ರೀಮತಿ ಸುಬ್ಬಮ್ಮನವರು ಇವರ ತಂದೆತಾಯಿ
ಯರು. ಲೋಯರ್ ಸೆಕೆಂಡರಿ ಆಗಿದೆ. ಸಂಗೀತದ ಪರಿಚಯವಿದೆ. ಕನ್ನ
ಸಾಹಿತ್ಯದಲ್ಲಿ ಅಭಿರುಚಿಯಿದೆ. ವ್ಯಾಖ್ಯಾನ ಮಾಡಬಲ್ಲರು. ಇವರಿಗೆ ಶ್ರೀ ದೇವುಡ
ನರಸಿಂಹಶಾಸ್ತ್ರಿಗಳ ಪ್ರೋತ್ಸಾಹ ಆಶೀರ್ವಾದಗಳು ಲಭಿಸಿದ್ದುವು. ಇವರ ಗುರು
ಗಳು ತಿಮ್ಮನಹಳ್ಳಿಯ ದಾನಿ ಪುರದಪ್ಪನವರು. ಹೇರೂರಿನ ಅನೇಕ ಸಮಾರಂ
ಗಳಲ್ಲಿ ವಾಚನ ನಡೆಸಿರುತ್ತಾರೆ. ಸಂಸ್ಕೃತಿ ಪ್ರಸಾರ ಕಾರ್ಯದಲ್ಲಿಯೂ ಭಾಗವಹಿ
ಸಿದ್ದಾರೆ. ಶಾಲಾ ಕಾಲೇಜುಗಳ ಸಮಾರಂಭಗಳಲ್ಲಿಯೂ ಇವರ ವಾಚನಗಳು ನಡೆ
ದಿವೆ. ಗುರುಮನೆಗಳಲ್ಲಿ ವಾಚನ ಮಾಡಿ ಅನುಗ್ರಹಿಸಲ್ಪಟ್ಟಿರುವರು. ಅನೇ
ಸ್ಪರ್ಧೆಗಳಲ್ಲಿ ಬಹುಮಾನ ಮತ್ತು ಅರ್ಹತಾಪತ್ರಗಳನ್ನು ಪಡೆದಿರುತ್ತಾರೆ.

೯೧. ಪಾಪಾ ಚಿನ್ನಸುಬ್ಬಯ್ಯ

ಇವರು ೧೯೨೧ರಲ್ಲಿ ಕೊಳ್ಳೇಗಾಲದಲ್ಲಿ ಜನಿಸಿದರು. ಕಾವ್ಯವಾಚನವನ್ನು
ಒಂದು ರೀತಿಯ ರಾಗಮಾರ್ಗದಲ್ಲಿ ನಡೆಸುವುದನ್ನು ತಮ್ಮ ಗುರುಗಳಾದ ಸಿಮುದ

ರಾಮಸ್ವಾಮಯ್ಯನವರಲ್ಲಿ ಕಲಿತರು. ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿರುವ ರಾಮಾಯಣ, ಭಾರತ, ಭಾಗವತ ಮುಂತಾದ ಪುರಾಣ ಕಾವ್ಯಗಳನ್ನು ಕೊಳ್ಳೇಗಾಲದ ಪರಿಸರದಲ್ಲಿರುವ ಗ್ರಾಮಗಳಲ್ಲಿ ೨೦ ವರ್ಷಗಳಿಂದಲೂ ವಾಚನ ಮಾಡುತ್ತಿರುವರು. ಇವರ ವಾಚನಕ್ಕೆ ಶ್ರೀ ಎಂ. ರಾಮಯ್ಯ, ಓ. ಎಂ. ಚೌಡಯ್ಯ ಆರ್. ಮಾದೇಶಯ್ಯ ಮತ್ತು ಬಿ. ಎ. ಬಾಲ ಶ್ರೀನಿವಾಸಯ್ಯ ಮುಂತಾದವರು ವ್ಯಾಖ್ಯಾನವನ್ನು ನಡೆಸಿಕೊಟ್ಟಿರುವರು. ಗಮಕಿ ಶ್ರೀ ಬಿ. ಎಸ್. ಎಸ್. ಕೌಶಿಕ್ ಮತ್ತು ಹೆಚ್. ಕೆ. ರಾಮಸ್ವಾಮಿಯವರ ಪ್ರೋತ್ಸಾಹದಿಂದ ೧೯೫೭ರಲ್ಲಿ ಗಮಕ ಪ್ರವೇಶ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ಪ್ರಕೃತ ಕೊಳ್ಳೇಗಾಲದ ಶ್ರೀ ರಾಮಕೃಷ್ಣ ಸೇವಾ ಸಂಘದ ಆಶ್ರಯದಲ್ಲಿ ಇವರ ಕಾವ್ಯವಾಚನಗಳು ನಡೆಯುತ್ತಿವೆ.

೯೨. ಟಿ. ಸುಬ್ಬರಾಯರು, ಮನೇಗಟ್ಟ

ಇವರು ೧೯೨೧ರಲ್ಲಿ ಶಿವಮೊಗ್ಗಾ ಜಿಲ್ಲೆಯ ಸಾಗರ ತಾಲ್ಲೂಕು ಮನೇಗಟ್ಟ ಗ್ರಾಮದಲ್ಲಿ ಜನಿಸಿದರು. ಇವರು ಶ್ಯಾನುಭೋಗರು. ಬಾಲ್ಯದಲ್ಲಿಯೇ ತಮ್ಮ ತಾಯಿಯವರು ಹಾಡುತ್ತಿದ್ದ ದೇವರನಾಮ ಮತ್ತು ಯಕ್ಷಗಾನ ಪದಗಳಿಂದ ಪ್ರಭಾವಿತರಾಗಿ ತಮಗಿದ್ದ ಉತ್ತಮ ಶಾರೀರವನ್ನು ಸ್ವಂತ ಪರಿಶ್ರಮದಿಂದ ರಾಗ ಭಾವಗಳ ನಯ ಒನಪುಗಳಿಗೆ ಹೊಂದುವಂತೆ ಬೆಳೆಸಿಕೊಂಡರು. ಇವರು ನಾಟಕಗಳಲ್ಲಿಯೂ ಪಾತ್ರವಹಿಸುತ್ತಿದ್ದರು. ೧೯೩೨ರಿಂದ ಅನೇಕ ಕನ್ನಡ ಸಂಘಗಳಲ್ಲಿ ಕಾವ್ಯ ವಾಚನಗಳನ್ನು ಮಾಡಿರುವರು. ಭಾವಗೀತೆಗಳು ಜನಪದಗೀತೆಗಳನ್ನು ಹಾಡಿರುವರು. ಸಂಸ್ಕೃತಿ ಪ್ರಸಾರ ಇಲಾಖೆಯ ಯೋಜನೆಯಲ್ಲಿ ಜೈಮಿನಿ ಭಾರತ, ಕುಮಾರವ್ಯಾಸ ಭಾರತ ಮತ್ತು ಹರಿಶ್ಚಂದ್ರ ಕಾವ್ಯಗಳಿಂದ ವಾಚನಗಳನ್ನು ನೀಡಿರುವರು.

೯೩. ಶಕುಂತಳಾಬಾಯಿ ಪಾಂಡುರಂಗರಾಯರು, ಬೆಂಗಳೂರು

ಇವರು ೧೯೨೧ರಲ್ಲಿ ಜನಿಸಿದರು. ಇವರ ತಂದೆ ಶ್ರೀ ನಾರಾಯಣಕೆರೆ ವೆಂಕೋಬರಾಯರು ಮತ್ತು ಇವರ ತಾಯಿ ಶ್ರೀಮತಿ ಸುಂದರಾಬಾಯಿಯವರು.

ಇವರ ಸಾಮಾನ್ಯ ವಿದ್ಯಾಭ್ಯಾಸ ಲೋಯರ್ ಸೆಕೆಂಡರೀ ಪರೀಕ್ಷೆಯವರೆಗೆ. ಉತ್ತ
ವಾದ ಗೌಳ ಶಾರೀರವು ಇವರಿಗೆ ದೈವದತ್ತವಾಗಿದ್ದು ಬಾಲ್ಯದಿಂದಲೂ ಸಂಗಿ
ಸಾಹಿತ್ಯ ಕಲೆಗಳಲ್ಲಿ ಆಸಕ್ತಿಯನ್ನು ಹೊಂದಿದ್ದರು. ೧೯೩೦ರಲ್ಲಿ ಭಾರತ ವಾ
ಪ್ರವೀಣ ಶ್ರೀ ಸಂ. ಗೋ. ಬಿಂದೂರಾಯರು ನಡೆಸುತ್ತಿದ್ದ ಗಮಕ ತರಗತಿಗ
ಶಿಕ್ಷಣವನ್ನು ಪಡೆದು ಮುಂದೆ ಸ್ವಂತ ವ್ಯಾಸಂಗದಿಂದ ವಿವಿಧ ಕಾವ್ಯಗಳ ವಾಚ
ಭ್ಯಾಸವನ್ನು ಮತ್ತು ಸಂಗೀತಾಭ್ಯಾಸವನ್ನೂ ಮುಂದುವರಿಸಿ ಅವುಗಳಲ್ಲಿ ಪರಿ
ಹೊಂದಿದರು. ಅವರ ಯಜಮಾನರಾದ ಶ್ರೀ ಬಿ. ಎಸ್. ಪಾಂಡುರಂಗರಾಯ
ಸಾಹಿತ್ಯ ಪ್ರೇಮಿಗಳು ಮಾತ್ರವೇ ಅಲ್ಲದೆ ಶಿಶುಸಾಹಿತ್ಯ ಮತ್ತು ವಿದ್ಯಾಭ್ಯಾಸ
ಸಂಬಂಧಿಸಿದ ಅನೇಕ ಗ್ರಂಥಗಳ ರಚನೆಯನ್ನು ಮಾಡಿರುವರು. ಅವರು ಪರಿಷತ್ತಿ
ಅನೇಕ ಸಮಿತಿಗಳ ಸದಸ್ಯರೂ ವ್ಯವಸ್ಥಾಪಕರೂ ಆಗಿ ನಾಡು-ನುಡಿಗಳ ಸೆ
ಸಲ್ಲಿಸುತ್ತಿರುವರು. ಇವರ ಪೂರ್ಣ ಮಾರ್ಗದರ್ಶನ ಮತ್ತು ಪ್ರೋತ್ಸಾಹಗ
ಶ್ರೀಮತಿಯವರಿಗೆ ಸ್ವಾಭಾವಿಕವಾಗಿಯೇ ಲಭಿಸಿತು. ಶ್ರೀಮತಿಯವರು ೧೯
ರಿಂದಲೂ ಕಾವ್ಯವಾಚನ ಕಲೆಯನ್ನು ನಾಡಿನಲ್ಲಿ ಪ್ರಚಾರ ಮಾಡುತ್ತ ಬಂ
ವರು. ಪಂಪ, ರನ್ನ, ಹರಿಹರ, ರಾಘವಾಂಕ, ಕುಮಾರವ್ಯಾಸ ಮುಂತಾದ ಅನೇ
ಕವಿಗಳ ಕಾವ್ಯಗಳನ್ನೆ ಅಲ್ಲದೆ ವಿಶೇಷವಾಗಿ ಶ್ರೀ ಕುವೆಂಪುರವರ ಕೃತಿಯ
ಶ್ರೀ ರಾಮಾಯಣ ದರ್ಶನಂ ಕಾವ್ಯವನ್ನು ವಾಚನ ಮಾಡಿ ಸಾರ್ವಜನಿಕರ
ವಿದ್ವಜ್ಜನರನ್ನೂ ಸಂತೋಷಪಡಿಸಿ ಮನ್ನಣೆಯನ್ನು ಪಡೆದಿರುವರು. ಕರ್ನಾಟ
ಹಲವೆಡೆಗಳಲ್ಲಿ ಪ್ರವಾಸ ಮಾಡಿ, ಸಾಹಿತ್ಯ ಸಮ್ಮೇಳನ ಮತ್ತು ಸಾಹಿತ್ಯೋತ್ಸ
ಗಳಲ್ಲಿಯೂ ಮತ್ತು ಸಾಹಿತ್ಯ-ಸಂಸ್ಕೃತಿ ಅಭಿವೃದ್ಧಿ ಇಲಾಖೆಯ ಕಾರ್ಯಕ್ರ
ಗಳಲ್ಲಿಯೂ ಭಾಗವಹಿಸುತ್ತಿರುವರು. ಇವರು ಅನೇಕ ವಿದ್ಯಾರ್ಥಿಗಳಿಗೆ ಗಮ
ಕಲೆಯಲ್ಲಿ ಅಭ್ಯಾಸವನ್ನು ಮುಂದುವರಿಸಲೂ ಸೂಕ್ತವಾದ ಮಾರ್ಗದರ್ಶನವನ
ನೀಡುತ್ತಿರುವರು. ಪರಿಷತ್ತಿನ ಗಮಕ ಶಿಕ್ಷಣ ಸಮಿತಿಯಲ್ಲಿ ಪ್ರಮುಖ ಕ್ರಿಯ
ಶೀಲ ಸದಸ್ಯರಾಗಿರುವರು. ಶ್ರೀ ಪಾಂಡುರಂಗರಾಯರು ನೆಹರೂ ನಗರದಲ್ಲಿ ೧೯
ರಲ್ಲಿ ಸ್ಥಾಪಿಸಿ ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿರುವ ಮಕ್ಕಳ ಮಂಟಪವೆ
ವಿದ್ಯಾಸಂಸ್ಥೆಯಲ್ಲಿ ಸಹಕರಿಸಿ ಚಿಕ್ಕಮಕ್ಕಳ ವಿದ್ಯಾಭ್ಯಾಸದಲ್ಲಿ ಆಸಕ್ತಿಯ
ಹೊಂದಿರುವರು. ೧೯೬೦ರಲ್ಲಿ ದೆಹಲಿಯ 'ಆಕಾಶವಾಣಿ' ಕೇಂದ್ರದಿಂದ ಪ್ರಸ
ವಾದ ಕನ್ನಡ ಸಾಂಸ್ಕೃತಿಕ ಹಾಗೂ ಸಂಗೀತ ರಾಷ್ಟ್ರೀಯ ಕಾರ್ಯದಲ್ಲಿ ಇ
ಕಾವ್ಯವಾಚನವು ಪ್ರಸಾರವಾಗಿದೆ. ಕೊಲಂಬಿಯಾ ಗ್ರಾಮಾಫೋನ್ ಕಂ
ಯವರು ಇವರ ರಾಘವೇಂದ್ರ ಗುರೂಜಿ ಎಂಬ ಪದ್ಯಮಾಲೆಯನ್ನು ಗಮಕ ಶ್ರೀ

ಯಲ್ಲಿ ಧ್ವನಿಮುದ್ರಿಕೆ ಮಾಡಿಕೊಂಡಿರುವರು. ಶ್ರೀಮತಿಯವರು ಕರ್ಣಾಟಕದ ಮಹಿಳಾ ಗಮಕಿಗಳಲ್ಲಿ ಅಗ್ರಮಾನ್ಯ ಸ್ಥಾನವನ್ನು ಪಡೆದ ಗಮಕ ವಿದುಷಿಯಾಗಿರುವರು. ಇತ್ತೀಚೆಗೆ ಇವರು ರಚಿಸಿ ಪ್ರಕಟಿಸಿರುವ 'ಗಮಕ ಕಲೆ ಮತ್ತು ಮಹಿಳೆ' ಎಂಬ ಗ್ರಂಥವು ಕನ್ನಡಕ್ಕೆ ಒಂದು ಉತ್ತಮ ಕೊಡುಗೆಯಾಗಿದೆ. ೧೯೭೯ರಲ್ಲಿ ಕರ್ಣಾಟಕ ರಾಜ್ಯ ಸಾಹಿತ್ಯ ಅಕಾಡಮಿಯಿಂದ ಗಮಕ ಕಲಾ ಸೇವೆಗಾಗಿ ಪ್ರಶಸ್ತಿಯನ್ನು ಪಡೆದು ಪುರಸ್ಕೃತರಾಗಿರುವರು.

೧೪. ಟಿ. ಆರ್. ಜಯರಾವ್, ಬೆಂಗಳೂರು

ಇವರು ೩೧-೫-೧೯೨೧ರಲ್ಲಿ ಜನಿಸಿದರು. ಇವರ ತಂದೆ ಶ್ರೀ ಟಿ.ರಾಮಚಂದ್ರ ರಾಯರು. ಇವರು ಬಿ.ಎಸ್‌ಸಿ., ಬಿ.ಎಡ್. ಪದವೀಧರರು. ವಿದ್ಯಾಭ್ಯಾಸದ ಇಲಾಖೆಯಲ್ಲಿ ಉದ್ಯೋಗದಲ್ಲಿದ್ದು ಈಚೆಗೆ ನಿವೃತ್ತರಾಗಿರುವರು. ಇವರ ತಂದೆ ರಾಮಚಂದ್ರರಾಯರಿಗೆ ಸಂಗೀತವೆಂದರೆ ಪಂಚಪ್ರಾಣ. ಅವರು ಹಾಡುತ್ತಿದ್ದರು. ಇವರ ದೊಡ್ಡಪ್ಪನವರೂ ಉತ್ತಮ ಸಂಗೀತಗಾರರು. ಶ್ರೀ ಜಯರಾಯರಿಗೂ ಸಂಗೀತದಲ್ಲಿ ಸಹಜವಾದ ಒಲವು. ೧೯೩೫ರಲ್ಲಿ ವಿದ್ಯಾರ್ಥಿ ದೆಸೆಯಲ್ಲಿರುವಾಗಲೇ ಏನೋ ಒಂದು ರಾಗದಲ್ಲಿ ಹೇಳುತ್ತಿದ್ದ ಪದ್ಯಗಳನ್ನು ಕೇಳಿದ ಇವರ ಉಪಾಧ್ಯಾಯರಾದ ದಿವಂಗತ ಕಳಲೆ ಸಂಪತ್ಕುಮಾರಾಚಾರ್ಯರು ಮೆಚ್ಚಿಕೊಂಡು ಪುನಃ ಹಾಡಿಸಿ ಕೇಳಿ ತಲೆದೂಗಿದರು. ಮುಂದೆ ಅವರೇ ಜಯರಾಯರಿಗೆ ಗಮಕ ಕಲೆಯನ್ನು ಕಲಿಸಿದ ಗುರುಗಳಾದರು. ೧೯೩೬ ರಿಂದ ೧೯೪೭ರ ವರೆಗೆ ಅವರಲ್ಲಿ ಕ್ರಮವಾಗಿ ಅಭ್ಯಾಸ ನಡೆದಿದೆ. ೧೯೩೭ರಲ್ಲಿ ದಿವಂಗತ ಶ್ರೀ ಡಿ. ವಿ. ಜಿ. ಯವರು ಪರಿಷತ್ತಿನ ಅಧ್ಯಕ್ಷರಾಗಿದ್ದಾಗ ನಡೆಸಿದ ಗಮಕ ವಾಚನ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಗಳಿಸಿದರು. ಪರಿಷತ್ತಿನ ಗಮಕ ತರಗತಿಗಳನ್ನು ೧೯೫೮ ರಿಂದ ೧೯೭೦ರ ವರೆಗೂ ನಡೆಸಿರುವರು. ಅಷ್ಟೇ ಅಲ್ಲದೆ ಪರಿಷತ್ತಿನ ಗಮಕ ಕಲಾ ಪ್ರತಿನಿಧಿಯಾಗಿ ೧೯೪೩ರಲ್ಲಿ ಉತ್ತರ ಕರ್ಣಾಟಕದ ಪ್ರಮುಖ ಪಟ್ಟಣಗಳಲ್ಲಿ ಪ್ರವಾಸ ಮಾಡಿ ಗಮಕ ಕಾವ್ಯವಾಚನಗಳನ್ನು ನಡೆಸಿರುವರು.

೧೫. ರಾಜಾಮಣಿ ನಾಗರಾಜರಾವ್, ಬೆಂಗಳೂರು

ಇವರು ೨೮-೭-೧೯೨೧ ರಂದು ಮೈಸೂರಿನಲ್ಲಿ ಜನಿಸಿದರು. ಶ್ರೀ ಬಿ.ಎಲ್. ನರಸಿಂಹಶಾಸ್ತ್ರಿ ಮತ್ತು ಶ್ರೀಮತಿ ರುಕ್ಮಿಣಮ್ಮ ಇವರ ತಂದೆತಾಯಿಗಳು. ಇವರಿಗೆ

ಕರ್ನಾಟಕ ಸಂಗೀತ, ವೀಣಾವಾದನದಲ್ಲಿ ಹದಿನೈದು ವರ್ಷಗಳಿಗಿಂತ ಹೆಚ
ಕಾಲದ ಅನುಭವವಿದೆ. ಬಾಯಿ ಹಾಡುಗಾರಿಕೆ ಮತ್ತು ಗಮಕ ಕಲೆಯಲ್ಲಿಯ
ಪರಿಶ್ರಮವಿದೆ. ಇವರು ಸಾಹಿತ್ಯದಲ್ಲಿಯೂ ಅಭಿರುಚಿಯನ್ನು ಹೊಂದಿದ್ದು ಕೆಲ
ಲೇಖನಗಳನ್ನು ಬರೆದು ಪ್ರಕಟಿಸಿರುತ್ತಾರೆ. ಎರಡು ಅಪ್ರಕಟಿತ ಕಾದಂಬರಿಗಳ
ಇವರ ಬಳಿ ಇರುತ್ತವೆ. ಮನೆಯಲ್ಲಿನ ವಾತಾವರಣವೇ ಸಾಹಿತ್ಯ ಸಂಗೀತಮ
ವಾಗಿದ್ದುದರಿಂದ ಇವರಿಗೆ ಈ ಕಲೆಗಳಲ್ಲಿ ಅಭಿರುಚಿಯುಂಟಾಯಿತು. ಶ್ರೀಮ
ಯವರು ಕ್ಲಿಷ್ಟವಾದ ಚಂಪೂ ಕಾವ್ಯಗಳು, ಲಲಿತವಾದ ಷಟ್ಪದೀ ಕಾವ್ಯಗಳನ
ವನ್ನು ಅಭ್ಯಾಸ ಮಾಡಿ, ಅನೇಕ ಸ್ಥಳಗಳಲ್ಲಿ ಕಾವ್ಯವಾಚನ ಕಾರ್ಯಕ್ರಮಗಳನ
ನಡೆಸಿರುತ್ತಾರೆ. ಗಮಕ ವಾಚನ ಪ್ರವೀಣ ಕೀರ್ತಿಶೇಷ ಸಂ. ಗೋ. ಬಿಂದ
ರಾಯರು ಇವರ ಗಮಕ ಕಲೆಯ ಗುರುಗಳು. ೧೯೩೭ರಲ್ಲಿ ಪರಿಷತ್ತು ನಡೆಸಿ
ಗಮಕ ಪರೀಕ್ಷೆಯಲ್ಲಿ ಶ್ರೀಮತಿಯವರು ತೇರ್ಗಡೆ ಹೊಂದಿರುತ್ತಾರೆ. ಮೈಸೂ
ಸರ್ಕಾರದ ಸಂಸ್ಕೃತಿ ಪ್ರಸಾರ ಕಾರ್ಯಕ್ರಮಗಳಲ್ಲಿ ಹಾಸನ, ಶಿವಮೊಗ್ಗ, ಬಳ್ಳಾ
ಜಿಲ್ಲೆಗಳ ಅನೇಕ ಸ್ಥಳಗಳಲ್ಲಿ ಕಾವ್ಯವಾಚನ ಮಾಡಿರುತ್ತಾರೆ. ೧೯೫೬ರಿಂ
ಎರಡು ಮೂರು ವರ್ಷಗಳು ಗಮಕ ತರಗತಿಗಳನ್ನು ನಡೆಸುತ್ತಿದ್ದು ಮತ್ತೆ ೧೯೭
ರಿಂದ ತರಗತಿಗಳನ್ನು ನಡೆಸುತ್ತಿದ್ದಾರೆ. ಅನೇಕ ಸಂಘ ಸಂಸ್ಥೆಗಳಲ್ಲಿಯೂ ಇವ
ಕಾರ್ಯಕ್ರಮಗಳು ನಡೆದಿವೆ. ೬–೩–೭೫ರಲ್ಲಿ ಹೈದರಾಬಾದಿನಲ್ಲಿ ನಡೆ
"ರವೀಂದ್ರ ಭಾರತಿ" ಕಾರ್ಯಕ್ರಮದಲ್ಲಿ ಭಾಗವಹಿಸಿ ಗಮಕ ಕಲಾನೈಪುಣ್ಯಕ್ಕಾ
ಸನ್ಮಾನಿತರಾಗಿರುತ್ತಾರೆ.

೯೬. ಹೆಚ್. ಎಂ. ಮಲ್ಲಾರಾಧ್ಯರು, ಹುಲ್ಲಹಳ್ಳಿ, ನಂಜನಗೂಡು ತಾಲ್ಲೂಕು

ಇವರು ೨೦–೮–೧೯೨೧ರಂದು ಜನಿಸಿದರು. ತಂದೆ ಮಲ್ಲಾರಾಧ್ಯರು
ತಾಯಿ ಪಾರ್ವತಮ್ಮನವರು. ಇವರು ನಂಜನಗೂಡು ತಾಲ್ಲೂಕು ಹುಲ್ಲಹಳ್ಳಿಯ
ಉಪಾಧ್ಯಾಯರಾಗಿದ್ದಾರೆ. ಸಂಗೀತದಲ್ಲಿ ವರ್ಣ, ಕೃತಿ, ಕೀರ್ತನೆಗಳ ಅಭ್ಯಾಸವಿದ
ಸಾಹಿತ್ಯದಲ್ಲಿ ಅಭಿರುಚಿಯಿದೆ. ೩೦ ವರ್ಷಗಳಿಂದ ಪ್ರಸಿದ್ಧ ಗಮಕಿಗಳ ವಾಚ
ವನ್ನು ಕೇಳಿ ತಾವು ವ್ಯಾಸಂಗ ಮಾಡಿದ್ದಾರೆ. ಗಮಕ ಕಲೆಯನ್ನು ಕಲಿಯಲ
ಪ್ರೋತ್ಸಾಹಿಸಿ, ಮಾರ್ಗದರ್ಶನ ಮಾಡಿದವರು ಇವರ ಪೂಜ್ಯ ಅಣ್ಣಂದಿರು
ಪ್ರಸಿದ್ಧ ಗಮಕಿಗಳೂ ಆದ ಶ್ರೀ ಹೆಚ್. ಎಂ. ರಾಮಾರಾಧ್ಯರು. ಇವರಿಗೆ ಗದುಗಿ

ಭಾರತ, ಜೈಮಿನಿ ಭಾರತ, ರಾಮಾಯಣ, ಚನ್ನಬಸವಪುರಾಣ, ಸೋಮೇಶ್ವರ ಶತಕ–ಈ ಕಾವ್ಯಗಳ ವಾಚನ ಪರಿಚಯವಿದೆ. ಮೈಸೂರು, ನಂಜನಗೂಡು, ಹುಲ್ಲಹಳ್ಳಿ, ಹೆಗ್ಗಡದೇವನ ಕೋಟೆ, ಮತ್ತು ಗುಂಡ್ಲುಪೇಟೆ ತಾಲ್ಲೂಕಿನ ಗ್ರಾಮಾಂತರ ಪ್ರದೇಶಗಳಲ್ಲಿ ವಾಚನ ಮಾಡಿರುತ್ತಾರೆ. ಸರ್ಕಾರದ ಸಂಸ್ಕೃತಿ ಪ್ರಸಾರ ಯೋಜನೆಯ ಆಶ್ರಯದಲ್ಲೂ ವಾಚನಗಳನ್ನು ಮಾಡಿರುತ್ತಾರೆ.

೯೭. ಬಾಲಶ್ರೀನಿವಾಸಯ್ಯ, ಕೊಳ್ಳೇಗಾಲ

ಇವರು ೩-೯-೧೯೨೧ರಲ್ಲಿ ಕೊಳ್ಳೇಗಾಲದಲ್ಲಿ ಜನಿಸಿದರು. ಇವರು ಪದವೀಧರರು–ಬಿ.ಎ., ಬಿ.ಟಿ., ಎಂ.ಎಡ್.,ಗಳಲ್ಲಿ ಉತ್ತೀರ್ಣರಾಗಿ ರಾಮಾಪುರದ ಗೌ|| ಹೈಯರ್ ಪ್ರೈಮರೀ ಶಾಲೆಯಲ್ಲಿ ಮುಖ್ಯೋಪಾಧ್ಯಾಯರಾಗಿರುವರು. ಬಾಲ್ಯದಲ್ಲೇ ಇವರು ವಿದ್ವಾನ್ ರಂಗಸ್ವಾಮಯ್ಯನವರಲ್ಲಿ ಸಂಗೀತವನ್ನು ಕಲಿಯಲು ಪ್ರಾರಂಭ ಮಾಡಿದರು. ಇವರ ಶಾಲೆಯಲ್ಲಿ ಒಂದು ಸಲ ಗಮಕಿ ಶ್ರೀ ಬಿ. ಎಸ್. ಎಸ್. ಕೌಶಿಕರು ಮತ್ತು ಶ್ರೀ ವೆಂಕಟಸುಬ್ಬಯ್ಯನವರು ನಡೆಸಿದ ಕಾವ್ಯವಾಚನ ಕಾರ್ಯಕ್ರಮದಿಂದ ಪ್ರಭಾವಿತರಾಗಿ ಸ್ವಪ್ರಯತ್ನದಿಂದಲೇ ೧೯೬೮ರಲ್ಲಿ ಗಮಕ ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾದರು. ಗಮಕ ಕಲೆಯಲ್ಲಿ ಇವರಿಗೆ ಪ್ರವೇಶವನ್ನು ದೊರಕಿಸಿ ಪ್ರೋತ್ಸಾಹವಿತ್ತವರು ಶ್ರೀ ಬಿ. ಎಸ್. ಎಸ್. ಕೌಶಿಕ್, ಹೆಚ್. ಕೆ. ರಾಮಸ್ವಾಮಿ ಮತ್ತು ಕೊಳ್ಳೇಗಾಲದ ಓ. ಎಂ. ಚೌಡಯ್ಯನವರು ಇವರ ಕಾವ್ಯವಾಚನ ಕಾರ್ಯಕ್ರಮಗಳು ಉತ್ಸವ ಕಾಲಗಳಲ್ಲಿ ಕೊಳ್ಳೇಗಾಲದ ಸುತ್ತಮುತ್ತಲಿನ ಪ್ರದೇಶದಲ್ಲಿ ನಡೆಯುತ್ತಿರುತ್ತವೆ.

೯೮. ಬಿ. ಎ. ಅನಂತಪದ್ಮನಾಭಯ್ಯನವರು, ಬೆಂಗಳೂರು

ಇವರು ಹಾಸನ ಜಿಲ್ಲಾ, ಚನ್ನರಾಯಪಟ್ಟಣ ತಾಲ್ಲೂಕು, ಗೊಲ್ಲರಹಳ್ಳಿಯಲ್ಲಿ ೪-೯-೧೯೨೧ರಲ್ಲಿ ಜನಿಸಿದರು. ಇವರ ತಂದೆ ಶ್ರೀ ಜಿ. ಅನಂತರಾಮಶಾಸ್ತ್ರಿಗಳು ಮತ್ತು ತಾಯಿ ಶ್ರೀಮತಿ ಅನ್ನಪೂರ್ಣಮ್ಮನವರು. ಇವರು ಸಾಮಾನ್ಯ ವಿದ್ಯಾಭ್ಯಾಸ ಎಸ್. ಎಲ್. ಎಲ್. ಸಿ. ಮತ್ತು ವಿ. ಟಿ. ಸಿ., ಮದ್ರಾಸ್ ವಿದ್ವತ್ತಿನ ಕನ್ನಡ ಎಂಟ್ರನ್ಸ್ ಪರೀಕ್ಷೆ, ಹಿಂದೀ ರಾಷ್ಟ್ರಭಾಷೆ, ಸಂಸ್ಕೃತದಲ್ಲಿಯೂ

ಜ್ಯೋತಿಶ್ಶಾಸ್ತ್ರದಲ್ಲಿಯೂ ತಕ್ಕಮಟ್ಟಿನ ಪರಿಚಯ ಮತ್ತು ಪರಿಶ್ರಮಗಳ
ಹೊಂದಿರುವರು.ಇವರು ಎಸ್.ಎಲ್.ಎನ್. ಮಾಧ್ಯಮಿಕ ಶಾಲೆಯಲ್ಲಿ ಅಧ್ಯಾ
ರಾಗಿ ಸೇವೆಸಲ್ಲಿಸುತ್ತಿದ್ದು ಇಷ್ಟರಲ್ಲಿಯೇ ನಿವೃತ್ತರಾಗಲಿರುವರು. ಇವರಿಗೆ ಶಾಸ್ತ್ರೀ
ಸಂಗೀತದ ಪರಿಚಯವಿಲ್ಲದಿದ್ದರೂ ಸಂಗೀತ ಶಾಸ್ತ್ರ ಭಾಗದ ಪರಿಚಯವು ಸ್
ವುಂಟು. ಕನ್ನಡ ಸಾಹಿತ್ಯದಲ್ಲಿ ಅಭಿರುಚಿಯನ್ನು ಹೊಂದಿರುವರು. ಕಾವ್ಯವ
ನಕ್ಕೆ ತಕ್ಕಮಟ್ಟಿಗೆ ವ್ಯಾಖ್ಯಾನವನ್ನೂ ಮಾಡಬಲ್ಲರು. ಕೆಲವು ಕತೆ, ಕವಿತೆಗ
ಏಕಾಂಕ ನಾಟಕಗಳು, ಸ್ತೋತ್ರಪದ್ಯಗಳು ಮತ್ತು ಲೇಖನಗಳನ್ನೂ ಬರೆದಿ
ವರು. ಇವರಿಗೆ ಗಮಕ ಕಲೆಯಲ್ಲಿ ಆಸಕ್ತಿಯು ವಂಶ ಪಾರಂಪರ್ಯವಾಗಿ ಬಂದು
ಇವರ ತಾಯಿಯವರು ಹಾಡಿಕೊಳ್ಳುತ್ತಿದ್ದ ಪದ್ಯಕಾವ್ಯಗಳನ್ನು ಅದರಲ್ಲಿಯೂ ಗ
ಗಿನ ಭಾರತವನ್ನು ಕೇಳಿ ಮತ್ತು ತಮ್ಮೂರಿನಲ್ಲಿ ಆಗಾಗ ನಡೆಯುತ್ತಿದ್ದ ಕಾವ್ಯವಾಚ
ಹರಿಕಥೆ, ಭಜನೆ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಹೋಗುತ್ತಿದ್ದು
ರಿಂದ ತಾವೂ ಗಮಕ ಕಲೆಯನ್ನು ಅಭ್ಯಾಸ ಮಾಡಬೇಕೆಂಬ ಆಕಾಂಕ್ಷೆಯು
ರಲ್ಲಿ ಮೂಡಿತು. ಗಮಕ ವಿದ್ವಾನ್ ಬಾಳಗಂಚಿ ನಂಜುಂಡಯ್ಯನವರ ಪರಿಚ
ಲಾಭವನ್ನು ಹೊಂದಿ ಗಮಕ ವಿದ್ವಾನ್ ಶ್ರೀ ಎಂ. ರಾಘವೇಂದ್ರರಾಯರಲ್ಲಿ ಶಿ
ರಾಗಿ ೧೯೩೪ ರಿಂದ ೧೯೪೭ರ ವರೆಗೆ ಗುರುಕುಲ ಪದ್ಧತಿಯಂತೆ ಗಮಕ ಕಲೆಯ
ಅಭ್ಯಾಸ ಮಾಡಿದರು. ಹರಿಭಕ್ತಿಸಾರ,ಶಿವಭಕ್ತಿಸಾರ,ನಳಚರಿತ್ರೆ,ಹರಿಶ್ಚಂದ್ರಕಾ
ತೊರವೆ ರಾಮಾಯಣ, ಕುಮಾರವ್ಯಾಸ ಭಾರತ, ದೇವೀ ಭಾಗವತ, ನಿತ್ಯಾತ್ಮ
ಕಯೋಗಿಯ ಭಾಗವತ ಮತ್ತು ಶ್ರೀರಾಮ ಪಟ್ಟಾಭಿಷೇಕ ಇವು ಇವರಿಗೆ ಇ
ವಾದ ಕಾವ್ಯಗಳು. ೧೯೫೫-೫೬ರಲ್ಲಿ ಸಾಹಿತ್ಯ–ಸಂಸ್ಕೃತಿ ಇಲಾಖೆಯ ಆಶ್ರಯದ
ಹಲವಾರು ಕಡೆಗಳಲ್ಲಿ ಕಾವ್ಯವಾಚನ ಮಾಡಿರುವರು. ೧೯೫೫ರಿಂದಲೂ ನಗ
ನಾನಾ ಬಡಾವಣೆಗಳಲ್ಲಿ (ಚಿಕ್ಕಪೇಟೆ, ದೂರವಾಣಿ ನಗರ, ಅಣ್ಣಯ್ಯಪ್ಪ ಬ್ಲಾಕ
(ಬಾಪೂಜಿ ನಗರ),ಗಮಕ ಪ್ರವೇಶ ಮತ್ತು ಪ್ರೌಢ ಮತ್ತು ವಿಶೇಷ ತರಗತಿಗಳ
ನಡೆಸಿರುವುದಲ್ಲದೆ ಆಸಕ್ತಿಯುಳ್ಳ ಶಿಷ್ಯರಿಗೆ ಪೂರ್ಣ ಕಾವ್ಯಗಳನ್ನೂ ಅಭ್ಯಾ
ಮಾಡಿರುತ್ತಾರೆ. ಅನೇಕ ಸಭೆ ಸಮಾರಂಭಗಳಲ್ಲಿಯೂ ಉತ್ಸವಾದಿಗಳಲ್ಲಿಯ
ಕಾವ್ಯವಾಚನ ಮಾಡಿ ಸಹೃದಯ ಶ್ರೋತೃಗಳ ಪ್ರಶಂಸೆಗೆ ಪಾತ್ರರಾಗಿರುತ್ತಾ
೮-೧೨-೬೧ರಲ್ಲಿ ಶೃಂಗೇರಿ ಜಗದ್ಗುರುಗಳ ಸಮ್ಮುಖದಲ್ಲಿ ಸ್ವಾಗತ ಪದ್ಯ ಮಾಲ
ಯನ್ನು ರಚಿಸಿ, ಸುಶ್ರಾವ್ಯವಾಗಿ ವಾಚನ ಮಾಡಿ ಶ್ರೀಶ್ರೀಗಳವರ ಕೃಪಾಶೀರ್ವಾ
ಗಳನ್ನು ಪಡೆದಿರುತ್ತಾರೆ. ಹಾಗೂ ೧೯೬೭ರಲ್ಲಿ ಸೋಸಲೆ ಶ್ರೀಮಠಾಧೀಶರ ಸಮ್ಮು

ದಲ್ಲಿ ಕಾವ್ಯವಾಚನ ಮಾಡಿ ಶ್ರೀಶ್ರೀಗಳವರ ಮತ್ತು ಗುರುಹಿರಿಯರ ಕೃಪಾಶೀರ್ವಾದವನ್ನು ಪಡೆದಿರುವರು. ದೂರವಾಣೀ ನಗರದ ಕರ್ನಾಟಕ ಸಂಘದವರು ಇವರ ಗಮಕ ಕಲಾಸೇವೆಯನ್ನು ಮನ್ನಿಸಿ ಸನ್ಮಾನ ಪತ್ರವನ್ನು ನೀಡಿ ಗೌರವಿಸಿರುವರು.

೯೯. ಆರ್. ಸಾವಿತ್ರಮ್ಮನವರು, ಬೆಂಗಳೂರು

ಇವರು ೬-೧೦-೧೯೨೧ರಲ್ಲಿ ಜನಿಸಿದರು. ಇವರ ತಂದೆ ಆರ್. ವೆಂಕಟರಾಮಯ್ಯನವರು. ತಾಯಿ ರುಕ್ಮಿಣಮ್ಮನವರು. ಎಸ್. ಎಸ್. ಎಲ್. ಸಿ. ಮತ್ತು ಟಿ. ಸಿ. ಎಲ್. ಮುಗಿಸಿಕೊಂಡು ಶಾಲಾ ಉಪಾಧ್ಯಾಯಿನಿಯಾಗಿರುವರು. ಸಂಗೀತದ ಪರಿಚಯವೂ ತಕ್ಕಮಟ್ಟಿಗಿದ್ದು ಕಾವ್ಯವಾಚನ, ದೇವರನಾಮ, ಭಾವಗೀತೆಗಳು ಮತ್ತು ಜನಪದ ಗೀತೆಗಳ ಹಾಡುಗಾರಿಕೆ ನಡೆಸಬಲ್ಲರು. ೧೯೫೬ರಲ್ಲಿ ಉಪಾಧ್ಯಾಯ ವೃತ್ತಿಯ ತರಬೇತಿಗಾಗಿ ಮೈಸೂರಿನಲ್ಲಿದ್ದಾಗ ಶ್ರೀಕೃಷ್ಣಗಿರಿ ಕೃಷ್ಣರಾಯರಲ್ಲಿ ಗಮಕ ಕಲೆಯನ್ನು ಅಭ್ಯಾಸ ಮಾಡಿ ಪ್ರವೇಶ ಪರೀಕ್ಷೆಯಲ್ಲಿ ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾದರು. ಮುಂದೆ ಇವರ ತಂದೆಯವರ ಮನೆಯಲ್ಲಿ ಕಾವ್ಯ ಪ್ರಚಾರ ಮಂಡಲಿಯು ಪ್ರಾರಂಭವಾಗಿ ಅಲ್ಲಿ ನಡೆಯುತ್ತಿದ್ದ ಕಾವ್ಯವಾಚನಗಳನ್ನು ಕೇಳಿ ಇವರು ತಮ್ಮ ಅಭ್ಯಾಸವನ್ನು ಮುಂದುವರಿಸಿದರು. ೧೯೬೯ರಲ್ಲಿ ಗಮಕ ಪ್ರೌಢ ಪರೀಕ್ಷೆಯಲ್ಲಿಯೂ ಉತ್ತೀರ್ಣರಾದರು. ಇವರ ಕಾವ್ಯವಾಚನಗಳು ನಗರದ ಅನೇಕ ಸಂಘ ಸಂಸ್ಥೆಗಳಲ್ಲಿ, ಉತ್ಸವ ಸಮಾರಂಭಗಳಲ್ಲಿ ನಡೆಯುತ್ತಿರುತ್ತವೆ. ಮಂಡ್ಯದಲ್ಲಿ ನಡೆದ ರಾಮಾಯಣ ದರ್ಶನಂ ವಾಚನ ಸ್ಪರ್ಧೆಯಲ್ಲಿ ಭಾಗವಹಿಸಿದ್ದುದೇ ಅಲ್ಲದೆ ಮೈಸೂರಿನಲ್ಲಿ ಕುವೆಂಪುರವರ ಸಮ್ಮುಖದಲ್ಲಿಯೂ ವಾಚನ ಮಾಡಿರುವರು.

೧೦೦. ಎ. ಶಿವಯ್ಯ, ಪ್ರಭುವನ ಹಳ್ಳಿ

ಇವರು ೩-೧-೧೯೨೨ರಲ್ಲಿ ತುಮಕೂರು ತಾಲ್ಲೂಕು ಅರೆಯೂರಿನಲ್ಲಿ ಜನಿಸಿದರು. ತಂದೆ ಬಾಳಯ್ಯನವರು, ತಾಯಿ ಸಿದ್ದಮ್ಮನವರು. ಸಂಗೀತದಲ್ಲಿ ಕೀರ್ತನೆಗಳನ್ನು ಹಾಡಬಲ್ಲರು. ಕನ್ನಡ ಸಾಹಿತ್ಯದಲ್ಲಿ ತುಂಬಾ ಅಭಿರುಚಿಯಿದೆ. ಗಮಕಕಲೆಯಲ್ಲಿ ತುಂಬಾ ಆಸಕ್ತಿ ಇದೆ. ಇವರು ಗಮಕ ಕಲೆಯನ್ನು ವಿದ್ವಾನ್ ಎಲ್. ಸಿದ್ದಗಂಗದೇವರು ಇವರಲ್ಲಿ ಅಭ್ಯಾಸಮಾಡಿ ೧೯೬೫ ರಲ್ಲಿ ಗಮಕ ಪರೀಕ್ಷೆಯನ್ನು ಮೊದಲನೇ ತರಗತಿಯಲ್ಲಿ ಪಾಸು ಮಾಡಿದರು. ವ್ಯಾಖ್ಯಾನವನ್ನೂ ಮಾಡಬಲ್ಲರು. ಹರಿಕಥೆ, ಶಿವಕಥೆಗಳಲ್ಲೂ ಪರಿಶ್ರಮವಿದೆ. ಗ್ರಾಮಾಂತರ ಪ್ರದೇಶಗಳಲ್ಲಿ, ಸಂಸ್ಕೃತಿ ಪ್ರಸಾರ ಕಾರ್ಯಕ್ರಮಗಳಲ್ಲಿ ವಾಚನ ಮಾಡಿರುತ್ತಾರೆ.

ಇವರ ವಾಚನ ಕೀರ್ತನಗಳು ಜನರ ಮೆಚ್ಚಿಕೆಗೆ ಪಾತ್ರವಾಗಿವೆ. ಹರಿಕಥಾ ವಿದ್ವಾ
ಶಿವಕಥಾ ಕೇಸರಿ ಮುಂತಾದ ಪ್ರಶಸ್ತಿಗಳನ್ನು ಪಡೆದಿರುತ್ತಾರೆ.

೧೦೧. ಎ. ಎಸ್. ಗಂಗಾಧರಶಾಸ್ತ್ರಿಗಳು, ಬೆಂಗಳೂರು

ಇವರು ೧೯೨೩ರಲ್ಲಿ ಜನಿಸಿದರು. ಇವರ ತಂದೆ ಶ್ರೀ ಅಶ್ವತ್ಥನಾರಾಯ ರಾಯರು, ತಾಯಿ ಶ್ರೀಮತಿ ಮಹಾಲಕ್ಷಮ್ಮನವರು. ಇವರು ಡಿಗ್ರಿ ಪರೀಕ್ಷೆ ವರೆಗೆ ವಿದ್ಯಾಭ್ಯಾಸ ಮಾಡಿ 'ಕ್ವಿಟ್ ಇಂಡಿಯಾ' ಚಳುವಳಿಯ ಕಾಲದಲ್ಲಿ ವಿದ ಭ್ಯಾಸಕ್ಕೆ ತಿಲಾಂಜಲಿಯನ್ನಿತ್ತು ವಾಣಿಜ್ಯವನ್ನು ವೃತ್ತಿಯನ್ನಾಗಿ ಅಂಗೀಕ ದರು. ಬಾಲ್ಯದಿಂದಲೂ ಸಂಗೀತದಲ್ಲಿ ಆಸಕ್ತಿಯಿದ್ದು ತಕ್ಕಮಟ್ಟಿಗೆ ಸಂಗೀತಾಭ್ಯಾ ವನ್ನೂ ಮಾಡಿರುವರು. ಇವರ ಮನೆತನದಲ್ಲಿ ಖ್ಯಾತನಾಮರಾದ ಆಸ್ಥಾ ವಿದ್ವಾನ್ ಮೋಟಗಾನಹಳ್ಳಿ ರಾಮಶೇಷಶಾಸ್ತ್ರಿಗಳು ಮತ್ತು ಮೋಟಗಾನಹ ಸುಬ್ರಹ್ಮಣ್ಯಶಾಸ್ತ್ರಿಗಳ ರಕ್ಷಣೆ ಸಹವಾಸ ಮತ್ತು ಪ್ರೋತ್ಸಾಹಗಳಿಂದ ಗಮಕ ಕ ಯಲ್ಲಿ ಆಸಕ್ತಿಯೂ ಮತ್ತು ಪರಿಣತಿಯೂ ಉಂಟಾದುವು. ಶ್ರೀಮದ್ವಾಲ್ಮೀ ರಾಮಾಯಣದ ವಾಚನ ಪ್ರವಚನಗಳನ್ನು ವಿಶೇಷವಾಗಿ ಮಾಡುತ್ತಿದ್ದರು. ಕನ್ನ ಕಾವ್ಯಗಳನ್ನೂ ಅದರಲ್ಲಿಯೂ ಮುಖ್ಯವಾಗಿ ಕನ್ನಡ ಭಾರತ, ಭಾಗವತ, ಹರಿಶ್ಚಂ ಕಾವ್ಯ ಮುಂತಾದುವನ್ನು ವಾಚನ ಮಾಡಲು ಪ್ರೇರಣೆ ಮತ್ತು ಪ್ರೋತ್ಸಾಹಗ ನ್ನಿತ್ತವರು ಕೀರ್ತಿಶೇಷರಾದ ಡಿ. ವಿ. ಜಿ. ಅವರು. ೧೯೬೪ರಿಂದಲೂ ಇವ ವಾಚನ ವ್ಯಾಖ್ಯಾನಗಳು ನಡೆಯುತ್ತಲಿವೆ. ಉತ್ತಮ ಶಾರೀರ ಮತ್ತು ವಿಶಾ ಸಾಹಿತ್ಯ ಜ್ಞಾನಗಳಿಂದ ಕೂಡಿದ ಇವರ ಕಾರ್ಯಕ್ರಮಗಳು ಅಭಿಮಾನಿಗ ಪ್ರಶಂಸೆಯನ್ನು ಪಡೆದಿವೆ. ಇವರ ಕಾರ್ಯಕ್ರಮಗಳು ವಿಶೇಷವಾಗಿ, ಗೋಖ ಸಾರ್ವಜನಿಕ ಸಂಸ್ಥೆ, ನರಸಿಂಹರಾಜ ಕಾಲೊನಿ ರಾಮಮಂದಿರ ಮತ್ತು ಸು ಮುತ್ತಲಿನ ಪ್ರದೇಶಗಳಲ್ಲಿ ನಡೆಯುತ್ತಿರುತ್ತವೆ.

೧೦೨. ಎನ್. ವಿ. ಕೃಷ್ಣದೇವರಯ್ಯ, ಸೂರಳಿ

ಇವರು ೧೯೨೩ರಲ್ಲಿ ಜನಿಸಿದರು. ಚಿಕ್ಕಮಗಳೂರು ಜಿಲ್ಲಾ ಕೊಪ್ ತಾಲ್ಲೂಕು ಸೂರಳಿಯಲ್ಲಿ ಪ್ರಾಥಮಿಕ ಶಾಲಾ ಉಪಾಧ್ಯಾಯರಾಗಿರುವರು. ೮–೧ ವರ್ಷಗಳಿಂದಲೂ ಸ್ವಂತವಾಗಿ ಗಮಕ ಕಲೆಯನ್ನು ಅಭ್ಯಾಸ ಮಾಡಿಕೊಂಡಿ ವರು. ಇವರಿಗೆ ಸೀನಿಯರ್ ಮಟ್ಟದ ಸಂಗೀತಾಭ್ಯಾಸವೂ ಆಗಿರುತ್ತದೆ. ಸುಮಾ ೧೫–೨೦ ರಾಗಗಳಲ್ಲಿ ಕುಮಾರವ್ಯಾಸ ಭಾರತ, ಲಕ್ಷ್ಮೀಶ ಭಾರತ, ಹರಿಶ್ಚಂ

ಕಾವ್ಯ, ತೊರವೆ ರಾಮಾಯಣಗಳಿಂದ ಕಥಾಭಾಗಗಳನ್ನು ಆರಿಸಿಕೊಂಡು ಗ್ರಾಮಾಂತರ ಪ್ರದೇಶಗಳಲ್ಲಿ ವಾಚನ ಮಾಡಿ ಗಮಕ ಕಲಾಸೇವೆಯನ್ನು ಮಾಡುತ್ತಿರುವರು. ಶೃಂಗೇರಿ, ತೀರ್ಥಹಳ್ಳಿ, ಕೊಪ್ಪ, ಕಳಸ ಮುಂತಾದ ಅನೇಕ ಕಡೆಗಳಲ್ಲಿ ವಾಚನ ಮಾಡಿ ಜನರ ಮೆಚ್ಚುಗೆಗೂ ಅಭಿಮಾನಕ್ಕೂ ಪಾತ್ರರಾಗಿರುವರು. ತೀರ್ಥಹಳ್ಳಿ ತಾಲ್ಲೂಕು ಬಸವಾನಿಯಲ್ಲಿ ಗಮಕ ಪ್ರವೇಶ ತರಗತಿಗೆ ಅಧ್ಯಾಪಕರಾಗಿ ಸೇವೆ ಸಲ್ಲಿಸಿರುವರು. ಅಲ್ಲದೆ ಗಮಕ ಪರೀಕ್ಷೆಗೆ ಪರೀಕ್ಷಕರಾಗಿಯೂ ಸೇವೆ ಮಾಡಿರುವರು.

೧೦೩. ರಂಗೋಪಂತ್ರ ರಾಮರಾವ್

ಇವರು ಬಳ್ಳಾರಿಯಲ್ಲಿ ೧೯೩೩ರಲ್ಲಿ ಜನಿಸಿದರು. ಇವರ ಸಾಮಾನ್ಯ ವಿದ್ಯಾಭ್ಯಾಸ ಎಸ್.ಎಸ್.ಎಲ್.ಸಿ. ಇವರು ರೈಲ್ವೆಸ್ಟೇಷನ್ ಮಾಸ್ಟರಾಗಿರುತ್ತಾರೆ. ಇವರ ಹಿರಿಯರು ಎಂದರೆ ತಾತಂದಿರು, ದೊಡ್ಡಪ್ಪನವರು ಮುಂತಾದವರು ಶ್ರೇಷ್ಠ ಗಮಕಿಗಳಾಗಿದ್ದರು. ಅವರಲ್ಲಿ ಕಲಿತು ಮುಂದೆ ಬಳ್ಳಾರಿಯಲ್ಲಿ ಶ್ರೀ ರಾಮಾಶಾಸ್ತ್ರಿಗಳು ನಡೆಸುತ್ತಿದ್ದ ಗಮಕ ತರಗತಿಗಳಲ್ಲಿ ಅಭ್ಯಾಸ ಮಾಡಿ ೧೯೬೯ರಲ್ಲಿ ಗಮಕ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಇವರಿಗೆ ಸುಮಾರು ೩೦-೩೫ ರಾಗಗಳ ಪರಿಚಯವಿದೆ. ಕಾವ್ಯವಾಚನವನ್ನು ೩೦ ವರ್ಷಗಳಿಂದಲೂ ಮಾಡುತ್ತಿರುವರು. ನಾಟಕಗಳಲ್ಲಿ ಅಭಿನಯಿಸುವುದು ಮತ್ತು ಚಿತ್ರಕಲೆ ಇವರ ಹವ್ಯಾಸಗಳು.

೧೦೪. ಪಿ. ಸುಬ್ಬಲಕ್ಷಮ್ಮ, ಬಳ್ಳಾರಿ

ಇವರು ೧೯೩೩ರಲ್ಲಿ ಜನಿಸಿದರು. ಗ್ರಾಮಾಂತರದಲ್ಲಿ ವಾಸಿಸುತ್ತಿದ್ದ ಇವರು ಶಾಲೆಯಲ್ಲಿ ಕಲಿತವರಲ್ಲ. ಹಾಗಿದ್ದರೂ ಒದಗಿದ ಅನುಕೂಲ ಪ್ರಸಂಗಗಳನ್ನು ಸದುಪಯೋಗಪಡಿಸಿಕೊಂಡು ಸಂಗೀತದಲ್ಲಿ ಸೀನಿಯರ್ ಪರೀಕ್ಷೆಯನ್ನು ಮಾಡಿರುವರು. ಇವರು ಗಮಕ ಕಲೆಯನ್ನು ಗಮಕ ವಿದ್ವಾನ್ ಶ್ರೀ ರಾಮಾಶಾಸ್ತ್ರಿಗಳಲ್ಲಿ ಅಭ್ಯಾಸ ಮಾಡಿ ೧೯೬೪ರಲ್ಲಿ ಗಮಕ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರು. ಮನೆಯಲ್ಲಿಯೇ ಗಮಕ ತರಗತಿಗಳನ್ನು ನಡೆಸಿ ಕಲಿಯಲು ಬಂದ ಹೆಣ್ಣು ಮಕ್ಕಳಿಗೆ ಸಂಗೀತ ಮತ್ತು ಗಮಕವನ್ನು ಕಲಿಸುತ್ತಿರುವರು. ಈಕೆಯ ಪ್ರಾಥಮಿಕ ಹಿರಿಯ ಪಾಠಶಾಲೆಯಲ್ಲಿ ಉಪಾಧ್ಯಾಯಿನಿಯಾಗಿರುವರು.

೧೦೫. ಹ. ವೇ. ಲಕ್ಷ್ಮೀನಾರಾಯಣ, ಚಿಕ್ಕಮಂಗಳೂರು

ಇವರು ೬-೨-೧೯೨೫ರಲ್ಲಿ ನಂಜನಗೂಡು ತಾಲ್ಲೂಕು ಹತ್ವಾಳು ಗ್ರಾ
ದಲ್ಲಿ ಜನಿಸಿದರು. ಇವರ ತಂದೆ ಶ್ರೀ ವೆಂಕಟಸುಬ್ಬಯ್ಯನವರು, ತಾಯಿ ಶ್ರೀಮ
ಲಕ್ಷಮ್ಮನವರು. ಇವರು ಮೈಸೂರು ಕನ್ನಡ ಪಂಡಿತ ಪರೀಕ್ಷೆ ಮಾಡಿಕೊಂ
ಪ್ರೌಢಶಾಲಾ ಅಧ್ಯಾಪಕರಾಗಿರುತ್ತಾರೆ. ಸಂಗೀತದ ಪರಿಚಯವಿದೆ. ವಾಚ
ವ್ಯಾಖ್ಯಾನಗಳನ್ನು ಮಾಡುವರು. ಕವಿತೆಗಳ ರಚನೆಯಲ್ಲೂ ಪರಿಶ್ರಮವಿದೆ. ಇ
ರಿಗೆ ಗಮಕ ಕಲೆಯಲ್ಲಿ ಮಾರ್ಗದರ್ಶನ ಮಾಡಿದ ಗುರುಗಳು ಶ್ರೀ ಕೋಳಗಾ
ಗ್ರಾಮದ ಕೆ. ಎನ್. ಸುಬ್ರಹ್ಮಣ್ಯ ಯಾನೆ ವಜ್ರಪ್ಪನವರು. ಇವರಿಂದ
ಶ್ರೀಯುತರು ಗಮಕ ಕಲೆಗಳನ್ನು ಕಲಿತರು. ಲಕ್ಷ್ಮೀಶನ ಭಾರತ, ಗದುಗಿ
ಭಾರತ, ವಾಚನಗಳಲ್ಲಿ ಇವರಿಗೆ ಬಲು ಇಷ್ಟವಾದುವು. ಸಂಸ್ಕೃತಿ ಪ್ರಸಾರ ಕಾ
ಕ್ರಮದಲ್ಲಿ ಹಗ್ಗದದೇವನಕೋಟೆ ತಾಲ್ಲೂಕಿನಲ್ಲಿ ವಾಚನ ಮಾಡಿರುವರು. ಎಂ
ವರ್ಷಗಳಿಂದ ಚಿಕ್ಕಮಗಳೂರಿನಲ್ಲಿ ಗಮಕ ತರಗತಿಗಳನ್ನು ನಡೆಸುತ್ತ ಸೇವೆ ಸಲ್ಲಿ
ತ್ತಿರುವರು. ಚಿಕ್ಕಮಗಳೂರಿನ ಶಂಕರಮಠದಲ್ಲಿ ಈಗ ವಾಚನವನ್ನು ನಡೆಸುತ್ತಿ
ವರು. ಮೈಸೂರು ಕನ್ಯಕಾಪರಮೇಶ್ವರಿ, ಕಾಳಿಕಾಂಬಾ, ಚಾಮುಂಡೇಶ್ವರಿ ದೇವ
ಲಯಗಳಲ್ಲಿ ಸತತವಾಗಿ ೬-೭ ವರ್ಷಗಳ ಕಾಲ ವಾಚನ ಮಾಡಿರುವರು. ಮಾ
ಮಹಾರಾಣಿಯವರ ನೇತೃತ್ವದಲ್ಲಿ ಭೋಗಾದಿ ಗ್ರಾಮದ ಬಳಿ ಭೋಗೇಶ್ವರ ದೇವ
ಲಯದ ಅರಮನೆಯ ತೋಟದಲ್ಲಿಯೂ ಇವರ ಕಾವ್ಯವಾಚನ ಕಾರ್ಯಕ್ರಮ ನ
ದಿರುತ್ತದೆ. ಮಿತ್ರರಾದ ಶ್ರೀ ಎಸ್. ಆರ್. ಗೋವಿಂದರಾಜ್‌ರೊಡನೆ ವಾಚ
ಮತ್ತು ಅನುವಾದ ಪೂರ್ವಕ ವಿಮರ್ಶೆ ಮಾಡಿರುವರು. ಅನೇಕ ಕನ್ನಡ ಕಾವ್ಯ
ವಾಚನ ಮಾಡಿರುವರು.

೧೦೬. ಟಿ. ಎಸ್. ನಂಜುಂಡಶಾಸ್ತ್ರಿಗಳು, ಚಿಕ್ಕಮಗಳೂರ

ಇವರು ೫-೫-೧೯೨೫ರಲ್ಲಿ ಬೆಂಗಳೂರು ಜಿಲ್ಲಾ ಮಾಗಡಿ ತಾಲ್ಲೂ
ತಾವರೇಕೆರೆಯಲ್ಲಿ ಜನಿಸಿದರು. ಇವರ ತಂದೆ ಶ್ರೀ ಟಿ. ಶಾಮಾಶಾಸ್ತ್ರಿಗಳು, ತಾ
ಶ್ರೀಮತಿ ಸುಬ್ಬಲಕ್ಷಮ್ಮನವರು. ಇಂಟರ್ಮೀಡಿಯಟ್ ವಿದ್ಯಾಭ್ಯಾಸವನ್ನು ಮುಗಿ
ಕೊಂಡು ಕಾಫಿ ಬೋರ್ಡಿನಲ್ಲಿ ಅಸಿಸ್ಟೆಂಟ್ ಕಾಫಿ ಮಾರ್ಕೆಟಿಂಗ್ ಆಫೀಸರಾ

ಚಿಕ್ಕಮಗಳೂರಿನಲ್ಲಿ ಉದ್ಯೋಗದಲ್ಲಿರುವರು. ಸ್ವಲ್ಪಕಾಲ ಸಂಗೀತವನ್ನು ಅಭ್ಯಾಸ ಮಾಡಿರುವರು. ವರ್ಣಗಳನ್ನು ಹಾಡಬಲ್ಲರು. ಬಾಲ್ಯದಲ್ಲಿ ಇವರ ಅಜ್ಜಂದಿರು ಶ್ರೀ ದಕ್ಷಿಣಾಮೂರ್ತಿ ಶಾಸ್ತ್ರಿಗಳು ಪ್ರತಿದಿನವೂ ತಮ್ಮ ಊರಿನ ದೇವಸ್ಥಾನದಲ್ಲಿ ರಾಮಾಯಣವಾಚನ ಪ್ರವಚನಗಳನ್ನು ಮಾಡುತ್ತಿದ್ದುದನ್ನು ಕೇಳಿ ಅವರಲ್ಲಿಯೇ ಸಂಸ್ಕೃತ ಶ್ಲೋಕಗಳನ್ನು ರಾಗ ಮಾರ್ಗದಲ್ಲಿ ಹೇಳುವುದನ್ನು ಕಲಿತಿದ್ದರು. ೧೯೪೫ರಲ್ಲಿ ಪರಿಷತ್ತಿನಲ್ಲಿ ನಡೆಸುತ್ತಿದ್ದ ಗಮಕ ತರಗತಿಗಳಲ್ಲಿ ಕಾವ್ಯವಾಚನದ ಶಿಕ್ಷಣ ಪಡೆದು ಗಮಕ ಪ್ರವೇಶದ ಪರೀಕ್ಷೆಯಲ್ಲಿಯೂ, ೧೯೫೨-೫೩ರಲ್ಲಿ ಗಮಕ ಪ್ರೌಢ ಪರೀಕ್ಷೆಯಲ್ಲಿಯೂ ಉತ್ತೀರ್ಣರಾದರು. ಇವರಿಗೆ ಗಮಕ ಕಲಿಸಿದವರು ಪ್ರಾರಂಭದಲ್ಲಿ ಗಮಕಿ ಶ್ರೀ ಎಂ. ಎಸ್. ಚಂದ್ರಶೇಖರಯ್ಯನವರು ; ಅನಂತರದಲ್ಲಿ ಗಮಕಿ ಶ್ರೀ ಎಂ. ರಾಘವೇಂದ್ರರಾಯರು. ಇವರಿಗೆ ಷಟ್ಪದೀ ಕಾವ್ಯಗಳ ವಾಚನದಲ್ಲಿ ಅಭಿರುಚಿ ಹೆಚ್ಚು. ಇವರು ಅಧ್ಯಾಪಕರಾಗಿದ್ದು ಗಮಕ ತರಗತಿಗಳನ್ನು ೧೯೬೨ ರಿಂದ ೬೫ರ ವರೆಗೆ ಹಾಸನದಲ್ಲಿಯೂ, ೧೯೬೫ ರಿಂದ ಶೃಂಗೇರಿಯಲ್ಲಿಯೂ ನಡೆಸುತ್ತಿರುವರು. ಉತ್ಸವ ಸಮಾರಂಭಗಳಲ್ಲಿ ಅನೇಕ ಸಂಘ ಸಂಸ್ಥೆಗಳಲ್ಲಿಯೂ ದೇವಾಲಯಗಳಲ್ಲಿಯೂ ಮಿತ್ರಗೋಷ್ಠಿಗಳಲ್ಲಿಯೂ ಇವರ ಕಾವ್ಯವಾಚನಗಳು ಹಾಸನ, ಶೃಂಗೇರಿ ಮತ್ತು ಬೆಂಗಳೂರಿನಲ್ಲಿ ನಡೆದಿವೆ.

೧೦೭. ಕೆ. ಎನ್. ನರಸಿಂಹಮೂರ್ತಿ, ಬೆಂಗಳೂರು

ಇವರು ೬-೧೨-೧೯೨೩ರಲ್ಲಿ ಸಂಜನಗೂಡು ತಾಲ್ಲೂಕು ಕಳಲೆ ಗ್ರಾಮದಲ್ಲಿ ಜನಿಸಿದರು. ತಂದೆ ಶ್ರೀ ಕೆ. ನಾರಾಯಣರಾವ್ ; ತಾಯಿ, ಶ್ರೀಮತಿ ವೆಂಕಮ್ಮನವರು. ಎಸ್. ಎಸ್. ಎಲ್. ಸಿ. ಮುಗಿಸಿಕೊಂಡು ಕಾಲೇಜು ವಿದ್ಯಾಭ್ಯಾಸದ ನಿರ್ದೇಶಕರ ಕಛೇರಿಯಲ್ಲಿ ಉದ್ಯೋಗದಲ್ಲಿರುವರು. ಕೇಳ್ಮೆಯಿಂದಲೇ ಸಂಗೀತದ ಒಲವನ್ನು ಹೊಂದಿದ್ದು ಸ್ವಂತ ಅಭ್ಯಾಸದಿಂದ ಕೀರ್ತನೆಗಳನ್ನು ಹಾಡಬಲ್ಲರು, ಗಮಕ ಕಲೆಯನ್ನು ಕಲಿಯಲು ಇವರನ್ನು ಪ್ರೇರಿಸಿದವರು ಪ್ರೌಢಶಾಲೆಯ ಕನ್ನಡ ಪಂಡಿತರಾಗಿದ್ದ ಶ್ರೀ ಎಸ್. ವೆಂಕಟೇಶಯ್ಯನವರು ನಡೆಸುತ್ತಿದ್ದ ಗಮಕ ತರಗತಿಯಲ್ಲಿ ಅಭ್ಯಾಸ ಮಾಡಿ ೧೯೭೦-೭೨ರಲ್ಲಿ ಪ್ರವೇಶ ಮತ್ತು ಪ್ರೌಢ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವರು. ಅಂದಿನಿಂದಲೂ ಕಾವ್ಯವಾಚನಗಳನ್ನು ನಡೆಸಿ ವ್ಯಾಖ್ಯಾನವನ್ನು ಮಾಡಿ ಶ್ರೋತೃವರ್ಗದ ಮೆಚ್ಚಿಕೆಯನ್ನು ಪಡೆದಿರುವರು. ಈಚೆಗೆ ಕುಶಲವ ಗಮಕ ಕಲಾ ಸಂಘ ಮತ್ತು ಶ್ರೀರಾಮ ಸೇವಾ ಮಂಡಲಿಗಳಲ್ಲಿ ಗಮಕ ತರಗತಿ

ಗಳನ್ನು ನಡೆಸುತ್ತಿರುವರು. ಇವರ ಕಾರ್ಯಕ್ರಮಗಳು ಕಮಾರಾ ಪಾರ್ಕ್ ಬಡಾವಣ
ಯಲ್ಲಿರುವ ಶ್ರೀ ಲಕ್ಷ್ಮೀ ಮಂದಿರದಲ್ಲಿ ಸಾಮಾನ್ಯವಾಗಿ ನಡೆಯುತ್ತಿರುತ್ತವೆ.

೧೦೮. ಆರ್. ಅನಂತರಾಮು, ಮೈಸೂರು

ಇವರು ೨೫-೧೦-೧೯೨೩ ರಲ್ಲಿ ಜನಿಸಿದರು. ಇವರ ಮಾತಾಪಿತೃಗಳ
ಶ್ರೀಮತಿ ಪಾರ್ವತಮ್ಮನವರು ಮತ್ತು ಶ್ರೀರಾಂಪುರದ ರಾಮಯ್ಯನವರು. ಶ್ರ
ಅನಂತರಾಮು ಅವರು ಎಂ.ಎ., ಎಂ.ಎಡ್. ಪದವೀಧರರು. ಹಾಲಿ ರಾಜ
ಶಿಕ್ಷಣ ಸಂಶೋಧನೆ ಮತ್ತು ತರಪೇತಿ ಇಲಾಖೆಯಲ್ಲಿ ರೀಡರ್ ಆಗಿ ಸೇವೆಸಲ್ಲಿಸ
ತ್ತಿದ್ದಾರೆ. ಕನ್ನಡ, ಇಂಗ್ಲೀಷು, ಹಿಂದೀ ಮತ್ತು ಸಂಸ್ಕೃತ ಭಾಷೆಗಳಲ್ಲಿ ಆಳವಾ
ಅಭ್ಯಾಸಮಾಡಿ ಅನುಭವ ಗಳಿಸಿರುತ್ತಾರೆ.

ಗಮಕವನ್ನು ಶ್ರೀಯುತರು ಹವ್ಯಾಸವಾಗಿ ಬೆಳೆಸಿಕೊಂಡರು. ಇವ
ತಾಯಿಯವರು ಗಮಕದಲ್ಲಿ ಪರಿಣತಿಯನ್ನು ಪಡೆದವರಾಗಿದ್ದರು. ಇವರ ಅಜ್ಜ
ಯವರು ಶ್ರೀಮತಿ ದಿ. ನರಸಮ್ಮನವರು ಮೈಸೂರಿನ ಮಹಾರಾಣೀ ಮಾಧ್ಯಮಿ
ಶಾಲೆಯಲ್ಲಿ ಮುಖ್ಯೋಪಾಧ್ಯಾಯಿನಿಯಾಗಿದ್ದು ಸಾಹಿತ್ಯ ಮತ್ತು ಸಂಗೀತಗಳ
ಪಾಂಡಿತ್ಯ ಪಡೆದಿದ್ದರು. ಹೀಗಾಗಿ ಶ್ರೀಯುತರ ಗಮಕ ಕಲಾ ಅಭಿರುಚಿ ಮತ್ತ
ಪರಿಣತಿಗಳಿಗೆ ಮಾತೃವಂಶ ಕೃಪೆಯೇ ಕಾರಣವಾಯಿತು. ಇವರ ಧ್ವನಿ ಗಡುಸ
ಗಿದ್ದು ಗಮಕಕ್ಕೆ ಒಗ್ಗಿರುತ್ತದೆ. ಇವರಿಗೆ ಕುಮಾರವ್ಯಾಸನಮೇಲೆ ಅತಿಶಯವಾ
ವ್ಯಾಮೋಹ. ಸುಮಾರು ಇಪ್ಪತ್ತು ವರ್ಷಗಳಿಂದಲೂ ಅಲ್ಲಲ್ಲಿ ಕಾವ್ಯವಾಚ
ಮಾಡುತ್ತ ಬಂದಿದ್ದಾರೆ. ಬಾನುಲಿಯಲ್ಲಿ, ಗುರುಪೀಠಗಳಲ್ಲಿ, ಮಿತ್ರಗೋಷ್ಠಿಗಳ
ಇವರ ಕಾವ್ಯವಾಚನಗಳು ನಡೆದಿವೆ. ಕುವೆಂಪು ರಾಮಾಯಣದರ್ಶನಂ ವಾಚ
ಸ್ಪರ್ಧೆಯಲ್ಲಿ ಬಹುಮಾನಗಳಿಸಿರುತ್ತಾರೆ. ಸಂಸ್ಕೃತಿ ಪ್ರಸಾರ ಯೋಜನೆಯ ಅಂ
ವಾಗಿ ಅನೇಕ ಕಡೆಗಳಲ್ಲಿ ಇವರ ವಾಚನಗಳು ನಡೆದಿವೆ. ಗಮಕ ಕಲೆಯೇ ಅಲ್ಲದ
ಕಾವ್ಯರಚನೆ, ನಾಟಕಗಳಲ್ಲಿ ಪಾತ್ರವಹಿಸುವುದು, ಲೇಖನಗಳನ್ನು ಬರೆಯುವು
ರಲ್ಲಿಯೂ ಇವರು ಸಾಕಷ್ಟು ಪರಿಶ್ರಮ ಹೊಂದಿರುತ್ತಾರೆ. ಇವರ ಕವನ ಸಂಗ್ರ
"ಬಿಡಿಮುತ್ತುಗಳು" ಮತ್ತು ಬೋಧನೆಗೆ ಸಂಬಂಧಿಸಿದ ಗ್ರಂಥ "ಕನ್ನಡ ಭಾಷ
ಬೋಧನೆ" ಮುದ್ರಿತವಾಗಿ ಹೆಸರುಪಡೆದಿವೆ. ಶಿಕ್ಷಣ ಕ್ಷೇತ್ರದಲ್ಲಿಯೂ ಹೆಸರುವಾ
ಯಾಗಿರುತ್ತಾರೆ.

೧೦೯. ಎಲ್. ಸಿದ್ಧಲಿಂಗದೇವರು, ತುಮಕೂರು

ಇವರು ೬-೬-೧೯೨೪ ರಲ್ಲಿ ಜನಿಸಿದರು. ತುಮಕೂರು ತಾಲ್ಲೋಕು ಅರೆಯೂರು ಗ್ರಾಮದ ಶ್ರೀಮತಿ ರುದ್ರಮ್ಮ ಮತ್ತು ಛೇರ್ಮನ್ ಲಿಂಗಣ್ಣ ಇವರ ಮಾತಾಪಿತೃಗಳು. ಮಾಧ್ಯಮಿಕ ಶಾಲೆಯಲ್ಲಿ ವ್ಯಾಸಂಗ. ಅನಂತರ ಮೈಸೂರು ಬೆಂಗಳೂರುಗಳಲ್ಲಿ ವ್ಯಾಸಂಗಮಾಡಿ ಅಲಂಕಾರಶಾಸ್ತ್ರ ವಿದ್ವತ್ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಹತ್ತು ವರ್ಷಗಳು ವೇದಾಧ್ಯಯನ ಮಾಡಿದರು. ಪರಿಷತ್ತಿನ ಜಾಣಪರೀಕ್ಷೆಯಲ್ಲಿಯೂ ೧೯೪೫ ಗಮಕ ಪ್ರವೇಶ ಪರೀಕ್ಷೆಯಲ್ಲಿಯೂ ಉತ್ತೀರ್ಣರಾದರು. ಇವರ ಗಮಕ ಗುರುಗಳು ವಿದ್ವಾನ್ ಕಳಲೆ ಸಂಪತ್ಕುಮಾರಾಚಾರ್ಯರು. ೧೯೫೬ ರಲ್ಲಿ ವಿದ್ವಾನ್ ಎಂ. ರಾಘವೇಂದ್ರರಾಯರಲ್ಲಿ ಶಿಷ್ಯರಾಗಿ ಗಮಕ ಪ್ರೌಢ ಪರೀಕ್ಷೆಯಲ್ಲೂ ಉತ್ತೀರ್ಣರಾದರು. ಕನ್ನಡ ಪಂಡಿತ ಮಧ್ಯಮ ಪರೀಕ್ಷೆ, ಹಿಂದೀ ರಾಷ್ಟ್ರಭಾಷಾ, ತಿರುಪತಿಯಲ್ಲಿನ ಸಂಸ್ಕೃತ "ಶಿಕ್ಷಾಶಾಸ್ತ್ರೀ" ಪರೀಕ್ಷೆಗಳಲ್ಲೂ ಉತ್ತೀರ್ಣರಾಗಿರುವರು. ಶ್ರೀಯುತರು ತುಮಕೂರು ಸರ್ಕಾರೀ ಜೂನಿಯರ್ ಕಾಲೇಜಿನಲ್ಲಿ ಉಪನ್ಯಾಸಕರಾಗಿದ್ದಾರೆ. ೧೯೬೧ ರಿಂದ ಇವರು ಮಂಡ್ಯ, ಈಗ ತುಮಕೂರುಗಳಲ್ಲಿ ಗಮಕ ಪ್ರವೇಶ, ಪ್ರೌಢ ತರಗತಿಗಳನ್ನು ತೆರೆದು ಅಧ್ಯಾಪಕರಾಗಿರುತ್ತಾರೆ. ಇವರು ೩೫ ರಾಗಗಳ ಪರಿಚಯ ಹೊಂದಿದ್ದಾರೆ. ಕನ್ನಡ, ಸಂಸ್ಕೃತ, ಹಿಂದೀ ಸಾಹಿತ್ಯಗಳಲ್ಲಿ ಪಾಂಡಿತ್ಯಗಳಿಸಿ ಕಾವ್ಯವಾಚನ ಮತ್ತು ವ್ಯಾಖ್ಯಾನಗಳಿಗೆ ಅಗತ್ಯವಾದ ಸಂಪತ್ತು, ಅನುಭವಗಳನ್ನು ಪಡೆದಿರುತ್ತಾರೆ. ಷಟ್ಪದಿ ಇವರಿಗೆ ಸುಲಭ ಸ್ವಾಧೀನವಾಗಿದೆ. "ಕವಿಯ ಅಡುಗೆ, ಗಮಕಿಯ ಕೊಡುಗೆ" ಎಂಬ ಲೇಖನವನ್ನು ಪ್ರಕಟಿಸಿದ್ದಾರೆ. ವಿಮರ್ಶಾ ಲೇಖನಗಳನ್ನೂ ಸಿದ್ಧಗೊಳಿಸಿರುತ್ತಾರೆ. ಸಂಸ್ಕೃತ ಕನ್ನಡ ನಾಟಕಗಳಲ್ಲಿ ಪಾತ್ರವಹಿಸಿ ಬಹುಮಾನಿತರಾಗಿದ್ದಾರೆ. ಮಠಗಳಲ್ಲಿ, ಸಮಾಜಸಂಸ್ಥೆಗಳಲ್ಲಿ, ಉತ್ಸವ ಸಂದರ್ಭಗಳಲ್ಲಿ ಭಾಷಣ, ಕಾವ್ಯವಾಚನ, ಪ್ರವಚನಗಳನ್ನು ಮಾಡುತ್ತ ಬಂದಿದ್ದಾರೆ. ಅಪಾರ ಶಿಷ್ಯ ಸಂಪತ್ತನ್ನು ಗಳಿಸಿರುತ್ತಾರೆ. ೧೯೫೬ ರಲ್ಲಿ ಪೂಜ್ಯ ಗುರು ಶ್ರೀ 'ಜ.ಚ.ನಿ'ಯವರು ತಮ್ಮ ಸನ್ನಿಧಿಗೆ ಇವರನ್ನು ಬರಮಾಡಿಕೊಂಡು ಇವರಿಗೆ 'ಗಮಕ ಕಲಾನಿಪುಣ' ಎಂಬ ಪ್ರಶಸ್ತಿಯನ್ನಿತ್ತು ಆಶೀರ್ವದಿಸಿರುತ್ತಾರೆ. ತುಮಕೂರು ಜಿಲ್ಲಾ ಪರಿಷತ್ತಿನಿಂದ ಸನ್ಮಾನ ಪತ್ರವೂ ಇವರಿಗೆ ಅರ್ಪಿತವಾಗಿದೆ. ಇವರಲ್ಲಿ ಶಿಷ್ಯರ ಬಗ್ಗೆ ಅಪಾರ ವಾತ್ಸಲ್ಯವಿದೆ.

೧೧೦. ಹೆಚ್. ಡಿ. ಚಿಕ್ಕಣ್ಣ, ಹೊನ್ನವಳ್ಳಿ

ಇವರು ತಿಪಟೂರು ತಾಲ್ಲೂಕ್ ಹೊನ್ನವಳ್ಳಿಯಲ್ಲಿ ೯-೬-೧೯೨೪ ರ
ಜನಿಸಿದರು. ಇವರ ತಂದೆ ಶ್ರೀ ಬಡಪ್ಪನ ದೊಡ್ಡೇಗೌಡರು. ತಾಯಿ ಲಕ್ಕ್ಮವ
ಇವರು ಪ್ರೌಢಶಾಲೆಯಲ್ಲಿ ವ್ಯಾಸಂಗಮಾಡಿ ಶಾಲಾ ಉಪಾಧ್ಯಾಯರಾಗಿರುವ
ಇವರಿಗೆ ರಾಗ ಜ್ಞಾನ ತಕ್ಕಮಟ್ಟಿಗಿದೆ. ರೇವಣಸಿದ್ಧೇಶ್ವರಸ್ವಾಮಿ ಮಠದ ಭಜ
ಮಂಡಲಿಯಲ್ಲಿ ದೇವರನಾಮಗಳನ್ನೂ ಯಕ್ಷಗಾನ ವಾಚನವನ್ನೂ ಕಲಿತರು
ಇವರಿಗೆ ಯಕ್ಷಗಾನ ಬಯಲು ಕಥೆ ಮತ್ತು ನಾಟಕಗಳಲ್ಲಿ ಅಭಿನಯಿಸುವುದರ
ಪರಿಶ್ರಮವುಂಟು. ಉಪಾಧ್ಯಾಯರ ಸಂಘ ಸಭೆಗಳಲ್ಲಿ ದೇವರನಾಮ ಹಾ
ವುದು, ಕಾವ್ಯವಾಚನ, ಲಾವಣಿ ಮತ್ತು ಜನಪದ ಗೀತೆಗಳ ಕಾರ್ಯಕ್ರಮಗಳ
ಭಾಗವಹಿಸುತ್ತಿದ್ದರು. ಶಾಲೆಯ ಹುಡುಗರಿಂದ ನಾಟಕಗಳನ್ನು ಆಡಿಸಿರುವರು
ಇವರು ಟಿ.ಸಿ.ಹೆಚ್. ತರಬೇತಿಗೆ ೧೯೭೧ ರಲ್ಲಿ ತುಮಕೂರಿಗೆ ಹೋಗಿದ್ದಾಗ ಅ
ಗಮಕಿ ಸಿದ್ಧಲಿಂಗದೇವರು ಮತ್ತು ಹೆಚ್. ಆರ್. ಸುಂದರಮ್ಮನವರು ನಡೆ
ತ್ತಿದ್ದ ಗಮಕ ತರಗತಿಗಳಲ್ಲಿ ಕಲಿತು ಗಮಕ ಪ್ರವೇಶ ಪರೀಕ್ಷೆಯಲ್ಲಿ ಉತ್ತೀ
ರಾದರು. ತುಮಕೂರು ಮತ್ತು ಅದರ ಸುತ್ತಮುತ್ತ ನಡೆಯುವ ಸಾಂಸ್ಕೃತಿ
ಕಾರ್ಯಕ್ರಮಗಳಲ್ಲಿ ಭಾಗವಹಿಸಿ ದೇವರನಾಮ, ಕಾವ್ಯವಾಚನ, ಜನಪದಗೀ
ಭಾವಗೀತೆ, ಲಾವಣಿಗಳನ್ನು ಹಾಡುವರು.

೧೧೧. ವೈ. ಕೆ. ತಿಮ್ಮರಸಯ್ಯ, ತೀರ್ಥಹಳ್ಳಿ

ಇವರು ಯಳ್ಳಂಬಳಸೆ ಗ್ರಾಮದಲ್ಲಿ ೨೮-೮-೧೯೨೪ ರಲ್ಲಿ ಜನಿಸಿದರು
ಇವರ ತಂದೆ ಶ್ರೀ ಯಳ್ಳಂಬಳಸೆ ಕೃಷ್ಣಸ್ವಾಮಯ್ಯನವರು. ತಾಯಿ ಶ್ರೀಮ
ಸೀತಮ್ಮನವರು. ಮೆಟ್ರಿಕ್ಯುಲೇಷನ್ ಪರೀಕ್ಷೆ ಆಗಿರುತ್ತೆ. ಈಗ ತೀರ್ಥಹಳ್ಳಿಯ
ಸಮಾಜಶಿಕ್ಷಣಾಧಿಕಾರಿಗಳಾಗಿರುತ್ತಾರೆ. ಇವರಿಗೆ ಬಾಲ್ಯದಿಂದಲೂ ಸಂಗೀತದ
ಆಸಕ್ತಿಯಿತ್ತು. ಅದನ್ನು ವೃದ್ಧಿಸಿಕೊಂಡು ಬಂದಿರುತ್ತಾರೆ. ಇವರಿಗೆ ಮೊ
ಲಿಂದಲೂ ಸಾಹಿತ್ಯದಲ್ಲಿ ಬಹಳ ಆಸಕ್ತಿಯಿದ್ದಿತು. ಇವರಿಗೆ ಪದ್ಯರಚನೆಯು
ವಂಶಪಾರಂಪರ್ಯವಾಗಿ ಕರಗತವಾಗಿದೆ. ದಿವಂಗತ ಗಮಕಿ ಬಿಂದೂರಾಯ
ಶಿವಮೊಗ್ಗೆಯಲ್ಲಿ ಗಮಕ ತರಗತಿಯನ್ನು ಪ್ರಾರಂಭಿಸಿದಾಗ ಇವರಿಗೆ ಆಸ
ಮೂಡಿತು. ಶ್ರೀ ವೆಂಕಟೇಶಯ್ಯನವರಲ್ಲಿ ಗಮಕವನ್ನು ಅಭ್ಯಾಸಮಾ

ದರು, ಮತ್ತು ಶಿವಮೊಗ್ಗೆಯಲ್ಲಿ ಪ್ರಥಮವಾಗಿ ಗಮಕ ತರಗತಿಗಳನ್ನು ಪ್ರಾರಂಭಿಸಿದರು. ಇವರಿಗೆ ಗಮಕ ಪ್ರವೇಶ ಪರೀಕ್ಷೆಯಾಗಿದೆ. ಸುಮಾರು ಹತ್ತು ಹದಿನೈದು ವರ್ಷಗಳ ವಾಚನಾನುಭವವಿರುತ್ತದೆ. ಕುಮಾರವ್ಯಾಸಭಾರತವು ಇವರ ಪ್ರಿಯವಾದ ವಾಚನ ಕಾವ್ಯ. ಶ್ರೀ ಹನುಮಂತಯ್ಯನವರ ಕಾಲದಲ್ಲಿ ಇವರೂ ಗಮಕಿಯಾಗಿ ಕಲಾಸೇವೆ ಮಾಡಿರುವರು. ಸಾಹಿತ್ಯ ಪ್ರಸಾರ ಕಾರ್ಯಕ್ರಮಗಳಲ್ಲಿ ಹಲವಾರು ಸಂಘ ಸಂಸ್ಥೆಗಳಲ್ಲಿ ನೂರಾರು ಕಡೆ ಗಮಕ ವಾಚನ ಕಾರ್ಯಕ್ರಮಗಳನ್ನು ನಡೆಸಿ ಜನಾನುರಾಗಿಗಳಾಗಿದ್ದಾರೆ. ಭದ್ರಾವತಿಯ ಮಿತ್ರ ಕಲಾಮಂಡಲಿಯಲ್ಲಿ "ವಸ್ತ್ರಾಪಹರಣ" ಎಂಬ ಗಮಕ ರೂಪಕವನ್ನು ತಯಾರಿಸಿ, ನಿರ್ದೇಶಿಸಿರುತ್ತಾರೆ. ಪರಿಷತ್ತು ನಡೆಸುತ್ತಿರುವ ಪರೀಕ್ಷೆಗಳಲ್ಲದೆ, ಇತರ ಅನೇಕ ವಾಚನ ಸ್ಪರ್ಧೆಗಳಲ್ಲಿಯೂ ತೀರ್ಪುಗಾರರಾಗಿ ಸೇವೆ ಸಲ್ಲಿಸಿರುತ್ತಾರೆ. ಈ ಕಲೆಯ ಪ್ರಚಾರಕ್ಕಾಗಿ ಭಾಷಣಗಳನ್ನು ಮಾಡಿರುವುದಲ್ಲದೆ ಲೇಖನಗಳನ್ನೂ ಬರೆದಿರುತ್ತಾರೆ. ಆಳಿದ ಶ್ರೀಮನ್ಮಹಾರಾಜರಾದ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಅವರ ಸಮ್ಮುಖದಲ್ಲಿ ಸ್ವಾಗತ ಪದ್ಯ ರಚಿಸಿ, ಹಾಡಿ, ಪ್ರಶಂಸಿತರಾಗಿರುತ್ತಾರೆ. ಶೃಂಗೇರಿಯ ಶ್ರೀಗಳವರನ್ನು ಕುರಿತು ರಚಿಸಿ ಹಾಡಿದ ಗುರುಸ್ತೋತ್ರಕ್ಕೆ ಶ್ರೀಗಳವರು ಆಶೀರ್ವಚನ ಮತ್ತು ಪ್ರಶಂಸಾಪತ್ರವನ್ನು (೧೯೬೨ರಲ್ಲಿ) ನೀಡಿರುತ್ತಾರೆ. ಅನೇಕ ಕವಿಗೋಷ್ಠಿಗಳಲ್ಲಿ ಭಾಗವಹಿಸಿರುತ್ತಾರೆ. ಜನತೆಯೇ ಇವರನ್ನು "ಸರಸ ಕವಿ" ಎಂದು ಕರೆದು ಗೌರವಿಸಿರುತ್ತದೆ.

೧೧೨. ಕೆ. ಎಸ್. ಶ್ರೀನಿವಾಸಮೂರ್ತಿ, ಬೆಂಗಳೂರು

ಇವರು ೨೨-೧೧-೧೯೨೪ರಲ್ಲಿ ಗುಬ್ಬಿ ತಾಲ್ಲೋಕು ಕಡಬಾದಲ್ಲಿ ಜನಿಸಿದರು. ಇವರ ಮಾತಾಪಿತೃಗಳು ಶ್ರೀಮತಿ ವೆಂಕಟಲಕ್ಷಮ್ಮ ಮತ್ತು ಶ್ರೀ ಕೆ.ಶ್ಯಾಮರಾವ್. ಇಂಟರ್ಮೀಡಿಯಟ್‌ವರೆಗೆ ವಿದ್ಯಾಭ್ಯಾಸಮಾಡಿ ಸರ್ಕಾರದ ವಿದ್ಯಾ ಇಲಾಖೆಯಲ್ಲಿ ಅಧಿಕಾರಿಗಳಾಗಿರುವರು. ಸಂಗೀತ ಜೂನಿಯರ್ ಪರೀಕ್ಷೆಯಾಗಿದೆ; ವರ್ಣ, ಕೃತಿ, ಮತ್ತು ಕೀರ್ತನೆಗಳನ್ನು ಹಾಡಬಲ್ಲರು. ಬಾಲ್ಯದಿಂದಲೂ ಇವರಿಗೆ ಕನ್ನಡ ಸಾಹಿತ್ಯದಲ್ಲಿ ಆಸಕ್ತಿಯಿದ್ದಿತು. ಕಂಠಪಾಠ, ನಾಟಕ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನಗಳನ್ನು ಪಡೆದಿರುವರು. ಅನೇಕ ಸಾಹಿತ್ಯ ಸಂಘಗಳ ಸದಸ್ಯರಾಗಿ ಕನ್ನಡ ನುಡಿಯ ಸೇವೆ ಸಲ್ಲಿಸುತ್ತಿರುವರು. ತಾಯಿಯವರು ಹಾಡುತ್ತಿದ್ದ ಹಾಡುಗಳಿಂದಲೂ ಪಾಠಶಾಲೆಯಲ್ಲಿ ತಮ್ಮ ಉಪಾಧ್ಯಾಯರು ರಾಗವಾಗಿ ಪದ್ಯ

ಗಳನ್ನು ಹಾಡುವುದನ್ನು ಕೇಳಿಯೂ ಪ್ರೇರಿತರಾಗಿ ಗಮಕ ಕಲೆಯಲ್ಲಿ ಆ
ಯುಂಟಾಯಿತು. ಶ್ರೀ ರಾಘವೇಂದ್ರರಾಯರಲ್ಲಿ ಶಿಷ್ಯರಾಗಿ ಸೇರಿ ಗಮಕ
ಅಭ್ಯಾಸ ಮಾಡಿ ೧೯೪೪ರಲ್ಲಿ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾದರು. ೧
ರಲ್ಲಿ ಪ್ರಪ್ರಥಮವಾಗಿ ನಡೆಸಿದ ಗಮಕ ಪ್ರೌಢ ಪರೀಕ್ಷೆಗೆ ಕುಳಿತು ಎರಡನೇ
ಯಲ್ಲಿ ಉತ್ತೀರ್ಣರಾದರು. ೧೯೫೩ರಲ್ಲಿ ಗಮಕ ಶಿಕ್ಷಣ ಸಮಿತಿಯ ಸದಸ್ಯ
೧೯೬೭ರಿಂದ ವಾಚನ ವಿಭಾಗದ ಪರೀಕ್ಷಕರಾಗಿ ಸೇವೆ ಸಲ್ಲಿಸುತ್ತ ಬಂದಿರು
ಷಟ್ಪದೀ ಕಾವ್ಯಗಳು, ಭಾವಗೀತೆಗಳು ಮತ್ತು ಸಾಂಗತ್ಯ ಇವುಗಳನ್ನು ವ
ಮಾಡುವುದು ಇವರಿಗೆ ಅತ್ಯಂತ ಪ್ರಿಯವಾದುದು. ಕೆಲವು ಕಾಲ ಕೀರ್ತಿಶೇಷ
ಭಾರತದ ಬಿಂದೂರಾಯರು, ಚಂದ್ರಶೇಖರಯ್ಯನವರು, ದೇಶಿಕಾಚಾಯ
ಮತ್ತು ಕೃಷ್ಣಗಿರಿ ಕೃಷ್ಣರಾಯರಲ್ಲಿಯೂ ಅಭ್ಯಾಸ ಮಾಡಿ ಮಾರ್ಗದರ್ಶನ
ದಿರುತ್ತಾರೆ. ಸುಮಾರು ಇಪ್ಪತ್ತು ಗ್ರಾಮಗಳಲ್ಲಿ ವಾಚನ ನಡೆಸಿರುತ್ತಾರೆ. ಸಂ
ಪ್ರಸಾರ ಯೋಜನೆಯ ಅಂಗವಾಗಿ ಅನೇಕ ಸ್ಥಳಗಳಲ್ಲಿ ವಾಚನ ಮಾಡಿರುತ
ಸಭೆಗಳು, ಉತ್ಸವಗಳು, ಸಾರ್ವಜನಿಕ ಸಮಾರಂಭಗಳಲ್ಲಿ ಬೆಂಗಳೂರು, ಬಳ
ಚಿಕ್ಕಮಗಳೂರು, ದಾವಣಗೆರೆ, ಮೈಸೂರುಗಳಲ್ಲಿ ಇವರ ಕಾವ್ಯವಾಚನ
ನಡೆದಿವೆ.

೧೧೩. ಬೆಳಗೆರೆ ಪಾರ್ವತಮ್ಮ, ಬಳ್ಳಾರಿ

ಇವರು ೧೯೩೫ರಲ್ಲಿ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕು ಬೆ
ಗ್ರಾಮದಲ್ಲಿ ಜನಿಸಿದರು. ಇವರ ತಂದೆ ಶ್ರೀ ವೇ. ಬ್ರಂ. ಶ್ರೀ ಚಂದ್ರಶೇಖರಶ
ಗಳು, ತಾಯಿ ಅನ್ನಪೂರ್ಣಮ್ಮನವರು. ವಿದ್ವಾಂಸರ ಮನೆತನದಲ್ಲಿ ಬೆಳೆದ ಇ
ಸಂಗೀತ ಸಾಹಿತ್ಯಗಳು ಬಾಲ್ಯದಿಂದಲೂ ಸಹಜವಾಗಿ ಬೇಕಾಗಿದ್ದುವು. ಮ
ವಾತಾವರಣದಲ್ಲಿ ಕಾವ್ಯವಾಚನಗಳು, ನಾಟಕಾಭ್ಯಾಸಗಳು, ಹರಿಕಥೆ ವ
ಸಂಗೀತ ಸಮಾರಂಭಗಳು ನಡೆಯುತ್ತಿದ್ದುವು. ಭಾರತದ ಬಿಂದೂರಾ
ಬಳ್ಳಾರಿಗೆ ಬಂದಾಗಲೆಲ್ಲಾ ಇವರ ಮನೆಯಲ್ಲಿ ಭಾರತ ವಾಚನ ಮಾಡುತ್ತಿದ
ಇವರಿಗೂ ಕಾವ್ಯವಾಚನದ ಆಸಕ್ತಿಯು ಕೆರಳಿ, ಬಳ್ಳಾರಿಯ ಶ್ರೀ ರಾಮಾಶ
ಗಳಲ್ಲಿ ಗಮಕವನ್ನು ಕಲಿತು ಪ್ರವೇಶ ಮತ್ತು ಪ್ರೌಢ ಪರೀಕ್ಷೆಗಳಲ್ಲಿ ಉತ್ತೀ
ರಾದರು. ಸಂಗೀತವನ್ನು ಶ್ರೀ ಕುರುಡಿ ವೆಂಕಣ್ಣಾಚಾರ್ ಅವರಲ್ಲಿ ಕಲಿತು ಪ
ಯಲ್ಲೂ ತೇರ್ಗಡೆಯಾದರು. ಅಧ್ಯಾಪಕಿಯಾಗಿರುವ ಇವರು ಶಾಲೆಯ ಮಕ್ಕ
ಗಮಕ ವಾಚನ ಕಲಿಸುವುದರಲ್ಲಿ ಆಸಕ್ತಿಯನ್ನು ಹೊಂದಿರುವರು.

೧೧೪. ಟಿ. ಕೇಶವಭಟ್ಟರು ಎಂ.ಎ., ಬೆಂಗಳೂರು

ಇವರು ೧೯೨೫ನೇ ಇಸವಿಯಲ್ಲಿ ಕಾಸರಗೋಡು ತಾಲ್ಲೂಕಿನ ಬಾಯೂರು ಗ್ರಾಮದಲ್ಲಿ ಜನಿಸಿದರು. ತಂದೆ ಗೋವಿಂದಭಟ್ಟರು, ತಾಯಿ ಸಾಂತಮ್ಮನವರು. ಹೈಯರ್ ಗ್ರೇಡ್ ಉಪಾಧ್ಯಾಯರಾಗಿ ಆರು ವರ್ಷ ಕೆಲಸ ಮಾಡಿರುವರು. ಆ ಕಾಲದಲ್ಲಿ ಯಕ್ಷಗಾನ ಕಲೆಯಲ್ಲಿ ಹಾಡುಗಾರಿಕೆ ಮತ್ತು ಮೃದಂಗವಾದನಗಳನ್ನು ಅಭ್ಯಾಸ ಮಾಡಿದರು. ಕನ್ನಡ, ಸಂಸ್ಕೃತಗಳೆರಡನ್ನೂ ಹಳ್ಳಿಯಲ್ಲಿಯೇ ಅಭ್ಯಾಸ ಮಾಡಿದರು. ಆಗಾಗ ವಿದ್ವಾಂಸರ ನೆರವನ್ನೂ ಪಡೆಯುತ್ತಿದ್ದರು. ಸ್ವಂತವ್ಯಾಸಂಗ ಮಾಡಿ ಮದರಾಸಿನ ವಿದ್ವಾನ್ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಸುಮಾರು ೧೮ ವರ್ಷ ಕಾಲ ಬೇರೆ ಬೇರೆ ಕಡೆಗಳಲ್ಲಿ ಹೈಸ್ಕೂಲು ಕನ್ನಡ ಪಂಡಿತರಾಗಿ ಕೆಲಸ ಮಾಡಿದರು. ಆ ಕಾಲದಲ್ಲಿ ಮದ್ರಾಸಿನ ಇಂಟರ್ಮೀಡಿಯಟ್, ಬಿ.ಓ.ಎಲ್., ಎಂ.ಎ., ಹಿಂದೀ 'ವಿಶಾರದ' ಪರೀಕ್ಷೆಗಳಲ್ಲಿ ಉತ್ತೀರ್ಣರಾದರು. ೧೯೬೪ರಿಂದೀಚೆಗೆ ಬೆಂಗಳೂರಿನಲ್ಲಿ ಕಾಲೇಜು ಅಧ್ಯಾಪಕರಾಗಿರುತ್ತಾರೆ. ೧೯೫೬ರಲ್ಲಿ ಮಡಕೇರಿಯಲ್ಲಿದ್ದಾಗ ಗಮಕ ವಿದ್ವಾನ್ ಶ್ರೀ ಅನಂತ ಪದ್ಮನಾಭರಾಯರಲ್ಲಿ ಕಲಿತು ಗಮಕ ಪ್ರವೇಶದಲ್ಲಿ ಉತ್ತೀರ್ಣರಾದರು. ಬೆಂಗಳೂರಿನಲ್ಲಿ ಗಮಕಿ ಶ್ರೀ ರಾಘವೇಂದ್ರರಾಯರಲ್ಲಿ ವ್ಯಾಸಂಗ ಮುಂದುವರಿಸಿ ಗಮಕ ಪ್ರೌಢ ಪರೀಕ್ಷೆಯಲ್ಲೂ ಉತ್ತೀರ್ಣರಾದರು. ೧೯೫೬ ರಿಂದ ಕಾವ್ಯವಾಚನ ಮಾಡುತ್ತಿರುವರು. ದಕ್ಷಿಣ ಕನ್ನಡ ಜಿಲ್ಲೆಯ ಅನೇಕ ಸ್ಥಳಗಳಲ್ಲಿ ವಾಚನ ಮಾಡಿರುವರು. ಸಂಗೀತದಲ್ಲಿ ಸಾಮಾನ್ಯ ರಾಗ ಜ್ಞಾನವಿದೆ. ಯಕ್ಷಗಾನದಲ್ಲಿ ಹೊಂದಿರುವ ಪರಿಣತಿಯು ಗಮಕದ ಅಭ್ಯಾಸಕ್ಕೆ ಸಹಕಾರಿಯಾಗಿದೆ. ಬೆಂಗಳೂರಿನಲ್ಲಿ ಯಕ್ಷಗಾನ_ಗಮಕ ಇವೆರಡನ್ನೂ ಉಚಿತವಾಗಿ ಕಲಿಸಿ, ಈ ಕಲೆಗಳನ್ನು ಬೆಳೆಸುವುದರಲ್ಲಿ ತತ್ಪರರಾಗಿರುವರು. ಸಂಶೋಧನ, ಗ್ರಂಥ ಸಂಪಾದನೆ, ಜನಪದ ಗೀತೆಗಳನ್ನು ಕುರಿತ ಮಹಾಪ್ರಬಂಧ, ವಿಮರ್ಶೆ, ಕವಿತಾರಚನೆ, ವ್ಯಾಕರಣಶಾಸ್ತ್ರಗ್ರಂಥ ಇವುಗಳನ್ನು ರಚಿಸಿದ್ದು, ಅವು ಪ್ರಕಟವಾಗಿವೆ. ಇವರ "ಸತ್ಯಾಲೋಕನಂ" ಎಂಬ ಚಂಪೂ ಕಾವ್ಯಕ್ಕೆ ೧೯೬೦ರಲ್ಲಿ ಸರಕಾರದ ಬಹುಮಾನ ಬಂದಿರುತ್ತದೆ.

೧೧೫. ದೇವಜೀರಂಗೋ ಪಾಟೀಲ

ಇವರು ೧೨-೧-೧೯೩೫ರಲ್ಲಿ ಧಾರವಾಡ ಜಿಲ್ಲೆಯ ಹುಬ್ಬಳ್ಳಿ ತಾಲ್ಲೂ
ಕೋಳಿವಾಡದಲ್ಲಿ ಜನಿಸಿದರು. ಇವರು ಪ್ರಾಥಮಿಕ ಫೈನಲ್ಸ್ ಪರೀಕ್ಷೆ ವ
ಟಿ.ಸಿ.ಎಚ್. ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿದ್ದು ಶಿಕ್ಷಕ ವೃತ್ತಿ ನಡೆಸುತ್ತಿದ
ಕುಮಾರವ್ಯಾಸ ಜನ್ಮಸ್ಥಳವಾದ ಕೋಳಿವಾಡದಲ್ಲಿ ಜನಿಸಿದ ಇವರಿಗೆ ಕರ್ಣಾ
ಭಾರತ ಕಥಾಮಂಜರಿಯ ಪಠಣ ಪಾರಾಯಣಗಳಲ್ಲಿ ಸ್ವಾಭಾವಿಕವಾಗಿಯೇ ಆ
ಯುಂಟಾಯಿತು. ಗಮಕ ಕಲೆಯಲ್ಲಿ ಕ್ರಮವಾದ ಶಿಕ್ಷಣವಿಲ್ಲದಿದ್ದರೂ ಲಹ
ಮೇಲೆ ಯಾವುದೋ ರಾಗಮಾರ್ಗದಲ್ಲಿ ಓದುವುದನ್ನು ಅಭ್ಯಾಸ ಮಾಡಿಕೊಂ
ಮುಂದೆ ಭಾರತವನ್ನು ಆಧರಿಸಿ ರಚಿಸಲಾಗಿದ್ದ ಗೀತ ನಾಟಕಗಳಲ್ಲಿ ಅ
ರೂಪಕಗಳಲ್ಲಿ ಅಭಿನಯಿಸುವ ಅವಕಾಶವೊದಗಿದಾಗ ಇವರ ಹಾಡುಗಾರಿಕೆಗೆ ಹ
ಪ್ರಶಂಸೆ ಒದಗಿ ಬಂದಿತು. ಇವರ ಶಾರೀರ ಸೌಖ್ಯವನ್ನು ಗಮನಿಸಿದ ಪ್ರಸಿದ್ಧ
ದಿವಂಗತ ದ.ರಾ. ಜೋಷಿಯವರು ಇವರಲ್ಲಿ ಆಸಕ್ತಿ ವಹಿಸಿ ಕ್ರಮವಾಗಿ ಸಂ
ವನ್ನು ಮತ್ತು ಭಾರತವಾಚನ ಕಲೆಯನ್ನು ತಿಳಿಸಿಕೊಟ್ಟರು. ಸುಮಾರು ೧೮ ವ
ಗಳಿಂದ ಕಾವ್ಯವಾಚನ ಮತ್ತು ಅರ್ಥ ವಿವರಣೆಗಳನ್ನು ಮಾಡುತ್ತಿರುವರು. ಇ
ಹರಿಕಥೆಯನ್ನು ಮಾಡುತ್ತ, ಭಕ್ತಿಗೀತೆಗಳನ್ನು ಹಾಡುತ್ತ ದೇವತಾ ಉತ್ಸ
ಸಂದರ್ಭಗಳಲ್ಲಿ ತಮ್ಮ ಸಂಗೀತ ಹಾಗೂ ಗಮಕ ಸೇವೆಯನ್ನು ನಡೆಸಿಕೊ
ಬರುತ್ತಿರುವರು. ಇವರು ದ್ರೌಪದೀ ವಸ್ತ್ರಾಪಹರಣ, ಕೃಷ್ಣಸಂಧಾನ ವ
ಕೀಚಕವಧೆ ಮುಂತಾದ ಗೀತರೂಪಕಗಳಲ್ಲಿ ದ್ರೌಪದಿಯ ಪಾತ್ರವನ್ನು ನಿವ
ಪ್ರೇಕ್ಷಕರ ಪ್ರಶಂಸೆಯನ್ನು ಪಡೆದಿರುವರು.

೧೧೬. ಸಿ.ವಿ. ಸತ್ಯನಾರಾಯಣಶಾಸ್ತ್ರಿ, ಗುಬ್ಬಿ

ಇವರು ೨-೨-೧೯೩೫ರಂದು ಜನಿಸಿದರು. ಇವರು ಬಿ.ಎ.,ಬಿ.ಟಿ.,
ಇಡಿ. ಪದವೀಧರರಾಗಿ ಗುಬ್ಬಿಯಲ್ಲಿ ವಿದ್ಯಾಧಿಕಾರಿಗಳಾಗಿರುತ್ತಾರೆ. ತಂದೆಯ
ಸಿ. ವೆಂಕಟಸುಬ್ಬಯ್ಯನವರು ಸ್ವತಃ ಸಂಗೀತಗಾರರು. ಬೆಂಗಳೂರಿನ ಆರ್ಯ
ಶಾಲೆಯಲ್ಲಿ ವಿದ್ಯಾರ್ಥಿಯಾಗಿದ್ದಾಗಲೇ ಕನ್ನಡ ಪಂಡಿತರಾಗಿದ್ದ ಪುಟ್ಟ
ನವರು ಮತ್ತು ಬಿ.ಎಸ್. ವೆಂಕಟೇಶಯ್ಯನವರು ಪದ್ಯವಾಚನ ಮಾಡುತ್ತಿದ್ದು

ಕೇಳಿ ಪ್ರಭಾವಿತರಾದರು. ಮುಂದೆ ಗಮಕಿ ಹೆಚ್. ಕೆ. ರಾಮಸ್ವಾಮಿಯವರಲ್ಲಿ ಗಮಕ ಕಲೆಯನ್ನು ಕ್ರಮವಾಗಿ ಕಲಿತು ೧೯೬೩ ರಲ್ಲಿ ನಡೆದ ಗಮಕ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರು. ಅನಂತರ ಕೃಷ್ಣಗಿರಿ ಕೃಷ್ಣರಾಯರಲ್ಲೂ ಎಂ. ಎಸ್. ಚಂದ್ರಶೇಖರಯ್ಯನವರಲ್ಲೂ ಕೆಲವು ಕಾಲ ಗಮಕವನ್ನು ಅಭ್ಯಾಸಮಾಡಿದರು. ಭಾಮಿನೀ ಷಟ್ಪದಿ ಕಾವ್ಯಗಳನ್ನು ವಾಚನಮಾಡುವುದೇ ಇವರಿಗೆ ಹೆಚ್ಚು ಪ್ರಿಯ ವಾಗಿರುವಂತೆ ಕಂಡುಬರುತ್ತದೆ.

೧೧೭. ನೀಲಾವರ ಲಕ್ಷ್ಮೀನಾರಾಯಣರಾವ್

ಇವರು ದ. ಕ. ಜಿಲ್ಲೆಯ ಉಡುಪಿ ತಾಲ್ಲೂಕು ನೀಲಾವರ ಗ್ರಾಮದಲ್ಲಿ ೪-೧೨-೧೯೨೫ ರಂದು ಜನಿಸಿದರು. ಇವರ ತಂದೆ ಶ್ರೀ ಸೋಮೇಶಯ್ಯನವರು. ಇವರು ಸೆಕೆಂಡರೀ ಗ್ರೇಡ್ ಅಧ್ಯಾಪಕರಾಗಿದ್ದಾರೆ. ಕರ್ಣಾಟಕ ಸಂಗೀತದಲ್ಲಿ ಜೂನಿಯರ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಸಂಗೀತ ಅಧ್ಯಾಪಕರಾಗಿ ಅನೇಕ ಶಿಷ್ಯರುಗಳಿಗೆ ಸಂಗೀತ ಕಲಿಸಿರುವರು. ಇವರ ಮನೆತನದವರು ಭಾಗವತರೂ, ಐಗಳ ಮಠದ ಬೋಧಕರೂ, ಓಲೆ ಗ್ರಂಥಗಳ ಲಿಪಿಕಾರರೂ ಆಗಿದ್ದರಂತೆ. ಪ್ರಾಚೀನ ಕಾವ್ಯಗಳ ವಾಚನವನ್ನು ತಮ್ಮ ಪ್ರಾಂತ್ಯದಲ್ಲಿನ ಸಂಘಸಂಸ್ಥೆಗಳಲ್ಲಿಯೂ ಭಜನ ಮಂಡಲಿಗಳಲ್ಲಿಯೂ ಮಾಡುತ್ತಿರುವರು. ೧೯೭೫ ನೇ ಮಾರ್ಚ್ ತಿಂಗಳಲ್ಲಿ ನಡೆಸಲಾದ ಗಮಕ ಪ್ರೌಢಪರೀಕ್ಷೆಯಲ್ಲಿ ತೇರ್ಗಡೆಯಾಗಿರುವರು. ಅಂದಿನಿಂದಲೂ ಕೊಕ್ಕರ್ಣೆ ಕೆ. ಯು. ಟಿ. ಟಿ. ವಿದ್ಯಾಲಯದಲ್ಲಿ ಗಮಕ ಕೇಂದ್ರವನ್ನು ನಡೆಸುತ್ತಿರುವರು.

೧೧೮. ಎನ್. ಬಿ. ರಾಮಯ್ಯ

ಇವರು ೧೯೨೭ ನೇ ಇಸವಿಯಲ್ಲಿ ಹಾಸನ ಜಿಲ್ಲಾ, ಚನ್ನರಾಯಪಟ್ಟಣದ ತಾಲ್ಲೂಕು ನೂರನ ಹಳ್ಳಿಯಲ್ಲಿ ಜನಿಸಿದರು. ಎಸ್.ಎಸ್.ಎಲ್.ಸಿ.ಯಾಗಿದೆ. ಅದರ ಜೊತೆಗೆ ಸಂಸ್ಕೃತ ಕಾವ್ಯ, ಹಿಂದೀ ಮಾಧ್ಯಮ ಪರೀಕ್ಷೆಗಳಲ್ಲೂ ತೇರ್ಗಡೆ ಯಾಗಿದ್ದಾರೆ. ಮಾಧ್ಯಮಿಕ ಶಾಲೆಯಲ್ಲಿ ಅಧ್ಯಾಪಕರಾಗಿರುವರು. ಚನ್ನರಾಯ ಪಟ್ಟಣದ ಕನ್ನಡ ಪಂಡಿತರಾದ ಶ್ರೀನಿವಾಸಯ್ಯಂಗಾರ್ಯರು ಹಾಗೂ ಗಮಕಿ ವೀರಭದ್ರಶೆಟ್ಟಿಯವರು ಇವರು ಗಮಕ ಕಲೆಯನ್ನು ಪರಿಚಯಮಾಡಿಕೊಟ್ಟರು

ವರು. ಸುಮಾರು ೪೦ ಕ್ಕಿಂತ ಹೆಚ್ಚು ರಾಗಗಳ ಪರಿಚಯವಿದೆ. ಷಟ್ಪದೀ
ಗಳ ವಾಚನದಲ್ಲಿಯೇ ಒಲವು ಹೆಚ್ಚು. ಶಾಲಾ ಸಂಸ್ಥೆಗಳಲ್ಲಿ ಉತ್ಸವ ಕಾಲ
ಇವರ ಕಾರ್ಯಕ್ರಮಗಳು ೧೫ ವರ್ಷಗಳಿಂದ ನಡೆಯುತ್ತಿವೆ. ಇವರು ದೇವರನ
ಗಳು, ವಚನ ಮತ್ತು ಜನಪದ ಗೀತೆಗಳನ್ನು ಸಹ ಹಾಡುವರು.

೧೧೯. ಬಿ. ಎಂ. ಮುನಿವೆಂಕಟಪ್ಪ, ದಾವಣಗೆರೆ

ಇವರು ೧೨-೪-೧೯೨೭ ರಲ್ಲಿ ಬೆಂಗಳೂರು ಜಿಲ್ಲೆಯ ಬನ್ನಿಕುಪ್ಪೆ
ಜನಿಸಿದರು. ಇವರ ತಂದೆ ಮುನಿಯಪ್ಪನವರು, ತಾಯಿ ಸಣ್ಣಮ್ಮನವರು.
ಸಾಮಾನ್ಯ ವಿದ್ಯಾಭ್ಯಾಸ ಎಸ್.ಎಸ್.ಎಲ್.ಸಿ. ಸಂಗೀತದಲ್ಲಿ ವಿದ್ವತ್ ಪ
ಯನ್ನು ಮಾಡಿರುವರು. ಆಸ್ಥಾನ ವಿದ್ವಾನ್ ಬಿ. ಎಂ. ಶಿವಪ್ಪನವರು, ಸಂ
ವಿದ್ವಾನ್ ಟಿ. ಪುಟ್ಟಸ್ವಾಮಯ್ಯನವರು ಮುಂತಾದವರಲ್ಲಿ ಸಂಗೀತವನ್ನು ಅಭ
ಮಾಡಿದರು. ಇವರಿಗೆ ಗಮಕ ಕಲೆಯನ್ನು ಕಲಿಸಿದವರು ಶ್ರೀ ಸಂ. ಅ
ನಾರಾಯಣರಾಯರು. ಗಮಕ ಪ್ರವೇಶ ಪರೀಕ್ಷೆಯಲ್ಲಿ ತೇರ್ಗಡೆಯಾಗಿರು
ಜಯಂತ್ಯುತ್ಸವಗಳು, ವಿಶೇಷ ಸಂದರ್ಭಗಳಲ್ಲಿ ಇವರ ಕಾವ್ಯವಾಚನ ವ
ಸಂಗೀತದ ಕಾರ್ಯಕ್ರಮಗಳು ನಡೆಯುತ್ತಲೇ ಇರುತ್ತವೆ.

೧೨೦. ಬಿ. ಜಿ. ಸರೋಜಮ್ಮ, ಬೆಂಗಳೂರು

ಇವರು ೫-೭-೧೯೨೭ ರಂದು ಬೆಂಗಳೂರಿನಲ್ಲಿ ಜನಿಸಿದರು. ಶ್ರೀ ಬು
ಗುಂಟೆ ಚಿಕ್ಕಬಸಪ್ಪ ಮತ್ತು ಶ್ರೀಮತಿ ದೇವೀರಮ್ಮ ಇವರ ತಂದೆ ತಾಯಿ
ಎಸ್.ಎಸ್.ಎಲ್.ಸಿ. ವರೆಗೆ ಓದಿದ್ದಾರೆ. ಸಂಗೀತದಲ್ಲಿ ೩೫ ವರ್ಷಗಳ ಅನು
ವಿದೆ. ೧೯೫೭ ರಲ್ಲಿ ಗಮಕ ಪ್ರವೇಶ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುತ್ತಾ
ಇವರ ಗಮಕ ಕಲೆಯ ಗುರುಗಳು ಶ್ರೀ ಜಿ. ಎ. ಅನಂತಪದ್ಮನಾಭಯ್ಯನ
ಅನೇಕ ಗಡೆಗಳಲ್ಲಿ ಜಯಂತ್ಯುತ್ಸವಗಳಲ್ಲಿ, ಪರಿಷತ್ತಿನಲ್ಲಿ, ವಾಚನಮಾಡಿರುತ್ತಾ
ಗುಬ್ಬಿಯ ಶ್ರೀ ಮ.ನಿ.ಪ್ರ. ನೀಲಕಂಠಸ್ವಾಮಿಗಳು ಶ್ರೀಮತಿಯವರಿಗೆ 'ಗ
ವಿಶಾರದೆ' ಎಂಬ ಪ್ರಶಸ್ತಿಯನ್ನೂ ಸುವರ್ಣಪದಕವನ್ನೂ ದಯಪಾಲಿಸಿ ಆಶೀ
ಸಿರುತ್ತಾರೆ.

೧೨೧. ಎ. ಎಸ್. ಗೌರಮ್ಮನವರು, ಮೈಸೂರು

ಇವರು ೧೭-೮-೧೯೨೬ ರಂದು ಚಿಕ್ಕಮಗಳೂರಿನಲ್ಲಿ ಜನಿಸಿದರು. ಶ್ರೀಮತಿ ಕೆ. ಎಸ್. ಲಕ್ಷ್ಮೀದೇವಮ್ಮ ಮತ್ತು ಶ್ರೀ ಕೆ. ಸುಬ್ಬಾಭಟ್ಟರು ಇವರ ಮಾತಾಪಿತೃಗಳು. ಇವರ ಸಾಮಾನ್ಯ ವಿದ್ಯಾಭ್ಯಾಸ ಇಂಟರ್ಮೀಡಿಯಟ್‌ವರೆಗೆ. ಇವರಿಗೆ ಸಂಗೀತದ ಪರಿಚಯವಿರುತ್ತದೆ; ಜೂನಿಯರ್‌ನಲ್ಲಿ ತೇರ್ಗಡೆಯಾಗಿದೆ; ವರ್ಣ, ಕೃತಿ, ಕೀರ್ತನೆಗಳನ್ನು ಹಾಡಬಲ್ಲರು. ಕನ್ನಡ ಸಾಹಿತ್ಯದಲ್ಲಿ ತಕ್ಕಮಟ್ಟಿನ ಪರಿಚಯವಿರುತ್ತದೆ, ೧೯೪೪ರಲ್ಲಿಯೇ ಗಮಕಕಲೆಯಲ್ಲಿ ಅಭಿರುಚಿಯುಂಟಾಯಿತು. ಅದಕ್ಕೆ ಪ್ರೇರಣೆ ಶ್ರೀಕೃಷ್ಣಗಿರಿ ಕೃಷ್ಣರಾಯರಿಂದ, ೧೯೪೭ ರಲ್ಲಿ. ಕುಮಾರವ್ಯಾಸ ಭಾರತ, ಜೈಮಿನಿ ಭಾರತ ಮತ್ತು ಇತರ ಕಾವ್ಯಗಳನ್ನು ವಾಚನಮಾಡುವ ರೀತಿಯನ್ನು ಸುಮಾರು ಹತ್ತು ವರ್ಷಗಳ ಕಾಲ ಅವರಲ್ಲಿ ಅಭ್ಯಾಸಮಾಡಿದರು ಮತ್ತು ಪರಿಷತ್ತಿನ ಗಮಕ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಬೇಲೂರು, ಚಿಕ್ಕಮಗಳೂರು ಮತ್ತು ನಂಜನಗೂಡುಗಳಲ್ಲಿ ಇವರ ವಾಚನ ಕಾರ್ಯಕ್ರಮಗಳು ನಡೆದಿವೆ. ಮನೆಯಲ್ಲಿ ನಡೆಯುತ್ತಿದ್ದ ಗಮಕ ಗೋಷ್ಠಿಗಳಲ್ಲಿ ಅನೇಕ ಬಾರಿ ವಾಚನಮಾಡುತ್ತಿರುವರು.

೧೨೨. ಡಿ. ಕೆ. ಹೆಬಸೂರ, ಲಕ್ಕುಂಡಿ

ಜನ್ಮ ದಿನಾಂಕ ೧೦-೧೦-೧೯೨೬. ಜನ್ಮ ಸ್ಥಳ ರೋಣ ತಾಲ್ಲೂಕ ಹೊಳೆ ಆಲೂರ. ತಾಯಿ ಕೃಷ್ಣಾಬಾಯಿಯವರು; ತಂದೆ ಕೃಷ್ಣಭಟ್ಟರು. ಕನ್ನಡ ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಮತ್ತು ಕನ್ನಡ ಶಾಲಾ ಶಿಕ್ಷಕರ ತರಬೇತಿ ಪಡೆದಿದ್ದಾರೆ. ಪ್ರಾಥಮಿಕ ಶಾಲಾ ಶಿಕ್ಷಕರಾಗಿರುವರು. ಉತ್ತರಾದಿ ಸಂಗೀತದ ಜ್ಞಾನವಿದೆ. ಸುಗಮ ಮತ್ತು ಭಜನ ಸಂಗೀತಗಳನ್ನೂ ಅಭ್ಯಾಸ ಮಾಡಿರುವರು. ಕನ್ನಡ ಸಾಹಿತ್ಯದಲ್ಲಿ ಅಭಿರುಚಿಯಿದೆ. ಕಾವ್ಯವಾಚನ ಮತ್ತು ವ್ಯಾಖ್ಯಾನಗಳನ್ನು ಮಾಡಬಲ್ಲರು. ಇವರ ಅನೇಕ ಲೇಖನಗಳು ಪ್ರಕಟವಾಗಿವೆ. ಮನೆಯೇ ಮೊದಲ ಗಮಕ ಶಾಲೆ. ಕೀರ್ತನಕಾರರು ಗಮಕಿಗಳಿಂದ ನಿತ್ಯ ವಾಚನ ನಡೆಯುತ್ತಿತ್ತು. ಹೆಬಸೂರರು ತಿಳಿವಳಿಕೆ ಬಂದಮೇಲೆ ಸತತವಾಗಿ ಐದು ವರ್ಷಗಳು ಗದುಗಿನ ಭಾರತ ಪಾರಾಯಣ ಮಾಡಿರುವರು. ಗ್ರಾಮಾಂತರಗಳಲ್ಲಿ ಕಾವ್ಯವಾಚನಮಾಡಿರು

ವರು. ಇವರಿಗೆ ಮಾರ್ಗದರ್ಶನ ಮಾಡಿದವರಲ್ಲಿ ಬೆಟಗೇರಿ ಕೃಷ್ಣಶರ್ಮ
ಗೋವಿಂದರಾವ್ ಚುಳಕಿಯವರು ಮತ್ತು ಡಿ. ಎಸ್. ಕರ್ಕಿಯವರೇ ಮುಖ್ಯ
ಸಂಸ್ಕೃತಿ ಅಭಿವೃದ್ಧಿ ಇಲಾಖೆಯವರಿಂದ ೧೫-೨-೧೯೭೭ರಂದು ಹುಕ್ಕೆ
ಮುನಿಸಿಪಲ್ ಹೈಸ್ಕೂಲಿನಲ್ಲಿ ಯಶಸ್ವಿ ಕಾರ್ಯಕ್ರಮ ನಡೆಸಿರುವರು. ಧಾರವ
'ಆಕಾಶವಾಣಿ'ಯಿಂದ ಇಂದಿನವರೆಗೆ ಕಾರ್ಯಕ್ರಮ ನಡಸುತ್ತ ಬಂದಿದ್ದಾರೆ.

೧೨೩. ಎಂ. ರಾಜಗೋಪಾಲಾಚಾರ್ಯ, ಎಂ.ಎ., ಉಡು

ಇವರು ೧೫-೧೦-೧೯೨೬ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕೋಟೇಶ್ವರದ
ಜನಿಸಿದರು. ಇವರ ತಂದೆ ತಾಯಿಗಳು ,ಶ್ರೀ ಮಟಪಾಡಿ ನರಸಿಂಹಾಚಾಯ
ಮತ್ತು ಶ್ರೀಮತಿ ಭಾಗೀರಥಿ. ಇವರು ಪೂರ್ಣಪ್ರಜ್ಞ ಕಾಲೇಜಿನಲ್ಲಿ ಕನ್ನಡ ವಿಭಾ
ದಲ್ಲಿ ರೀಡರ್ ಆಗಿರುವರು. ಸಂಗೀತದಲ್ಲಿ ಉತ್ತಮ ಮಟ್ಟದ ಪಾಂಡಿತ್ಯವಿದೆ, ವಣ
ಕೃತಿಗಳನ್ನು ಹಾಡಬಲ್ಲರು. ಇವರು ಕತೆ, ಕವಿತೆ, ವಿಮರ್ಶೆ ಮುಂತಾದುವನ್ನ
ಪ್ರಕಟಿಸಿರುವರು. ಕೆಲವಕ್ಕೆ ಪ್ರಶಸ್ತಿಗಳು ದೊರೆತಿವೆ. ಇವರಲ್ಲಿ ಗಮಕ ಕಲೆ
ಬಗ್ಗೆ ಆಸಕ್ತಿಯನ್ನು ಮೂಡಿಸಿ, ಹರಸಿದವರು ಶ್ರೀ ಗಮಕಿ ರಾಘವೇಂದ್ರರಾಯರ
೨೫ ವರ್ಷದಿಂದ ಸಂಗೀತ ಅಭ್ಯಾಸ ಮಾಡಿರುವರು. ಇವರ ಗುರುಗಳು ಶ್ರೀ
ಮಂಜುನಾಥಯ್ಯನವರು. ಕುಮಾರವ್ಯಾಸ ಭಾರತ, ಹರಿಶ್ಚಂದ್ರ ಕಾವ್ಯ, ಜೈಮಿ
ಭಾರತ, ಭರತೇಶ ವೈಭವ ಮತ್ತು ಆಧುನಿಕ ರಮ್ಯ ಕವಿತೆಗಳಲ್ಲಿ ಇವರಿಗೆ ಬಹ
ಆಸಕ್ತಿಯಿದೆ. ಗಮಕವನ್ನು ಅನೇಕ ಕಡೆಗಳಲ್ಲಿ ವಾಚನ ಮಾಡಿರುತ್ತಾರೆ. ಈ
ಎರಡು ವರ್ಷಗಳಿಂದ ಉಡುಪಿಯಲ್ಲಿ ಗಮಕ ಪ್ರವೇಶ ತರಗತಿಗಳನ್ನು ನಡೆಸು
ದ್ದಾರೆ. ಕನ್ನಡ ಸಂಘಗಳಲ್ಲಿ ಗುರುಮನೆಗಳಲ್ಲಿ ವಾಚನ ಮಾಡಿ ಅನುಗ್ರಹ ಪ
ದಿರುತ್ತಾರೆ.

೧೨೪. ಅನ್ನಪೂರ್ಣಮ್ಮ ರಘುಪತಿಶಾಸ್ತ್ರಿ, ಬೆಂಗಳೂರು

ಇವರು ೧೯೨೭ನೇ ಇಸವಿ ಏಪ್ರಿಲ್ ತಿಂಗಳಿನಲ್ಲಿ ಬೆಂಗಳೂರಿನಲ್ಲಿ ಜನಿ
ದರು. ಇವರ ಮಾತಾಪಿತೃಗಳು ಶ್ರೀಮತಿ ರುಕ್ಮಿಣಮ್ಮ ಮತ್ತು ಶ್ರೀ ಎಂ. ಆರ್
ನರಸಿಂಹಯ್ಯನವರು. ಲೋಯರ್ ಸೆಕೆಂಡರಿವರೆಗೂ ಓದಿದ್ದಾರೆ. ಸಂಗೀತವನ
ಆಸ್ಥಾನ ವಿದ್ವಾನ್ ಎನ್. ಚನ್ನಕೇಶವಯ್ಯನವರ ಶಿಷ್ಯೆಯಾಗಿ ಎಳೆಂಟು ವರ

ಗಳಿಗೂ ಮಿಕ್ಕು ಕಲಿತಿರುತ್ತಾರೆ. ಕನ್ನಡ ಸಾಹಿತ್ಯದಲ್ಲಿ ವಿಶೇಷವಾದ ಅಭಿರುಚಿ ಯಿದೆ. ೧೦–೧೫ ವರ್ಷಗಳಿಂದ ವಾಚನ ವ್ಯಾಖ್ಯಾನ ಮಾಡುತ್ತಿದ್ದಾರೆ. ವಾಚನ ಕಲೆಯು ಇವರಿಗೆ ವಂಶಾನುಗತವಾಗಿ ಬಂದಿದೆ. ಪುರಾಣ ಪ್ರವಚನಗಳು, ಕಥಾ ಕಾಲಕ್ಷೇಪ, ಸಂಸ್ಕೃತ ಶ್ಲೋಕಗಳ ಬಾಯಿಪಾಠ, ದಂಡಕಗಳ ಸುಶ್ರಾವ್ಯ ಹಾಡು ಗಾರಿಕೆ ಮತ್ತು ಪಾಠ ಇವೆಲ್ಲವೂ ಮನೆಯಲ್ಲಿ ಸದಾ ನಡೆಯುತ್ತಿದ್ದುವು. ಇವರ ತಂದೆಯವರು ವರದಾಚಾರ್ಯರ ಕಂಪೆನಿಯಲ್ಲಿ ನಟರಾಗಿದ್ದರು. ತಂದೆಯೊಡನೆ ಇವರೂ ಪಾತ್ರವಹಿಸುತ್ತಿದ್ದರು. ಗಮಕ ಕಲೆಯಲ್ಲಿ ಸ್ವಾಭಾವಿಕವಾಗಿಯೇ ಆಸಕ್ತಿ ಮೂಡಿತು. ಜೈಮಿನಿ ಭಾರತ, ಗದುಗಿನ ಭಾರತ, ಹರಿಶ್ಚಂದ್ರ ಕಾವ್ಯ ಇವೆಲ್ಲವೂ ಇವರಿಗೆ ಇಷ್ಟವಾದ ಕಾವ್ಯಗಳು. ಗಮಕ ಕಲೆಯನ್ನು ಕಲಿಸಿ ಮಾರ್ಗದರ್ಶನ ಮಾಡಿದವರು ಗಮಕಿ ಶ್ರೀ ಕೃಷ್ಣಗಿರಿ ಕೃಷ್ಣರಾಯರು. ೧೯೪೬ರಲ್ಲಿ ಪರಿಷತ್ತು ನಡೆ ಸಿದ ಗಮಕ ಪರೀಕ್ಷೆಯಲ್ಲಿ ಮೊದಲನೇ ದರ್ಜೆಯಲ್ಲಿ ಉತ್ತೀರ್ಣರಾಗಿರುವರು. ತುಮಕೂರು, ಬೆಂಗಳೂರು, ಹಾಸನ ಜಿಲ್ಲೆಗಳಲ್ಲಿ ಅನೇಕ ಕಡೆ ಸಂಸ್ಕೃತಿ ಪ್ರಸಾರ ಕಾರ್ಯಕ್ರಮದ ಅಂಗವಾಗಿ ಕಾವ್ಯವಾಚನಗಳನ್ನು ನಡೆಸಿರುವರು. ೧೫–೧೮ ವರ್ಷಗಳ ಕಾಲ ನಾಲ್ಕಾರು ಕಡೆಗಳಲ್ಲಿ ಗಮಕ ತರಗತಿಗಳನ್ನು ನಡೆಸಿರುತ್ತಾರೆ. ಆಕಾಶವಾಣಿಯಲ್ಲಿ ೩೫ ವರ್ಷಗಳಿಂದ ಇವರ ವಾಚನ ಕಾರ್ಯಕ್ರಮ ಪ್ರಸಾರವಾಗು ತ್ತಿದೆ. ಸಾಹಿತ್ಯ ಸಂಘಗಳಲ್ಲಿ, ಶ್ರೀ ರಾಮೋತ್ಸವ ಮುಂತಾದ ಸಮಾರಂಭಗಳಲ್ಲಿ, ಗುರುಪೀಠಗಳಲ್ಲಿ, ದೇವಾಲಯಗಳಲ್ಲಿ ಶ್ರೀಮತಿಯವರು ವಾಚನ ಮಾಡಿರುವರು. ಶ್ರೀ ರಾಮಾರಾಧ್ಯರು ನಿರ್ದೇಶಿಸುತ್ತಿದ್ದ ಗಮಕ ರೂಪಕಗಳಲ್ಲಿ ಭಾಗವಹಿಸಿರು ವರು. ಜನವರಿ ೧೯೭೫ರಲ್ಲಿ ಮೈಸೂರು ವಿಶ್ವವಿದ್ಯಾಲಯದವರು ಕುಮಾರವ್ಯಾಸ ಭಾರತವನ್ನು ಬಿಡುಗಡೆ ಮಾಡಲು ನಡೆಸಿದ ಸಮಾರಂಭದಲ್ಲಿ ಇವರು ಭಾಗವಹಿಸಿ ಮೆಚ್ಚಿಕೆಯ ಪತ್ರವನ್ನು ಪಡೆದಿರುವರು.

೧೨೫. ಹೆಚ್. ಎಸ್. ವಿಶ್ವನಾಥ್‌ರವರು, ಬೆಂಗಳೂರು

ಇವರು ಬೆಂಗಳೂರಿನಲ್ಲಿ ೧೯೨೭ನೆಯ ಇಸವಿಯಲ್ಲಿ ಜನ್ಮತಾಳಿದರು. ಬಿ.ಎಸ್‌ಸಿ., ಪದವೀಧರರು. ಅಕೌಂಟೆಂಟ್ ಜನರಲ್‌ರವರ ಕಛೇರಿಯಲ್ಲಿ ಅಕೌಂಟೆಂಟ್ ಆಗಿರುತ್ತಾರೆ. ಇವರ ಗುರುಗಳು ಶ್ರೀ ಸಂಪತ್ಕುಮಾರಾಚಾರ್ಯರು. ಅವರ ಗಮಕ, ಸಂಗೀತ, ಸಾಹಿತ್ಯ ಪ್ರಾವೀಣ್ಯತೆಯಿಂದ ಪರಿಪೂರ್ಣವಾದ ಕಾವ್ಯ ವಾಚನಗಳನ್ನು ಕೇಳಿ ಸ್ಫೂರ್ತಿ ತಾಳಿದರು. ೧೯೪೦ರಲ್ಲಿ ಕನ್ನಡ ಸಾಹಿತ್ಯ

ಪರಿಷತ್ತು ನಡೆಸಿದ ಗಮಕ ಕಲಾಗೋಷ್ಠಿಯಲ್ಲಿ ಇವರು ಮೊದಲನೆಯ ರ್‍ಯಾಂಕ್ ಪಡೆದುಕೊಂಡರು. ಶ್ರೀಗಳಾದ ಟಿ. ಆರ್. ಜಯರಾಯರು ಮತ್ತು ಟಿ. ವಿ. ಜಯಸಿಂಹರಾಯರು ಇವರ ಸಹಪಾಠಿಗಳು. ಇವರು ಅನೇಕ ಸ್ಕೂಲು ಕಾಲೇಜು ಗಳಲ್ಲಿ, ಸಾರ್ವಜನಿಕ ಸಂಸ್ಥೆಗಳಲ್ಲಿ (ಗೋಖಲೆ ಸಾರ್ವಜನಿಕ ವಿದ್ಯಾಸಂಸ್ಥೆ) ಕಾವ್ಯ ವಾಚನ ಮತ್ತು ಹಾಡುಗಾರಿಕೆಯನ್ನು ನಡೆಸಿ ಬಹುಮಾನಗಳನ್ನು ಪಡೆದಿರುವರು. ಇವರ ಕಾವ್ಯವಾಚನವು ಶ್ರೀ ಎಂ. ಎಸ್. ಚಂದ್ರಶೇಖರಯ್ಯನವರ ಮೆಚ್ಚಿಕೆಗೆ ಪಾತ್ರವಾಗಿದ್ದಿತು. ಸಾಹಿತಿ ಶ್ರೀ ಕೆ. ದೊರೆಸ್ವಾಮಿಯವರು ಇವರನ್ನು "ಗಂಡು ಕೋಗಿಲೆ" ಎಂದು ಕರೆದು ಗೌರವಿಸಿರುವರು.

೧೨೬. ತಿರುಮಲೆ ರಂ. ವರದರಾಜ ಅಯ್ಯಂಗಾರ್, ಬೆಂಗಳೂರು

ಇವರು ೨೦-೭-೧೯೨೭ರಲ್ಲಿ ಜನಿಸಿದರು. ಇವರ ತಂದೆ ಶ್ರೀ ತಿರುಮಲೆ ರಂಗಸ್ವಾಮಿಯವರು, ತಾಯಿ ಶ್ರೀಮತಿ ರಂಗಮ್ಮನವರು. ಇವರು ಪದವೀಧರರು. ಎಂಜಿನಿಯರ್ ಕೂಡ ಆಗಿ ಕೇಂದ್ರ ಸರ್ಕಾರದ ಉದ್ಯೋಗದಲ್ಲಿದ್ದು ನಿವೃತ್ತರಾಗಿರು ವರು. ಬಾಲ್ಯದಿಂದಲೂ ಸಂಗೀತದಲ್ಲಿ ಒಲವನ್ನು ಹೊಂದಿದ್ದ ಇವರಿಗೆ ವರ್ಣ, ಕೃತಿ, ಕೀರ್ತನೆಗಳನ್ನು ಹಾಡಲು ಬರುವಷ್ಟು ಸಂಗೀತ ಪರಿಶ್ರಮವಿದೆ. ತಮ್ಮ ಸ್ವಂತ ವ್ಯಾಪಕ ವ್ಯಾಸಂಗದ ಆಧಾರದಿಂದ ಉತ್ಕೃಷ್ಟವಾಗಿ ಕಾವ್ಯವಾಚನ ವ್ಯಾಖ್ಯಾನಗಳನ್ನು ಮಾಡಬಲ್ಲರು. ಭಾವಗೀತೆ, ದೇವರನಾಮಗಳನ್ನು ಹಾಡ ಬಲ್ಲರು. ವೃಂದಗಾನದಲ್ಲಿಯೂ ಭಾಗವಹಿಸುವರು. ತಾತ್ವಿಕ ವಿಚಾರಗಳಲ್ಲಿ ಆಸಕ್ತಿಯೂ, ಪರಿಣತಿಯೂ ಇವರಿಗಿವೆ. ಶ್ರೀ ಕಳಲೆ ಸಂಪತ್ಕುಮಾರಾಚಾರ್ಯ ಅವರ ಕಾವ್ಯವಾಚನ ಮತ್ತು ದೇವರನಾಮಗಳ ಹಾಡುಗಾರಿಕೆಯನ್ನು ಕೇಳಿ ಇವರು ಗಮಕ ಕಲೆಗೆ ಒಲಿದು ಬಂದರು. ೧೯೭೦ರಲ್ಲಿ ಗಮಕಿ ವೆಂಕಟೇಶಯ್ಯನವರು ನಡೆಸು ತ್ತಿದ್ದ ಕುಶಲವ ಗಮಕ ಕಲಾಸಂಘದ ತರಗತಿಗಳಲ್ಲಿ ಕಾವ್ಯವಾಚನವನ್ನು ಅಭ್ಯಾಸ ಮಾಡಿ ಗಮಕ ಪ್ರೌಢ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರು. ಇವರು 'ರಾಮ ಚರಣ' ಎಂಬ ಕಾವ್ಯನಾಮದಿಂದ ಕತೆ ಕವನಗಳನ್ನು ಬರೆದು ಪ್ರಕಟಿಸಿರುವರು. ಇವರ ವಾಚನಗಳು ಮೈಸೂರು ಜಿಲ್ಲೆಯ ನಾನಾ ಭಾಗಗಳಲ್ಲಿ ನಡೆಯುತ್ತಿರುತ್ತವೆ. ವ್ಯಾಪಕವಾದ ಸಾಹಿತ್ಯ ಜ್ಞಾನವನ್ನು ಹೊಂದಿರುವ ಇವರು ಷಟ್ಪದಿ, ಚಂಪು,

ವೃತ್ತಗಳು ಮತ್ತು ಗದ್ಯಕಾವ್ಯಗಳನ್ನು ಓಜಃಪೂರ್ಣವಾಗಿ ವಾಚನ ಮಾಡಿ ಕವಿ ಹೃದಯವನ್ನು ಪ್ರಕಾಶಗೊಳಿಸುವಂತೆ ವ್ಯಾಖ್ಯಾನವನ್ನು ಮಾಡಬಲ್ಲರು.

೧೨೭. ಎಸ್. ಶಂಕರಪ್ಪ

ಇವರು ಮೈಸೂರು ಜಿಲ್ಲೆಯ ಹುಣಸೂರಿನಲ್ಲಿ ೨೦-೧-೧೯೨೮ರಲ್ಲಿ ಜನಿಸಿದರು. ಇವರು ಎಂ.ಎ., ಬಿ.ಎಡ್. ಪದವೀಧರರು. ರಾಷ್ಟ್ರಭಾಷೆಯಲ್ಲಿ ಎಂ. ಎ. ಪದವೀಧರರಾಗಿ ಸಾಗರ ಸರ್ಕಾರಿ ಜೂನಿಯರ್ ಕಾಲೇಜಿನಲ್ಲಿ ಹಿಂದೀ ಉಪನ್ಯಾಸಕರಾಗಿರುವರು. ಇವರು ಚಾಮರಾಜನಗರದ ಶ್ರೀ ಸುಬ್ರಹ್ಮಣ್ಯಂರವರಲ್ಲಿ ಕಾವ್ಯವಾಚನವನ್ನು ಅಭ್ಯಸಿಸಿರುವರು. ಕೇರಳಾಪುರದ ಶ್ರೀ ಸುಬ್ಬರಾಯರಿಂದಲೂ ಪ್ರೋತ್ಸಾಹ ಮತ್ತು ಮಾರ್ಗದರ್ಶನ ದೊರೆತಿದೆ. ತಕ್ಕಮಟ್ಟಿನ ಸಂಗೀತಾಭ್ಯಾಸವಿದ್ದು ದಾಸ ಸಾಹಿತ್ಯ ಹಾಗೂ ಭಾವಗೀತೆಗಳನ್ನು ಉತ್ತಮ ರೀತಿಯಲ್ಲಿ ವಾಚನ ಮಾಡುವರು. ೧೯೬೫ರಲ್ಲಿ ನಡೆಸಿದ ಗಮಕ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರು. ಉತ್ಸವ ಸಮಾರಂಭಗಳಲ್ಲಿ ಕಾವ್ಯವಾಚನವನ್ನು ನಡೆಸುವರು. ಇವರು ಲೇಖಕರೂ ಸಹ ಆಗಿರುವರು. ಸಾಗರದಲ್ಲಿ ಅವರು ಕೆಲಸ ಮಾಡುತ್ತಿರುವ ವಿದ್ಯಾಸಂಸ್ಥೆಯಲ್ಲಿ ಗಮಕ ತರಗತಿಗಳನ್ನು ನಡಸುತ್ತಿರುವರು.

೧೨೮. ಬಿ. ಎಸ್. ಲಕ್ಷ್ಮೀನಾರಾಯಣ

ಇವರು ೧೦-೨-೧೯೨೮ರಲ್ಲಿ ಮೈಸೂರು ಜಿಲ್ಲೆ, ಗುಂಡ್ಲುಪೇಟೆ ತಾಲ್ಲೂಕು ಬೇಗೂರಿನಲ್ಲಿ ಜನಿಸಿದರು. ಇವರ ತಂದೆ ಶ್ಯಾನುಭೋಗ ಸುಬ್ರಾಯರು. ತಾಯಿ ಮೀನಾಕ್ಷಮ್ಮನವರು. ಇವರ ಸಾಮಾನ್ಯ ವಿದ್ಯಾಭ್ಯಾಸ ಎಸ್.ಎಸ್.ಎಲ್.ಸಿ. ಉಪಾಧ್ಯಾಯ ವೃತ್ತಿಯಲ್ಲಿರುವವರು. ಇವರು ಶಾಲೆಯಲ್ಲಿ ಓದುತ್ತಿರುವಾಗಲೇ ಗಮಕಿ ನಂ. ಅಶ್ವತ್ಥನಾರಾಯಣರವರ ಪ್ರೋತ್ಸಾಹವು ದೊರೆತು, ಅವರಲ್ಲಿ ಗಮಕ ಕಲಾಭ್ಯಾಸವನ್ನು ಮಾಡಿದರು. ೧೯೬೪ರಲ್ಲಿ ನಡೆದ ಗಮಕ ಪರೀಕ್ಷೆಯಲ್ಲಿ ಮೈಸೂರು ಕೇಂದ್ರದಿಂದ ತೇರ್ಗಡೆಯಾಗಿರುವರು. ಇವರಿಗೆ ೨೦ ರಾಗಗಳಿಗಿಂತಲೂ ಅಧಿಕವಾಗಿ ಪರಿಚಯವಿದೆ. ಆಸ್ಥಾನ ವೀಣಾ ವಿದ್ವಾನ್ ಶ್ರೀ ಶ್ರೀನಿವಾಸ ಭಟ್ಟಾಚಾರ್ಯರಲ್ಲಿ ಸಂಗೀತವನ್ನು ಕಲಿತರು. ನಾಟಕಗಳಲ್ಲಿಯೂ ಅಭಿನಯಿಸುವರು.

೧೨೯. ಬಿ. ಜಿ. ಸುಶೀಲಮ್ಮ, ಬೆಂಗಳೂರು

ಇವರು ೭-೬-೧೯೨೮ ರಂದು ಬೆಂಗಳೂರಲ್ಲಿ ಜನಿಸಿದರು. ಶ್ರೀ ಬು
ಗುಂಟೆ ಚಿಕ್ಕಬಸಪ್ಪ ಮತ್ತು ದೇವೀರಮ್ಮ ಇವರ ತಂದೆ ತಾಯಿಗಳು. ಇ
ಬಿ.ಎಸ್‌ಸಿ., (ಆನರ್ಸ್) ಪದವೀಧರರಾಗಿ ಬೆಂಗಳೂರು ಹೋಂ ಸೈನ್ಸ್ ಕಾಲೇ
ನಲ್ಲಿ ಭೌತಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿರುವರು. ಸಂಗೀತದಲ್ಲಿ ೩೫ ವರ್ಷ
ಅನುಭವವಿದೆ. ಕನ್ನಡ ಸಾಹಿತ್ಯದಲ್ಲಿ ಅಭಿರುಚಿಯಿದೆ. ೧೯೫೭ ರಿಂದ ಗಮಕ
ಯಲ್ಲಿ ಆಸಕ್ತಿಯನ್ನು ಬೆಳೆಸಿಕೊಂಡು ಬಂದಿರುತ್ತಾರೆ. ಶ್ರೀ ಜಿ. ಎ. ಅನಂತ
ನಾಭಯ್ಯನವರು ಇವರ ಗಮಕದ ಗುರುಗಳು. ಶ್ರೀಮತಿಯವರು ಗಮಕ ಪ
ಯಲ್ಲಿ ೧೯೫೭ ರಲ್ಲಿಯೇ ಉತ್ತೀರ್ಣರಾಗಿ ಅನೇಕ ಕಡೆ ಕಾವ್ಯವಾಚನ ನಡೆಸುತ್ತಿ
ವರು. ವ್ಯಾಖ್ಯಾನವನ್ನೂ ಮಾಡಬಲ್ಲರು. ಬೆಂಗಳೂರಿನ ಅನೇಕ ಸಂಘ ಸ
ಗಳಲ್ಲಿ, ಸಾಹಿತ್ಯ ಪರಿಷತ್ತಿನ ಸಮ್ಮೇಳನದಲ್ಲಿ, ಗದಗು, ತುಮಕೂರು, ಧಾರವಾ
ನವಿಲುಗುಂದ, ಅಥಣಿ ಮುಂತಾದೆಡೆಗಳಲ್ಲಿ ವಾಚನ ಮಾಡಿರುವರು. ೧೧-೨-೧೯
ರಲ್ಲಿ ಧಾರವಾಡದಲ್ಲಿ ಶ್ರೀ ಮುರುಘಾ ಮಠದ ಸ್ವಾಮಿಗಳು ಇವರ ವಾಚನವ
ಮೆಚ್ಚಿ "ಗಮಕ ಪ್ರವೀಣೆ" ಎಂಬ ಪ್ರಶಸ್ತಿಯನ್ನೂ ಸುವರ್ಣಪದಕವನ್ನೂ ಇ
ಆಶೀರ್ವದಿಸಿರುವರು.

೧೩೦. ಕೆ. ಎಸ್. ವೆಂಕಟಾದ್ರಿ ಶರ್ಮ, ಬೆಂಗಳೂರು

ಇವರ ಜನನ ೬-೭-೧೯೨೮ ರಲ್ಲಿ, ತುಮಕೂರು ಜಿಲ್ಲೆ, ಮಧು
ತಾಲ್ಲೂಕು, ಕಮ್ಮಸಾನಿಪಲ್ಲೆಯಲ್ಲಿ. ಇವರು ಬಿ. ಎಸ್‌.ಸಿ., ಬಿ.ಎಡ್., ಪದ
ಧರರು. ಸಾಹಿತ್ಯ ರತ್ನ, ರಾಷ್ಟ್ರಭಾಷಾವಿಶಾರದ ಪರೀಕ್ಷೆಗಳಲ್ಲಿ ತೇರ್ಗ
ಹೊಂದಿ ಎಂ.ಎ., ಇಂಗ್ಲೀಷ್ ಭಾಗಶಃ ಉತ್ತೀರ್ಣರಾಗಿ ಪಾಂಡಿತ್ಯಗಳಿಸಿಕೊಂ
ಹೈಸ್ಕೂಲಿನಲ್ಲಿ ಅಧ್ಯಾಪಕರಾಗಿರುತ್ತಾರೆ. ರಸಾಯನ ಶಾಸ್ತ್ರದಲ್ಲಿ ಸ್ನಾತಕೋತ್ತ
ಅಧ್ಯಯನವನ್ನೂ ನಡೆಸಿದ್ದಾರೆ. ಗಮಕಿ ಶ್ರೀ ಎಂ. ರಾಘವೇಂದ್ರರಾಯರಲ್ಲಿ ಗ
ಕದ ಅಭ್ಯಾಸ ಮಾಡಿ ಪರಿಷತ್ತಿನ ಗಮಕ ಪ್ರೌಢ ಪರೀಕ್ಷೆಯಲ್ಲಿ ಉತ್ತೀರ್ಣರಾ
ದ್ದಾರೆ. ಸುಮಾರು ೧೮ ವರ್ಷಗಳಿಂದ ಕಾವ್ಯವಾಚನದ ಅಭ್ಯಾಸವಿದೆ, ಕವಿ
ವಾಚನದ ಅಭ್ಯಾಸವೂ ಉಂಟು. ಬಾಲ್ಯದಲ್ಲಿ ಸಂಗೀತದ ಪ್ರಾರಂಭಿಕ ಪಾಠವ

ಹಲಕೆಲವು ವಿದ್ವಾಂಸರಲ್ಲಿ ಅಲ್ಪಸ್ವಲ್ಪ ಸಂಗೀತ ಶಾಸ್ತ್ರಾಭ್ಯಾಸವೂ ಆಗಿರುತ್ತದೆ. ಬಾಲ್ಯದಿಂದ ನಾಟಕದಲ್ಲೂ ಗೀಳು. ಪೌರಾಣಿಕ ಸಂಗೀತ ನಾಟಕಗಳನ್ನು ರಚಿಸಿ, ಅವುಗಳಲ್ಲಿ ಅಭಿನಯಿಸಿಯೂ ಇದ್ದಾರೆ. ಕಲಾವಿಲಾಸಿ ಮಟ್ಟದಲ್ಲಿ ನಾಟಕಗಳನ್ನು ನಿರ್ದೇಶಿಸಿ, ಪಾತ್ರಾಭಿನಯವನ್ನೂ ಮಾಡಿದ್ದಾರೆ. ಕನ್ನಡ, ಸಂಸ್ಕೃತ, ತೆಲುಗು, ಹಿಂದಿ, ಇಂಗ್ಲೀಷ್ ಸಾಹಿತ್ಯಗಳಲ್ಲಿ ಇವರಿಗೆ ಪರಿಶ್ರಮವಿದೆ. ಇವರ ಕವಿತೆಗಳು ಪತ್ರಿಕೆಗಳಲ್ಲಿ ಪ್ರಕಟವಾಗಿ ಬಾನುಲಿಯಲ್ಲಿ ಬಿತ್ತರಿಸಲ್ಪಟ್ಟಿವೆ. ಅನೇಕ ರಾಷ್ಟ್ರೀಯ ಕಾರ್ಯಕ್ರಮಗಳಲ್ಲಿ, ಸಾಹಿತ್ಯ ಸಮ್ಮೇಳನಗಳಲ್ಲಿ ಪಾಲ್ಗೊಂಡಿದ್ದಾರೆ. ಕವಿಗೋಷ್ಠಿಗಳಲ್ಲಿ ಭಾಗವಹಿಸಿದ್ದಾರೆ. "ಸತ್ಯಪ್ರಿಯ" ಇವರ ಕಾವ್ಯನಾಮ. 'ಸದಾನಂದನ' ಎಂಬ ಇವರ ಕವನ ಸಂಕಲನವು ಅಚ್ಚಾಗಿವೆ. ಜನಪ್ರಿಯ ವಿಜ್ಞಾನ, ವೈಚಾರಿಕ ಲೇಖನ, ವೇದಾಂತ, ಗ್ರಂಥವಿಮರ್ಶೆಗಳಲ್ಲೂ ಸಾಕಷ್ಟು ಕೃಷಿ ನಡೆಸಿದ್ದಾರೆ. ಚಿಕ್ಕಮಗಳೂರು ಜಿಲ್ಲೆಯ ಬೀರೂರಿನಲ್ಲಿನ ಶ್ರೀರಾಮಮಂದಿರದಲ್ಲಿ ಸಮಗ್ರ ಕುಮಾರ ವ್ಯಾಸ ಭಾರತದ ಗಮಕ ನಿರೂಪಣೆ ಮಾಡಿರುವರು.

೧೩೧. ಎನ್. ಪದ್ಮಾವತಮ್ಮ ನಾಗೇಶರಾವ್, ಬೆಂಗಳೂರು

ಇವರು ೨೧–೭–೧೯೨೮ರಲ್ಲಿ ಗೌರೀಬಿದನೂರು ತಾಲ್ಲೂಕು ಮಂಚೇನಹಳ್ಳಿ ಗ್ರಾಮದಲ್ಲಿ ಜನಿಸಿದರು. ತಂದೆ ಕುಣಿಗಲ್ ವೆಂಕಟರಾಯರು, ತಾಯಿ ವೆಂಕಟಲಕ್ಷಮ್ಮನವರು. ಬಾಲ್ಯದಿಂದ ಸಂಗೀತ ಮತ್ತು ಕಲೆಗಳಲ್ಲಿ ಅಪಾರ ಆಸಕ್ತಿ ಇದ್ದಿತು. ಜಮಖಂಡಿ ನಂಜುಂಡಪ್ಪನವರಲ್ಲಿ ೫ ವರ್ಷ ಕಾಲ, ವಿದ್ವಾನ್ ಹೆಚ್. ವಿ. ವೆಂಕಟರಾಮಯ್ಯನವರಲ್ಲಿ ೧೦ ವರ್ಷಗಳು ಸಂಗೀತ ವಿದ್ಯಾಭ್ಯಾಸ ಪಡೆದರು. ಕನ್ನಡ ಸಾಹಿತ್ಯದಲ್ಲಿ ಉತ್ತಮ ಅಭಿರುಚಿಯಿರುತ್ತೆ. ತಂದೆಯವರು ಮತ್ತು ಮಾವನವರು ಹಾಡುತ್ತಿದ್ದುದನ್ನು ಆಲಿಸಿದ್ದರು. ಭಾರತದ ಬಿಂದೂರಾಯರು, ಕೃಷ್ಣಗಿರಿ ಕೃಷ್ಣರಾಯರು, ಶಕುಂತಲಾಬಾಯಿಯವರು ಇವರುಗಳ ವಾಚನಗಳ ಕೇಳ್ಮೆಯಿಂದ ಗಮಕ ಕಲೆಯಲ್ಲಿನ ಆಸಕ್ತಿ ಮತ್ತೂ ಹೆಚ್ಚಿತು. ಗಮಕ ಗುರುಗಳು ಶ್ರೀ ಎಂ. ರಾಘವೇಂದ್ರರಾಯರು. ಇವರೇ ಶ್ರೀಮತಿಯವರ ವಾಚನ ಕಲೆಗೆ ಮಾರ್ಗದರ್ಶನ ಮಾಡಿದವರು ಮತ್ತು ಚೇತನ ಶಕ್ತಿ. ೧೯೫೫ ಮತ್ತು ೧೯೫೭ ರಲ್ಲಿ ಕ್ರಮವಾಗಿ ಗಮಕ ಪ್ರವೇಶ ಮತ್ತು ಪ್ರೌಢ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿರುತ್ತಾರೆ. ೧೯೫೯-೬೦ ರಿಂದಲೂ ಗಮಕ ತರಗತಿಗಳನ್ನು ಅನೇಕ ಕಡೆ ನಡೆಸಿ ಸೇವೆ ಸಲ್ಲಿಸುತ್ತಿರುವರು. ೧೯೪೮ ರಿಂದ ಕಾವ್ಯವಾಚನ ಮಾಡುತ್ತಲಿದ್ದಾರೆ. ಸಭೆ, ಸಮಾರಂಭ

ಗಳು, ರಾಮೋತ್ಸವ ಮತ್ತು ಜಯಂತ್ಯುತ್ಸವಗಳು, ಪಂಪ,ರನ್ನ ಮಹೋತ್ಸವಗ
ರಾಜ್ಯೋತ್ಸವ ಮುಂತಾದ ಸಂದರ್ಭಗಳಲ್ಲಿ ಕಾವ್ಯವಾಚನಗಳನ್ನು ನಡೆಸಿ ಜನತೆ
ಪ್ರಶಂಸೆ ಮತ್ತು ಬಹುಮಾನಗಳನ್ನೂ ಪಡೆದಿರುವರು.

೧೩೨. ಬಿ. ಕೆ. ಶ್ರೀನಿವಾಸಮೂರ್ತಿ, ಬೆಂಗಳೂರು

ಇವರು ೨-೮-೧೯೨೮ರಂದು ಜನಿಸಿದರು. ಇವರ ತಂದೆ ಶ್ರೀ ಬಾಗೇಪ
ಕೃಷ್ಣಮೂರ್ತಿ ತಾಯಿ; ಶ್ರೀಮತಿ ನರಸಮ್ಮ. ಇವರು ಬಿ.ಎಸ್‌ಸಿ., ಪದ
ಧರರು; ಭಾರತ ಟೆಲಿಫೋನ್ ಕಾರ್ಖಾನೆಯಲ್ಲಿ ಡೆಪ್ಯುಟಿ ಇಂಜಿನಿಯರ್‌ಆಗಿರುವ
ವಿದ್ವಾನ್ ಶ್ರೀ ಕೆ. ಎಸ್. ನಾಗರಾಜ್‌ರವರಲ್ಲಿ ವರ್ಣ ಕೀರ್ತನೆಗಳನ್ನು ಹಾಡ
ವರೆಗೆ ಸಂಗೀತ ಶಿಕ್ಷಣ ಪಡೆದಿರುವರು. ಬರಹಗಾರರಾಗಿ ಸಣ್ಣ ಕತೆಗಳು, ಅನುವಾ
ಗಳು, ವಿಜ್ಞಾನ, ಕ್ರೀಡೆಗಳ ವಿಚಾರ ಪೂರ್ಣ ಲೇಖನಗಳನ್ನು ಪ್ರಕಟಿಸಿರುವರು
೧೯೪೧ ರಲ್ಲಿ ದಿವಂಗತ ಕಳಲೆ ಸಂಪತ್ಕುಮಾರಾಚಾರ್ಯರ ಕಾವ್ಯಗಾಯ
ವನ್ನು ಕೇಳಿ ಪ್ರಭಾವಿತರಾಗಿ ಈಗ ಹತ್ತು ವರ್ಷಗಳಿಂದಲೂ ಶ್ರೀ. ಟಿ. ಆ
ಜಯರಾಯರು ಮತ್ತು ಶ್ರೀ ಪಿ. ಕೆ. ದ್ವಾರಕಾನಾಥ್‌ರವರ ಮಾರ್ಗದರ್ಶನ
ಗಮಕ ಕಲೆಯನ್ನು ಅಭ್ಯಾಸ ಮಾಡಿರುವರು. ಇವರ ಗಮಕ ಗುರುಗಳು ಶ್ರೀ ಎ
ರಾಘವೇಂದ್ರರಾಯರು. ಎಲ್ಲ ಬಗೆಯ ಕಾವ್ಯಗಳೂ ಇವರಿಗೆ ಇಷ್ಟವಾದುವ
ಇವರು ೧೯೭೦ರಲ್ಲಿ ಪ್ರವೇಶ ಪರೀಕ್ಷೆಯಲ್ಲಿ ಉತ್ತಮ ಶ್ರೇಣಿಯಲ್ಲಿ ತೇರ್ಗಡೆಯಾ
೧೯೭೩ರಲ್ಲಿ ನಡೆದ ಪ್ರೌಢ ಪರೀಕ್ಷೆಯಲ್ಲಿ ನಾಲ್ಕನೆಯ ರ್‍ಯಾಂಕನ್ನು ಪಡೆದಿರುವ
ಅನೇಕ ಸಂಘ ಸಂಸ್ಥೆಗಳಲ್ಲಿಯೂ, ಜಯಂತ್ಯುತ್ಸವಗಳಲ್ಲಿಯೂ ಕಾವ್ಯವಾಚ
ವನ್ನು ಮಾಡುತ್ತಿರುವರು. ಸಾಹಿತ್ಯದಲ್ಲಿ ಪ್ರೌಢಿಮೆಯನ್ನು ಶ್ರೀಮಾನ್ ದಿಬ್ಬೂ
ಶ್ರೀನಿವಾಸರಾಯರಲ್ಲಿ ಅಧ್ಯಯನಮಾಡಿ ಪಡೆದಿರುವರು.

೧೩೩. ಭೂಪಾಳಂ ಶಶಿರೇಖಮ್ಮ, ಬೆಂಗಳೂರು

ಇವರು ೭-೧೧-೧೯೨೮ ರಲ್ಲಿ ಚಿತ್ತೂರು ಜಿಲ್ಲೆಯ ಪುಂಗನೂರು ತಾಲ್ಲೂ
ಎಲ್ಲಂಪಲ್ಲಿ ಗ್ರಾಮದಲ್ಲಿ ಜನಿಸಿದರು. ಇವರ ತಂದೆ ಶ್ರೀ ಸುಬ್ಬರಾಯಶೆಟ್ಟರು, ತಾ
ಶ್ರೀಮತಿ ಲಕ್ಷ್ಮಿದೇವಮ್ಮನವರು. ಇವರ ಸಾಮಾನ್ಯ ವಿದ್ಯಾಭ್ಯಾಸ ಪ್ರೌಢ ತರ
ಗಳವರೆಗೆ. ಸಂಗೀತದಲ್ಲಿ ಕೃತಿ, ಕೀರ್ತನೆಗಳನ್ನು ಹಾಡಬಲ್ಲ ಪರಿಶ್ರಮವು ಆರ

ವರ್ಷಗಳಿಂದಲೂ ಇದೆ. ಕನ್ನಡ ಭಾಷೆಯು ಬಾರದ ಇವರು ತಮ್ಮ ನೆಂಟರ ಮನೆಯಲ್ಲಿ ನಡೆದ ಕಾವ್ಯವಾಚನ ಕಾರ್ಯಕ್ರಮವನ್ನು ಕೇಳಿ ತಾವೂ ಸಹ ಗಮಕವನ್ನು ಕಲಿಯಲು ಮನಸ್ಸು ಮಾಡಿದರು. ಕಾವ್ಯ ಪ್ರಚಾರ ಮಂಡಲಿಯಲ್ಲಿ ನಡೆಯುತ್ತಿದ್ದ ಗಮಕ ತರಗತಿಗಳಿಗೆ ಸೇರಿ ಶ್ರೀ ಆರ್. ಶಂಕರನಾರಾಯಣ್‌ರವರಲ್ಲಿ ಅಭ್ಯಾಸ ಮಾಡಿದರು. ಗಮಕ ಪ್ರವೇಶ ಮತ್ತು ಪ್ರೌಢ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವರು. ಇವರು ನಗರದ ಅನೇಕ ಸಂಘ ಸಂಸ್ಥೆಗಳಲ್ಲಿ, ಉತ್ಸವ ಸಮಾರಂಭಗಳಲ್ಲಿ ಕಾವ್ಯವಾಚನವನ್ನು ಮಾಡುತ್ತಿರುವರು.

೧೩೪. ಸಿ. ವಿ. ಶ್ರೀನಿವಾಸಾಚಾರ್ಯ, ಮೈಸೂರು

ಇವರು ೧೮-೧೦-೧೯೩೮ರಲ್ಲಿ ಜನಿಸಿದರು. ಶಾಲಾ ಉಪಾಧ್ಯಾಯರಾಗಿರುವರು. ಷಟ್ಪದೀ ಕಾವ್ಯಗಳು ಮತ್ತು ಛಂದಸ್ಸಿನ ನಾನಾ ಪ್ರಕಾರದ ರಚನೆಗಳನ್ನು ವಾಚನ ಮಾಡಬಲ್ಲರು. ಯಕ್ಷಗಾನಗಳಲ್ಲಿಯೂ ಪ್ರವೇಶ ಪರಿಣತಿಗಳಿವೆ. ಇವರು ವ್ಯಾಖ್ಯಾನಕಾರರೂ ಆಗಿರುವುದಲ್ಲದೆ ಕವಿಗಳಾಗಿ ಗಣಪತೀ ವಿಜಯ, ಕೃಷ್ಣ ಗಾರುಡಿ, ನಾರದ ಲೀಲಾ ಮೊದಲಾದ ಕೃತಿಗಳನ್ನು ಭಾಮಿನೀ ಷಟ್ಪದಿಯಲ್ಲಿ ರಚಿಸಿರುವರು. ಇವರ ವಾಚನ ವ್ಯಾಖ್ಯಾನ ಕಾರ್ಯಕ್ರಮಗಳು ನಾಡಿನ ಅನೇಕ ಕಡೆ ನಡೆದು ಜನಪ್ರಿಯವಾಗಿವೆ. ಮೈಸೂರಿನಲ್ಲಿ ಕಾಳಮ್ಮನ ಗುಡಿ, ರಾಯರ ಮಠ ಮುಂತಾದೆಡೆಗಳಲ್ಲಿ ಇವರ ಕಾರ್ಯಕ್ರಮಗಳು ನಿರಂತರವಾಗಿ ನಡೆಯುತ್ತಿವೆ. ೧೯೬೪ರಲ್ಲಿ ಗಮಕ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾದರು.

೧೩೫. ಸಿ. ಎನ್. ಜಯಲಕ್ಷ್ಮೀದೇವಿ, ಮೈಸೂರು

ಇವರು ೧೯೨೯ರಲ್ಲಿ ಚನ್ನಪಟ್ಟಣದಲ್ಲಿ ಜನಿಸಿದರು. ಇವರ ತಂದೆ ಶ್ರೀ ಸಿ. ಕೆ. ನಾರಾಯಣರಾಯರು. ಇವರು ಎಂ.ಎ. ಪದವೀಧರರಾಗಿ ಮಹಿಳಾ ಸೇವಾ ಸಮಾಜ, ಕೇಂದ್ರ ಸಮಾಜ ಕಲ್ಯಾಣ ಮಂಡಳಿ, ಶಿಶುವಿಹಾರಗಳ ಸ್ಥಾಪಕಿಯಾಗಿ, ಶಿಕ್ಷಕಿಯಾಗಿ, ಗೌರವ ಕಾರ್ಯದರ್ಶಿನಿಯಾಗಿ, ಸೇವೆಸಲ್ಲಿಸಿರುವರು. ೧೯೬೪ರಲ್ಲಿ ಕೃಷ್ಣಗಿರಿ ಕೃಷ್ಣರಾಯರಲ್ಲಿ ಗಮಕ ಕಲೆಯನ್ನು ಅಭ್ಯಾಸ ಮಾಡಿ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿರುವರು. ಸಂಗೀತದಲ್ಲಿ ಪ್ರೌಢ ಪರೀಕ್ಷೆಯಾಗಿದೆ. ಇವರು ಲೇಖಕಿಯರಾಗಿ 'ಅನಾಮಿಕ ಮತ್ತು ಇತರ ಕತೆಗಳು', 'ಶುಭದೃಷ್ಟಿ', 'ಜೈಮಿನೀ ವಚನ

ಚಂದ್ರಿಕೆ', 'ಗ್ರಾಮಲೀಲೆ', 'ಮಕ್ಕಳ ಮೂರು ನಾಟಕಗಳು' ಮುಂತಾದ ಗ್ರಂ
ಗಳನ್ನು ಬರೆದು ಪ್ರಕಟಿಸಿರುವರು. ಶಿಶು ಸಾಹಿತ್ಯವಾದ ಇವರ ರಚನೆ 'ಕೋಳೂ
ಕೊಡಗೂಸು' ಕತೆಗೆ ಕೇಂದ್ರ ಸರ್ಕಾರದ ಪ್ರಶಸ್ತಿ ದೊರೆತಿರುವುದು.

೧೩೬. ಹೊಸಬಾಳೆ ಸೀತಾರಾಮರಾಯರು

ಇವರು ಶಿವಮೊಗ್ಗಾ ಜಿಲ್ಲೆಯ ಸೊರಬಾ ತಾಲ್ಲೂಕು ಹೊಸಬಾಳೆ ಗ್ರಾ
ದಲ್ಲಿ ೧೯೩೯ ರಲ್ಲಿ ಜನಿಸಿದರು. ಇವರ ತಂದೆ ಶ್ರೀ ಅನಂತಪ್ಪನವರು, ಸಂಸ್ಕೃ
ಮತ್ತು ಸಂಗೀತಗಳೆರಡರಲ್ಲೂ ನಿಷ್ಣಾತರಾದವರು; ಸೀತಾರಾಮರಾಯರಲ್ಲಿ ಸಾಹಿತ
ಸಂಗೀತದ ಅಭಿರುಚಿಯನ್ನು ಹುಟ್ಟಿಸಿ ಪ್ರೋತ್ಸಾಹಿಸಿದವರು. ಇವರ ಸಾಮಾ
ವಿದ್ಯಾಭ್ಯಾಸ ಪ್ರೌಢಶಾಲೆಯವರೆಗೆ. ಗಮಕ ಕಲೆಯನ್ನು ಕೆ.ಎಸ್. ವೆಂಕಟೇಶಯ
ನವರಲ್ಲಿ ಅಭ್ಯಾಸಮಾಡಿ ೧೯೬೭ ರಲ್ಲಿ ನಡೆದ ಗಮಕ ಪ್ರವೇಶ ಪರೀಕ್ಷೆಯ
ರಾಜ್ಯಕ್ಕೇ ದ್ವಿತೀಯಸ್ಥಾನವನ್ನು ಗಳಿಸಿದರು. ೧೯೬೯ ನೇ ಜನವರಿಯಲ್ಲಿ ದೆ
ನೂರಿನಲ್ಲಿ ನಡೆದ ಜೈಮಿನಿ ಭಾರತ ವಾಚನ ಸ್ಪರ್ಧೆಯಲ್ಲಿಯೂ ಎರಡನೇ
ಸ್ಥಾನವನ್ನು ಗಳಿಸಿ ಮನ್ನಣೆ ಪಡೆದರು. ಇವರ ವಾಚನಗಳು ಬೆಂಗಳೂರಿನಲ್ಲಿಯ
ಅನೇಕ ಸಂಘಸಂಸ್ಥೆಗಳಲ್ಲಿಯೂ ನಡೆಯುತ್ತಿವೆ. ಬೆಂಗಳೂರಿನ 'ಆಕಾಶವಾಣಿ'
ಲ್ಲಿಯೂ ಇವರ ಕಾವ್ಯವಾಚನಗಳು ಬಿತ್ತರಿಸಲ್ಪಟ್ಟಿವೆ. ಸರ್ಕಾರದ ಸಾಹಿತ್ಯ ಮತ
ಸಂಸ್ಕೃತಿ ಅಭಿವೃದ್ಧಿ ಇಲಾಖೆಯ ಮೂಲಕವೂ ಅನೇಕ ಸ್ಥಳಗಳಲ್ಲಿ ಇವರ ಕಾ
ವಾಚನ ಕಾರ್ಯಕ್ರಮಗಳು ನಡೆದು ಜನಪ್ರಿಯವಾಗಿವೆ. ಇವರು ಸೊರಬ ತಾಲ್ಲೂ
ನಿಂದ ಪರಿಷತ್ತಿನ ಪ್ರತಿನಿಧಿಗಳಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಶಿವಮೊಗ್ಗಾ ಜಿಲ್ಲೆ
ಅಕ್ಷರ ಪ್ರಚಾರ ಸಮಿತಿಯ ಸದಸ್ಯರಾಗಿಯೂ ಸೇವೆ ಸಲ್ಲಿಸುತ್ತಿರುವರು.

೧೩೭. ಪಿ. ಕೆ. ದ್ವಾರಕಾನಾಥ್, ಬೆಂಗಳೂರು

ಇವರು ೧-೧-೧೯೩೯ ರಲ್ಲಿ ತುಮಕೂರಿನಲ್ಲಿ ಜನಿಸಿದರು. ಇವರ ತ
ಶ್ರೀ ಪೂರ್ಣ ಕೃಷ್ಣಮೂರ್ತಿಯವರು; ತಾಯಿ ಶ್ರೀಮತಿ ಗೋದಾವರೀಬಾ
ಇವರು ಬಿ. ಎಸ್‌ಸಿ. ಪದವೀಧರರಾಗಿ ಬೆಂಗಳೂರಿನ ಭಾರತೀಯ ಟೆಲಿಫೋ
ಕಾರ್ಖಾನೆಯಲ್ಲಿ ಅಸಿಸ್ಟೆಂಟ್ ಎಗ್ಸಿಕ್ಯೂಟಿವ್ ಎಂಜಿನೀಯರ್ ಆಗಿರುವರು. ಸಂಗಿ
ವಿದ್ವಾನ್ ಶ್ರೀ ಕೊ. ಸು ನಾಗರಾಜ್‌ರವರಲ್ಲಿ ಸಂಗೀತವನ್ನು ಕಲಿತು ಪ

ಕೃತಿಗಳನ್ನು ಹಾಡಬಲ್ಲವರಾಗಿದ್ದಾರೆ. ಗಮಕಿ ಕಳಲೆ ಸಂಪತ್ಕುಮಾರಾಚಾರ್ಯರ ಕಾವ್ಯವಾಚನವನ್ನು ಕೇಳಿ ಪ್ರಭಾವಿತರಾದ ಇವರು ಮುಂದೆ ಅವರ ಆಪ್ತ ಶಿಷ್ಯರಾಗಿರುವ ಗಮಕಿ ಶ್ರೀ ಟಿ. ಆರ್. ಜಯರಾಯರಲ್ಲಿ ಗಮಕ ಕಲಾಭ್ಯಾಸವನ್ನು ಮುಂದುವರಿಸಿದರು. ಗಮಕಿಗಳಾದ ಶ್ರೀ ಎಂ. ರಾಘವೇಂದ್ರರಾಯರು ಮತ್ತು ಶ್ರೀ ಜಿ. ಎ. ಅನಂತಪದ್ಮನಾಭರಾಯರಲ್ಲಿ ಕ್ರಮವಾಗಿ ಕಾವ್ಯವಾಚನವನ್ನು ಕಲಿತಿರುವರು. ಇವರಿಗೆ ಕನ್ನಡ ಸಾಹಿತ್ಯದ ಎಲ್ಲಾ ಪ್ರಕಾರಗಳ ರಚನೆಗಳೂ ಕಾವ್ಯವಾಚನಕ್ಕೆ ಪ್ರಿಯವೆ, ಸಾಹಿತ್ಯಾಭ್ಯಾಸದಲ್ಲಿ ಇವರಿಗೆ ಶ್ರೀ ಡಿ. ಎಸ್. ಶ್ರೀನಿವಾಸರಾಯರು ಮಾರ್ಗದರ್ಶನ ಮಾಡಿರುವವರು. ಇವರು ೧೯೬೪ ರಲ್ಲಿ ಗಮಕ ಪ್ರವೇಶ ಮತ್ತು ಪ್ರೌಢ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವರು. ೧೪ ವರ್ಷಗಳಿಂದಲೂ ಕಾವ್ಯವಾಚನವನ್ನು ಉತ್ಸವ ಸಮಾರಂಭಗಳಲ್ಲಿ ಅನೇಕ ಸಂಘ ಸಂಸ್ಥೆಗಳಲ್ಲಿ ಮಾಡುತ್ತಿರುವುದೇ ಅಲ್ಲದೆ ಅನೇಕರಿಗೆ ಕಾವ್ಯವಾಚನವನ್ನು ಕಲಿಸಿ ಅವರು ಗಮಕ ಪರೀಕ್ಷೆಗಳಲ್ಲಿ ಉತ್ತೀರ್ಣರಾಗುವಂತೆ ಮಾಡಿರುವರು.

೧೩೮. ಎಸ್. ಪದ್ಮ. ಬೆಂಗಳೂರು

ಇವರು ೨೦-೩-೧೯೩೯ ರಲ್ಲಿ ಜನಿಸಿದರು. ಶ್ರೀಮತಿ ಅಂಬುಜಮ್ಮ ಮತ್ತು ಶ್ರೀ ಎಲ್. ಶ್ರೀನಿವಾಸಾಚಾರ್ ಇವರ ಮಾತಾಪಿತೃಗಳು. ಇವರು ಲೋಯರ್ ಸೆಕೆಂಡರಿಯಲ್ಲಿ ತೇರ್ಗಡೆಯಾಗಿದ್ದಾರೆ. ಸಂಗೀತದ ಪರಿಚಯವು ತಕ್ಕಮಟ್ಟಗಿದೆ. ಇವರಿಗೆ ಗಮಕ ಕಲೆಯಲ್ಲಿ ಆಸಕ್ತಿ ಹುಟ್ಟಲು ಕಾರಣ ಗಮಕಿ, ಶ್ರೀಮತಿ ಜಯಲಕ್ಷ್ಮಿ ಸುಬ್ಬರಾವ್ ಅವರು, ಅಲ್ಲದೆ ಪ್ರಸಿದ್ಧ ಗಮಕಿಗಳಾದ ಬಿಂದೂರಾಯರು, ರಾಘವೇಂದ್ರರಾಯರು ಮತ್ತು ಆಲೂರು ವೆಂಕಟರಾಯರ ಪ್ರೋತ್ಸಾಹ. ಗಮಕಿ ಕಳಲೆ ಸಂಪತ್ಕುಮಾರಾಚಾರ್ಯರು ಇವರ ನೆಂಟರಾಗಿದ್ದು ಸ್ಫೂರ್ತಿಯನ್ನಿತ್ತರು. ಹತ್ತು ವರುಷಗಳ ಕಾವ್ಯವಾಚನ ಅನುಭವವಿದೆ. ಗಮಕದಲ್ಲಿ ಪ್ರವೇಶ ಪ್ರೌಢ ಮತ್ತು ಗಮಕ ಶಿಕ್ಷಕರ ಶಿಕ್ಷಣ ಶಿಬಿರದಲ್ಲಿ ತರಬೇತಿಯಾಗಿರುತ್ತೆ. ಇವರಿಗೆ ಪಂಪಭಾರತ, ಗದುಗಿನ ಭಾರತ, ಜೈಮಿನಿ ಭಾರತ ಮತ್ತು ಹರಿಶ್ಚಂದ್ರ ಕಾವ್ಯಗಳೆಂದರೆ ಬಹಳ ಇಷ್ಟ. ಉದಯಭಾನು ಕಲಾ ಸಂಘದಲ್ಲಿ, ಸಂಸ್ಕೃತಿ ಪ್ರಸಾರ ಯೋಜನೆಯ ಸಂಬಂಧದಲ್ಲಿ, ಬೆಳಗಾಂ ಜಿಲ್ಲೆಯ ಯಾದವಾಡದಲ್ಲಿ ಇವರು ಕಾವ್ಯವಾಚನ ಮಾಡಿರುತ್ತಾರೆ.

೧೩೯. ಎನ್. ಎಸ್. ನಾರಾಯಣಮೂರ್ತಿ

ಇವರು ೨೪-೮-೧೯೨೯ರಲ್ಲಿ ಜನಿಸಿದರು. ಇವರ ತಂದೆ ಶ್ರೀ ಎಸ್
ಶಾಮರಾಯರು, ತಾಯಿ ಶ್ರೀಮತಿ ಸುಬ್ಬಲಕ್ಷ್ಮಮ್ಮನವರು. ಇವರು ಬಿ.ಎಸ್‌ಸಿ
ಪದವೀಧರರಾಗಿ ಹೆಚ್. ಎ. ಎಲ್. ನಲ್ಲಿ ಪರ್ಚೇಸ್ ಆಫೀಸರ್ ಆಗಿರುವ
ಕೇಳ್ಮೆಯ ಬಲದಿಂದಲೇ ೫೦ಕ್ಕೂ ಮೀರಿ ರಾಗಗಳ ಸಂಚಾರವನ್ನು ಬಲ್ಲ
ಪಿಟೀಲು ವಿದ್ವಾನ್ ರತ್ನಗಿರಿ ಸುಬ್ಬಾಶಾಸ್ತ್ರಿಗಳು ಮತ್ತು ವೈಣಿಕ ವಿದ್ವಾ
ಶ್ರೀ ಎಲ್. ರಾಜಾರಾಯರು ಸೇರಿ ನಡೆಸುತ್ತಿದ್ದ ಭಜನ ಗೋಷ್ಠಿಗಳಲ್ಲಿ ಇ
ಸಂಗೀತ ಜ್ಞಾನವು ನಿಶಿತವಾಯಿತು. ೧೯೫೬-೫೭ ರಲ್ಲಿ ಗಮಕ ಪ್ರವೇಶ ಮ
ಪ್ರೌಢ ಪರೀಕ್ಷೆಗಳನ್ನು ಹೆಮ್ಮಿಗೆ ದೇಶಿಕಾಚಾರ್ಯರು ಬೆಳಕವಾಡಿ ವರದರಾ
ಅಯ್ಯಂಗಾರ್ಯರು ಮತ್ತು ಗಮಕಿ ಎಂ. ರಾಘವೇಂದ್ರರಾಯರಲ್ಲಿ ಕಲಿತು ಮಾ
ಮಾಡಿಕೊಂಡರು. ಮುಖ್ಯವಾಗಿ ಇವರಿಗೆ ಗಮಕ ಕಲೆಯನ್ನು ಕಲಿಸಿದವ
ಗಮಕಿಗಳಾದ ಎಂ. ಎಸ್. ಚಂದ್ರಶೇಖರಯ್ಯನವರು ಶ್ರೀ ಜಿ. ಎ. ಅನ
ಪದ್ಮನಾಭರಾಯರು ಮತ್ತು ಎ೦. ರಾಘವೇಂದ್ರರಾಯರು. ಇವರು ಷಟ್
ಮತ್ತು ಚಂಪೂ ಕಾವ್ಯಗಳನ್ನು ವಾಚನ ಮಾಡುವರು. ದೇವರನಾಮ ಮ
ಕನ್ನಡ ಗೀತೆಗಳ ಹಾಡಿಕೆಯಲ್ಲೂ ಪರಿಶ್ರಮವುಂಟು. ಗಮಕ ಪ್ರವೇಶ ಮ
ಪ್ರೌಢ ತರಗತಿಗಳನ್ನು ಸುಮಾರು ಆರೇಳು ವರ್ಷಗಳಿಂದಲೂ ನಡೆಸುತ್ತಿರುವ
ಇವರ ವಾಚನ ಕಾರ್ಯಕ್ರಮಗಳು ಬೆಂಗಳೂರು ಆಕಾಶವಾಣಿ ಕೇಂದ್ರದಿ
ಪ್ರಸಾರವಾಗಿವೆ.

೧೪೦. ಅನಂತನಾರಾಯಣ ಅಯ್ಯಂಗಾರ್, ಮೇಲುಕೋ

ಇವರು ೨೯-೧೨-೧೯೨೯ ರಲ್ಲಿ ಜನಿಸಿದರು. ಇವರು ಎಂ.ಎ., ಬಿ.ಎಸ್‌ಸಿ
ಎಂ.ಇಡಿ., ಪದವೀಧರರು. ಪ್ರೌಢಶಾಲಾ ಮುಖ್ಯೋಪಾಧ್ಯಾಯರಾಗಿರುವ
ಗಮಕ ಪ್ರೌಢ ಪರೀಕ್ಷೆಯಲ್ಲಿ ಪ್ರಪ್ರಥಮಶ್ರೇಣಿಯಲ್ಲಿ ಉತ್ತೀರ್ಣರಾಗಿರುವ
ಕನ್ನಡ ಪಂಡಿತ ಪರೀಕ್ಷೆ, ಹಿಂದೀ ಪ್ರವೇಶಿಕ ಪರೀಕ್ಷೆ ಮುಗಿಸಿರುವರು. ಇ
ಕಲೆಯನ್ನು ಉದ್ದಾಮ ಸಂಸ್ಕೃತ ಕನ್ನಡ ವಿದ್ವಾಂಸರೂ ಹಾಗೂ ಸಂಗಿ
ಸಾಹಿತ್ಯ ವಿದ್ವಾಂಸರೂ ಆದ ಕೆಂಪನಪುರದ ಶ್ರೀ ನರಸಿಂಹಾಚಾರ್ಯರಲ್ಲಿ ಕಲಿತ

ಆಕಾಶವಾಣಿಯಲ್ಲಿಯೂ ಇವರ ಕಾರ್ಯಕ್ರಮಗಳು ಪ್ರಸಾರವಾಗಿವೆ. ಕೆಲವು ಶಿಷ್ಯರನ್ನೂ ಕಾವ್ಯವಾಚನ ಕಲೆಯಲ್ಲಿ ಅಭ್ಯಾಸಮಾಡಿಸಿರುವರು.

೧೪೧. ಎಸ್. ಲಕ್ಷ್ಮೀನರಸಮ್ಮ, ಬೆಂಗಳೂರು

ಇವರು ೧೯೩೦ ರಲ್ಲಿ ಶಿವಮೊಗ್ಗಾದಲ್ಲಿ ಜನಿಸಿದರು. ಇವರ ವಿದ್ಯಾಭ್ಯಾಸ ಲೋಯರ್ ಸೆಕೆಂಡರೀ ಪರೀಕ್ಷೆಯವರೆಗೆ. ಸಂಗೀತ ಹಾಡುಗಾರಿಕೆ ಸೀನಿಯರ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರು. ೧೯೫೬ ರಲ್ಲಿ ಪರಿಷತ್ತು ನಡೆಸುತ್ತಿದ್ದ ಹರಿದಾಸರ ಮತ್ತು ಶಿವಶರಣರ ಕೃತಿಗಳನ್ನು ಕಲಿತು ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರು. ಇವರು ಕಾವ್ಯವಾಚನವನ್ನು ಕಲಿತದ್ದು ಶ್ರೀಮತಿ ಗಂಗಮ್ಮ ಕೇಶವಮೂರ್ತಿಯವರಲ್ಲಿ. 'ಆಕಾಶವಾಣಿ'ಯಲ್ಲಿ ಮಹಿಳೆಯರ ಕಾರ್ಯಕ್ರಮಗಳಲ್ಲಿ ಭಾಗವಹಿಸಿರುವುವೇ ಅಲ್ಲದೆ ಕಾವ್ಯವಾಚನವನ್ನೂ ಮಾಡಿರುವರು. ಜಯಂತ್ಯುತ್ಸವಗಳ ಸಂದರ್ಭಗಳಲ್ಲಿಯೂ ಹಬ್ಬ ಹರಿದಿನಗಳಲ್ಲಿಯೂ ಕಾವ್ಯವಾಚನವನ್ನು ಅನೇಕ ಕಡೆ ಮಾಡಿರುವರು. ಸ್ವಪ್ರಯತ್ನದಿಂದ ಸಾಹಿತ್ಯಾಭ್ಯಾಸವನ್ನು ಮಾಡುವುದಲ್ಲದೆ ಅನೇಕ ಹೆಣ್ಣುಮಕ್ಕಳಿಗೆ ಮನೆಯಲ್ಲಿಯೇ ಸಂಗೀತ ಮತ್ತು ಕಾವ್ಯವಾಚನವನ್ನು ಕಲಿಸುತ್ತಿರುವರು.

೧೪೨. ಹೆಚ್. ರಾಮದಾಸ್, ಚಾಮರಾಜನಗರತಾಲ್ಲೂಕು

ಇವರು ೧೯೩೦ ರಲ್ಲಿ ರಾಮಸಮುದ್ರದಲ್ಲಿ ಜನಿಸಿದರು. ಇವರ ತಂದೆ ಹನುಮಂತಯ್ಯನವರು. ಎಸ್.ಎಸ್.ಎಲ್.ಸಿ.ಯಲ್ಲಿ ತೇರ್ಗಡೆಯಾಗಿದೆ. ಇವರು ರಾಮಸಮುದ್ರದ ಶಾಲೆಯಲ್ಲಿ ಉಪಾಧ್ಯಾಯರಾಗಿದ್ದಾರೆ. ಗಮಕ ಕಲೆಯನ್ನು ಶ್ರೀ ಹೆಚ್. ಕೆ. ರಾಮಸ್ವಾಮಿಯವರಲ್ಲಿ ಕಲಿತು ೧೯೫೭ ರಲ್ಲಿ ನಡೆಸಿದ ಗಮಕ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರು. ತಕ್ಕಮಟ್ಟಿನ ಸಂಗೀತ ಪರಿಚವೂ ಇದೆ. ರಾಮಮಂದಿರಗಳು ಮತ್ತು ಸಾಂಸ್ಕೃತಿಕ ಸಂಘಗಳಲ್ಲಿ, ವಿಶೇಷ ಉತ್ಸವ ಸಮಾರಂಭಗಳಲ್ಲಿ ಕಾವ್ಯವಾಚನವನ್ನು ನಡೆಸುತ್ತಿರುವರು. ದೇವರನಾಮ, ಭಾವಗೀತೆ, ಜನಪದಗೀತೆ, ಲಾವಣಿಗಳನ್ನು ಹಾಡುವ ಅಭ್ಯಾಸವೂ ಇದೆ.

೧೪೩. ವಿ. ಎಸ್. ಜಹಗೀರ್‌ದಾರ್, ಮುನೀರಾಬಾದು

ಇವರು ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ಎಂಬಲ್ಲಿ ೧೫-೧-೧೯೩೦ರಲ್ಲಿ ಜನಿ
ದರು. ಹೈಯರ್ ಸೆಕೆಂಡರಿವರೆಗೆ ಮಾತ್ರ ವಿದ್ಯಾಭ್ಯಾಸ ಮಾಡಿರುತ್ತಾ
ರಾಯಚೂರು ಜಿಲ್ಲೆಯ ಮುನೀರಾಬಾದಿನಲ್ಲಿ ಸರ್ಕಾರಿ ವೃತ್ತಿಯಲ್ಲಿರುತ್ತಾ
ಇವರು ಗಮಕ ಮತ್ತು ಸಂಗೀತಗಳನ್ನು ಚಿಕ್ಕೆರೂರು ಶ್ರೀ ಭೀಮಸೇನಾಚಾಯ
ರಲ್ಲಿ ಅಭ್ಯಾಸ ಮಾಡಿರುವರು. ೧೯೫೭ರಿಂದೀಚೆಗೆ ಧಾರವಾಡದ 'ಆಕಾಶವಾ
ಕೇಂದ್ರದಿಂದ ಆವಕಾಶ ದೊರೆತಾಗಲೆಲ್ಲ ಸಾಂಸ್ಕೃತಿಕ ಕಾರ್ಯಕ್ರಮಗಳ
ನೀಡಿರುವರು. ಇವರ ವಾಚನಗಳು ವ್ಯಾಖ್ಯಾನಪ್ರದವಾಗಿರುವುದರಿಂದ ಇವರ ಅ
ಮಾನಿಗಳು ಚತುರ ವಾಗ್ಮಿ, ಸರಸ ಕವಿ, ರಮ್ಯ ಗಮಕಿ, ಭಕ್ತಿದೂತ ಎಂದು ಇ
ಜಾಣ್ಮೆಯನ್ನು ಪ್ರಶಂಸಿಸಿರುವರು. ಹೈದರಾಬಾದ್ ಕರ್ಣಾಟಕ ಪ್ರದೇಶಗಳ
ರಾಮಾಯಣ ಮಹಾಭಾರತ ಗ್ರಂಥವಾಚನಗಳನ್ನು ಹಾಗೂ ಭಕ್ತಿಗೀತೆ
ಕಾರ್ಯಕ್ರಮಗಳನ್ನೂ ನಡೆಸುತ್ತಿರುವರು. ಇವರ ಪ್ರಕಾಶಿತ ಗ್ರಂಥ “ತಾ
ತುಂಗಭದ್ರೆ” ಎಂಬುದು ಚೌಪದಿಯ ಕಥನ ಕವನ.

೧೪೪. ಬಿ. ವಿ. ರಾಮಸ್ವಾಮಿ

ಇವರು ೨೨-೨-೧೯೩೦ರಲ್ಲಿ ಬೆಂಗಳೂರಿನಲ್ಲಿ ಜನಿಸಿದರು. ಇವರ ತಂ
ವಿದ್ವಾನ್ ಬಿ. ಎಸ್. ವೆಂಕಟೇಶಯ್ಯನವರು. ಸಂಗೀತ, ಸಾಹಿತ್ಯ, ಕಾ
ವಾಚನಗಳಲ್ಲಿ ಹೆಸರುವಾಸಿಯಾಗಿದ್ದರು. ಅವರ ಮನೆತನಕ್ಕೆ ಕಾವ್ಯವಾಚ
ಕಲೆಯು ವಂಶಪಾರಂಪರ್ಯವಾಗಿ ಬಂದಿದ್ದಿತು. ಶ್ರೀ ರಾಮಸ್ವಾಮಿಯವ
ಐ.ಟಿ.ಐ.ನಲ್ಲಿ ಹೆಡ್‌ಕ್ಲಾರ್ಕ್ ಆಗಿರುವರು. ವಿರಾಮ ಕಾಲದಲ್ಲಿ ಕಲಾಸೆ
ಮಾಡುತ್ತಿರುವರು. ಅವರ ತಂದೆಯವರಿಂದ ಗಮಕ ಕಲೆಯನ್ನು ಕಲಿತು ಅ
ಧಾಟಿಯನ್ನೇ ಅನುಸರಿಸುತ್ತಿರುವರು. ೧೯೬೦ರಲ್ಲಿ ಸಾಹಿತ್ಯ ಪರಿಷತ್ತಿನ ಗಮ
ಶಿಕ್ಷಣವನ್ನೂ ಪಡೆದರು. ಶ್ರೀ ಕೆ. ವಿ. ಸಂಪತ್ಕುಮಾರಾಚಾರ್ಯರ ಪರಿಚ
ದಿಂದಾಗಿ ಗಮಕ ಕಲೆಯಲ್ಲಿ ಹೆಚ್ಚಿನ ಲಾಭವನ್ನು ಪಡೆದುಕೊಂಡಿರುವ
ವಿದ್ವಾನ್ ಹು. ಮಾ. ರಾಮಾರಾಧ್ಯರೊಡನೆ ಹಲವಾರು ಗಮಕ ರೂಪಕಗಳ
ಪಾಲ್ಗೊಂಡಿರುತ್ತಾರೆ. ವ್ಯಾಖ್ಯಾನ ವಾಚಸ್ಪತಿ ಶ್ರೀ ಲಕ್ಷ್ಮೀಕೇಶವಶಾಸ್ತ್ರಿ
ವ್ಯಾಖ್ಯಾನಕ್ಕೆ ವಾಚನ ಮಾಡಿರುವರು. ಹುಬ್ಬಳ್ಳಿ, ತುಮಕೂರು, ಧಾರವಾ

ನೆಲಮಂಗಲ, ಉಡುಪಿ ಮುಂತಾದ ಕಡೆಗಳಲ್ಲಿ ಕಾವ್ಯವಾಚನ ಮಾಡಿರುವರು. ಗಮಕಕ್ಕೆ ಪೂರ್ವಭಾವಿಯಾಗಿ ಶ್ರೀಮತಿ ತಿರುಮಲೆ ರಾಜಮ್ಮನವರಲ್ಲಿ ಸಂಗೀತಾಭ್ಯಾಸ ಮಾಡುತ್ತಿದ್ದರು. ನಾಟಕಗಳಲ್ಲಿ ಪಾತ್ರವಹಿಸುವುದು ಇವರ ಇತರ ಹವ್ಯಾಸ. ಅನೇಕ ವೃತ್ತಿ ಸಂಸ್ಥೆಗಳಲ್ಲಿಯೂ ಕಲಾವಿಲಾಸಿ ಸಂಸ್ಥೆಗಳಲ್ಲಿಯೂ ನಟಿಸಿ ನೋಟಕರ ಮೆಚ್ಚುಗೆಯನ್ನು ಪಡೆದುಕೊಂಡಿರುವರು.

೧೪೫. ಎಸ್. ಶಿವಣ್ಣ, ತುಮಕೂರು

ಇವರು ೧೦ ೪-೧೯೩೦ ರಲ್ಲಿ ದೊಡ್ಡಬಳ್ಳಾಪುರದ ತಾಲ್ಲೂಕು ಅಂಬಲಗೆರೆಯಲ್ಲಿ ಜನಿಸಿದರು. ಇವರ ತಂದೆ ಶ್ರೀ ಸಿದ್ಧಪ್ಪನವರು. ಇವರು ಎಸ್. ಎಸ್. ಎಲ್. ಸಿ. ಮತ್ತು ಟಿ.ಸಿ.ಹೆಚ್. ಮುಗಿಸಿಕೊಂಡು ಶಾಲಾ ಉಪಾಧ್ಯಾಯರಾಗಿರುವರು. ಯಕ್ಷಗಾನ ಭಾಗವತರಾಗಿದ್ದ ಇವರ ತಂದೆಯವರ ಪ್ರಭಾವವು ಬಾಲ್ಯದಲ್ಲಿಯೇ ಇವರ ಮೇಲೆ ಇತ್ತು. ಇವರು ಬೆಂಗಳೂರು ಜಿಲ್ಲೆಯ ವಿದ್ಯಾನಗರದಲ್ಲಿ ಉಪಾಧ್ಯಾಯ ಶಿಕ್ಷಣ ಪಡೆಯುತ್ತಿದ್ದಾಗ ಅಲ್ಲಿ ಉಪಾಧ್ಯಾಯರುಗಳಾಗಿದ್ದ ಶ್ರೀ ಕೆ. ಟಿ. ರಾಮಸ್ವಾಮಿ ಐಯ್ಯಂಗಾರ್ ಮತ್ತು ಶ್ರೀ ಟಿ. ಎಸ್. ರಾಮಕೃಷ್ಣಶಾಸ್ತ್ರಿಗಳವರಲ್ಲಿ ಸಂಗೀತವನ್ನು ಅಭ್ಯಾಸ ಮಾಡಿದರು. ಅಲ್ಲಿ ದಿನವೂ ನಡೆಯುತ್ತಿದ್ದ ಕಾರ್ಯಕ್ರಮಗಳಲ್ಲಿ ಶರಣರ ವಚನಗಳನ್ನೂ ದಾಸರ ಕೀರ್ತನೆಗಳನ್ನೂ ಹಾಡುತ್ತಿದ್ದ ಇವರು ತಮಗೆ ದೊರೆತ ಪ್ರೋತ್ಸಾಹದಿಂದ ಹರಿಕಥೆಗಳನ್ನು ಮಾಡಲು ಕಲಿತರು. ತುಮಕೂರು ಜಿಲ್ಲೆಯ ನಾಗವಲ್ಲೀ ಗ್ರಾಮದಲ್ಲಿ ಅಧ್ಯಾಪಕರಾಗಿದ್ದಾಗ ಇವರ ಕಾವ್ಯವಾಚನ ಕಾರ್ಯಕ್ರಮಗಳು ನಿರಂತರವಾಗಿ ನಡೆದು ೧೯೫೩ರಲ್ಲಿ ತುಮಕೂರಿನಲ್ಲಿ ನಡದ ಗ್ರಾಮ ಕಲಾ ಪ್ರದರ್ಶನದಲ್ಲಿ ಇವರ ವಾಚನಕ್ಕೆ ಪ್ರಶಸ್ತಿ ದೊರೆಯಿತು. ಮುಂದೆ ೧೯೭೪ರಲ್ಲಿ ತುಮಕೂರಿನಲ್ಲಿ ಗಮಕಿ ಸಿದ್ಧಲಿಂಗದೇವರು ನಡಸುತ್ತಿದ್ದ ಗಮಕ ತರಗತಿಯಲ್ಲಿ ಕಲಿತು ಗಮಕ ಪ್ರವೇಶ ಪರೀಕ್ಷೆಯಲ್ಲಿ ರಾಜ್ಯಕ್ಕೆ ನಾಲ್ಕನೇ ಸ್ಥಾನವನ್ನು ಪಡೆದು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾದರು.

೧೪೬. ಕಡಬ ಲಕ್ಷ್ಮೀಕಾಂತ, ತುಮಕೂರು

ಇವರು ೮-೫-೧೯೩೧ರಲ್ಲಿ ಗುಬ್ಬಿ ತಾಲ್ಲೂಕು ಕಡಬದಲ್ಲಿ ಜನಿಸಿದರು. ಇವರು ಬಿ.ಎಸ್‌ಸಿ. ವರೆಗೆ ವ್ಯಾಸಂಗ ಮಾಡಿರುವರು ಇವರ ತಂದೆ ಕಡಬ

ಶಾಮಣ್ಣನವರು. ಗಮಕ ಕಲೆಯಲ್ಲಿ ಆಸಕ್ತಿ ಇವರ ತಂದೆಯವರಿಂದಲೇ ಉಂಟಾ
ಯಿತು. ಉತ್ತಮ ಶಾರೀರವನ್ನು ಹೊಂದಿದ್ದ ಇವರು, ಭಾರತದ ಬಿಂದೂರಾಯರ
ಕಾವ್ಯವಾಚನವನ್ನು ಕ್ರಮವಾಗಿ ಅಭ್ಯಾಸ ಮಾಡಿ ಪರಿಷತ್ತಿನ ಗಮಕ ಪರೀ
ಯಲ್ಲಿ ೫ನೇ ಸ್ಥಾನವನ್ನು ಗಳಿಸಿದರು. ಇವರ ಸಾಹಿತ್ಯಾಭಿರುಚಿಯನ್ನು ಪ್ರೋತ್
ಹಿಸಿದವರು ಪ್ರೌಢಶಾಲೆಯ ಉಪಾಧ್ಯಾಯರುಗಳಾಗಿದ್ದ ಶ್ರೀ ರಾಮಚಂ
ರಾಯರು, ಶ್ರೀ ಆರ್. ಅನಂತರಾಮನ್‌ರವರು ಮತ್ತು ಕಾಲೇಜಿನಲ್ಲಿದ್ದ ಪರಮೆ
ಶ್ವರಭಟ್ಟರು. ಸಂಗೀತ ಸೀನಿಯರ್ ಪರೀಕ್ಷೆಯನ್ನು ಮಾಡಿಕೊಂಡಿದ್ದ ಇವ
ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘದಲ್ಲಿ ಭಾರತವಾಚನ ನಡೆಸಿರುವರು. ಇವ
ಕಾವ್ಯವಾಚನಗಳು ಆಕಾಶವಾಣಿ ಬೆಂಗಳೂರು ಕೇಂದ್ರದಿಂದ ಪ್ರಸಾರವಾಗಿ
ಇವರು ಗಮಕ ತರಗತಿಗಳನ್ನು ನಡೆಸಿ ಗಮಕ ಪರೀಕ್ಷೆಗೆ ವಿದ್ಯಾರ್ಥಿಗಳನ
ತಯಾರು ಮಾಡಿರುವರು. ಮಂಡ್ಯದಲ್ಲಿ ರಾಮಾಯಣ ದರ್ಶನಂ ಕಾವ್ಯವಾಚ
ಸ್ಪರ್ಧೆಯಲ್ಲಿ ಭಾಗವಹಿಸಿ ಬಹುಮಾನವನ್ನು ಪಡೆದಿರುವರು. ಇವರ ಕಾವ್ಯವಾಚ
ಗಳೂ ಶ್ರೀ ಶೃಂಗೇರಿ ಸೀತಾರಾಮ ಭಟ್ಟರ ಪ್ರವಚನವೂ ಅನೇಕ ದಿವಸಗಳು ನ
ದಿವೆ. ಸಂಗೀತವನ್ನೂ ಶ್ರೀ ಶ್ರೀನಿವಾಸ ರಾಘವನ್, ರಾಮಾಜೋಯಿಸರು ಮತ್
ಮಾವಳ್ಳಿಯ ನಾರಾಯಣ ಮೂರ್ತಿಗಳಲ್ಲಿ ಅಭ್ಯಾಸಮಾಡಿ ವಿದ್ವಾನ್ ಆರ್. ಕ
ಶ್ರೀಕಂಠನ್ ಅವರಲ್ಲಿ ಮುಂದುವರಿಸಿದರು. ಇವರಿಗೆ ನಾಟಕಗಳಲ್ಲಿ ಅಭಿರುಚಿಯ
ಇದ್ದು 'ಕರ್ತವ್ಯ','ತಾನಾಜಿ','ಏಕಲವ್ಯ' ಮುಂತಾದ ಏಕ ಪಾತ್ರಗಳನ್ನು ಅ
ನಯಿಸಿರುವರು. ಬಿ. ಪುಟ್ಟಸ್ವಾಮಯ್ಯನವರ ಕುರುಕ್ಷೇತ್ರ ನಾಟಕದಲ್ಲಿ, ಕುಮಾ
ವ್ಯಾಸ ಭಾರತದಿಂದಲೂ, ರನ್ನನ ಗದಾಯುದ್ಧದಿಂದಲೂ ಆಯ್ದ ಭಾಗಗಳನ
ಅಳವಡಿಸಿಕೊಂಡು ಅಭಿನಯಿಸಿದ ಸಂದರ್ಭದಲ್ಲಿ ಇವರಿಗೆ ಪ್ರಥಮ ಬಹುಮಾ
ದೊರೆಯಿತು.

೧೪೭. ರತ್ನಮ್ಮ ಸುಂದರರಾವ್, ಬೆಂಗಳೂರು

ಇವರು ಬೆಂಗಳೂರು ನಗರದಲ್ಲಿ ೨೩-೭-೧೯೩೦ ರಂದು ಜನಿಸಿದರು. ತ
ಸಾಗರಕವಿ ಲಿಂಗಣ್ಣಯ್ಯನವರು, ತಾಯಿ ಶ್ರೀಮತಿ ಲಕ್ಕಮ್ಮನವರು. ಇವರ
ಹೈಸ್ಕೂಲು ಶಿಕ್ಷಣ ಆಗಿರುತ್ತೆ. ತಕ್ಕಮಟ್ಟಿಗೆ ಸಂಗೀತದ ಪರಿಚಯವಿದೆ. ಕನ್ನ
ಸಾಹಿತ್ಯದಲ್ಲಿ ಅಭಿರುಚಿಯಿದೆ. ವ್ಯಾಖ್ಯಾನವನ್ನೂ ಮಾಡುತ್ತಾರೆ. ಕತೆ ಕಾದಂಬ
ಗಳನ್ನೂ ಬರೆದಿರುತ್ತಾರೆ. ಗಮಕ ಕಲೆಯನ್ನು ಮೂರು ವರ್ಷ ಕಾಲ ಅಭ್ಯಾ

ಮಾಡಿರುತ್ತಾರೆ. ಗಮಕ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದಾರೆ. ಇವರಿಗೆ ಗಮಕ ಕಲೆಯಲ್ಲಿ ಮಾರ್ಗದರ್ಶನ ಮಾಡಿದ ಗುರುಗಳು ಶ್ರೀಮತಿ ಅನ್ನಪೂರ್ಣಮ್ಮ ರಘುಪತಿಶಾಸ್ತ್ರಿಗಳು. ಇವರಿಗೆ ಗದುಗಿನ ಭಾರತ, ಜೈಮಿನಿ ಭಾರತ, ಹರಿಶ್ಚಂದ್ರ ಕಾವ್ಯ ಮತ್ತು ಶಂಕರ ವಿಜಯ ಬಹು ಮೆಚ್ಚಿಗೆಯ ಕಾವ್ಯಗಳು. ಬೆಂಗಳೂರು, ಕೋಲಾರ, ತುಮಕೂರು, ಶಿವಮೊಗ್ಗಾ ಜಿಲ್ಲೆಯ ಅನೇಕ ಸ್ಥಳಗಳಲ್ಲಿ ಇವರ ಕಾವ್ಯವಾಚನ ಕಾರ್ಯಕ್ರಮವು ನಡೆದಿದೆ.

೧೪೮. ಎಂ. ಎಸ್. ಜಯಲಕ್ಷ್ಮಮ್ಮನವರು, ಹೊಳೇನರಸೀಪುರ

ಇವರು ೧೦-೮-೧೯೩೦ರಲ್ಲಿ ಹಾಸನದ ತಾಲ್ಲೂಕು ಮುದುಗೆರೆಯಲ್ಲಿ ಹುಟ್ಟಿದರು. ಇವರ ತಾಯಿ ಲಕ್ಷ್ಮಮ್ಮನವರು, ತಂದೆ ಶ್ರೀನಿವಾಸ ಭಟ್ಟರು. ಇವರು ಎಸ್. ಎಸ್. ಎಲ್. ಸಿ. ವರೆಗೆ ಓದಿ, ಹಿಂದೀ ಉತ್ತಮದಲ್ಲಿ ತೇರ್ಗಡೆಹೊಂದಿ ಶಾಲಾ ಉಧ್ಯಾಯಿನಿಯಾಗಿದ್ದಾರೆ. ಇವರಿಗೆ ಸಂಗೀತದಲ್ಲಿ ಹತ್ತು ವರ್ಷಗಳ ಪರಿಚಯವಿದೆ. ಸಾಹಿತ್ಯದಲ್ಲಿ ಅಭಿರುಚಿಯಿದೆ; ಕವಿತೆ ಕಥೆಗಳನ್ನೂ ಬರೆಯುತ್ತಾರೆ. ಚಿಕ್ಕವಯಸ್ಸಿನಿಂದಲೂ ಕಾವ್ಯಾಸಕ್ತಿಯಿದ್ದಿತು. ಗೆಳತಿಯರಿಂದ ಮತ್ತು ಅಣ್ಣನವರ ಪ್ರೋತ್ಸಾಹದಿಂದ ಗಮಕ ಕಲೆಯಲ್ಲಿ ಆಸಕ್ತಿ ಮೂಡಿತು. ೧೬ ವರ್ಷಗಳ್ಳು ಗಮಕವನ್ನು ಅಭ್ಯಾಸ ಮಾಡಿರುತ್ತಾರೆ. ಇವರ ಗಮಕ ಗುರುಗಳು ಗಮಕ ವಿದ್ವಾನ್ ಶ್ರೀ ನಂ. ಅಶ್ವತ್ಥನಾರಾಯಣ ಅವರು. ೧೯೬೦-೬೧ ರಲ್ಲಿ ಗಮಕ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಗ್ರಾಮಾಂತರ ಪ್ರದೇಶಗಳಲ್ಲಿ ವಾಚನ ಮಾಡಿರುತ್ತಾರೆ. ಸಂಸ್ಕೃತಿ ಪ್ರಸಾರ ಕಾರ್ಯದಲ್ಲಿ ಪಾಲ್ಗೊಂಡಿದ್ದಾರೆ. ಗಮಕ ತರಗತಿಯನ್ನು ಎರಡು ವರ್ಷಗಳಿಂದಲೂ ನಡೆಸುತ್ತಿರುತ್ತಾರೆ. ರಾಮೋತ್ಸವ, ಗಣೇಶೋತ್ಸವ, ಲಕ್ಷ್ಮೀಶ ಜಯಂತಿಯ ಸಪ್ತಾಹ ಸಂದರ್ಭಗಳಲ್ಲಿ ಹಾಸನ, ಹೊಳೇನರಸೀಪುರ, ಗೊರೂರು, ದೇವನೂರು ಮುಂತಾದೆಡೆಗಳಲ್ಲಿ ಕಾವ್ಯವಾಚನ ಮಾಡಿರುವರು. ಜೈಮಿನಿ ಭಾರತ ಮತ್ತು ಗದುಗಿನ ಭಾರತಗಳೆಂದರೆ ಇವರಿಗೆ ಬಲು ಇಷ್ಟ. ಕಾವ್ಯಗಳ ಬಗ್ಗೆ ಉಪನ್ಯಾಸಗಳನ್ನೂ ಕೊಟ್ಟಿರುತ್ತಾರೆ. ಗೊರೂರಿನ ಕಾವ್ಯ ರಸಿಕರು ಇವರಿಗೆ 'ಕಾವ್ಯ ಕೋಕಿಲೆ' ಪ್ರಶಸ್ತಿಯನ್ನಿತ್ತು ಗೌರವಿಸಿರುವರು.

೧೪೯. ಜಿ. ಪಿ. ಗೋಪೀನಾಥರಾಯರು, ಬೆಂಗಳೂರು

ಇವರು ೧೬-೮-೧೯೩೦ರಲ್ಲಿ ಜನಿಸಿದರು. ಇವರ ತಂದೆ ಶ್ರೀ ಜಿ. ಭೀಮಸೇನರಾಯರು, ತಾಯಿ ಶ್ರೀಮತಿ ಕಮಲಾಬಾಯಿ. ಇವರು ಬಿ.ಎ. ಪದವೀಧರ

ರಾಗಿದ್ದು ರೈಲ್ವೇ ಇಲಾಖೆಯಲ್ಲಿ ಉದ್ಯೋಗದಲ್ಲಿರುವರು. ಬಾಲ್ಯದಲ್ಲಿಯೇ ಇವ ತಂದೆಯವರು ಹಾಡುತ್ತಿದ್ದ ದೇವರನಾಮಗಳನ್ನು ಕೇಳಿ ಹಾಗೂ ಪ್ರತಿ ಏಕ ದಶಿಯೂ ಅವರು ನಡೆಸುತ್ತಿದ್ದ ಜಾಗರಣೆಯ ಕಾಲದಲ್ಲಿ ವಾಚನ ಮತ್ತು ದೇವ ನಾಮಗಳನ್ನು ಕೇಳಿ ತಾವೂ ಹಾಡುವುದನ್ನು ಕಲಿತರು. ಮಾಧ್ಯಮಿಕ ಶಾಲೆಯ ಓದುತ್ತಿದ್ದಾಗ ಕಳಲೆ ಸಂಪತ್ಕುಮಾರಾಚಾರ್ಯರು ಹಾಡಿದ ದೇವರನಾಮಗಳನ್ನು ಭಾವಗೀತೆಗಳನ್ನೂ ಮತ್ತು ಕಾವ್ಯವಾಚನವನ್ನೂ ಕೇಳಿ ಪ್ರಭಾವಿತರಾಗಿ ತಾವ ಪಠ್ಯಗ್ರಂಥಗಳಲ್ಲಿದ್ದ ಪದ್ಯಗಳನ್ನು ರಾಗಮಾರ್ಗದಲ್ಲಿ ವಾಚನ ಮಾಡುತ್ತಿದ್ದರ ೧೯೫೭ರಲ್ಲಿ ಬೆಂಗಳೂರಿನಲ್ಲಿ ಕಾಲೇಜು ವಿದ್ಯಾಭ್ಯಾಸ ನಡೆಸುತ್ತಿದ್ದಾಗ ಪರಿಷ ನಲ್ಲಿ ಗಮಕಿ ಎಂ.ಎಸ್. ಚಂದ್ರಶೇಖರಯ್ಯನವರು ನಡೆಸುತ್ತಿದ್ದ ಗಮಕ ತರಗ ಗಳಲ್ಲಿ ಕಾವ್ಯವಾಚನವನ್ನು ಕಲಿತು ಮುಂದೆ ಮೈಸೂರಿನಲ್ಲಿ ಕೃಷ್ಣಗಿರಿ ಕೃ ರಾಯರಲ್ಲಿ ಗಮಕ ಅಭ್ಯಾಸವನ್ನು ಮುಂದುವರಿಸಿದರು. ಕಾವ್ಯವಾಚನದಲ್ಲಿ ಇ ರಿಗೆ ಪ್ರೋತ್ಸಾಹವನ್ನಿತ್ತು ಮಾರ್ಗದರ್ಶನ ಮಾಡಿದವರು ಶ್ರೀ ಎನ್. ಕೆ. ಕು ಕರ್ಣಿಯವರು ಮತ್ತು ದಿವಂಗತ ಕಡಬಾ ಸಂಪತ್ಕುಮಾರಾಚಾರ್ಯರು ಹಾಗ ಹೆಚ್.ಎಂ. ರಾಮಾರಾಧ್ಯರು. ಇವರು ಅನೇಕ ಸಂಘ ಸಂಸ್ಥೆಗಳಲ್ಲಿಯೂ ಆಕಾ ವಾಣಿಯಲ್ಲಿಯೂ ಕಾವ್ಯವಾಚನ ಕಾರ್ಯಕ್ರಮಗಳನ್ನು ಕೊಟ್ಟಿರುವರು. ಗಮ ರೂಪಕಗಳಲ್ಲಿಯೂ ಭಾಗವಹಿಸಿರುವರು. ರಾಜಾಜೀನಗರದ ಕನ್ನಡ ಸಹೃದಯ ಸಂಘದ ಆಶ್ರಯದಲ್ಲಿ ಸಮಗ್ರ ಭಾರತ ವಾಚನ ನಡೆಸಿದಾಗ ಏರ್ಪಡಿಸಿದ್ದ ವಿಶೇ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಜಿ.ನಾರಾಯ ಯವರು ಶ್ರೀಮತಿ ಸರೋಜಿನಿ ಮಹಿಷಿಯವರ ಸಮಕ್ಷಮದಲ್ಲಿ ಇವರಿಗೆ 'ವಾಚ ಭಾರತಿ' ಎಂಬ ಪ್ರಶಸ್ತಿಯನ್ನಿತ್ತು ಗೌರವಿಸಿರುವರು.

೧೫೦. ಎಂ. ಶಿವಮೂರ್ತಿ, ಬೆಂಗಳೂರು

ಇವರು ೨೯-೧೦-೧೯೩೦ರಲ್ಲಿ ಶಿವಮೊಗ್ಗಾ ಜಿಲ್ಲೆಯ ಕೂಲಂಬಿಯ ಜನಿಸಿದರು. ಇವರು ಶಿವಮೊಗ್ಗಾ ಜಿಲ್ಲೆಯ ಎರೇಚಿಕ್ಕನಹಳ್ಳಿ ಉನ್ನತ ಪ್ರಾಥಮಿ ಪಾಠಶಾಲೆಯ ಮುಖ್ಯೋಪಾಧ್ಯಾಯರು. ಶ್ರೀ ಎಸ್.ಕೆ. ಧಾರವಾಡ್ಕರ್ ಗವಾ ಗಳು ಇವರ ಸಂಗೀತದ ಗುರುಗಳು. ಇವರು ಕಾವ್ಯಗಳಲ್ಲಿನ ರಸ ಸನ್ನಿವೇಶಗಳನ ಆಧರಿಸಿ ಏಕಪಾತ್ರಾಭಿನಯವನ್ನು ಉತ್ಕೃಷ್ಟವಾಗಿ ಮಾಡುವರು. ರಾಮಾಶ್ವಮೇ ದಲ್ಲಿನ 'ಸೀತಾ ಪರಿತ್ಯಾಗ', 'ದೈವದುರಂತ ಕರ್ಣ', ಕುವೆಂಪುರವರ 'ಮಹಾರಾತ್ರಿ

ಮುಂತಾದ ಅನೇಕ ಪ್ರಸಂಗಗಳ ಏಕಪಾತ್ರಾಭಿನಯವನ್ನು ಶಿವಮೊಗ್ಗಾ, ಚಿಕ್ಕ ಮಗಳೂರು, ಧಾರವಾಡ ಪ್ರಾಂತ್ಯಗಳಲ್ಲಿ ನಡೆಸಿ, 'ಅಭಿನಯ ಚತುರ' ಎಂಬ ಪ್ರಶಸ್ತಿಯನ್ನು ಗಳಿಸಿ ಖ್ಯಾತರಾಗಿರುವರು.

೧೫೧. ಎಂ. ವಿ. ಜಯಲಕ್ಷ್ಮಿ ಸುಬ್ಬರಾವ್, ಬೆಂಗಳೂರು

ಇವರು ೯-೧-೩೧ರಲ್ಲಿ ಜನಿಸಿದರು. ಇವರ ತಂದೆ ಅಟ್ಟೂರ ರಾಮಶರ್ಮ ಮತ್ತು ತಾಯಿ ಸುಬ್ಬಲಕ್ಷಮ್ಮನವರು. ಎಸ್.ಎಸ್.ಎಲ್.ಸಿ. ವ್ಯಾಸಂಗ ಮಾಡಿ ರುವರು. ಸಂಗೀತದ ಪರಿಚಯವಿದೆ. ವರ್ಣ, ಕೀರ್ತನೆಗಳನ್ನು ಹಾಡಬಲ್ಲರು. ಕನ್ನಡ ಸಾಹಿತ್ಯದಲ್ಲಿ ಅಭಿರುಚಿಯಿದೆ. ಗಮಕ ಪ್ರೌಢದಲ್ಲಿ ಎರಡನೇ ದರ್ಜೆಯಲ್ಲಿ ತೇರ್ಗಡೆಯಾಗಿರುತ್ತಾರೆ. ಮನೆಯಲ್ಲಿ ಎಲ್ಲರಿಗೂ ಈ ಕಲೆಯಲ್ಲಿ ಅಭಿರುಚಿಯಿದೆ. ಇವರಿಗೂ ಪ್ರೋತ್ಸಾಹ ಲಭಿಸಿದೆ. ಗಮಕದ ಅಭ್ಯಾಸ ನಡೆದದ್ದು ಶ್ರೀಗಳಾದ ರಾಘವೇಂದ್ರರಾಯರು ಮತ್ತು ಹೆಮ್ಮಿಗೆ ದೇಶಿಕಾಚಾರ್ಯರು ಹಾಗೂ ರಾಜಮ್ಮ ಕೇಶವಮೂರ್ತಿಯವರಲ್ಲಿ. ಕನ್ನಡದ ಎಲ್ಲ ಕಾವ್ಯಗಳನ್ನೂ ವಾಚನ ಮಾಡಬಲ್ಲರು. ವ್ಯಾಖ್ಯಾನ ಮಾಡುವ ಸಾಮರ್ಥ್ಯವೂ ಇವರಿಗಿದೆ. ಹತ್ತು ವರ್ಷಗಳಿಗೂ ಹಿಂದಿನಿಂದ ಸಮೀರಪುರದಲ್ಲಿ ಗಮಕ ತರಗತಿ ನಡಸುತ್ತಿರುವರು. ಆಕಾಶವಾಣಿಯಲ್ಲಿಯು ವಾಚನ ಕಾರ್ಯಕ್ರಮಗಳನ್ನು ನಡೆಸಿರುವರು. ನೂರಾರು ಸ್ಥಳಗಳಲ್ಲಿ ಕಾವ್ಯ ವಾಚನ ಮಾಡಿರುತ್ತಾರೆ.

೧೫೨. ಆರ್. ಶಂಕರನಾರಾಯಣನ್, ಬೆಂಗಳೂರು

ಇವರು ೧೫-೨-೧೯೩೧ ರಲ್ಲಿ ಜನಿಸಿದರು. ಇವರ ತಂದೆ ಶ್ರೀ ಆರ್. ವೆಂಕಟರಾಮಯ್ಯನವರು, ತಾಯಿ ಶ್ರೀಮತಿ ರುಕ್ಮಿಣಮ್ಮನವರು. ಇವರು ಎಸ್.ಎಸ್.ಎಲ್.ಸಿ. ಮುಗಿಸಿಕೊಂಡು ಭಾರತೀಯ ದೂರವಾಣಿ ಕಾರ್ಖಾನೆ ಯಲ್ಲಿ ಉದ್ಯೋಗದಲ್ಲಿರುವರು. ಬಾಲ್ಯದಲ್ಲಿ ಇವರ ಸೋದರಮಾವಂದಿರಾದ ರಾಜಾಪುರಂ ಶ್ರೀರಾಮಚಂದ್ರರಾಯರು ಹಾಡುತ್ತಿದ್ದ ದೇವರನಾಮಗಳನ್ನೂ ಕೀರ್ತನೆಗಳನ್ನೂ ಮತ್ತು ಹಿನ್ನಕ್ಕಿ ವೆಂಕಟರಮಣಯ್ಯನವರು ತಮ್ಮ ಮನೆಗೆ ಬಂದಾಗ ಅವರು ನಡೆಸುತ್ತಿದ್ದ ರಾಮಾಯಣ, ಭಾರತ ವಾಚನಗಳನ್ನು ಕೇಳಿ ಪ್ರಭಾವಿತರಾದರು. ಮನೆಯಲ್ಲಿ ಹೆಂಗಸರು ನಿರರ್ಗಳವಾಗಿ ಹಾಡುತ್ತಿದ್ದ ಸಾವಿತ್ರೀ

ಚರಿತ್ರೆ, ನಳಚರಿತ್ರೆ ಮತ್ತು ಹಾಡುಗಳ ಪ್ರಭಾವವೂ ಇವರ ಮೇಲೆ ಅಪಾರ
ದ್ದಿತು. ಮುಂದೆ ಮಲ್ಲೇಶ್ವರದ ಪ್ರೌಢಶಾಲೆಯಲ್ಲಿ ಕಲಿಯುತ್ತಿದ್ದಾಗ ಕ
ಪಂಡಿತರಾಗಿದ್ದ ಹು. ಮಾ. ರಾಮಾರಾಧ್ಯರು ಪದ್ಯಭಾಗಗಳನ್ನು ವಾಚನಮ
ತ್ತಿದ್ದ ರೀತಿ ಇವರಿಗೂ ಗಮಕ ಕಲೆಯನ್ನು ಅಭ್ಯಸಿಸಲು ಪ್ರೇರೇಪಿಸಿತು. ಇ
ಗಮಕಾಭ್ಯಾಸವನ್ನು ಗಾಂಧೀ ಸಾಹಿತ್ಯ ಸಂಘದಲ್ಲಿ ಹು. ಮಾ. ರಾಮಾರಾ
ನಡೆಸುತ್ತಿದ್ದ ಗಮಕ ತರಗತಿಗಳಲ್ಲಿ ಕಲಿತರು. ಸಂಗೀತವನ್ನು ಶ್ರೀ ಗೋಪಾಲಕ
ರಾಯರಲ್ಲಿ ಅಭ್ಯಾಸಮಾಡಿದರು. ಹು. ಮಾ. ರಾಮಾರಾಧ್ಯರ ನೇತೃತ್ವ
೧೯೫೦-೫೧ ರಲ್ಲಿ ಸಹೃದಯಗೋಷ್ಠಿಯನ್ನು ಪ್ರಾರಂಭಿಸಿ ವಿದ್ವಾಂಸರಿಂದ
ನ್ಯಾಸಗಳನ್ನು ಏರ್ಪಡಿಸಿ ಅದರ ಪ್ರಭಾವದಿಂದ ಸಾಹಿತ್ಯದಲ್ಲಿ ಆಸಕ್ತಿ ವೃದ್ಧಿಯ
ಪರಿಷತ್ತಿನ 'ಕನ್ನಡ ಜಾಣ' ಪರೀಕ್ಷೆಯನ್ನು ಮಾಡಿದರು. ಮುಂದೆ ಪರಿಷ
ಅಧ್ಯಕ್ಷರಾಗಿದ್ದ ಪಂಡಿತ ರತ್ನಂ ಡಾ|| ಬಿ. ಶಿವಮೂರ್ತಿಶಾಸ್ತ್ರಿಗಳವರ ಕೃಪೆಯಿ
ಗಮಕಿ ಶ್ರೀ ಜಿ. ಎ. ಅನಂತಪದ್ಮನಾಭಯ್ಯನವರ ಸಹಾಯವನ್ನು ಪಡೆ
ದೂರವಾಣಿ ನಗರದ ಕರ್ಣಾಟಕ ಸಂಘದಲ್ಲಿ ಗಮಕ ತರಗತಿಗಳನ್ನು ನ
ಅವರಲ್ಲಿ ತಾವೂ ಅಭ್ಯಾಸಮಾಡಿ ಗಮಕ ಪ್ರವೇಶ ಮತ್ತು ಪ್ರೌಢ ಪರೀಕ್ಷೆ
ಉತ್ತೀರ್ಣರಾದರು. ೧೯೭೪ ರಲ್ಲಿ ಕಾವ್ಯಪ್ರಚಾರ ಮಂಡಲಿಯನ್ನು ಪ್ರಾ
ಮಾಡಿ ಅಂದಿನಿಂದಲೂ ಪ್ರಾಚೀನ ಪ್ರೌಢಕಾವ್ಯಗಳ ವಾಚನಗಳು ಅವ್ಯಾಹತ
ನಡೆಯುವಂತೆ ವ್ಯವಸ್ಥೆಮಾಡಿರುವರು. ಇವರೇ ಈಗ ಅಧ್ಯಾಪಕರಾಗಿ ಗ
ತರಗತಿಗಳನ್ನು ನಡೆಸುತ್ತಿರುವರು. ಸರ್ಕಾರದ ಸಾಹಿತ್ಯ ಮತ್ತು ಸಂಸ್ಕೃತಿ ಪ್ರಸ
ಇಲಾಖೆಯ ಮೂಲಕ ಕಾವ್ಯವಾಚನಗಳನ್ನು ನಡೆಸಿರುವರು. ಇವರ ಕಾವ್ಯವಾ
ಗಳು ಆಕಾಶವಾಣಿ ಬೆಂಗಳೂರು ಕೇಂದ್ರದಿಂದ ಅನೇಕಬಾರಿ ಪ್ರಸಾರವಾ
ಇವರು 'ಚಿತ್ರಪಲ್ಲವ' ಕವನ ಸಂಕಲನವನ್ನೂ 'ಶ್ರೀ ಸತ್ಯನಾರಾಯಣ ಕಥಾಮ
ವೆಂಬ ಭಾಮಿನೀಷಟ್ಪದೀ ಕಾವ್ಯವನ್ನೂ ರಚಿಸಿ ಪ್ರಕಟಿಸಿರುವರು. 'ಶ್ರೀಮದನ
ಪದ್ಮನಾಭ ಕಥಾಮೃತ'ದೆಂಬ ಭಾಮಿನೀ ಷಟ್ಪದೀ ಕಾವ್ಯವೂ ಮತ್ತು 'ವಾ
ಮಹಿಮಾದರ್ಶ'ವೆಂಬ ಪದ್ಯಕಾವ್ಯವೂ ಪ್ರಕಟವಾಗಲಿವೆ. ಇವರ ಲೇಖನ
ಮಾಸಪತ್ರಿಕೆಗಳಲ್ಲಿ ಆಗಾಗ್ಗೆ ಪ್ರಕಟವಾಗಿವೆ. ಸುಮಾರು ಹದಿನೈದು ವ
ಗಳಿಂದಲೂ ಗಮಕ ಕಲೆಗಾಗಿ, ಸಾಹಿತ್ಯಪ್ರಚಾರಕ್ಕಾಗಿ ತಮ್ಮ ವಾಚನ
ಮೂಲಕ ಸೇವೆಸಲ್ಲಿಸುತ್ತಿರುವರು.

೧೫೩. ಬಿ. ಚಂದ್ರಯ್ಯನವರು, ಮೂಡಬಿದ್ರಿ

ಇವರು ಕಾಸರಗೋಡಿಗೆ ಸಮೀಪವಿರುವ ಅಡ್ಯನಡ್ಕ ಎಂಬಲ್ಲಿ ೨೮-೪-೧೯೩೧ ರಲ್ಲಿ ಹುಟ್ಟಿದರು. ಇವರ ತಂದೆ ಬಿ. ಅನಂತಯ್ಯನವರು, ತಾಯಿ ಶ್ರೀಮತಿ ಲಕ್ಷ್ಮಿ. ಇವರು ಕನ್ನಡ ವಿದ್ವಾನ್, ಹಿಂದೀ ವಿಶಾರದ ಮತ್ತು ಬಿ.ಇಡಿ. ಪದವಿಗಳನ್ನು ಹೊಂದಿರುತ್ತಾರೆ. ೧೯೭೦ ರಲ್ಲಿ ಮೈಸೂರು ಕೇಂದ್ರದಿಂದ ಗಮಕ ಪರೀಕ್ಷೆಗೆ ಕುಳಿತು ಉತ್ತೀರ್ಣರಾಗಿರುವರು. ಹಾಡುಗಾರಿಕೆ ಮತ್ತು ಪಿಟೀಲು ವಾದನಗಳಲ್ಲಿ ನಾಲ್ಕು ವರ್ಷಗಳ ಪರಿಶ್ರಮ ಹೊಂದಿದ್ದಾರೆ. ವಿವಿಧ ಕೇಂದ್ರಗಳಲ್ಲಿ ಗಮಕ ಪ್ರವೇಶ ಮತ್ತು ಪ್ರೌಢ ಪರೀಕ್ಷೆಗಳಿಗೆ ವಿದ್ಯಾರ್ಥಿಗಳನ್ನು ತಯಾರುಮಾಡಿರುವರು. ಅನೇಕ ಕವನಗಳನ್ನೂ ಲೇಖನಗಳನ್ನೂ ಬರೆದು ಪ್ರಕಟಿಸಿರುವರು. ಈಗ ಮೂಡಬಿದ್ರಿಯಲ್ಲಿ ಜೈನ್ ಹೈಸ್ಕೂಲಿನಲ್ಲಿ ಕನ್ನಡ ಪಂಡಿತರಾಗಿರುತ್ತಾರೆ. ಕಾವ್ಯವಾಚನಕ್ಕೆ ವ್ಯಾಖ್ಯಾನವನ್ನೂ ಮಾಡಬಲ್ಲರು. ಇವರ ಗಮಕ ಗುರುಗಳು ಶ್ರೀ ಎಂ. ಎಸ್. ಅನಂತಪದ್ಮನಾಭರಾಯರು. ರಾಮೋತ್ಸವ ಮುಂತಾದ ಸಮಾರಂಭಗಳಲ್ಲಿ, ಸಂಘ ಸಂಸ್ಥೆಗಳಲ್ಲಿ ವಾಚನ ಮಾಡಿರುತ್ತಾರೆ.

೧೫೪. ಬಿ. ಎನ್. ಗೋಪಾಲಕೃಷ್ಣ, ಮಡಕೇರಿ

ಇವರು ೧೯೩೧ ರಲ್ಲಿ ಕೊಡಗು ಜಿಲ್ಲೆಯ, ಸೋಮವಾರಪೇಟೆಯ ಶಾಂತಳ್ಳಿ ಗ್ರಾಮದಲ್ಲಿ ಜನಿಸಿದರು. ಇವರ ತಂದೆ ಸುಬ್ಬರಾಯರು, ಇವರ ಸಾಮಾನ್ಯ ವಿದ್ಯಾಭ್ಯಾಸ ಎಸ್. ಎಸ್.ಎಲ್.ಸಿ. ಇವರಿಗೆ ತಕ್ಕಮಟ್ಟಿಗೆ ಸಂಗೀತಪರಿಚಯುವಿದೆ. ವರ್ಣ ಕೀರ್ತನೆಗಳವರೆಗೆ ಪಾಠವೂ ಆಗಿದೆ. ಇವರು ಮಡಕೇರಿಯಲ್ಲಿ 'ಶಕ್ತಿ' ದಿನ ಪತ್ರಿಕೆ ಮತ್ತು 'ಚೇತನಾ' ವಾರ ಪತ್ರಿಕೆ ಮತ್ತು 'ನಂದಾದೀಪ' ಮಾಸ ಪತ್ರಿಕೆಗಳ ಸಂಪಾದಕರು. 'ವಿಧಿ ನಾಟ್ಯವಾಡಿತ್ತು' ಎಂಬುದು ಇವರ ಕಾದಂಬರಿ. ಇವರ ಗಮಕ ಗುರುಗಳು ಶ್ರೀ ಎಂ. ಎಸ್. ಅನಂತಪದ್ಮನಾಭರಾಯರು. ಮಡಕೇರಿಯ ಕರ್ನಾಟಕ ಸಂಘದ ಆಶ್ರಯದಲ್ಲಿ ಗಮಕ ತರಗತಿಗಳನ್ನು ನಡೆಸುತ್ತಿರುವರು. ಇವರಲ್ಲಿ ಗಮಕ ಕಲೆಯನ್ನು ಅಭ್ಯಾಸಮಾಡಿದ ಸುಮಾರು ೧೫ ವಿದ್ಯಾರ್ಥಿಗಳು ಗಮಕ ಪರೀಕ್ಷೆಯಲ್ಲಿ ತೇರ್ಗಡೆ ಹೊಂತಿರುವರು. ಕೊಡಗಿನ ಅನೇಕ ಭಾಗಗಳಲ್ಲಿ ಇವರ ಕಾವ್ಯವಾಚನ ಕಾರ್ಯಕ್ರಮಗಳು ಜನಪ್ರಿಯವಾಗಿವೆ.

೧೫೫. ಆರ್. ವಿ. ಗೋಪೀನಾಥ್

ಇವರು ೨೮-೧೧-೧೯೩೧ರಲ್ಲಿ ಬೆಂಗಳೂರಿನಲ್ಲಿ ಜನಿಸಿದರು. ತ
ಪ್ರಖ್ಯಾತ ವಕೀಲರಾದ ವೆಂಕಟಸುಬ್ಬಯ್ಯನವರು. ತಾಯಿ ಶಾರದಮ್ಮನವ
ಇವರು ಬಿ.ಎಸ್‌ಸಿ. ಪದವೀಧರರಾಗಿ ಹಿಂದೂಸ್ತಾನ್ ವಿಮಾನ ಕಾರ್ಖಾನೆಯ
ಉದ್ಯೋಗದಲ್ಲಿರುವರು. ಬಾಲ್ಯದಿಂದಲೂ ಸಂಗೀತದಲ್ಲಿ ಆಸಕ್ತಿಯನ್ನು ಹೊ
ತಾಯಿಯವರಲ್ಲಿಯೇ ಹಾಡುವುದನ್ನು ಕಲಿತರು. ಅನಂತರ ಪರಿಷತ್ತಿನಲ್ಲಿ ನಡೆ
ತ್ತಿದ್ದ ಗಮಕ ತರಗತಿಗೆ ಸೇರಿ ಗಮಕ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಶ್ರೀ
ರಾಘವೇಂದ್ರರಾಯರಲ್ಲಿಯೂ ಮತ್ತು ಹೆಚ್. ಎಂ. ರಾಮಾರಾಧ್ಯರಲ್ಲಿಯ
ಗಮಕವನ್ನು ಅಭ್ಯಾಸ ಮಾಡಿರುವರು. ಇವರ ಕಾರ್ಯಕ್ರಮಗಳು ಆಕಾಶವಾ
ಯಲ್ಲೂ ಪ್ರಸಾರಿತವಾಗಿವೆ.

೧೫೬. ಕನಕಲಕ್ಷ್ಮೀ ದಾನಿ

ಇವರು ೧೯೩೧ರಲ್ಲಿ ಚಿಕ್ಕಮಗಳೂರಿನಲ್ಲಿ ಜನಿಸಿದರು. ಶ್ರೀಮ
ಗೋಪೀಬಾಯಿ ಮತ್ತು ಶ್ರೀ ದಯಾನಾಥ ಇವರ ಮಾತಾಪಿತೃಗಳು. ಎಸ್. ಎಸ
ಎಲ್. ಸಿ., ಟಿ. ಡಿ. ಮತ್ತು ಹಿಂದಿ ಪ್ರವೇಶದವರೆಗೆ ಓದಿದ್ದಾರೆ. ಸಂಗೀತ
ಸುಮಾರು ಅನುಭವವಿದೆ. ಕನ್ನಡ ಸಾಹಿತ್ಯದಲ್ಲಿ ಅಭಿರುಚಿಯಿದೆ, ವಾ
ವ್ಯಾಖ್ಯಾನ ಮಾಡುತ್ತಾರೆ. ಚಿಕ್ಕಂದಿನಿಂದಲೂ ಇವರಿಗೆ ಹಾಡು ಹಸೆಗಳಲ್ಲಿ ಆಸ
ಯಿತ್ತು. ಚಂಪೂ ಮತ್ತು ಷಟ್ಪದೀ ಕಾವ್ಯಗಳನ್ನು ಓದುವ ಅಭ್ಯಾಸವಿತ
ಗಮಕ ಪರೀಕ್ಷೆಗಳನ್ನು ಮಾಡಿಕೊಂಡು, ೧೯೭೬ರಲ್ಲಿ ಶಿಕ್ಷಕರ ಶಿಕ್ಷಣ ಶಿಬಿರದ
ಮಾರ್ಗದರ್ಶನ ಪಡೆದು, ವಾಚನಗಳನ್ನು ನಡೆಸಿ, ಸಾಕಷ್ಟು ಅನುಭವ ಪಡೆದಿ
ತ್ತಾರೆ. ಸಾಹಿತ್ಯ ಕುಟೀರದವರು ನಡೆಸಿದ ಕಾರ್ಯಕ್ರಮದಲ್ಲಿ ಮೂರು ವ
ಕಾಲ ಗದುಗಿನ ಭಾರತ, ಜೈಮಿನಿ ಭಾರತ, ತೊರವೆ ರಾಮಾಯಣ ಮುಂತ
ಕಾವ್ಯಗಳನ್ನು ವಾಚನ ಮಾಡಿರುವರು. ೫-೬ ವರ್ಷಗಳಿಂದ ಗಮಕ ತರ
ಗಳನ್ನು ನಡೆಸುತ್ತಿದ್ದಾರೆ. ಅನೇಕ ಉತ್ಸವ ಸಮಾರಂಭಗಳಲ್ಲಿ, ಕಲಾಸಂಘಗ
ಸೋಸಲೆಯಲ್ಲಿ ಶ್ರೀ ಶ್ರೀ ಪ್ರಸನ್ನ ತೀರ್ಥರ ಆಶ್ರಯದಲ್ಲಿ ಸಹವಾಚನ ಮಾಡಿ
ತ್ತಾರೆ. ಇವರ ನೂರಾರು ವಾಚನ ಕಾರ್ಯಕ್ರಮಗಳು ನಡೆದಿವೆ. ಇವರ

ಸ್ಸಿಗೆ ಕಾರಣರು ಇವರ ಗುರುಗಳಾದ ಗಮಕಿ ಶ್ರೀ ಎಂ. ಎಸ್. ಚಂದ್ರಶೇಖರಯ್ಯ ನವರು, ಗಮಕಿ ಶ್ರೀ ಎಂ. ರಾಘವೇಂದ್ರರಾಯರು. ಇವರುಗಳ ಪ್ರೋತ್ಸಾಹ, ಮಾರ್ಗದರ್ಶನಗಳು ಶ್ರೀಮತಿಯವರಿಗೆ ಲಭಿಸಿವೆ.

೧೫೭. ಕೆ. ಎಲ್. ನಾರಾಯಣಸ್ವಾಮಿ, ಭದ್ರಾವತಿ

ಇವರು ೧೯೩೧ರಲ್ಲಿ ಅರಸೀಕೆರೆ ತಾಲ್ಲೂಕು, ಕಣಕಟ್ಟೆ ಗ್ರಾಮದಲ್ಲಿ ಜನಿಸಿದರು. ಇವರ ತಂದೆ ಶ್ರೀ ಜಮೀನ್ದಾರ್ ಕೆ. ನರಸಿಂಹಯ್ಯನವರು ; ತಾಯಿ, ಪದ್ಮಾಕ್ಷಮ್ಮನವರು. ಇವರು ಬಿ. ಎ., ಬಿ.ಕಾಂ. ಪದವೀಧರರಾಗಿ ಮೊದಲು ಹೈಸ್ಕೂಲಿನಲ್ಲಿ ಉಪಾಧ್ಯಾಯರಾಗಿದ್ದು ಈಗ ಕಬ್ಬಿಣದ ಕಾರ್ಖಾನೆಯ ಅಕೌಂಟ್ಸ್ ಅಧಿಕಾರಿಗಳಾಗಿದ್ದಾರೆ. ಬಾಲ್ಯದಿಂದಲೂ ಹಾಡುವುದರಲ್ಲಿಯೂ, ಸಾಹಿತ್ಯದಲ್ಲಿಯೂ ಇವರಿಗೆ ಆಸಕ್ತಿ. ಇವರು ಗಮಕ ಕಲೆಯನ್ನು ಶ್ರೀ ಎಂ. ರಾಘವೇಂದ್ರರಾಯರಲ್ಲಿ ಕಲಿತು ೧೯೬೯ರಲ್ಲಿ ನಡೆದ ಗಮಕ ಪರೀಕ್ಷೆಯಲ್ಲಿ ಉಚ್ಚ ಶ್ರೇಣಿಯಲ್ಲಿ ಉತ್ತೀರ್ಣರಾಗಿ ದತ್ತಿ ಬಹುಮಾನವನ್ನು ಪಡೆದರು. ಅನೇಕ ಗಮಕಿಗಳಿಗೂ ವ್ಯಾಸಂಗ ತರಗತಿಗಳನ್ನು ನಡಸಿರುತ್ತಾರೆ. ಇವರ ವಾಚನಗಳು ಭದ್ರಾವತಿ ಆಕಾಶವಾಣಿಯಿಂದ ಪ್ರಸಾರವಾಗುತ್ತಿರುತ್ತವೆ. ಗದುಗಿನ ಭಾರತ, ಜೈಮಿನಿ ಭಾರತ, ಹರಿಶ್ಚಂದ್ರಕಾವ್ಯ ಮತ್ತು ರಾಮಪಟ್ಟಾಭಿಷೇಕ ಇವರ ಮೆಚ್ಚಿನ ಕಾವ್ಯಗಳು. ಸ್ಥಳೀಯ ಸಂಘಸಂಸ್ಥೆಗಳಲ್ಲಿ ನಡೆಸಲಾದ ಸ್ಪರ್ಧೆಗಳಿಗೆ ತೀರ್ಪುಗಾರರಾಗಿ ಸೇವೆ ಸಲ್ಲಿಸುತ್ತಿರುವರು. ಇವರು ಅಭಿನಯಿಸಿದ ಗಮಕ ರೂಪಕಗಳು ಜನರ ಪ್ರಶಂಸೆಗೆ ಪಾತ್ರವಾಗಿವೆ.

೧೫೮. ಹೆಚ್. ಜಾನಕಿ, ಬೆಂಗಳೂರು

ಇವರು ೧೭-೧೧-೧೯೪೮ರಲ್ಲಿ ಜನಿಸಿದರು. ಇವರ ತಂದೆ ಸಂಸ್ಕೃತ ಪ್ರಾಧ್ಯಾಪಕರಾಗಿದ್ದ ಹೆಚ್. ಎಲ್. ಹರಿಯಪ್ಪನವರು, ತಾಯಿ ವೆಂಕಟಸುಬ್ಬಮ್ಮ ನವರು. ಎಸ್.ಎಸ್.ಎಲ್.ಸಿ. ಯಲ್ಲಿ ತೇರ್ಗಡೆಯಾಗಿ ೧೯೬೮ರಲ್ಲಿ ಭಗಿನೀ ಸೇವಾ ಸಮಾಜದಲ್ಲಿ ಕೃಷ್ಣಗಿರಿ ಕೃಷ್ಣರಾಯರು ನಡಸುತ್ತಿದ್ದ ಗಮಕ ತರಗತಿಯಲ್ಲಿ ಕಾವ್ಯವಾಚನವನ್ನು ಅಭ್ಯಾಸ ಮಾಡಿದರು. ಅದೇ ಸಮಾಜದಲ್ಲಿ ಸಂಗೀತವನ್ನು ಕಲಿತು ಪ್ರೌಢಪರೀಕ್ಷೆಯಲ್ಲಿ ತೇರ್ಗಡೆಯಾದರು. ಇವರು ಮಕ್ಕಳ ಕಾರ್ಯಕ್ರಮ

ಗಳಲ್ಲಿಯೂ, ದಸರಾ ವಸ್ತುಪ್ರದರ್ಶನದಲ್ಲಿಯೂ, ಶ್ರೀರಾಮಮಂದಿರದಲ್ಲಿಯ
ಶಂಕರಮಠದಲ್ಲಿ ಶ್ರೀ ಶ್ರೀ ಶ್ರೀ ಅಭಿನವ ವಿದ್ಯಾತೀರ್ಥ ಶ್ರೀಪಾದಂಗಳವರ ಸನ್ನಿಧ
ದಲ್ಲಿಯೂ ಮತ್ತು ಇತರ ಸಂಘಸಂಸ್ಥೆಗಳಲ್ಲಿಯೂ ಕಾವ್ಯವಾಚನವನ್ನು ಮಾ
ಪ್ರಶಂಸೆ ಮತ್ತು ಬಹುಮಾನಗಳನ್ನು ಪಡೆದಿರುವರು. ಬೆಂಗಳೂರು ಮ
ಮೈಸೂರು ಆಕಾಶವಾಣಿ ಕೇಂದ್ರಗಳಿಂದ ಇವರ ಕಾವ್ಯವಾಚನ ಮತ್ತು ದೇ
ನಾಮ ಕಾರ್ಯಕ್ರಮಗಳು ಪ್ರಸಾರವಾಗುತ್ತಿರುತ್ತವೆ. ೧೯೬೫ರಿಂದ ಮೈಸೂ
ವನಿತಾ ಸದನದಲ್ಲಿ ಗಮಕ ತರಗತಿಗಳನ್ನು ನಡೆಸುತ್ತಿರುವರು. ಷಟ್ಪದೀ, ಚಂ
ಕಾವ್ಯಗಳು ಇವರಿಗೆ ಪ್ರಿಯವಾದುವು. ಕನ್ನಡ ಗೀತೆಗಳು, ಜಾನಪದ ಗೀತೆಗ
ಲಘುಸಂಗೀತಗಳಲ್ಲಿ ಪರಿಶ್ರಮವಿದ್ದು ಭಾಗವಹಿಸುವರು.

೧೫೯. ಜಿ. ವೆಂಕಟರಾಮಯ್ಯನವರು, ಸೂಲಿಬೆಲೆ

ಇವರು ೧೪-೬-೧೯೩೭ರಲ್ಲಿ ಬೆಂಗಳೂರು ಜಿಲ್ಲೆ ಜಡಿಗೇನ ಹಳ್ಳಿಯಲ್ಲಿ
ಸಿದರು. ಇವರ ತಂದೆ ಶ್ರೀ ಜೆ. ಗುಂಡಪ್ಪನವರು, ತಾಯಿ ಶ್ರೀಮತಿ ನಾಗ
ನವರು.

ಇವರು ಬಿ.ಎಸ್‌ಸಿ., ಎಂ.ಇಡಿ., ಪದವೀಧರರಾಗಿ ಸೂಲಿಬೆಲೆ ಗ್ರಾ
ದಲ್ಲಿನ ವಿವೇಕಾನಂದ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾಗಿರುವರು. ಬಾ
ದಿಂದಲೇ ತಮ್ಮ ತಂದೆಯವರು ವಾಚನ ಮಾಡುತ್ತಿದ್ದುದನ್ನು ಕೇಳಿ ಇವರಿಗೂ ಕಾ
ವಾಚನದಲ್ಲಿ ಆಸಕ್ತಿ ಹುಟ್ಟಿತು. ಶಾಲೆಯಲ್ಲಿ ನಡಸುತ್ತಿದ್ದ ಕಂಠಪಾಠ ಸ್ಪರ್ಧೆಗ
ಇವರಿಗೆ ಪ್ರಥಮ ಬಹುಮಾನಗಳು ಮೀಸಲು. ಪ್ರೊ. ಜಿ. ವೆಂಕಟಸುಬ್ಬ
ನವರು, ಶ್ರೀ ಜಿ. ಪಿ. ರಾಜರತ್ನಂ ಮತ್ತು ಶ್ರೀ ವಿ. ಸೀತಾರಾಮಯ್ಯನವರು
ವಾಚನವನ್ನು ಕೇಳಿ ಪ್ರಶಂಸಿಸಿರುವರು. ೧೯೫೫ರಲ್ಲಿ ಗಮಕಿ ಚಂದ್ರಶೇಖರ
ನವರಲ್ಲಿ ಕಾವ್ಯವಾಚನವನ್ನು ಕಲಿತು ಗಮಕ ಪ್ರವೇಶ ಪರೀಕ್ಷೆಯಲ್ಲಿ ಉತ್ತೀ
ರಾಗಿರುವರು. ತಮ್ಮ ಶಾಲೆಯಲ್ಲಿ ಗಮಕ ಸ್ಪರ್ಧೆಗಳನ್ನು ನಡಸುವುದರ ಮೂಲಕ
ಮತ್ತು ತಾವೂ ಸಹ ಸುತ್ತಮುತ್ತಲಿನ ಗ್ರಾಮಗಳಲ್ಲಿ ಕಾವ್ಯವಾಚನ ಕಾ
ಕ್ರಮಗಳನ್ನು ನಡೆಸುತ್ತಲೂ ಗಮಕಕಲಾಸೇವೆಯನ್ನು ಮುಂದುವರಿಸುತ್ತಿರು

೧೬೦. ಎಸ್. ಹನುಮಂತರಾಜು, ಬೆಂಗಳೂರು

ಇವರು ೧೮-೬-೧೯೩೭ರಲ್ಲಿ ಜನಿಸಿದರು. ಇವರ ತಂದೆ ಶ್ರೀ
ನಾರಾಯಣಪ್ಪನವರು, ತಾಯಿ ಶ್ರೀಮತಿ ಲಕ್ಷ್ಮಮ್ಮನವರು. ಇಂಟರ್ಮೀಡಿಯ

ವರೆಗೂ ವ್ಯಾಸಂಗ ಮಾಡಿ ಇವರು ರಾಜ್ಯಪಾಲರ ಕಛೇರಿಯಲ್ಲಿ ಉದ್ಯೋಗದಲ್ಲಿರುವರು. ಇವರಿಗೆ ಸಂಗೀತದಲ್ಲಿ ಸುಮಾರು ೩೦ ವರ್ಷಗಳ ಅನುಭವವಿದೆ. ವರ್ಣ, ಕೃತಿ, ಕೀರ್ತನೆ, ರಾಗ, ತಾನ, ಪಲ್ಲವಿ, ದೇವರನಾಮಗಳನ್ನು ಹಾಡಬಲ್ಲರು. ಸಂಗೀತದ ಸೀನಿಯರ್ ಪರೀಕ್ಷೆಯಲ್ಲಿ ಮೊದಲನೆಯ ಸ್ಥಾನವನ್ನು ಗಳಿಸಿ ಉತ್ತೀರ್ಣರಾಗಿರುವರು. ೧೯೬೬ ರಲ್ಲಿ ಬಳ್ಳಾರಿ ಜಿಲ್ಲೆಯ ಹರಪನಹಳ್ಳಿಯಲ್ಲಿ ಶ್ರೀಮದ್ಗಿರಿರಾಜ ಸೂರ್ಯಸಿಂಹಾಸನಾಧೀಶ್ವರ ಶ್ರೀಶೈಲ ಜಗದ್ಗುರು ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯಸ್ವಾಮಿಗಳವರ ಸಮ್ಮುಖದಲ್ಲಿ ಸಂಗೀತ ಕಛೇರಿಯನ್ನು ನಡೆಸಿ, 'ಗಾನವಿಶಾರದ' ಎಂಬ ಬಿರುದನ್ನು ಪಡೆದಿರುವರು. ಇವರ ತಂದೆಯವರು ಮನೆಯಲ್ಲಿ ರಾಮಾಯಣ ಭಾರತ ಭಾಗವತಗಳ ವಾಚನ ಮಾಡುತ್ತಿದ್ದುದನ್ನು ಕೇಳಿ ಪ್ರಭಾವಿತರಾಗಿ ಇವರು ಪಠ್ಯ ಗ್ರಂಥಗಳಲ್ಲಿನ ಪದ್ಯ ಭಾಗಗಳನ್ನು ರಾಗವಾಗಿ ಓದುತ್ತಿದ್ದರು. ಈಚೆಗೆ ಕಾವ್ಯ ಪ್ರಚಾರಮಂಡಳಿಯಲ್ಲಿ ಗಮಕಿ ಶ್ರೀ ಆರ್. ಶಂಕರನಾರಾಯಣರವರು ನಡೆಸುತ್ತಿದ್ದ ಗಮಕ ತರಗತಿಗಳಲ್ಲಿ ಕುಳಿತು ೧೯೭೧-೭೩ ರಲ್ಲಿ ನಡೆದ ಗಮಕ ಪ್ರವೇಶ ಮತ್ತು ಪ್ರೌಢ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವರು. ೧೯೭೫ ನೇ ಜೂನ್‌ನಲ್ಲಿ ಪರಿಷತ್ತು ನಡೆಸಿದ ಗಮಕ ಅಧ್ಯಾಪಕರ ಶಿಕ್ಷಣ ಶಿಬಿರದಲ್ಲಿ ತರಪೇತಿಯನ್ನು ಪಡೆದು ವಿಶೇಷಾರ್ಹತೆಯ ಪ್ರಶಸ್ತಿಯನ್ನು ಪಡೆದಿರುವರು. ಇವರು ನಾಡಿನ ಅನೇಕ ಭಾಗಗಳಲ್ಲಿ ಕಾವ್ಯವಾಚನವನ್ನು ಸುಮಾರು ಹತ್ತು ವರ್ಷಗಳಿಂದಲೂ ನಡೆಸುತ್ತಿರುವರು. ಷಟ್ಪದೀ ಮತ್ತು ಚಂಪೂ ಕಾವ್ಯಗಳನ್ನು ಸಮರ್ಥ ರೀತಿಯಲ್ಲಿ ವಾಚನ ಮಾಡಬಲ್ಲರು. ಸಾಹಿತ್ಯ ಮತ್ತು ಸಂಸ್ಕೃತಿ ಪ್ರಸಾರ ಇಲಾಖೆಯಲ್ಲಿ ಚಿಕ್ಕಮಗಳೂರು ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ವಾಚನ ನಡೆಸಿರುವರು. ಬೆಂಗಳೂರು ಆಕಾಶವಾಣಿ ಕೇಂದ್ರದಿಂದ ಸುಮಾರು ನಾಲ್ಕು ವರ್ಷಗಳಿಂದಲೂ ಇವರ ವಾಚನಗಳು ಪ್ರಸಾರವಾಗುತ್ತಲಿವೆ. ಇವರ ವಾಚನಗಳಿಗೆ ಪದ್ಮಭೂಷಣ ಡಾ|| ಬಿ. ಶಿವಮೂರ್ತಿಶಾಸ್ತ್ರಿಗಳು ಹಲವು ಬಾರಿ ವ್ಯಾಖ್ಯಾನ ಮಾಡಿರುವರು. ೧೯೭೪ ರಲ್ಲಿ ಹನುಮಜ್ಜಯಂತಿ ಉತ್ಸವದಲ್ಲಿ ಕಾವ್ಯ ವಾಚನ ಮಾಡಿದಾಗ ಚಿತ್ರದುರ್ಗದ ಬೃಹನ್ಮಠಾಧೀಶರಾದ ಶ್ರೀ ಶ್ರೀ ಮುರುಘ ರಾಜೇಂದ್ರಸ್ವಾಮಿಗಳು "ಗಮಕ ಕಲಾರತ್ನ" ಎಂಬ ಪ್ರಶಸ್ತಿಯನ್ನಿತ್ತು ಅನುಗ್ರಹಿಸಿರುವರು. ೧೯೭೪ ರಲ್ಲಿ ಇವರಿಂದ ರಾಮಾಯಣ ದರ್ಶನಂ ಕೃತಿಯ ಸಾಗರೋಲ್ಲಂಘನ ಭಾಗವನ್ನು ವಾಚನ ಮಾಡಿಸಿ ಸಂತೋಷಿಸಿದ ಶ್ರೀ ಕುವೆಂಪುರವರು ಅದನ್ನು ಧ್ವನಿಮುದ್ರಿಸಿಕೊಂಡು ಅವರ ಕೃತಿಗಳನ್ನು ಆಕಾಶವಾಣಿಯಲ್ಲಿ ಹಾಡಲು ತಮ್ಮ ಸಮ್ಮತಿಯನ್ನು ಸೂಚಿಸಿರುವರು.

೧೬೧. ಗೌರಮ್ಮ ನಾಗರಾಜ್, ಮೈಸೂರು

ಇವರು ಅರಕಲಗೂಡು ತಾಲ್ಲೂಕು ಅಗ್ರಹಾರದಲ್ಲಿ ೧೦-೯-೧೯೩೭ರ ಜನಿಸಿದರು. ಇವರ ತಂದೆ ತಾಯಿಗಳು ಶ್ರೀ ಕೃಷ್ಣಸ್ವಾಮಿಗಳು ಮತ್ತು ಶ್ರೀಮ ಮಹಾಲಕ್ಷಮ್ಮನವರು. ಪ್ರೌಢ ತರಗತಿಯವರೆಗೆ ವ್ಯಾಸಂಗ ಮಾಡಿದ್ದಾರೆ. ಲ ಕಲಾ ಕಾಲೇಜಿನ ಪ್ರಾಧ್ಯಾಪಕಿಯಾಗಿದ್ದಾರೆ. ಸಂಗೀತದಲ್ಲಿ ಸೀನಿಯರ್ ಮಟ್ಟಕ ಮೀರಿದ ಪರಿಶ್ರಮವಿದೆ ; ೨೫-೩೦ ವರ್ಷಗಳ ಅನುಭವವಿದೆ. ಮಾಧ್ಯಮಿಕ ಶಾ ಹಂತದಿಂದಲೇ ಪದ್ಯಗಳನ್ನು ಓದುವ ಅಭಿಲಾಷೆಯಿದ್ದು ಮುಂದೆ ಅದು ಕನ ಸಾಹಿತ್ಯದಲ್ಲಿ ಅವರ ಆಸಕ್ತಿಯನ್ನು ಬೆಳೆಸಿತು. ಇವರ ಸಂಗೀತ ಮತ್ತು ಗಮ ಕಲಾಸಕ್ತಿಗೆ ಮುಖ್ಯ ಕಾರಣ ಇವರ ತಂದೆಯವರು. ಅವರೇ ಸ್ವತಃ ಪಂಡಿತರ ಪುರಾಣ ಗ್ರಂಥಗಳನ್ನು ಸೊಗಸಾಗಿ ಓದುವವರೂ ಆಗಿದ್ದರು. ಶ್ರೀಮತಿಯವ ಅವರ ಸೋದರಮಾವಂದಿರಾದ ಕೃಷ್ಣರಾಜ ನಗರದ ಕೃಷ್ಣಪ್ಪನವರಿಂದ ಸಂಗೀ ಪಾಠದಲ್ಲಿ ಒಳ್ಳೆಯ ತಳಹದಿ ದೊರೆಯಿತು. ಗಮಕ ಕಲಾ ಗುರುಗಳು ಪ್ರೊ ಬಿ. ಎಸ್. ಎಸ್. ಕೌಶಿಕ್‌ರವರು. ಅವರಲ್ಲಿ ಮೂರು ವರ್ಷಗಳ ಕಾಲ ಅಭ್ಯಾ ಮಾಡಿದರು. ೧೯೫೪-೫೫ ರಲ್ಲಿ ಪರಿಷತ್ತಿನ ಗಮಕ ಪರೀಕ್ಷೆಯಲ್ಲಿ ಪ್ರಥಮ ದ ಯಲ್ಲಿ ತೇರ್ಗಡೆಯಾಗಿರುತ್ತಾರೆ. ಕಾವ್ಯವಾಚನದಲ್ಲಿ ಇವರಿಗೆ ೨೫ ವರ್ಷ ಅನುಭವವಿದೆ. ರಾಮಾಯಣ, ಮಹಾಭಾರತ, ಹರಿಶ್ಚಂದ್ರಕಾವ್ಯ ಮತ್ತು ಜೈಮಿ ಭಾರತ ಇವುಗಳನ್ನು ವಾಚನಮಾಡುವುದರಲ್ಲಿ ಹೆಚ್ಚಿನ ಆಸಕ್ತಿಯುಂಟು. ನೂರಾ ಕಡೆಗಳಲ್ಲಿ ಅಮೋಘ ವಾಚನಮಾಡಿ ಶ್ರೋತೃಗಳನ್ನು ತಣಿಸಿದ್ದಾರೆ, ಅವರಿ ಪ್ರಶಂಸೆ ಪಡೆದಿದ್ದಾರೆ. ಸಂಸ್ಕೃತಿ ಪ್ರಸಾರ ಕಾರ್ಯಕ್ರಮ ನೀಡಿದ್ದಾರೆ. ೧೯೫೪- ರಲ್ಲಿ ಮೈಸೂರಿನ ಸೀತಾಸದನದಲ್ಲಿ ಗಮಕ ತರಗತಿ ನಡೆಸಿದ್ದರು. ಈಗ ಎ ವರ್ಷಗಳಿಂದ ಪ್ರವೇಶ ಹಾಗೂ ಪ್ರೌಢ ತರಗತಿಗಳನ್ನು ರಾಮ ಮಂದಿರ ಮ ಭಗಿನೀ ಸೇವಾ ಸಮಾಜಗಳಲ್ಲಿ ನಡೆಸುತ್ತಿರುತ್ತಾರೆ. ಆಕಾಶವಾಣಿಯಲ್ಲಿ ೨೦ ವ ಗಳಿಂದ ಇವರ ಕಾರ್ಯಕ್ರಮಗಳು ಪ್ರಸಾರವಾಗುತ್ತಿವೆ. ದೈವಾನುಗ್ರಹದಿ ಇವರಿಗೆ ಅನೇಕ ಕಡೆ ಕಾವ್ಯವಾಚನ ಸೇವೆ ಸಲ್ಲಿಸುವ ಅವಕಾಶ ಲಭಿಸಿದೆ. ಧ ಸ್ಥಳ, ಮುಲ್ಲಾಡಿಹಳ್ಳಿ, ಭದ್ರಾವತಿ, ಶಿವಮೊಗ್ಗ, ಮೈಸೂರುಗಳಲ್ಲಿ ಇವರ ಕಾರ್ಯ ಕ್ರಮಗಳು ನಡೆದಿವೆ. ಮಂಡ್ಯ ಕರ್ನಾಟಕ ಸಂಘದ ಆಶ್ರಯದಲ್ಲಿ ನಡೆದ ರಾಮ ಯಣ ದರ್ಶನಂ ವಾಚನ ಸ್ಪರ್ಧೆಯಲ್ಲಿ ಮೂರು ಬಾರಿ ಪ್ರಥಮ ಬಹುಮಾ

ವಿಜೇತರಾಗಿದ್ದಾರೆ. ದಿ. ಡಾ|| ರಾಧಾಕೃಷ್ಣನ್ ಅವರ ಸಮ್ಮುಖದಲ್ಲಿ ವಾಚನಮಾಡಿದ್ದಾರೆ. ಅನೇಕ ಗುರುಪೀಠಗಳಲ್ಲಿಯೂ ಇವರ ಕಾರ್ಯಕ್ರಮಗಳು ನಡೆದಿವೆ. ಮೈಸೂರಿನ ರೇಣುಕ ಸಂಘದಲ್ಲಿ ಕಾರ್ಯಕ್ರಮ ನಡೆಸಿ "ಗಮಕ ಕಲಾ ಪ್ರವೀಣೆ" ಎಂಬ ಪ್ರಶಸ್ತಿಯನ್ನೂ, ಸುವರ್ಣಪದಕ ಪ್ರಶಸ್ತಿ ಪತ್ರಗಳನ್ನೂ ಪಡಿದಿದ್ದಾರೆ. ಮಲ್ಲಾಡಿ ಹಳ್ಳಿಯ ರಾಘವೇಂದ್ರಸ್ವಾಮಿಗಳು 'ಕಾವ್ಯವಾಚನ ಕೋವಿದೆ' ಎಂಬ ಪ್ರಶಸ್ತಿಯನ್ನು ನೀಡಿರುವರು. ದಕ್ಷಿಣ ವಿಭಾಗದ ರಕ್ಷಣಾ ಇಲಾಖಾಧಿಕಾರಿಗಳ ಸಮ್ಮುಖದಲ್ಲಿ ವಾಚನ ನಡೆಸಿ 'ಗಮಕ ಕಲಾ ಕೋಕಿಲೆ' ಎಂಬ ಬಿರುದನ್ನೂ ೮೦೦/– ರೂ. ಬೆಲೆಬಾಳುವ ಬೆಳ್ಳಿಯತಟ್ಟೆಯನ್ನೂ ಪಡೆದಿದ್ದಾರೆ.

೧೬೨. ಎಂ. ಎಸ್. ಗೋಪಾಲ್, ಮೈಸೂರು

ಇವರು ಮೈಸೂರು ನಗರದಲ್ಲಿ ೨೦-೧೦-೧೯೩೨ ನೇ ತಾರೀಖು ಜನಿಸಿದರು. ತಂದೆ ಶ್ರೀ ಆರ್. ಸುಂದರ ತಾತಾಚಾರ್, ತಾಯಿ ಲಕ್ಷಮ್ಮನವರು. ಎಸ್. ಎಸ್. ಎಲ್.ಸಿ. ಓದಿ ಮೈಕೋ ಕಾರ್ಖಾನೆಯಲ್ಲಿ ಗುಮಾಸ್ತರಾಗಿದ್ದರು. ಇವರು ಹಾಡಬಲ್ಲರು. ೧೩ ವರ್ಷಗಳ ಅನುಭವವಿದೆ. ಇವರು ಕೆ. ಜಿ. ಸಂಪತ್ಕುಮಾರಾಚಾರ್ಯರ ಸೋದರ ಅಳಿಯಂದಿರು. ಇವರ ಗಮಕ ಗುರುಗಳು ಶ್ರೀ ಎಂ. ರಾಘವೇದ್ರ ರಾಯರು. ೧೯೬೧ ರಲ್ಲಿ ಗಮಕ ಪ್ರೌಢ ಪರೀಕ್ಷೆಯಲ್ಲಿ ತೇರ್ಗಡೆಯಾದರು. ಸಂಸ್ಕೃತಿ ಪ್ರಸಾರ ಯೋಜನೆಯ ಅಂಗವಾಗಿ ಅಲ್ಲಲ್ಲಿ ಕಾವ್ಯವಾಚನ ಮಾಡಿರುವರು. ೧೫ ವರ್ಷಗಳ ಅನುಭವವಿದೆ. ಎಲ್ಲ ಕಾವ್ಯಗಳನ್ನೂ ಓದಿರುವರು. ಗಮಕ ಶಿಕ್ಷಣವನ್ನು ಕೊಡುತ್ತಿದ್ದಾರೆ. ಅನೇಕ ಸಂಘ ಸಂಸ್ಥೆಗಳಲ್ಲಿ ಕಾವ್ಯವಾಚನ ಮಾಡಿರುವರು. ಅನೇಕ ಸ್ಪರ್ಧೆಗಳಲ್ಲಿ ಭಾಗವಹಿಸಿ ಪ್ರಥಮ ಬಹುಮಾನಗಳನ್ನು ಪಡೆದಿರುವರು.

೧೬೩. ಹೆಚ್. ಲಕ್ಷ್ಮೀನಾರಾಯಣಶಾಸ್ತ್ರಿ, ಬೆಂಗಳೂರು

ಇವರು ೧೩–೧೧–೧೯೩೭ ರಲ್ಲಿ ಜನಿಸಿದರು. ಇವರ ತಂದೆ ಶ್ರೀ ಲಕ್ಷ್ಮೀನರಸಿಂಹಶಾಸ್ತ್ರಿಗಳು, ತಾಯಿ ಶ್ರೀಮತಿ ಅನ್ನಪೂರ್ಣಮ್ಮನವರು. ಇವರು ಬಿ.ಎಸ್‌ಸಿ. ಪದವೀಧರರಾಗಿ ಬಿನ್ನಿಮಿಲ್ಲಿನ ಡೈಹೌಸ್ ವಿಭಾಗದಲ್ಲಿ ಸಹಾಯಕ ತಾಂತ್ರಿಕರಾಗಿ ಉದ್ಯೋಗದಲ್ಲಿರುವರು. ೧೯೫೮ ನೇ ಮೇ ತಿಂಗಳ ಒಂದು ಭಾನುವಾರ ಸ್ನೇಹಿತರ

ಮಧ್ಯದಲ್ಲಿ ಹರಿಶ್ಚಂದ್ರ ಕಾವ್ಯ ಸಂಗ್ರಹದಿಂದ ಒಂದು ಪದ್ಯವನ್ನು ರಾಗಭ್ಞಾ
ಯಲ್ಲಿ ಓದಿದಾಗ ಅಲ್ಲಿದ್ದ ಮಿತ್ರರು ಇವರ ವಾಚನವನ್ನು ಪ್ರಶಂಸಿಸಿದರು.
ಪದ್ಯಗಳನ್ನು ಮನೆಯಲ್ಲಿ ಸಂಗೀತವನ್ನು ಬಲ್ಲ ಮಿತ್ರರ ಮುಂದೆ ಓದಿದಾಗ ಅವ
ವಾಚನದ ರೀತಿ ಚೆನ್ನಾಗಿದೆ, ರಾಗಮಾರ್ಗವೂ ಸ್ಪಷ್ಟವಾಗಿದೆ ಎಂದು ಪ್ರೋತ
ಹಿಸಿದರು. ಅಂದಿನಿಂದ ಇವರಿಗೆ ಕಾವ್ಯವಾಚನದಲ್ಲಿ ಆಸಕ್ತಿಯುಂಟಾಯಿತ
ಮುಂದೆ ಪರಿಷತ್ತಿನಲ್ಲಿ ನಡೆಸುತ್ತಿದ್ದ ಗಮಕ ಪ್ರೌಢ ತರಗತಿಗೆ ಹೋದರು. ಅ
ಸಂಗೀತ ವಿದ್ವಾಂಸರಾದ ಎಲ್. ರಾಜಾರಾಯರು ಪದ್ಯಗಳನ್ನು ಯಾವ ರೀತಿಯ
ಸಂಗೀತವನ್ನು ಅಳವಡಿಸಿಕೊಂಡು ವಾಚನಮಾಡಬಹುದೆಂಬುದನ್ನು ತಿಳಿಸುತ್ತಿದ್ದ
ಮುಂದೆ ಗಮಕ ಪ್ರವೇಶ ತರಗತಿಗೆ ವಿದ್ಯಾರ್ಥಿಯಾಗಿ ಗಮಕಿ ಶ್ರೀ ಚಂ
ಶೇಖರಯ್ಯನವರಲ್ಲಿ ಕ್ರಮವಾಗಿ ಅಭ್ಯಾಸ ಮಾಡಿದರು. ಸಹಾಭ್ಯಾಸಿಗಳಾಗಿ
ಚಾಮರಾಜೇಂದ್ರ ಸಂಸ್ಕೃತ ಮಹಾ ಪಾಠಶಾಲೆಯ ಪ್ರಿನ್ಸಿಪಾಲರಾದ ಶ್ರೀ ವಿ
ರಾಘವಾಚಾರ್ಯರ ಪರಿಚಯವನ್ನು ಸಂಪಾದಿಸಿಕೊಂಡು ಅವರಲ್ಲಿ ಸಾಹಿತ್ಯವನ
ಅಭ್ಯಸಿಸಿದರು. ಇವರು ಗಮಕ ಪ್ರೌಢ ಪರೀಕ್ಷೆಯಲ್ಲಿಯೂ ಉತ್ತೀರ್ಣರಾಗಿ
ವರು. ಗಮಕಿ ಎಂ. ರಾಘವೇಂದ್ರರಾಯರು, ರಾಮಾರಾಧ್ಯರು ಇವರಿಗೆ ಗಮ
ಕಲೆಯಲ್ಲಿ ಮಾರ್ಗದರ್ಶನ ನೀಡಿರುವರು. ಇವರು ಷಟ್ಪದಿ ಮತ್ತು ಚಂಪೂ ಗ್ರಂ
ಗಳನ್ನು ಅನೇಕ ಕಡೆಗಳಲ್ಲಿ ವಾಚನ ಮಾಡುತ್ತಿರುವರು. ಪರಿಷತ್ತಿನ ಆದೇಶದ
ಗಮಕ ತರಗತಿಗಳನ್ನು ನಡೆಸಿರುವರು. ಗಮಕ ಶಿಕ್ಷಕರ ಶಿಕ್ಷಣ ಶಿಬಿರದಲ್ಲಿಯ
ತರಬೇತಿಯನ್ನು ಪಡೆದಿರುವರು.

೧೬೪. ಎಂ. ಆರ್. ರಮಾಕಾಂತರಾವ್, ಬೆಂಗಳೂರು

ಇವರು ೧೯೩೩ ರಲ್ಲಿ ಜನಿಸಿದರು. ಬಿ.ಎಸ್‌ಸಿ. ಪದವೀಧರರಾಗಿ ಹೆಚ
ಎಂ. ಟಿ. ಕಾರ್ಖಾನೆಯ ಸೇಲ್ಸ್ ಎಗ್ಸಿಕ್ಯೂಷನ್ ವಿಭಾಗದಲ್ಲಿ ಅಸಿಸ್ಟೆಂ
ಸೂಪರಿಂಟೆಂಡೆಂಟ್ ಆಗಿದ್ದಾರೆ. ೧೯೬೬ ರಲ್ಲಿ ಖ್ಯಾತ ಗಮಕಿಗಳಾದ ಪಂ
ಹು. ಮಾ. ರಾಮಾರಾಧ್ಯರಲ್ಲಿ ಗಮಕ ಶಿಕ್ಷಣ ಪಡೆದು ಪ್ರವೇಶ ಪರೀಕ್ಷೆಯ
ಪ್ರಥಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ. ಸಂಗೀತದಲ್ಲಿ ಆಸಕ್ತಿಯಿ
ಅಭ್ಯಾಸವಾಗಿಲ್ಲ. ೧೯೬೬ ರಿಂದಲೂ ಕಾವ್ಯವಾಚನ ಮಾಡುತ್ತಿದ್ದಾರೆ. ಪಂ
ಹು. ಮಾ. ರಾಮಾರಾಧ್ಯರಿಂದ ರಚಿತವಾಗಿ ನಿರ್ದೇಶಿಸಲ್ಪಟ್ಟ ಎಲ್ಲ ಗಮ
ರೂಪಕಗಳಲ್ಲಿಯೂ ಭಾಗವಹಿಸಿದ್ದಾರೆ. ಜಾನಪದ ಗೀತೆಗಳನ್ನು ಹಾಡುವು

ಕೋಲಾಟ ಇವುಗಳಲ್ಲಿ ಅಭಿರುಚಿಯಿರುತ್ತದೆ. ಗಾಂಧೀ ಸಾಹಿತ್ಯ ಸಂಘ (ಮಲ್ಲೇಶ್ವರ)ದಲ್ಲಿ ನಡೆಯುವ ಎಲ್ಲ ಸಾಹಿತ್ಯ ಕಾರ್ಯಕ್ರಮಗಳಲ್ಲಿಯೂ ಪಾಲ್ಗೊಳ್ಳುತ್ತಿದ್ದಾರೆ. ಆ ಸಂಸ್ಥೆಯ ಅಂಗವಾದ ಪ್ರಕೃತಿ ಜೀವನ ಕೇಂದ್ರದ ಸದಸ್ಯರಾಗಿರುತ್ತಾರೆ. ಯೋಗಾಸನಗಳಲ್ಲಿಯೂ ಆಸಕ್ತಿ ಹೊಂದಿ ಅಭ್ಯಾಸ ಮಾಡಿದ್ದಾರೆ.

೧೬೫. ಲಲಿತಾ ರಾಮಯ್ಯ

ಇವರು ೧೯೩೩ನೇ ಇಸವಿಯಲ್ಲಿ ಜನಿಸಿದರು. ಕೇವಲ ಇತ್ತೀಚೆಗೆ ಇವರಿಗೆ ಗಮಕ ಕಲೆಯಲ್ಲಿ ಆಸಕ್ತಿಯುಂಟಾಯಿತು. ಇವರು ಕಾವ್ಯಪ್ರಚಾರ ಮಂಡಲಿಯಲ್ಲಿ ನಡೆಯುತ್ತಿರುವ ಗಮಕ ತರಗತಿಗಳಲ್ಲಿ ಅಭ್ಯಾಸ ಮಾಡಿರುವರು. ಇವರ ಗಮಕ ಗುರುಗಳು ಶ್ರೀ ಆರ್. ಶಂಕರನಾರಾಯಣರವರು. ಗಮಕ ಪ್ರವೇಶದಲ್ಲಿ ಪ್ರಥಮ ಶ್ರೇಣಿಯಲ್ಲಿಯೂ ಗಮಕ ಪ್ರೌಢದಲ್ಲಿ ಉತ್ತಮ ರೀತಿಯಲ್ಲಿಯೂ ತೇರ್ಗಡೆ ಹೊಂದಿರುವರು. ಇವರಿಗೆ ಗಮಕದಲ್ಲಿ ಶ್ರೀ ಎಂ. ರಾಘವೇಂದ್ರರಾಯರವರ ಮಾರ್ಗದರ್ಶನವೂ ಸಂಗೀತದಲ್ಲಿ ಶ್ರೀ ಚಿಂತಲಪಲ್ಲಿ ಕೃಷ್ಣಮೂರ್ತಿಗಳ ಶಿಕ್ಷಣವೂ ಇದೆ. ವಿರಾಮ ಕಾಲದಲ್ಲಿ ಕಾವ್ಯವಾಚನವನ್ನು ಮಾಡುವರು. ಕನ್ನಡ ಭಾರತಗಳು ಇವರ ಪ್ರಿಯವಾದ ಕಾವ್ಯಗಳು.

೧೬೬. ಎಂ.ವಿ. ಅಪ್ಪೂರಾವ್, ದೂರವಾಣಿನಗರ, ಬೆಂಗಳೂರು

ಇವರು ೧೯೩೪ರಲ್ಲಿ ಗೋರೀಬಿದನೂರು ತಾಲ್ಲೂಕಿನ ಮಂಚೇನಹಳ್ಳಿಯಲ್ಲಿ ಜನಿಸಿದರು. ತಂದೆ ಶ್ರೀ ವೆಂಕಟಪತಯ್ಯ, ತಾಯಿ ಶ್ರೀಮತಿ ನರಸಮ್ಮನವರು. ಬಾಲ್ಯದಿಂದಲೇ ಇವರಿಗೆ ನಾದದ ಮೇಲೆ ಆಸಕ್ತಿಯಿದ್ದಿತು. ಆಲಿಸಿದುದನ್ನು ಅನುಕರಿಸಲು ಹಂಬಲಿಸುತ್ತಿದ್ದರು. ಇವರು ಐ.ಟಿ.ಐ.ನಲ್ಲಿ ಉದ್ಯೋಗದಲ್ಲಿದ್ದಾರೆ. ಆ ನಗರದಲ್ಲಿನ ಕರ್ನಾಟಕ ಸಂಘದಲ್ಲಿ ಶ್ರೀ ಗಮಕಿ ಅನಂತಪದ್ಮನಾಭಯ್ಯನವರ ಗಮಕ ತರಗತಿಗೆ ಒಮ್ಮೆ ಹೋದಾಗ ಅವರ ವಾಚನದ ಮೋಡಿಗೆ ಮರುಳಾಗಿ ಮನ ಸೋತರು. ಅವರ ಶಿಷ್ಯವರ್ಗಕ್ಕೆ ಸೇರಿ ಗಮಕದ ಅಭ್ಯಾಸಮಾಡಿದರು. ಅವರ ಮಾರ್ಗದರ್ಶನದಲ್ಲಿ ಮುಂದುವರಿದರು. ಗಮಕ ಪ್ರವೇಶ ಮತ್ತು ಪ್ರೌಢ ಪರೀಕ್ಷೆಗಳಲ್ಲಿ ತೇರ್ಗಡೆಯಾದರು. ಗಮಕ ಕಲೆಗೆ ಅಗತ್ಯವಾದ ಸಂಗೀತವನ್ನೂ ಅಭ್ಯಾಸ ಮಾಡುತ್ತಿರುವರು. ಗಮಕವನ್ನು ಕೇವಲ ಪ್ರಚಾರಕ್ಕೇ ಅಲ್ಲದೆ, ಆಧ್ಯಾತ್ಮಿಕ ಉನ್ನತಿಗೂ ಕಲಿಯಬೇಕೆಂಬುದು ಇವರ ಆಸೆಯಾಗಿದೆ.

೧೬೭. ಸುಮಿತ್ರಾ ಅನಂತಕೃಷ್ಣ, ಬೆಂಗಳೂರು

ಇವರು ೬–೨–೧೯೩೩ ರಲ್ಲಿ ಜನಿಸಿದರು. ಇವರ ತಂದೆ ಶ್ರೀ ಎಂ. ಎ
ಸೂರಪ್ಪನವರು ಮತ್ತು ತಾಯಿ ಶ್ರೀಮತಿ ಸುಬ್ಬಮ್ಮನವರು. ಎಸ್.ಎಸ್.ಎಲ
ಮಾಡಿಕೊಂಡಿರುವರು. ಗಮಕ ಪ್ರವೇಶ ಪರೀಕ್ಷೆಯನ್ನು ಶ್ರೀ ಆರ್. ಶ
ನಾರಾಯಣ ಅವರಲ್ಲಿ ಅಭ್ಯಾಸಮಾಡಿ ಉತ್ತೀರ್ಣರಾಗಿರುತ್ತಾರೆ. ಷಟ್ಪದೀ ಕ
ಗಳನ್ನೂ ವಾಚನಮಾಡುತ್ತಾರೆ. ಸಂಗೀತ ಲೋಯರ್ ಸೆಕೆಂಡರಿ ಪರಿ
ಐಚ್ಛಿಕವಾಗಿದ್ದಿತು.

೧೬೮. ಎಂ. ಶ್ರೀರಂಗಶೆಟ್ಟಿ

ಇವರು ಚಿತ್ರದುರ್ಗಜಿಲ್ಲಾ ಭರಮಸಾಗರದಲ್ಲಿ ೫–೮–೧೯೩೩ ರಂದು ಜ
ವರು. ಇವರ ತಂದೆ ಮೂಡಲಪ್ಪ ಶ್ರೇಷ್ಠಿಯವರು, ತಾಯಿ ಪಾರ್ವತಮ್ಮನ
ಇವರು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಭರಮಸಾಗ
ಉನ್ನತ ಪ್ರೈಮರೀಶಾಲೆಯ ಉಪಾಧ್ಯಾಯರಾಗಿರುವರು. ಸಂಗೀತದ ಪರಿಚ
ವನ್ನು ಹೊಂದಿರುವ ಇವರು ೧೨ ವರ್ಷಗಳಿಂದಲೂ ಹಾಡುವ ಮತ್ತು ಕ
ವಾಚನಮಾಡುವ ಅಭ್ಯಾಸವಿಟ್ಟುಕೊಂಡಿರುವರು. ಇವರು ಬರೆದ ಕಥೆ ಕವಿತೆ
ಜಾನಪದಗೀತೆ ಮುಂತಾದುವು ಪ್ರಕಟವಾಗಿವೆ. ಇವರ ತಾತಂದಿರು ತಾಟ
ಅಪ್ಪಣ್ಣನವರು ರಾಮಾಯಣ ಭಾರತ ಕಾವ್ಯಗಳನ್ನು ವಾಚನಮಾಡುತ್ತಿದ್ದ
ಇವರ ತಂದೆ ತಾಯಿಯ ಪ್ರೋತ್ಸಾಹವೂ ಇದ್ದು ಇವರಿಗೆ ಗಮಕ ಕಲೆಯಲ್ಲಿ ಬ
ದಿಂದಲೇ ಆಸಕ್ತಿ ಮೂಡುವಂತಾಯಿತು. ಇವರು ಗ್ರಾಮಾಂತರ ಪ್ರದೇಶ
ಸುಮಾರು ೧೦–೧೨ ವರುಷಗಳಿಂದಲೂ ಅನುಭವಾಮೃತ, ಶ್ರೀ ಶಿವಯೋಗಿ
ಚರಿತ್ರೆ, ಅಖಂಡೇಶ್ವರ ವಚನ ಮತ್ತು ಭಾರತ ಪಠಣವನ್ನು ಮಾಡುತ್ತಿರು
ಇವರಿಗೆ ಕಾವ್ಯವಾಚನ ಕಲೆಯಲ್ಲಿ ಮಾರ್ಗದರ್ಶನ ಮಾಡಿದವರು ಅಥಣಿ ಶ್ರೀ
ಚನ್ನಬಸವಸ್ವಾಮಿಗಳವರು. ಅನಂತರ ಅರಕೆರೆ ಶ್ರೀ ಚನ್ನಬಸವದೇವರು ವ
ಚಿತ್ರದುರ್ಗದ ಶ್ರೀ ಗೋಪಾಲಕೃಷ್ಣರಾಯರು, ಭರಮಸಾಗರದ ಶ್ರೀ ಛಾಯ
ರಾಯರು ಮತ್ತು ಚಿತ್ರದುರ್ಗದ ಅ.ಲ. ವೆಂಕಟರಾಮುರವರು. ಇವರು ೧೯
ಫೆಬ್ರವರಿಯಲ್ಲಿ ನಡೆದ ಗಮಕ ಪ್ರವೇಶ ಪರೀಕ್ಷೆಯಲ್ಲಿ ತೇರ್ಗಡೆಯಾಗಿರು

ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸ್ಕೂಲುಗಳಲ್ಲಿಯೂ, ದೇವಾಲಯಗಳಲ್ಲಿಯೂ ಉತ್ಸವ ಸಮಾರಂಭಗಳಲ್ಲಿಯೂ ಕಾವ್ಯವಾಚನ ಮಾಡಿರುವರು ಮತ್ತು ಅವರ ಪ್ರಶಂಸೆಗೆ ಪಾತ್ರರಾಗಿರುವರು.

೧೬೯. ಹೆಚ್.ಎಸ್. ಗೋಪಾಲಕೃಷ್ಣ, ಹಾಸನ

ಇವರು ೧೪-೮-೧೯೩೩ರಲ್ಲಿ ಹಾಸನದಲ್ಲಿ ಜನಿಸಿದರು. ತಂದೆ ತಾಯಿಗಳು ಹಂದಿನಕೆರೆ ಸುಬ್ಬರಾಯರು ಮತ್ತು ಸಂಜಮ್ಮನವರು. ಎಸ್.ಎಸ್.ಎಲ್.ಸಿ. ಆಗಿರುತ್ತೆ. ವ್ಯವಸಾಯ ಇಲಾಖೆಯಲ್ಲಿ ಶೀಘ್ರಲಿಪಿಗಾರರಾಗಿರುತ್ತಾರೆ. ಸಂಗೀತ ದಲ್ಲಿ ಅಭಿರುಚಿಯಿದ್ದು ದೇವರನಾಮ, ಕೀರ್ತನೆ ಹಾಗೂ ಲಘು ಸಂಗೀತಗಳನ್ನು ಬಹು ವರ್ಷಗಳಿಂದ ಹಾಡುತ್ತಿರುವರು. ಇವರಿಗೆ ಮೊದಲಿನಿಂದಲೂ ಕನ್ನಡ ಸಾಹಿತ್ಯದಲ್ಲಿ ಅಭಿರುಚಿಯಿದ್ದಿತು. ಬಹುತೇಕ ಕಾವ್ಯಗಳನ್ನು ಓದಿರುತ್ತಾರೆ. ಮಾಧ್ಯಮಿಕ ಶಾಲೆಯಲ್ಲಿದ್ದಾಗಲೇ ತಮ್ಮ ಉಪಾಧ್ಯಾಯರು ಗದುಗಿನ ಭಾರತದ 'ಬಕಾಸುರ ವಧೆ'ಯ ಭಾಗವನ್ನು ಸುಶ್ರಾವ್ಯವಾಗಿ ಓದಿದುದನ್ನು ಕೇಳಿ ಗಮಕದಲ್ಲಿ ಆಸಕ್ತಿ ಮೂಡಿತು. ೧೯೫೭ರಲ್ಲಿ ಕೃಷ್ಣರಾಜನಗರದಲ್ಲಿದ್ದಾಗ ಗಮಕಿ ಸುಬ್ರಹ್ಮಣ್ಯಂ ರವರಲ್ಲಿ ಶಿಷ್ಯರಾಗಿ ಸೇರಿ ಅಭ್ಯಾಸ ಮಾಡಿದರು. ಇವರೇ ಪ್ರಥಮವಾಗಿ ಇವರ ಗಮಕ ಗುರುಗಳು. ಅನಂತರ ಪ್ರೋತ್ಸಾಹ ಮತ್ತು ಮಾರ್ಗದರ್ಶನ ಮಾಡಿದವರು ಸುಪ್ರಸಿದ್ಧ ಗಮಕಿಗಳಾದ ನಂ. ಅಶ್ವತ್ಥನಾರಾಯಣ ಮತ್ತು ಕೇರಳಾಪುರದ ಗಮಕಿ ಸುಬ್ಬರಾಯರು. ೧೯೬೦ರಲ್ಲಿ ಗಮಕ ಪ್ರವೇಶ ತರಗತಿಯಲ್ಲಿ ತೇರ್ಗಡೆ ಯಾಗಿದ್ದಾರೆ. ಅಂದಿನಿಂದಲೂ ಅನೇಕ ಕಾವ್ಯಗಳನ್ನು ನಿರಂತರವಾಗಿ ಅಭ್ಯಾಸ ಮಾಡುತ್ತಿದ್ದಾರೆ. ಇವರಿಗೆ ಗದುಗಿನ ಭಾರತ, ಲಕ್ಷ್ಮೀಶ ಭಾರತ, ತೊರವೆ ರಾಮಾಯಣ, ಹರಿಶ್ಚಂದ್ರ ಕಾವ್ಯ, ಚಂಪೂ ಕಾವ್ಯಗಳು, ಶಾಕುಂತಲ, ಕುಮಾರ ಸಂಭವ, ಮಂಕುತಿಮ್ಮನ ಕಗ್ಗ ಮುಂತಾದ ಎಲ್ಲ ಕಾವ್ಯಗಳೂ ಇಷ್ಟ. ಅನೇಕ ಸಂಘ ಸಂಸ್ಥೆಗಳು, ದೇವಮಂದಿರಗಳು, ಅಧಿಕಾರಿಗಳು ಮತ್ತು ಖಾಸಗೀ ಮಹನೀ ಯರು ಇವರ ವಾಚನಕ್ಕೆ ಅವಕಾಶ ಮಾಡಿಕೊಟ್ಟು ಪ್ರೋತ್ಸಾಹಿಸಿರುವರು. ಶ್ರೀ ಜಿ.ಕೆ. ನರಸಿಂಹಾಚಾರ್ಯರು ಇವರ ವಾಚನಕ್ಕೆ ವ್ಯಾಖ್ಯಾನ ಮಾಡಿದ್ದಾರೆ. ಇವರು ಹಾಸನ, ಚಿತ್ರದುರ್ಗಗಳಲ್ಲಿ ೧೦ ವರ್ಷಗಳ ಕಾಲ ಗಮಕ ತರಗತಿಗಳನ್ನು ನಡೆಸಿ ಕಲಾಸೇವೆ ಮಾಡಿರುವರು. ಮುದ್ದಣನ ಶತಮಾನೋತ್ಸವದ ಸಂದರ್ಭದಲ್ಲಿ ನಂದಳಿಕೆಯಲ್ಲಿ ಆ ಮಹಾಕವಿಯ ರಾಮಾಶ್ವಮೇಧವನ್ನು ವಾಚನ ಮಾಡಿ

ಶ್ರೋತೃಗಳ ಪ್ರಶಂಸೆಯನ್ನು ಪಡೆದಿರುವರು. ಅಲ್ಲದೆ ಅನೇಕ ಕಾವ್ಯವಾಚನ ಸ
ಗಳಲ್ಲಿ ಭಾಗವಹಿಸಿ ಬಹುಮಾನ ಮತ್ತು ಅರ್ಹತಾ ಪತ್ರಗಳನ್ನು ಪಡೆದಿರು

೧೭೦. ಪದ್ಮಾ ನಾಗರಾಜ್, ಬೆಂಗಳೂರು

ಇವರು ೧೬–೧೦–೧೯೩೩ ರಲ್ಲಿ ಬೆಂಗಳೂರು ಜಿಲ್ಲಾ ಆನೇಕಲ್ಲಿನಲ್ಲಿ
ದರು. ಇವರ ತಂದೆ ಶ್ರೀ ಎಸ್. ರಾಮಯ್ಯನವರು, ತಾಯಿ ಶ್ರೀಮತಿ ಶಾರ
ನವರು. ಇವರು ಲೋಯರ್ ಸೆಕೆಂಡರಿವರೆಗೆ ಓದಿರುವರು. ಬಾಲ್ಯದಲ್ಲಿ
ತಂದೆಯವರೇ ಸಂಗೀತವನ್ನು ಕಲಿಸಿದರು. ಕೃತಿ, ವರ್ಣ, ಕೀರ್ತನೆಗ
ಹಾಡುವ ಮಟ್ಟಿಗೆ ಸಂಗೀತ ಜ್ಞಾನವಿದೆ. ಕಾವ್ಯಪ್ರಚಾರಮಂಡಲಿಯಲ್ಲಿ
ವಾಚನಗಳು ಪ್ರಾರಂಭವಾಗಿ ಅವುಗಳ ಕೇಳ್ಮೆಯಿಂದ ಇವರಿಗೆ ಕಲೆಯಲ್ಲಿ ಅ
ಯುಂಟಾಗಿ ೧೯೬೭ರಲ್ಲಿ ಗಮಕಿ ಶ್ರೀ ಜಿ.ಎ. ಅನಂತಪದ್ಮನಾಭಯ್ಯನವರಲ್ಲಿ
ವಾಗಿ ಶಿಕ್ಷಣವನ್ನು ಪಡೆದು ಗಮಕ ಪ್ರವೇಶ ಮತ್ತು ಪ್ರೌಢಪರೀಕ್ಷೆಗಳಲ್ಲಿ ಉತ್ತೀ
ರಾದರು. ಮುಂದೆ ಇವರು ಶ್ರೀ ಆರ್. ಶಂಕರನಾರಾಯಣರವರಲ್ಲಿ ವ್ಯಾ
ವನ್ನು ನಿರಂತರವಾಗಿ ಅಭ್ಯಾಸ ಮಾಡಿದರು. ಸುಮಾರು ೮ ವರ್ಷಗಳಿಂ
ಕಾವ್ಯವಾಚನವನ್ನು ಮಾಡುತ್ತಿರುವರು. ಕನ್ನಡ ಭಾರತ, ಜೈಮಿನೀ
ಮತ್ತು ರಾಮಾಯಣದರ್ಶನಂ ಮುಂತಾದ ಕಾವ್ಯಗಳನ್ನು ವಾಚನ ಮಾಡಲ
ರಿಗೆ ಆಸಕ್ತಿ ಹೆಚ್ಚು. ೧೯೭೪–೭೫ರಲ್ಲಿ ಗಮಕ ತರಗತಿಗಳನ್ನು ನಡೆಸಿರು
ಉತ್ಸವ ಸಮಾರಂಭಗಳಲ್ಲಿ, ಅನೇಕ ಸಂಘ ಸಂಸ್ಥೆಗಳಲ್ಲಿಯೂ ಪರಿಷತ್ತಿನ ಕಾ
ಕ್ರಮಗಳಲ್ಲಿ ಭಾಗವಹಿಸಿಯೂ ಕಾವ್ಯವಾಚನವನ್ನು ಮಾಡಿಯೂ, ಭಾ
ಮತ್ತು ದೇವರನಾಮಗಳನ್ನು ಹಾಡಿಯೂ ಸಹಕರಿಸುತ್ತಿರುವರು.

೧೭೧. ಛಾಯಾದೇವಿ ನಂಜಪ್ಪ, ತುಮಕೂರು

ಇವರು ತುಮಕೂರು ತಾಲ್ಲೋಕು ಮಾದುಗೊಂಡನಹಳ್ಳಿಯಲ್ಲಿ ೧೮
೧೯೩೪ರಲ್ಲಿ ಜನಿಸಿದರು. ತಂದೆ ಶ್ರೀ ನಾಗಪ್ಪ ಮತ್ತು ತಾಯಿ ಶ್ರೀ
ಸಾವಿತ್ರಮ್ಮ. ಇವರು ಕನ್ನಡ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಉತ್ತೀ
ರಾಗಿರುತ್ತಾರೆ. ಸಂಗೀತದಲ್ಲಿ ಸಾಧಾರಣವಾದ ಪರಿಶ್ರಮ ಹೊಂದಿರು
ಕನ್ನಡ ಸಾಹಿತ್ಯದಲ್ಲಿ ಅಭಿರುಚಿಯಿದೆ. 'ಹಾಲು ಜೇನು' ಮುಂತಾದ ಅಪ್ರ

ಕಾದಂಬರಿಗಳ ಲೇಖಕಿ ಇವರು. ಇದರ ಪ್ರಕಟಿತ ಕಾದಂಬರಿ, ಕಥೆ, ಮುಂತಾದುವು–'ನಿರಾಶ್ರಿತೆ', 'ಶಾಂತಳಾಪೂರ್ವಪುಣ್ಯ', 'ಬಯಕೆಯ ಬಳ್ಳಿ', 'ತವರುಮನೆ' ಮುಂತಾದುವು. ೧೯೭೧ರಲ್ಲಿ ಕಡಬದ ಗಮಕಿ ಲಕ್ಷ್ಮೀಕಾಂತ ಅವರು ಶ್ರೀಮತಿಯವರ ಗಮಕ ಕಲೆಯ ಗುರುಗಳು. ಇವರು ತುಮಕೂರಿನ ವಿನಾಯಕ ಉತ್ಸವಗಳ ಸಂದರ್ಭದಲ್ಲಿ ಹಾಗೂ ಬಡವನಹಳ್ಳಿ ಗ್ರಾಮದಲ್ಲಿ ಕಾವ್ಯವಾಚನ ಮಾಡಿರುವರು. ೧೯೭೩ ರಲ್ಲಿ ಗಮಕ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾರೆ.

೧೭೨. ಹೆಚ್.ಕೆ. ಸೂರ್ಯನಾರಾಯಣ, ಹೊಸಹಳ್ಳಿ

ಇವರು ಶಿವಮೊಗ್ಗ ತಾಲ್ಲೋಕು ಹೊಸಹಳ್ಳಿಯಲ್ಲಿ ೩೧-೧-೧೯೩೪ ರಲ್ಲಿ ಜನಿಸಿದರು. ಇವರ ತಂದೆಯವರು ಶ್ರೀ ಆರ್. ಕೇಶವ ಅವಧಾನಿಗಳು ಮತ್ತು ತಾಯಿ ಶ್ರೀಮತಿ ಸಾವಿತ್ರಮ್ಮ. ಇವರು ಮಿಡಲ್ ಸ್ಕೂಲಿನಲ್ಲಿ ಓದಿರುತ್ತಾರೆ. ಸಂಸ್ಕೃತದಲ್ಲಿ ಕಾವ್ಯ ಪರೀಕ್ಷೆ ಆಗಿರುತ್ತದೆ. ವೇದವನ್ನೂ ಅಭ್ಯಾಸ ಮಾಡಿರುವರು. ಬಾಲ್ಯದಿಂದಲೂ ಇವರಿಗೆ ಗಮಕವನ್ನು ಕಲಿಯಬೇಕೆಂಬ ಆಸೆಯಿತ್ತು. ಊರಿನಲ್ಲಿ ಯಾವ ವಾಚನ, ಪುರಾಣ, ಹರಿಕಥೆ ನಡೆದರೂ ತಪ್ಪದೆ ಕೇಳುತ್ತಿದ್ದರು. ಸಂಗೀತದಲ್ಲಿಯೂ ಅಭಿರುಚಿಯಿದ್ದಿತು. ಪರಿಷತ್ತಿನವರ ಆದೇಶದಂತೆ ಮತ್ತೂರಿನಲ್ಲಿ ಗಮಕ ತರಗತಿಗೆ ಸೇರಿ ಗಮಕ ಪ್ರವೇಶ ಪರೀಕ್ಷೆಗೆ ಕುಳಿತು, ಅದರಲ್ಲಿ ಉತ್ತೀರ್ಣರಾದರು. ಇದಾದನಂತರ ಹಲವೆಡೆಗಳಲ್ಲಿ ಇವರು ಗಮಕ ಕಾರ್ಯಕ್ರಮಗಳನ್ನು ನಡೆಸಿರುವರು. ಮುಂದೆ ಗಮಕ ಪ್ರೌಢ ಪರೀಕ್ಷೆಯಲ್ಲಿಯೂ ಉತ್ತೀರ್ಣರಾದರು. ಇವರು ಅವರ ಊರಿನಲ್ಲಿ ೨೫ ವಿದ್ಯಾರ್ಥಿಗಳನ್ನು ಗಮಕ ಕಲೆಯಲ್ಲಿ ತಯಾರು ಮಾಡಿರುವರು. ಶಾರೀರ ಸೌಖ್ಯವಿಲ್ಲದವರನ್ನು ವ್ಯಾಖ್ಯಾನಕಾರರಾಗುವಂತೆ ಅವರಿಗೆ ತರಬೇತಿ ಕೊಟ್ಟಿರುವರು. ಇವರಿಗೆ ಕಾವ್ಯಾಭ್ಯಾಸಮಾಡುವುದರಲ್ಲೇ ತುಂಬಾ ಆಸಕ್ತಿ. ಹಾಗಾಗಿ ವಾಚನದ ಜೊತೆಗೆ ಅನುವಾದ ಮಾಡುವುದನ್ನೂ ಅಭ್ಯಾಸ ಮಾಡಿರುವರು. ತಮ್ಮ ಊರಿನ ರಾಮಮಂದಿರದಲ್ಲಿ ಕಾವ್ಯವಾಚನ ನಡೆಸುತ್ತಿರುವರು. ಊರಿನ ಹಿರಿಯರ ಮತ್ತು ಸ್ನೇಹಿತರ, ಗಮಕಿಗಳ ಸಹಕಾರ, ಪ್ರೋತ್ಸಾಹಗಳನ್ನು ಪಡೆದಿರುವರು.

೧೭೩. ಎಂ. ಆರ್. ರಾಮಕೃಷ್ಣ, ಬೆಂಗಳೂರು

ಇವರು ೧೯೩೪ನೇ ಇಸವಿ ಡಿಸೆಂಬರ್ ತಿಂಗಳಲ್ಲಿ ಜನಿಸಿದರು. ಇ
ಮಾತಾಪಿತೃಗಳು–ಶ್ರೀಮತಿ ಜಯಲಕ್ಷಮ್ಮನವರು ಮತ್ತು ಗಮಕಿ ಶ್ರೀ
ರಾಘವೇಂದ್ರರಾಯರು. ಇವರು ಎಸ್. ಎಸ್. ಎಲ್. ಸಿ. ಮಾಡಿಕೊಂ
ಬೆಂಗಳೂರು ಟ್ರಾನ್ಸ್‌ಪೋರ್ಟ್ ಕಮೀಷನರ್‌ರವರ ಕಛೇರಿಯಲ್ಲಿ ಉದ್ಯೋಗ
ರುತ್ತಾರೆ. ೧೯೫೯ರಲ್ಲಿ ಗಮಕ ಪ್ರೌಢ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾ
ಸಂಸ್ಕೃತಿ ಪ್ರಸಾರದ ಕಾರ್ಯಕ್ರಮಗಳಲ್ಲಿ ಭಾಗವಹಿಸಿರುವರು. ಬೆಂಗಳೂ
ಆಕಾಶವಾಣಿಯಲ್ಲಿ ವಾಚನಗಳನ್ನು ಮಾಡುತ್ತಿರುವರು. ಅನೇಕ ಸಂಘ ಸಂಸ್ಥೆಗ
ಕಾವ್ಯವಾಚನ ನಡೆಸಿರುವುದಲ್ಲದೆ ಎರಡು ವರ್ಷಗಳಿಂದ ಗಮಕ ಪರೀಕ್ಷೆಗಳಿಗೆ ಪ
ಕ್ಷಕರಾಗಿಯೂ ಸೇವೆ ಸಲ್ಲಿಸುತ್ತಿರುವರು.

೧೭೪. ಕೆ. ಅನಂತಜೋಷಿ, ಬಳ್ಳಾರಿ

ಇವರು ೧೯೩೪ರಲ್ಲಿ ಜನಿಸಿದರು. ಎಸ್. ಎಸ್. ಎಲ್. ಸಿ. ಪರೀಕ್ಷೆಯ
ಉತ್ತೀರ್ಣರಾಗಿ ಬಳ್ಳಾರಿಯ ಮುನ್ಸಿಫ್ ಕೋರ್ಟಿನಲ್ಲಿ ಉದ್ಯೋಗದಲ್ಲಿರುತ್ತಾ
ಇವರು ಗಮಕ ಕಲೆಯನ್ನು ಶ್ರೀ ರಾಮಾಶಾಸ್ತ್ರಿಗಳು ನಡೆಸುತ್ತಿರುವ ಗಮಕ ತರ
ಗಳಲ್ಲಿ ಅಭ್ಯಾಸ ಮಾಡಿ ೧೯೬೫ರಲ್ಲಿ ನಡೆದ ಗಮಕ ಪ್ರೌಢ ಪರೀಕ್ಷೆಯಲ್ಲಿ ಉ
ರ್ಣರಾಗಿರುತ್ತಾರೆ. ಮನೆಯಲ್ಲಿ ಇವರ ತಾತಂದಿರಾದ ರಂಗೋಪಂತ ಮಾ
ರಾಯರು ಸಂಗೀತಗಾರರು ಗಮಕಿಗಳೂ ಆಗಿದ್ದವರು. ವಾಚನ ಮಾಡುತ್ತ
ಭಾರತ, ರಾಮಾಯಣ, ದೇವೀಭಾಗವತದ ಶ್ರವಣದಿಂದ ಪ್ರಭಾವಿತರಾಗಿರುವ

೧೭೫. ಪದ್ಮಾ ನಾರಾಯಣಾಚಾರ್, ಬೆಂಗಳೂರು

ಇವರು ೧೯೩೫ರಲ್ಲಿ ಜನಿಸಿದರು. ಇವರ ಸಾಮಾನ್ಯ ವಿದ್ಯಾಭ್ಯಾಸ ಎಸ್. ಎಸ
ಎಲ್. ಸಿ. ಗಮಕಿ ಶ್ರೀ ಜಿ. ಎ. ಅನಂತಪದ್ಮನಾಭರಾಯರಲ್ಲಿ ಗಮಕ ಕಲೆಯ
ಅಭ್ಯಾಸ ಮಾಡಿರುವರು. ಸಂಗೀತದಲ್ಲಿ ಕೀರ್ತನೆಗಳವರೆಗೆ ಕಲಿತಿದ್ದಾರೆ. ಪರಿಷ
ನಡೆಸುವ ಗಮಕ ಪ್ರವೇಶ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಪ್ರೌಢ ಪರ

ಯಲ್ಲಿ ಸಾಮಾನ್ಯ ದರ್ಜೆಯಲ್ಲಿ ಉತ್ತೀರ್ಣರಾಗಿರುತ್ತಾರೆ. ಇವರ ಯಜಮಾನರೂ ಮತ್ತು ಇವರ ಮಕ್ಕಳಲ್ಲಿ ಐದು ಜನರೂ ಗಮಕವನ್ನು ಅಭ್ಯಾಸ ಮಾಡಿರುವರು. ಇವರ ಯಜಮಾನರೂ ಪ್ರೌಢ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರು. ಪ್ರತಿದಿನ ಮನೆಯಲ್ಲಿ ಕಾವ್ಯವಾಚನ ಮಾಡುತ್ತ ಸತ್ಕಥಾ ಕಾಲಕ್ಷೇಪ ಮಾಡುತ್ತಿರುವರು. ಇವರಿಗೆ ಶ್ರೀಗಳಾದ ಅನಂತಪದ್ಮನಾಭಯ್ಯನವರು, ಎಂ. ರಾಘವೇಂದ್ರರಾಯರು, ಬಿ. ಎಸ್. ಎಸ್. ಕೌಶಿಕ್‌ರವರು ಮತ್ತು ಶ್ರೀಮತಿ ಶಕುಂತಳಾಬಾಯಿ ಪಾಂಡುರಂಗರಾಯರು ಇವರುಗಳ ಕಾವ್ಯವಾಚನಗಳನ್ನು ಕೇಳುವುದರಲ್ಲಿ ತುಂಬಾ ಆಸಕ್ತಿ. ರೇಡಿಯೋದಲ್ಲಿ ಬರುವ ಕಾವ್ಯವಾಚನಗಳಲ್ಲಿ ಉತ್ತಮವಾದುದನ್ನು ಕೇಳುವುದರಲ್ಲಿ ಸಂತೋಷ. ಇವರು ಎಂಟು ವರ್ಷಗಳಿಂದ ಕಾವ್ಯವಾಚನ ಮಾಡುತ್ತಿರುವರು. ಅನೇಕ ಸ್ಪರ್ಧೆಗಳಲ್ಲಿ ಭಾಗವಹಿಸಿ, ಬಹುಮಾನಗಳನ್ನು ಪಡೆದಿರುವರು. ದೇವರ ನಾಮಗಳು, ಜನಪದ ಗೀತೆ, ವಚನಗಳು ಮತ್ತು ಭಾವಗೀತೆಗಳನ್ನೂ ಹಾಡಲು ಕಲಿತಿರುವರು. ಕೆಲವು ಕಡೆ ಈ ಕಾರ್ಯಕ್ರಮಗಳನ್ನೂ ಕೊಟ್ಟಿರುವರು. ಆಕಾಶವಾಣಿಯ ಮಹಿಳಾ ಕಾರ್ಯಕ್ರಮಗಳಲ್ಲಿ ವಾಚನ ಮಾಡುವ ಅವಕಾಶ ಇವರಿಗೆ ದೊರಕಿದೆ.

೧೭೬. ಎಸ್. ಎಲ್. ರಾಧಾಕೃಷ್ಣ, ಮೈಸೂರು

ಇವರು ೨–೫–೧೯೩೪ರಲ್ಲಿ ಚಿಕ್ಕಮಗಳೂರಿನಲ್ಲಿ ಜನಿಸಿದರು. ಇವರ ತಂದೆ ತಾಯಿಗಳು ಶ್ರೀ ಲಕ್ಷ್ಮಣಶೆಟ್ಟಿ ಮತ್ತು ಶ್ರೀಮತಿ ವೆಂಕಟಲಕ್ಷ್ಮಿಯವರು. ಇವರು ಬಿ.ಎ. ಪದವೀಧರರು. ಹಿಂದಿಯಲ್ಲಿ ವಿಶಾರದ ಪರೀಕ್ಷೆ ಮಾಡಿರುವರು. ವಾಣಿಜ್ಯ ತೆರಿಗೆ ತನಿಖಾಧಿಕಾರಿಗಳಾಗಿರುತ್ತಾರೆ. ಇವರಿಗೆ ಒಂದು ವರ್ಷ ಸಂಗೀತ ಪಾಠವಾಗಿದೆ. ಇವರಿಗೆ ಕನ್ನಡ ಸಾಹಿತ್ಯದಲ್ಲಿ ಅಭಿರುಚಿಯಿದೆ. ಹೈಸ್ಕೂಲಿನಲ್ಲಿ ಓದುತ್ತಿದ್ದಾಗ ಮತ್ತು ಮುಂದೆ ಹಿಂದೀ ಅಧ್ಯಾಪಕರಾಗಿದ್ದಾಗ ಅಲ್ಲಿ ಕನ್ನಡ ಪಂಡಿತರೂ ಗಮಕಿಗಳೂ ಆಗಿದ್ದ ಶ್ರೀ ಹೆಚ್. ಎಸ್. ಕೃಷ್ಣಮೂರ್ತಿಯವರು ಇವರಿಗೆ ಕಾವ್ಯಭಾಗಗಳನ್ನು ಪರಿಚಯ ಮಾಡಿಸಿದುದಲ್ಲದೆ ಗಮಕ ಕಲೆಯ ಸ್ವಾರಸ್ಯವನ್ನು ಆಸ್ವಾದಿಸಲು ಅಗತ್ಯವಾದ ಸಿದ್ಧತೆಗಳನ್ನು ಮಾಡಿಕೊಟ್ಟರು. ಮುಂದೆ ಇವರು ಗಮಕಿ ಶ್ರೀ ಎಂ. ರಾಘವೇಂದ್ರರಾಯರಲ್ಲಿ ಗಮಕ ಕಲೆಯನ್ನು ಅಭ್ಯಾಸ ಮಾಡಿದರು. ಗದುಗಿನ ಭಾರತ ಮತ್ತು ಲಕ್ಷ್ಮೀಶ ಭಾರತಗಳನ್ನು ವಾಚನ ಮಾಡುವುದು ಇವರಿಗೆ ಬಲು ಇಷ್ಟ. ಗ್ರಾಮಾಂತರ ಪ್ರದೇಶಗಳಲ್ಲಿ ಇವರು ವಾಚನಗಳನ್ನು ನಡೆಸಿರು

ತ್ತಾರೆ. ೧೯೫೯-೬೦ ಮತ್ತು ೬೦-೬೧ರಲ್ಲಿ ಗಮಕ ಪ್ರವೇಶ ಮತ್ತು ಪ್ರೌ
ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿರುವರು. ವಿದ್ಯಾನಗರ, ಹಿರೇಮಗಳೂರು, ಹಾಸ
ಗಳಲ್ಲಿಯೂ ಮತ್ತು ಗೊರೂರಿನಲ್ಲಿ ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ
ಅವರ ಸಮಕ್ಷಮದಲ್ಲಿಯೂ ಕಾವ್ಯವಾಚನ ಕಾರ್ಯಕ್ರಮಗಳನ್ನು ನಡೆಸಿರುವರು.

೧೭೭. ಪಿ. ಸತ್ಯವತಿ, ಬೆಂಗಳೂರು

ಇವರು ೧೯೩೫ರಲ್ಲಿ ಮೈಸೂರಿನಲ್ಲಿ ಜನಿಸಿದರು. ಇವರ ತಾಯಿ ಶ್ರೀಮ
ಪದ್ಮಾವತಮ್ಮ ಮತ್ತು ತಂದೆ ದಿವಂಗತ ಶ್ರೀ ಜೆ. ಪುಟ್ಟೂರಾಯರು. ಎಸ್.ಎಸ್
ಎಲ್.ಸಿ. ಪರೀಕ್ಷೆ ಆಗಿರುತ್ತೆ. ಸಂಗೀತದಲ್ಲಿ ವಿದ್ವತ್ ಪಾಸಾಗಿರುತ್ತೆ. ಗುರುಗಳ
ಆಸ್ಥಾನ ವಿದ್ವಾನ್ ಹೆಚ್. ವಿ. ರಾಮರಾಯರು, ವಿದ್ವಾನ್ ಮರಿಯಪ್ಪನವರು
ವಿದ್ವಾನ್ ವಿ. ರಾಮರತ್ನಂರವರು. ಇವರಿಗೆ ಕನ್ನಡ ಸಾಹಿತ್ಯದಲ್ಲಿ ಹೆಚ್ಚು ಅಭಿರು
ಯಿದೆ. ಇವರ ಗಮಕ ಗುರುಗಳು ಭಾರತದ ಶ್ರೀ ಕೃಷ್ಣಗಿರಿ ಕೃಷ್ಣರಾಯರು. ಅ
ರಲ್ಲಿ ಸುಮಾರು ೧೫ ವರ್ಷಗಳ ಕಾಲ ಸಾಧನೆ ಮಾಡಿರುತ್ತಾರೆ. ಇವರೊಡ
ಅಭ್ಯಾಸ ಮಾಡುತ್ತಿದ್ದ ಇತರ ಶಿಷ್ಯರಲ್ಲಿ ಶ್ರೀ ನಂ. ಅಶ್ವತ್ಥನಾರಾಯಣ, ಶ್ರೀ
ಬಿ. ಎಸ್. ಎಸ್. ಕೌಶಿಕ್ ಮತ್ತು ಶ್ರೀಮತಿ ಆರ್. ಚಂದ್ರರವರೂ ಇದ್ದರ
ಗುರುಗಳೊಡನೆ ಮಂತ್ರಾಲಯ, ಉಡುಪಿ, ರಾಯಚೂರು ಮುಂತಾದ ಅನೇಕ ಸ್ಥ
ಗಳಿಗೆ ಹೋಗಿ ಜೈಮಿನಿ ಭಾರತ, ರಾಮಾಯಣ ಮತ್ತು ಮಹಾಭಾರತದ ಭಾ
ಗಳನ್ನು ವಾಚನ ಮಾಡಿರುತ್ತಾರೆ. ಶ್ರೀ ಬಿಂದೂರಾಯರೂ, ಶ್ರೀ ಮಾಯಿಗೌಡರ
ಇವರ ಕಾವ್ಯ ವಾಚನಕ್ಕೆ ಮೆಚ್ಚುಗೆಯನ್ನಿತ್ತಿದ್ದಾರೆ. 'ಆಕಾಶವಾಣಿ'ಯಲ್ಲಿಯ
ವಾಚನ ಮಾಡುತ್ತಿದ್ದಾರೆ.

೧೭೮. ಆರ್. ಮಾದೇಶಯ್ಯ

ಇವರು ೧೯೩೫ರಲ್ಲಿ ಕೊಳ್ಳೇಗಾಲದಲ್ಲಿ ದೇವಾಂಗದ ಯಜಮಾನ್ ಮ
ತನದಲ್ಲಿ ಜನಿಸಿದರು. ಇವರ ತಂದೆ ರಾಮಯ್ಯನವರು. ತಾಯಿ ಜಯಲಕ್ಷ್
ಅವರು ಸಂಗೀತವನ್ನು ಅಭ್ಯಾಸಮಾಡಿ ವಾಚನ ವ್ಯಾಖ್ಯಾನಗಳನ್ನು ನಡೆಸು
ದ್ದರು. ಕೊಳ್ಳೇಗಾಲದ ಶ್ರೀಮಂತರಾದ ಚನ್ನಮಲ್ಲಯ್ಯನವರ ವಾಡನ ಮತ
ಮಾದೇಶಯ್ಯನವರ ಪ್ರವಚನಗಳು ೧೯೦೦ ರಿಂದ ೧೯೩೦ರ ವರೆಗೆ ಬಹಳ ಬ

ಪ್ರಿಯವಾಗಿದ್ದುವು. ಆ ವಾತಾವರಣದಿಂದ ಪ್ರಭಾವಿತರಾದ ಇವರು ಕಾಶೀವಿಶ್ವನಾಥಯ್ಯನವರಲ್ಲಿ ಸಂಗೀತವನ್ನು ಕಲಿತರು. ಇವರು ಬಿ.ಎ. ಪದವೀಧರರು. ಸಂಗೀತ ಮತ್ತು ಪಿಟೀಲು ವಾದನವನ್ನು ಭುವನೇಶ್ವರಯ್ಯ ಮತ್ತು ವಿದ್ವಾನ್ ರಾಜಣ್ಣನವರಲ್ಲಿಯೂ ಕಲಿತರು. ಇವರು ಸ್ವಗ್ರಾಮದಲ್ಲಿಯೇ ಶಾಲಾ ಉಪಾಧ್ಯಾಯರಾಗಿರುವರು. ಸಂಗೀತ ಮತ್ತು ಪಿಟೀಲು ವಾದನದಲ್ಲಿ ಸೀನಿಯರ್ ಪರೀಕ್ಷೆಯಲ್ಲಿ ಉತ್ತಮ ಶ್ರೇಣಿಯಲ್ಲಿ ತೇರ್ಗಡೆಯಾಗಿರುವರು. ಕಾವ್ಯವಾಚನ ಮತ್ತು ಹರಿಕಥೆಗಳನ್ನು ನಡೆಸಿಕೊಂಡು ಬರುತ್ತಿರುವರು. ಇವರಿಗೆ ಸಂಗೀತ ಸಾಹಿತ್ಯಗಳನ್ನು ಅಭ್ಯಾಸ ಮಾಡಲು ಬರುವ ಕೆಲವರು ಶಿಷ್ಯರಿರುವರು.

೧೭೯. ಆರ್. ಅನಂತಮೂರ್ತಿ, ಭದ್ರಾವತಿ

ಇವರು ೧೯೩೫ ರಲ್ಲಿ ಜನಿಸಿದರು. ಇವರ ತಂದೆ ದಿವಂಗತ ರಂಗಸ್ವಾಮಯ್ಯನವರು. ಗದುಗಿನ ಭಾರತ, ಜೈಮಿನಿ ಭಾರತ, ಹರಿಶ್ಚಂದ್ರಕಾವ್ಯ, ತೊರವೆಯ ರಾಮಾಯಣ ಕಾವ್ಯಗಳ ವಾಚನಗಳಿಗೆ ವ್ಯಾಖ್ಯಾನ ಮಾಡುತ್ತಿದ್ದರು. ಇವರ ಅಜ್ಜ ನಂಜುಂಡಯ್ಯನವರು ವಾಚನ ವ್ಯಾಖ್ಯಾನಗಳೆರಡನ್ನೂ ಮಾಡುತ್ತಿದ್ದರು. ತಂದೆ ತಾಯಿಗಳಿಬ್ಬರ ಮನೆಯಲ್ಲೂ ಗಮಕ ಕಲೆಯು ಆನುವಂಶೀಯವಾಗಿದ್ದುದರಿಂದ ಇವರೂ ಸಹ ಬಾಲ್ಯದಿಂದಲೇ ಇದರಲ್ಲಿ ಆಸಕ್ತಿಯನ್ನು ಪಡೆದರು. ಗಮಕ ಕಲಾನಿಪುಣರಾದ ಶ್ರೀ ಎನ್. ಅಶ್ವತ್ಥನಾರಾಯಣ ಅವರು ಇವರ ಮಾವಂದಿರು. ಅವರೇ ಇವರ ಗಮಕದ ಗುರುವೂ ಹೌದು. ಇವರ ಮನೆಯಲ್ಲೇ ಗಮಕ ವಿದ್ವಾಂಸರಾದ ಕೃಷ್ಣಗಿರಿ ಕೃಷ್ಣರಾಯರು, ರಾಘವೇಂದ್ರರಾಯರು, ಶ್ರೀಮತಿ ಶಕುಂತಲಾ ಬಾಯಿ ಪಾಂಡುರಂಗರಾಯರು, ಶ್ರೀ ಚಂದ್ರಶೇಖರಯ್ಯನವರೇ ಮುಂತಾದವರ ಕಾವ್ಯವಾಚನಗಳು ನಡೆದುವು. ಇದನ್ನು ಕೇಳಿ ತಮ್ಮ ಗಮಕ ಶ್ರವಣ ವಾಚನ ಸಂಸ್ಕಾರವನ್ನು ಹಸನುಗೊಳಿಸಿಕೊಂಡರು. ೧೯೫೪ ರಲ್ಲಿ ಗಮಕ ಪರೀಕ್ಷೆಯಲ್ಲಿ ದ್ವಿತೀಯ ರ್‍ಯಾಂಕ್ ಗಳಿಸಿದರು. ಇವರಿಗೆ ಸುಮಾರು ೨೫–೩೦ ರಾಗಗಳ ಪರಿಚಯವಿದೆ. ಉಪನ್ಯಾಸ, ಭಾಷಣ, ವಾಚನ, ಚರ್ಚೆ ನಾಟಕ ಕಲೆಗಳಲ್ಲೂ ಪರಿಚಯವಿದೆ. ಶಿವಮೊಗ್ಗಾ ಜಿಲ್ಲೆಯ ಭದ್ರಾವತಿ ತೀರ್ಥಹಳ್ಳಿಗಳಲ್ಲಿ ಕಾವ್ಯವಾಚನಮಾಡಿರುತ್ತಾರೆ. ಪರಿಷತ್ತು ನಡೆಸುವ "ಕನ್ನಡ ರತ್ನ"ದಲ್ಲಿ ತೇರ್ಗಡೆಯಾಗಿದ್ದಾರೆ. ಭದ್ರಾವತಿಯ ಮಿತ್ರ ಕಲಾ ಮಂಡಳಿಯ ಆಶ್ರಯದಲ್ಲಿ ನಡೆದ ಅನೇಕ ಗಮಕ ರೂಪಕಗಳಲ್ಲಿ ಭಾಗವಹಿಸಿ, ಮಹಾಜನರ ಪ್ರಶಂಸೆಗೆ ಪಾತ್ರರಾಗಿರುವುದಲ್ಲದೆ ಅವರ

ಕಲಾಭಿರುಚಿಯನ್ನೂ ಹೆಚ್ಚಿಸಿರುತ್ತಾರೆ. ಇವರ ಶ್ರೀಮತಿಯವರು ಮತ್ತು ಮೂ
ಮಂದಿ ಗಂಡುಮಕ್ಕಳೂ ಗಮಕ ಕಲೆಯನ್ನು ಅಭ್ಯಾಸಿಸಿರುತ್ತಾರೆ. ಶ್ರೀ ಅನಂ
ಮೂರ್ತಿಗಳು ಷಟ್ಪದೀ ಕಾವ್ಯಗಳಂತೆಯೇ ಮುಂಕುತಿಮ್ಮನ ಕಗ್ಗ, ರಾಮಾಯ
ದರ್ಶನ, ಭರತೇಶ ವೈಭವ, ಮೋಹನತರಂಗಿಣೀ ಇತ್ಯಾದಿ ಕಾವ್ಯಗಳನ್ನು ವಾಚ
ಮಾಡುವ ರೀತಿಯನ್ನೂ ರೂಢಿಸಿಕೊಂಡಿರುತ್ತಾರೆ.

೧೮೦. ಕೂರಾಡಿ ಸದಾಶಿವ, ಕಲ್ಕೂರ

ಇವರು ದ.ಕ. ಜಿಲ್ಲೆಯ ಉಡುಪಿ ತಾಲ್ಲೂಕಿನ ಹನೆಹಳ್ಳಿ ಗ್ರಾಮದ ಕೂರಾ
ಯಲ್ಲಿ ೨೪-೧೦-೩೫ ರಂದು ಜನಿಸಿದರು. ಇವರ ತಂದೆ ಶ್ರೀ ಕೂರಾಡಿ ನಾರಾಯ
ಕಲ್ಕೂರ. ಇವರು ವಿಸ್ತಾರವಾಗಿ ಸಾಹಿತ್ಯಾಭ್ಯಾಸವನ್ನು ಮಾಡಿರುವರು. ಭಾರ
ರಾಮಾಯಣಗಳ ವ್ಯಾಖ್ಯಾನವನ್ನೂ, ಯಕ್ಷಗಾನಗಳ ಅರ್ಥವಿವರಣೆಯನ್ನೂ
ಮಾಡಬಲ್ಲರು. ಯಕ್ಷಗಾನ ನಾಟಕಗಳಲ್ಲಿ ಉತ್ತಮ ಅಭಿನಯಕಾರರೂ ಆಗಿ
ವರು. ೧೯೭೬ ನೇ ಮಾರ್ಚಿ ತಿಂಗಳಲ್ಲಿ ನಡೆಸಲಾದ ಗಮಕ ಪ್ರೌಢ ಪರೀಕ್ಷೆಯ
ಉತ್ತೀರ್ಣರಾಗಿರುವರು. ಸಂಗೀತ ಪರಿಶ್ರಮವಿರುವ ಇವರು ರಮ್ಯ ಮತ್ತು ನವ
ಕವನಗಳನ್ನೂ ವಾಚನಮಾಡುವರು. ಇವರ ಅನೇಕ ಲೇಖನಗಳು ಕನ್ನಡ ಪತ್ರಿ
ಗಳಲ್ಲಿಯೂ ಸಂಭಾವನಾ ಗ್ರಂಥಗಳಲ್ಲಿಯೂ ಪ್ರಕಟವಾಗಿವೆ. ಕೆ.ಯು.ಟಿ.ಟಿ
ವಿದ್ಯಾಲಯದಲ್ಲಿ ಗಮಕ ತರಗತಿಗಳನ್ನು ನಡೆಸುತ್ತಿರುವರು.

೧೮೧. ಎ. ಎನ್. ಶಾಂತ, ಮೈಸೂರು

ಇವರು ೧೯೩೬ ರಲ್ಲಿ ಹೊಳೇನರಸೀಪುರದ ಸಮೀಪವಿರುವ ಆನೆ ಕನ್ನಂಬಾ
ಯಲ್ಲಿ ಜನಿಸಿದರು. ಇವರು ಸಂಗೀತ ಮತ್ತು ಕನ್ನಡವನ್ನು ಅಭ್ಯಾಸಮಾಡಿ ಬಿ.ಎ
ಪದವೀಧರರಾಗಿರುವರು. ಇವರು ಗಮಕಿ ಶ್ರೀ ಬಿ.ಎಸ್.ಎಸ್. ಕೌಶಿಕ್‌ರವರ
ಸುಮಾರು ೩೦ ವರ್ಷಗಳ ಹಿಂದೆ ಗಮಕವನ್ನು ಕಲಿತು ಗಮಕ ಪರೀಕ್ಷೆಯ
ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿರುವರು. ಕಾವ್ಯವಾಚನ ಸ್ಪರ್ಧೆಗಳಲ್ಲಿ ಅನೇ
ಬಹುಮಾನಗಳನ್ನು ಗಳಿಸಿರುವರು. ಸಂಗೀತ ಸಾಹಿತ್ಯಗಳಲ್ಲಿ ವಿಶೇಷ ಆಸಕ್ತಿ
ಯನ್ನು ಹೊಂದಿರುವ ಇವರು ೨೦ ವರ್ಷಗಳಿಂದಲೂ ಅವಕಾಶವಾದಾಗಲೆಲ್ಲಾ
ಗಮಕ ಕಲಾ ಸೇವೆಯನ್ನು ನಡೆಸುತ್ತಿರುವರು.

೧೮೨. ಇಂದಿರಾ ವೆಂಕಟೇಶ್

ಇವರು ೪-೭-೧೯೩೬ರಂದು ಹಾಸನದಲ್ಲಿ ಜನಿಸಿದರು. ಇವರ ತಂದೆ ಶ್ರೀ ಟಿ. ವಿ. ರಾಮರಾವ್-ತಾಯಿ ಸುಬ್ಬಮ್ಮನವರು. ಇವರನ್ನು ಪೋಷಣೆ ಮಾಡಿ ಬೆಳೆಸಿದವರು ಶ್ರೀಮತಿ ಅಂಬಿಕಾದೇವಿ ನರಸಿಂಹಸ್ವಾಮಿ ದಂಪತಿಗಳು. ಇವರು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರು. ಇವರಿಗೆ ವರ್ಣ ಕೃತಿ ಕೀರ್ತನೆಗಳನ್ನು ಹಾಡುವ ಮಟ್ಟಿಗೆ ಸಂಗೀತ ಜ್ಞಾನವು ಅನೇಕ ವರ್ಷಗಳಿಂದಲೂ ಇದೆ. ಇವರು ಕಾವ್ಯವಾಚನವನ್ನು ಮತ್ತು ವ್ಯಾಖ್ಯಾನವನ್ನು ಮಾಡುವರು. ದೇವರನಾಮಗಳನ್ನು ಹಾಡುವುದರಲ್ಲಿ ಬಹಳ ಆಸಕ್ತಿ. ಶ್ರೀಮತಿ ಗಂಗಮ್ಮ ಕೇಶವ ಮೂರ್ತಿಯವರಲ್ಲಿ ಕಾವ್ಯವಾಚನವನ್ನು ಅಭ್ಯಾಸ ಮಾಡಿರುವರು. ಗಮಕಿ ಶ್ರೀ ಬಿ. ಎಸ್. ಎಸ್. ಕೌಶಿಕ್‌ರವರು ಗಮಕ ಕಲೆಯಲ್ಲಿ ಮಾರ್ಗದರ್ಶನ ನೀಡಿದ್ದಾರೆ. ಈಕೆಯು ಸ್ವಂತ ವ್ಯಾಸಂಗದಿಂದಲೇ ೧೯೬೯-೭೦ರಲ್ಲಿ ನಡೆಸಲಾದ ಗಮಕ ಪ್ರವೇಶ ಮತ್ತು ಪ್ರೌಢ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವರು. ಗಮಕ ಶಿಕ್ಷಣ ಶಿಬಿರ ದಲ್ಲಿಯೂ ಸಹ ಪಾಲ್ಗೊಂಡು ಪ್ರಶಸ್ತಿಯನ್ನು ಗಳಿಸಿರುವರು. ಏಳು ವರುಷಗಳಿಂದಲೂ ಅಧ್ಯಾಪಕಿಯಾಗಿ ಗಮಕ ತರಗತಿಗಳನ್ನು ನಡೆಸುತ್ತಲಿದ್ದಾರೆ. ಅನೇಕ ಕಡೆ ಉತ್ಸವ ಸಮಾರಂಭಗಳಲ್ಲಿ ಕಾವ್ಯವಾಚನವನ್ನು ಮಾಡಿರುವುದೇ ಅಲ್ಲದೆ ಗಮಕ ರೂಪಕಗಳಲ್ಲಿಯೂ ಪಾತ್ರವನ್ನು ನಿರ್ವಹಿಸಿರುವರು. ಆಕಾಶವಾಣಿಯಲ್ಲಿ ೯ ವರ್ಷಗಳಿಂದಲೂ ಕಾವ್ಯವಾಚನ ಕಾರ್ಯಕ್ರಮವನ್ನು ಕೊಟ್ಟಿರುವರು. ಅನೇಕ ಗುರುಪೀಠಗಳಲ್ಲಿ ಕಾವ್ಯವಾಚನಮಾಡಿ ಅವರಿಂದ ಆಶೀರ್ವಾದ ಅನುಗ್ರಹವನ್ನು ಗಳಿಸಿರುವರು. ಬೆಂಗಳೂರಿನ ನರಸಿಂಹರಾಜ ಕಾಲೋನಿಯಲ್ಲಿ ಗುರುಕೃಪಾ ಗಮಕ ಮಂಡಲಿಯನ್ನು ೧೯೬೯ರಲ್ಲಿ ಸ್ಥಾಪಿಸಿ ಅಂದಿನಿಂದಲೂ ನಿರಂತರವಾಗಿ ಕಾವ್ಯ ವಾಚನ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿರುವರು. ಇವರಿಗೆ 'ಭಾರತ ವಾಚನ ಪಟು' ಮತು 'ಗಮಕ ಕಲಾ ಪ್ರವೀಣೆ' ಎಂಬ ಪ್ರಶಸ್ತಿಯನ್ನಿತ್ತು, ವಿದ್ವಾಂಸರು ಗೌರವಿಸಿರುವರು.

೧೮೩. ಲಲಿತಾ ನಂಜುಂಡಯ್ಯ, ಬೆಂಗಳೂರು

ಇವರು ಅರಸೀಕೆರೆ ತಾಲ್ಲೂಕು ಬಾಣಾವರದಲ್ಲಿ ೯-೭-೧೯೩೬ರಲ್ಲಿ ಜನಿಸಿದರು. ಸರಾಫ್ ಕಟ್ಟೆ ಬಿ. ರಾಮಯ್ಯನರು ಮತ್ತು ಶ್ರೀಮತಿ ಗೌರಮ್ಮನವರು ಇವರ

ತಂದೆ ತಾಯಿಗಳು. ವ್ಯಾಸಂಗ ಎಸ್. ಎಸ್. ಎಲ್. ಸಿ. ವರೆಗೆ ಆಗಿರುತ್ತ
ಸಂಗೀತದಲ್ಲಿ ಎಂಟು ವರ್ಷಗಳ ಅನುಭವವಿರುತ್ತೆ. ಮನೆಯಲ್ಲೇ ತಂದೆ ಮತ್ತು
ಅಣ್ಣನವರು ಮಾಡುತ್ತಿದ್ದ ವಾಚನ ಕೇಳಿ ಗಮಕ ಕಲೆಯಲ್ಲಿ ಆಸಕ್ತಿಯುಂಟ
ಯಿತು. ಶ್ರೀ ಹು. ಮಾ. ರಾಮಾರಾಧ್ಯರು ಇವರ ಗಮಕ ಅಭ್ಯಾಸದ ಗುರುಗಳು
ಅವರಿಂದ ಕಲಿತು ಹತ್ತು ವರ್ಷಗಳಿಂದ ಅಭ್ಯಾಸ ಮಾಡಿರುವರು. ಗದುಗಿನ ಭಾರ
ಜೈಮಿನಿ ಭಾರತ, ತೊರವೆ ರಾಮಾಯಣ ಹರಿಶ್ಚಂದ್ರ ಕಾವ್ಯಗಳು ಇವರಿ
ವಾಚನ ಮಾಡಲು ಇಷ್ಟವಾದ ಕಾವ್ಯಗಳು. ಬೇಕಾದಷ್ಟು ಗ್ರಾಮಗಳಲ್ಲಿ ವಾಚ
ಮಾಡಿದ್ದಾರೆ. ೧೯೬೭-೬೮ರಲ್ಲಿ ಗಮಕ ಪ್ರವೇಶವನ್ನೂ ೧೯೬೮-೬೯ರಲ್ಲಿ ಗಮ
ಪ್ರೌಢವನ್ನೂ ಅಭ್ಯಾಸ ಮಾಡಿ ಉತ್ತೀರ್ಣರಾಗಿರುತ್ತಾರೆ. ಗಮಕ ತರಗತಿಗಳಲ್ಲಿ
ನಾಲ್ಕು ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವರು. 'ಯುವವಾಣಿ' ಕಾರ್ಯಕ್ರಮ
ಗಳಲ್ಲಿ ಭಾಗವಹಿಸುತ್ತಿರುವರು. ಶೃಂಗೇರಿ ಜಗದ್ಗುರುಗಳವರ ಸನ್ನಿಧಾನದಲ್ಲಿ
೧೯೭೨ರಲ್ಲಿ ವಾಚನ ಮಾಡಿ ಅವರ ಆಶೀರ್ವಾದವನ್ನು ಪಡೆದಿದ್ದಾರೆ. ಗಣಪ
ಉತ್ಸವ, ರಾಮೋತ್ಸವ, ಶಂಕರಜಯಂತ್ಯುತ್ಸವಗಳಲ್ಲಿ ಕಾರ್ಯಕ್ರಮ ನಡೆಸಿ
ವರು. ಮೈಸೂರು, ಬೆಂಗಳೂರು, ಕೋಲಾರ ಶಿವಮೊಗ್ಗಾ ಜಿಲ್ಲೆಗಳ ಅನೇ
ಸ್ಥಳಗಳಲ್ಲಿ ಇವರು ಕಾವ್ಯವಾಚನ ಮಾಡಿರುತ್ತಾರೆ.

೧೮೪. ಹೆಚ್. ಎನ್. ಜಯಸೀತ, ಮೈಸೂರು

ಇವರು ೧೯೩೬ರಲ್ಲಿ ಜನಿಸಿದರು. ಎಸ್.ಎಸ್.ಎಲ್.ಸಿ. ವರೆಗೆ ವ್ಯಾಸಂ
ನಡೆಸಿರುತ್ತಾರೆ. ಸಂಗೀತ ಸೀನಿಯರ್‌ನಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾ
ರುತ್ತೆ. ವಿದ್ವತ್ ಪರೀಕ್ಷೆಗೆ ಅಭ್ಯಾಸ ಮಾಡುತ್ತಿರುತ್ತಾರೆ ಗಮಕ ಕಲೆಯನ
ಗಮಕಿ ಶ್ರೀ ಬಿ.ಎಸ್.ಎಸ್. ಕೌಶಿಕ್‌ರವರಲ್ಲಿ ಅಭ್ಯಾಸಮಾಡಿ ತೇರ್ಗಡೆ ಹೊಂ
ರುತ್ತಾರೆ. ಕೆಲವು ಶಿಷ್ಯರಿಗೆ ಸಂಗೀತ ಮತ್ತು ಗಮಕ ಅಭ್ಯಾಸ ಮಾಡಿಸುತ್ತಿ
ತ್ತಾರೆ. ಹತ್ತು ವರ್ಷಗಳಿಂದ ಎಲ್ಲ ಕಡೆಗಳಲ್ಲೂ ವಾಚನ ಮಾಡುತ್ತಿರುತ್ತಾ
ಬೆಂಗಳೂರು ಆಕಾಶವಾಣಿಯಲ್ಲೂ ಇವರ ವಾಚನ ನಡೆದಿದೆ. ಅನೇಕ ಊರುಗಳ
ಗಣಪತಿ ಉತ್ಸವ ರಾಮೋತ್ಸವಗಳಲ್ಲಿ ಇವರ ಕಾವ್ಯವಾಚನ ಕಾರ್ಯಕ್ರಮ ನಡೆ
ರುತ್ತೆ. ಸುಮಾರು ಎಲ್ಲಾ ಕಾವ್ಯಗಳಲ್ಲೂ ಇವರಿಗೆ ಪರಿಶ್ರಮವಿದೆ. ಈಗ ಪ್ರ
ನಿತ್ಯವೂ ಶ್ರೀರಾಮಪೇಟೆ ರಾಮಾಭ್ಯುದಯ ಸಭಾದಲ್ಲಿ ೮ ವರ್ಷಗಳಿಂದ ವಾಚ
ಮಾಡುತ್ತಿದ್ದಾರೆ.

೧೮೭. ಕೆ. ಸುಂದರರಾಜು, ಚಾಮರಾಜನಗರ

ಇವರು ಮೈಸೂರು ಜಿಲ್ಲೆ, ಚಾಮರಾಜನಗರದ ತಾಲ್ಲೂಕು ರಾಮಸಮುದ್ರದಲ್ಲಿ ೪-೮-೧೯೩೬ರಲ್ಲಿ ಜನಿಸಿದರು. ತಂದೆ ಶ್ರೀ ಡಿ. ಕೃಷ್ಣಮೂರ್ತಿಯವರು. ಇವರು ಬಿ:ಎಸ್‌ಸಿ., ಬಿ.ಇಡಿ. ಪಧವೀಧರರು. ಇವರು ಶ್ರೀ ಹೆಚ್. ಕೆ. ರಾಮಸ್ವಾಮಿಯವರಲ್ಲಿ ಗಮಕ ಕಲೆಯನ್ನು ಕಲಿತು, ಗಮಕ ಪರೀಕ್ಷೆಯಲ್ಲಿಯೂ ತೇರ್ಗಡೆ ಹೊಂದಿರುವರು. ಸಂಗೀತ ಜ್ಞಾನ ಸಾಮಾನ್ಯವಾಗಿದ್ದರೂ ಕಾವ್ಯವಾಚನದಲ್ಲಿ ವಿಶೇಷ ಆಸಕ್ತಿಯನ್ನು ಹೊಂದಿರುವರು.

೧೮೮. ಮಣಿ ಸೋಮಶೇಖರ್, ಬೆಂಗಳೂರು

ಇವರು ೧೩-೮-೧೯೩೬ರಲ್ಲಿ ಜನಿಸಿದರು. ಇವರ ತಂದೆ ತಾಯಿಗಳು ಶ್ರೀ ಎಂ. ವಿ. ರಾಮಾಶಾಸ್ತ್ರಿಗಳು ಮತ್ತು ಶ್ರೀಮತಿ ಭಾಗೀರಥಮ್ಮನವರು. ಇವರು ಎಸ್.ಎಸ್.ಎಲ್.ಸಿ. ಮಾಡಿಕೊಂಡು ಶಾಲಾಧ್ಯಾಪಕಿಯಾಗಿರುವರು. ಇವರ ತಾಯಿಯವರು ಸಂಗೀತವನ್ನು ಬಲ್ಲವರಾಗಿದ್ದು ಹಾಡುತ್ತಿದ್ದ ದೇವರನಾಮಗಳನ್ನೂ ಪೂಜೆಯ ಹಾಡುಗಳನ್ನೂ ಕೇಳಿ ಬಾಲ್ಯದಲ್ಲಿಯೇ ಸಂಗೀತವನ್ನು ಕಲಿಯುವ ಆಸೆಯುಂಟಾಯಿತು. ಇವರು ಚಿಂತಲಪಲ್ಲಿ ಕೃಷ್ಣಮೂರ್ತಿಯವರಲ್ಲಿ ಸಂಗೀತವನ್ನು ಅಭ್ಯಾಸಮಾಡಿ ಸಂಗೀತ ಸೀನಿಯರ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರು. ಉತ್ಸವ ಸಮಾರಂಭಗಳಲ್ಲಿ ಸಂಗೀತ ಕಛೇರಿಗಳನ್ನು ನಡೆಸಿ ಬಹುಮಾನಗಳನ್ನು ಪಡೆದಿರುವರು. ೧೯೬೭ ರಲ್ಲಿ ಕಾವ್ಯಪ್ರಚಾರ ಮಂಡಲಿಯಲ್ಲಿ ನಡೆಸುತ್ತಿದ್ದ ಗಮಕ ತರಗತಿಗಳಲ್ಲಿ ಅಭ್ಯಾಸಮಾಡಿ ಪ್ರವೇಶ ಮತ್ತು ಪ್ರೌಢ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವರು. ೧೯೭೫ರಲ್ಲಿ ಪರಿಷತ್ತಿನಲ್ಲಿ ನಡೆದ ಗಮಕ ಶಿಕ್ಷಕರ ಶಿಬಿರ ತರಬೇತಿ ಕೇಂದ್ರದಲ್ಲಿ ಹೆಚ್ಚಿನ ಪರಿಣತಿಯನ್ನು ಪಡೆದಿರುವರು. ಇವರಿಗೆ ಗಮಕ ಕಲೆಯನ್ನು ಕಲಿಸಿದವರು ಶ್ರೀ ಆರ್. ಶಂಕರನಾರಾಯಣರಾಯರು, ಜಿ.ಎ. ಅನಂತಪದ್ಮನಾಭರಾಯರು ಮತ್ತು ಶ್ರೀ ಎಂ. ರಾಘವೇಂದ್ರರಾಯರು. ಇವರು ಮಂಡಳಿಯ ಕಾರ್ಯಕ್ರಮಗಳಲ್ಲಿಯೂ, ಇತರ ಸಂಘ ಸಂಸ್ಥೆಗಳಲ್ಲಿಯೂ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿಯೂ ಕಾವ್ಯವಾಚನಗಳನ್ನು ಮಾಡಿ ದೇವರನಾಮುಗಳನ್ನೂ ಭಾವಗೀತೆಗಳನ್ನೂ ಹಾಡುತ್ತಿರುವರು. ಸರ್ಕಾರದ ಸಾಹಿತ್ಯ ಸಂಸ್ಕೃತಿ ಇಲಾಖೆಯ

ಆಶ್ರಯದಲ್ಲಿ ಧಾರವಾಡ ಜಿಲ್ಲೆಯ ನವಿಲುಗುಂದ ಮತ್ತು ಚನ್ನರಾಯಪಟ್ಟಣದಲ್ಲಿ ವಾಚನವನ್ನು ನಡೆಸಿರುವರು. ಇವರ ಕಾವ್ಯವಾಚನ ಕಾರ್ಯಕ್ರಮಗಳು ಆಕಾಶ ವಾಣಿಯ ಬೆಂಗಳೂರು ಕೇಂದ್ರದಿಂದಲೂ ಪ್ರಸಾರವಾಗಿವೆ.

೧೮೯. ಎಂ. ಪುಟ್ಟಬಸಪ್ಪನವರು, ತುಮಕೂರು

ಇವರು ೧೯೩೭ರಲ್ಲಿ ಜನಿಸಿದರು. ಪ್ರಾಥಮಿಕ ಶಾಲಾ ಉಪಾಧ್ಯಾಯ ರಾಗಿರುವರು. ತಂಪೆಯವರು ಮುನಿವೆಂಕಟಪ್ಪನವರು ಮತ್ತು ತಾಯಿ ಶ್ರೀಮತಿ ಪಾಪಮ್ಮನವರು. ತಂದೆಯವರು ನಡೆಸುತ್ತಿದ್ದ ಸುಗೀತ ಪಾಠಗಳನ್ನು ಕೇಳಿ ಇವ ರಿಗೂ ಬಾಲ್ಯದಲ್ಲಿಯೇ ಸಂಗೀತದ ಪರಿಚಯವಾಯಿತು. ಮುಂದೆ ಸಂಗೀತ ವಿದ್ವಾನ್ ಟಿ.ಆರ್. ರಾಮಸ್ವಾಮಯ್ಯನವರಲ್ಲಿ ಸಂಗೀತಾಭ್ಯಾಸವನ್ನು ಮುಂದು ವರಿಸಿ ವಿದ್ವತ್ ಪರೀಕ್ಷೆಯನ್ನು ಮುಗಿಸಿರುವರು. ಇವರಿಗೆ ಭರತ ನಾಟ್ಯದಲ್ಲಿಯೂ, ನಾಟಕಾಭಿನಯದಲ್ಲಿಯೂ ಪರಿಶ್ರಮವಿದೆ. ಗುಡಿಬಂಡೆ ಶ್ರೀ ರಾಮಾಚಾರ್ ಅವರ ಕಾವ್ಯವಾಚನ ಮತ್ತು ಭಾವಗೀತೆಗಳನ್ನು ಕೇಳಿ ಪ್ರಭಾವಿತರಾದ ಇವರು ತುಮ ಕೂರಿನ ಎಂಪ್ರೆಸ್ ಬಾಲಿಕಾ ಪ್ರೌಢಶಾಲೆಯಲ್ಲಿ ಗಮಕಿ ಶ್ರೀ ಸಿದ್ದಲಿಂಗದೇವರು ಮತ್ತು ಶ್ರೀಮತಿ ಎಚ್.ಆರ್. ಸುನಂದಮ್ಮನವರು ನಡೆಸುತ್ತಿದ್ದ ಗಮಕ ತರಗತಿಗೆ ಸೇರಿ ಕ್ರಮಶಿಕ್ಷಣವನ್ನು ಪಡೆದು ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರು. ಕಾವ್ಯವಾಚನ ಮತ್ತು ಗಮಕ ರೂಪಕಗಳಲ್ಲಿ ಭಾಗವಹಿಸುತ್ತಿರುವರು.

೧೯೦. ಜಿ. ಪರಮೇಶ್ವರರಾವ್, ತುಮಕೂರು

ಇವರು ೧೯೩೭ರಲ್ಲಿ ಮಾಗಡಿಯಲ್ಲಿ ಜನಿಸಿದರು. ಇವರ ತಂದೆ ಉತ್ತರ್ ಕರ್ ಗಂಗೋಜಿರಾವ್. ತಾಯಿ ಶ್ರೀಮತಿ ದೇವೂಬಾಯಿ. ಇವರು ಎಸ್. ಎಸ್. ಎಲ್. ಸಿ. ಮತ್ತು ಟಿ.ಸಿ.ಹೆಚ್. ಮಾಡಿಕೊಂಡು ಶಾಲಾ ಉಪಾಧ್ಯಾಯರಾಗಿರು ವರು. ಸುಗೀತದ ಕೇಳ್ಮೆಯಿಂದಲೂ ತಮಗಿರುವ ಉತ್ತಮ ಶಾರೀರದಿಂದಲೂ ದೇವರನಾಮಗಳನ್ನೂ ಭಾವಗೀತೆಗಳನ್ನೂ ಹಾಡುತ್ತಿದ್ದರು. ಮುಂದೆ ವಿದ್ವಾನ್ ಶ್ರೀ ಪುಟ್ಟಬಸಪ್ಪನರ ಬಳಿ ಸಂಗೀತಾಭ್ಯಾಸವನ್ನು ಮಾಡಿ, ಸಂಗೀತ ಜೂನಿಯರ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರು. ತುಮಕೂರಿನಲ್ಲಿ ಗಮಕಿ ಶ್ರೀ ಸಿದ್ಧಲಿಂಗ ದೇವರು ಮತ್ತು ಶ್ರೀಮತಿ ಹೆಚ್. ಆರ್. ಸುನಂದಾರವರು ನಡೆಸುತ್ತಿರುವ ಗಮಕ

ತರಗತಿಗಳಲ್ಲಿ ಕಲಿತು ಗಮಕ ಪ್ರವೇಶ ಪರೀಕ್ಷೆಯನ್ನು ಮಾಡಿಕೊಂಡು ಇರುವರು. ಇವರ ಗಮಕ ಮಿತ್ರರು ಸೇರಿ ನಡೆಸುತ್ತಿರುವ ಕನ್ನಡ ಸಾಹಿತ್ಯ ಹಾಗೂ ಗಮಕ ಕಲಾ ಸಂಘದಲ್ಲಿ ಕಾವ್ಯವಾಚನಗಳನ್ನೂ, ರೂಪಕಗಳನ್ನೂ ನಡೆಸಿ ಜನಗಳ ಮೆಚ್ಚಿಗೆಯನ್ನು ಪಡೆದಿರುವರು. ಇವರಿಗೆ ನಾಟಕಾಭಿನಯ, ಚಿತ್ರಕಲೆ, ಮತ್ತು ಭರತ ನಾಟ್ಯದಲ್ಲಿಯೂ ಪರಿಶ್ರಮ ಉಂಟು.

೧೯೧. ಕೆ. ಬಿ. ಹೈಮವತಿ

ಇವರು ೧೬–೫–೧೯೩೭ರಲ್ಲಿ ತುಮಕೂರು ಜಿಲ್ಲೆ, ತಿಪಟೂರು ತಾಲ್ಲೂಕು ವಾಸುದೇವರಹಳ್ಳಿಯಲ್ಲಿ ಜನಿಸಿದರು. ಇವರ ತಂದೆ ಪಿಟೀಲು ವಾದಕ ಮತ್ತು ಚಿತ್ರ ಕಾರರಾದ ಶ್ರೀ ಕೆ. ಹೆಚ್. ಭಾಸ್ಕರಾಚಾರ್ಯರು–ತಾಯಿ ಗೌರಮ್ಮನವರು. ವಿಶ್ವ ಕರ್ಮ ಸದ್ವಂಶದಲ್ಲಿ ಜನಿಸಿದ ಇವರ ಮನೆಯಲ್ಲಿ ಸಂಗೀತ, ಯಕ್ಷಗಾನ, ಮೃದಂಗ, ಪಿಟೀಲು ಮುಂತಾದ ವಾದ್ಯಗಳ ವಾದನಗಳ ವಾತಾವರಣವು ತುಂಬಿದ್ದಿತು. ಇವರು ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವರು. ಇವರು ಗಮಕ ಕಲೆಯನ್ನು ಗಮಕ ಕಲಾ ಪ್ರವೀಣರಾದ ಶ್ರೀಮಾನ್ ಬಾಳಗಂಚಿ ನಂಜುಂಡಯ್ಯನವರಲ್ಲಿ ಅಭ್ಯಾಸ ಮಾಡಿರುವರು. ವಾಣೀವಿಲಾಸ ಪ್ರೌಢಶಾಲೆ ಯಲ್ಲಿ ಸಂಗೀತ ಶಿಕ್ಷಕಿಯಾಗಿ ಉದ್ಯೋಗದಲ್ಲಿದ್ದು ತಮ್ಮ ವಿರಾಮದ ವೇಳೆಯನ್ನು ಗಮಕ ಕಲೆಗಾಗಿ ಮೀಸಲಿಟ್ಟಿರುವರು. ಶ್ರೀಮಾನ್ ಗಮಕಿ ಹು. ಮಾ. ರಾಮಾ ರಾಧ್ಯರಲ್ಲಿ ಗಮಕ ಕಲಾಭ್ಯಾಸವನ್ನು ಮಾಡಿ ೧೯೬೮ರಲ್ಲಿ ಗಮಕ ಪ್ರೌಢ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವರು. ಸುಧಾ ಸಾಹಿತ್ಯ ಸಂಘದ ಚಟುವಟಿಕೆ ಗಳಲ್ಲಿ ನೆರವಾಗಿ ಕಾವ್ಯವಾಚನಗಳನ್ನೂ ಗಮಕ ರೂಪಕಗಳಲ್ಲಿ ಪಾತ್ರ ನಿರ್ವಹಣೆ ಯನ್ನೂ ಮಾಡಿರುವರು. ಶಾಲೆಯ ಮಕ್ಕಳಿಗೆ ಪದ್ಯಗಳನ್ನು ಸುಶ್ರಾವ್ಯವಾಗಿ ಓದುವುದನ್ನು ಕಲಿಸಿ, ಸಣ್ಣ ಪುಟ್ಟ ರೂಪಕಗಳಲ್ಲಿ ಭಾಗವಹಿಸಿ, ಶಾಲೆಯ ಉತ್ಸ ವಾದಿಗಳಲ್ಲಿ ಕಾರ್ಯಕ್ರಮಗಳನ್ನು ನಡೆಸಿರುವರು.

೧೯೨. ವಸಂತಲಕ್ಷ್ಮೀ ಸೀತಾರಾಮಯ್ಯ

ಇವರು ೧೯೩೮ರಲ್ಲಿ ರುದ್ರಪಟ್ಟಣದಲ್ಲಿ ಜನಿಸಿದರು. ಇವರ ತಂದೆ ಮತ್ತು ಗಮಕವನ್ನು ಕಲಿಸಿದ ಗುರುಗಳು ಶ್ರೀ ಬಿ. ಎಸ್. ಎಸ್. ಕೌಶಿಕ್‌ರವರು.

ಸಾಮಾನ್ಯ ವಿದ್ಯಾಭ್ಯಾಸ ೧೦ ನೇ ತರಗತಿಯವರೆಗೆ. ಕಾವ್ಯಭಾವಕ್ಕೆ ತಕ್ಕಂತೆ ಮಿತವಾದ ರಾಗವನ್ನು ಬಳಸಿ ವಾಚನ ಮಾಡುವರು. ೧೯೭೦ ರಲ್ಲಿ ನಡೆದ ಗಮಕ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವರು. ಅನೇಕರು ಇವರಲ್ಲಿ ಗಮಕವನ್ನು ಅಭ್ಯಾಸ ಮಾಡಿ ಗಮಕ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿರುವರು. ಇವರ ವಾಚನ ಕಾರ್ಯಕ್ರಮಗಳು ವಿಶೇಷೋತ್ಸವಗಳ ಸಂದರ್ಭಗಳಲ್ಲಿಯೂ ಹಬ್ಬಹರಿದಿನಗಳಲ್ಲಿಯೂ ಅನೇಕ ಕಡೆ ನಡೆದು ಜನಗಳ ಮೆಚ್ಚಿಕೆಯನ್ನು ಪಡೆದಿವೆ. ಆಕಾಶವಾಣಿಯ ಮೂಲಕವಾಗಿಯೂ ಕಾವ್ಯವಾಚನ ಕಾರ್ಯಕ್ರಮಗಳು ನಡೆಯುತ್ತಿರುತ್ತವೆ. ಇವರ ಶಿಷ್ಯರೂ ಮಿತ್ರರೂ ಸೇರಿಕೊಂಡು ಅನೇಕ ಗೀತರೂಪಕಗಳನ್ನೂ ಅಭಿನಯಿಸಿರುವರು. ಅನೇಕ ಗಮಕ ಸ್ಪರ್ಧೆಗಳಲ್ಲಿಯೂ ಬಹುಮಾನಗಳನ್ನು ಗಳಿಸಿರುವರು.

೧೯೩. ಮಂಜುಳಾ ರಾಜು, ಬೆಂಗಳೂರು

ಇವರು ಕೋಲಾರ ಜಿಲ್ಲೆಯ ಚಿಂತಾಮಣಿಯಲ್ಲಿ ೧೯೩೮ ರಲ್ಲಿ ಜನಿಸಿದರು. ಇವರ ತಂದೆ ಶ್ರೀ ವಿ. ಕೃಷ್ಣಶಾಸ್ತ್ರಿಗಳು, ತಾಯಿ ಶ್ರೀಮತಿ ಸುಬ್ಬಮ್ಮನವರು. ಇವರ ಮನೆಯಲ್ಲಿ ಹಿರಿಯರೆಲ್ಲರೂ ಸಂಗೀತದಲ್ಲಿಯೂ ವಾದ್ಯಗಳ ವಾದನದಲ್ಲಿಯೂ ಪರಿಣತರು. ಇವರಿಗೂ ಸಂಗೀತಾಭ್ಯಾಸವು ಶ್ರೀ ಎಸ್. ಅಶ್ವತ್ಥನಾರಾಯಣರಾಯರಲ್ಲಿ ನಡೆದು ಪ್ರೌಢದಲ್ಲಿ ಉತ್ತೀರ್ಣರಾಗಿರುವರು. ಸಾಮಾನ್ಯ ವಿದ್ಯಾಭ್ಯಾಸ ಪ್ರೌಢಶಾಲೆಯಲ್ಲಿ ನಡೆದಿದೆ. ಇವರು ಗಮಕವನ್ನು ಮಲ್ಲೇಶ್ವರದ ಗಾಂಧೀ ಸಾಹಿತ್ಯ ಸಂಘದಲ್ಲಿ ಗಮಕಿ ಶ್ರೀ ಹು.ಮಾ. ರಾಮಾರಾಧ್ಯರಲ್ಲಿ ಕಲಿತು ಗಮಕ ಪ್ರವೇಶ ಮತ್ತು ಪ್ರೌಢ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವರು. ಇವರು ಕಾವ್ಯವಾಚನ ಮತ್ತು ಗಮಕ ರೂಪಕಾಭಿನಯಗಳಲ್ಲಿ ಭಾಗವಹಿಸುತ್ತಿರುವರು.

೧೯೪. ಎಂ. ಎ. ಶ್ರೀಲತ

ಇವರು ೧೯೩೮ ರಲ್ಲಿ ಜನಿಸಿದರು. ಈಗ ಬಿ.ಎಸ್‌ಸಿ. ಪದವೀಧರೆಯಾಗಿ ಇಂಡಿಯನ್ ಟೆಲಿಫೋನ್ ಇಂಡಸ್ಟ್ರೀಸ್‌ನ ಆಸ್ಪತ್ರೆಯಲ್ಲಿ ಲ್ಯಾಬೊರೇಟರಿ ಟೆಕ್ನೀಶಿಯನ್ ಆಗಿರುವರು. ದೂರವಾಣಿ ನಗರದ ಕರ್ಣಾಟಕ ಸಂಘದ ಗಮಕ ಕೇಂದ್ರದಲ್ಲಿ ಶ್ರೀ ಗಮಕಿ ಜಿ. ಎ. ಅನಂತಪದ್ಮನಾಭಯ್ಯನವರಲ್ಲಿ ಕಲಿತು ೧೯೭೮ ರಲ್ಲಿ ಗಮಕ ಪ್ರವೇಶ ಪರೀಕ್ಷೆಯಲ್ಲಿಯೂ ೧೯೭೯ ರಲ್ಲಿ ಪ್ರೌಢಪರೀಕ್ಷೆಯಲ್ಲಿಯೂ

ಉತ್ತೀರ್ಣರಾಗಿರುವರು. ಮುಂದೆ ಇವರ ಮಿತ್ರರಾದ ಶ್ರೀ ಪಿ.ಕೆ. ದ್ವಾರಕಾನಾಥ್ ಅವರು ಈಕೆಗೆ ಗಮಕ ಕಲೆಯಲ್ಲಿ ಹೆಚ್ಚಿನಃ ಪ್ರೋತ್ಸಾಹ ಮಾರ್ಗದರ್ಶನಗಳನ್ನು ನೀಡಿ ಇವರ ಗಮಕ ಕಲಾಭ್ಯಾಸ ಮತ್ತು ಅಭಿರುಚಿಯಲ್ಲಿ ಆಸಕ್ತಿಯನ್ನು ಹೆಚ್ಚಿಸಿರುವರು. ಇವರು ವಿರಾಮ ಸಮಯಗಳಲ್ಲಿ ಕಾವ್ಯವಾಚನ ಮಾಡುವರು.

೧೯೫. ಸುಶೀಲಾ ಗೋಪಾಲನ್, ಬೆಂಗಳೂರು

ಇವರು ೧೯೩೮ ನೆಯ ಇಸವಿಯಲ್ಲಿ ಬೆಂಗಳೂರಿನಲ್ಲಿ ಜನಿಸಿದರು. ಇವರ ತಂದೆ ಶ್ರೀ ರಂಗಸ್ವಾಮಿ ಅಯ್ಯಂಗಾರ್, ತಾಯಿ ಶ್ರೀಮತಿ ಶಾಂತಮ್ಮ. ಇವರ ತಾತನವರು ವೈಣಿಕರು. ತಂದೆಯವರಿಗೆ ವೀಣೆ, ಕೊಳಲು, ಹಾಡುಗಾರಿಕೆ ಬರುತ್ತದೆ. ಚಿಕ್ಕ ವಯಸ್ಸಿನಿಂದ ತಂದೆಯವರೇ ಸಂಗೀತಾಭ್ಯಾಸ ಮಾಡಿಸಿದರು. ಬಾಲ್ಯದಲ್ಲಿಯೇ ಅನೇಕ ಕಾವ್ಯವಾಚನ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನಗಳನ್ನು ಪಡೆದಿದ್ದರು. ಸಂಗೀತವೆಂದರೆ ಬಹಳ ಆಸಕ್ತಿಯಿದ್ದಿತು. ಸಾಮಾನ್ಯ ವಿದ್ಯಾಭ್ಯಾಸ ಇಂಟರ್ಮೀಡಿಯಟ್‌ವರೆಗೆ. ನರಸಿಂಹರಾಜಾ ಕಾಲೋನಿಯಲ್ಲಿ ನಡೆಯುತ್ತಿದ್ದ ಗಮಕ ತರಗತಿಗಳಿಂದ ಗಮಕ ಕಲೆಯ ಕಡೆಗೆ ಆಕರ್ಷಿತರಾದರು. ಶ್ರೀ ಗಮಕಿ ರಾಘವೇಂದ್ರರಾಯರು ಇವರ ಗಮಕ ಗುರುಗಳು. ಅವರ ಆಶೀರ್ವಾದ ಬಲದಿಂದ ಗಮಕ ಪ್ರವೇಶ ಮತ್ತು ಪ್ರೌಢ ಪರೀಕ್ಷೆಗಳಲ್ಲಿ ಉತ್ತೀರ್ಣರಾದರು, ಮೊದಲನೇ ದರ್ಜೆಯನ್ನು ಪಡೆದರು, ರಾಮಾರಾಧ್ಯರ ಪ್ರೋತ್ಸಾಹವೂ ಲಭಿಸಿತು. ಆಕಾಶ ವಾಣಿಯಲ್ಲಿ ೧೯೬೩ ರಿಂದ ವಾಚನಮಾಡುತ್ತಿದ್ದಾರೆ. ಈಗ ಹನುಮಂತ ನಗರದಲ್ಲಿ ಗಮಕ ತರಗತಿ ನಡೆಸುತ್ತಿದ್ದಾರೆ.

೧೯೬. ಎಸ್. ವಾಸುದೇವರಾವ್, ಬೆಂಗಳೂರು

ಇವರು ೭–೨–೩೮ ರಂದು ಕೋಲಾರ ಜಿಲ್ಲೆಯ ಶ್ರೀನಿವಾಸಪುರದಲ್ಲಿ ಜನಿಸಿದರು. ಇವರ ತಂದೆ ಶ್ರೀನಿವಾಸರಾಯರು, ತಾಯಿ ಪದ್ಮಾವತೀ ಬಾಯಿ. ಇವರು ಎಸ್.ಎಸ್.ಎಲ್.ಸಿ. ಮತ್ತು ಎಲೆಕ್ಟ್ರಿಕಲ್ ಎಂಜಿನೀಯರಿಂಗ್ ಡಿಪ್ಲೊಮಾಗಳನ್ನು ಮುಗಿಸಿಕೊಂಡು ಮೈಸೂರು ಪೋರ್ಸಲೇನ್ಸ್ ಲಿಮಿಟೆಡ್‌ನಲ್ಲಿ ಫೋರ್ಮನ್ ಉದ್ಯೋಗದಲ್ಲಿರುವರು. ಇವರಿಗೆ ಉತ್ತಮ ಶಾರೀರವೂ ಸಾಹಿತ್ಯಾಭಿರುಚಿಯೂ ಇದ್ದು ಇವರ ಕಾವ್ಯವಾಚನಗಳು ಯಶಸ್ವಿಯಾಗಿವೆ. ವಿದ್ಯಾಭ್ಯಾಸಕಾಲದಲ್ಲಿಯೇ

ಇವರು ರಾಗಗಳನ್ನು ಶುದ್ಧವಾಗಿ ಬಳಸಿ ಪದ್ಯಗಳನ್ನೂ, ಶ್ಲೋಕಗಳನ್ನೂ ಹೇಳ ಕಂಠಪಾಠ ಸ್ಪರ್ಧೆಗಳಲ್ಲಿ ಬಹುಮಾನಗಳನ್ನು ಗಳಿಸುತ್ತಿದ್ದರು. ಇವರು ಗಮುಕಿ ರಾಘವೇಂದ್ರರಾಯರಲ್ಲಿ ಗಮುಕ ಕಲೆಯನ್ನು ಕಲಿತು ೧೯೬೦ ರಲ್ಲಿ ಪ್ರೌಢ ಪರೀಕ್ಷೆ ಯಲ್ಲಿ ಉತ್ತೀರ್ಣರಾಗಿರುವರು. ಗಮುಕಿ ಹು. ಮಾ. ರಾಮಾರಾಧ್ಯರ ಗಮುಕ ರೂಪಕಗಳಲ್ಲಿಯೂ ಪಾತ್ರಗಳನ್ನು ವಹಿಸಿರುವರು. ೨೦ ವರ್ಷಗಳಿಂದಲೂ ಇವ ಗಮುಕ ಕಲಾ ಸೇವೆಯು ಅನೇಕ ಊರುಗಳಲ್ಲಿ ನಡೆದಿರುತ್ತದೆ. ರಾಜ್ಯ ಸರ್ಕಾರದ ಸಾಹಿತ್ಯ ಸಂಸ್ಕೃತಿ ಇಲಾಖೆಯ ಆಶ್ರಯದಲ್ಲಿ ಬೆಂಗಳೂರು, ಮೈಸೂರು, ಕೋಲಾ ಜಿಲ್ಲೆಗಳ ಅನೇಕ ಊರುಗಳಲ್ಲಿ ಇವರ ಕಾವ್ಯವಾಚನ ಕಾರ್ಯಕ್ರಮಗಳು ನಡೆದಿವೆ. ಇವರು ಗಮುಕ ತರಗತಿಗಳನ್ನು ೧೯೬೮ ರಿಂದ ಮಲ್ಲೇಶ್ವರದ ಗಾಂಧೀ ಸಾಹಿತ್ಯ ಸಂಘದಲ್ಲಿಯೂ ಮುಂದೆ ೧೯೭೫ ರಿಂದ ಸುಬ್ರಹ್ಮಣ್ಯ ನಗರದ ಪ್ರಗತಿ ಮಹಿಳಾ ಸೇವಾ ಸಂಘದ ಆಶ್ರಯದಲ್ಲಿಯೂ ನಡೆಸುತ್ತಿರುವರು. ಬೆಂಗಳೂರಿನಲ್ಲಿ ಸರ್ಪ ಭೂಷಣ ಮಠದಲ್ಲಿ ಶ್ರೀಮನ್ನಿರಂಜನ ಮುರುಘರಾಜೇಂದ್ರಸ್ವಾಮಿಗಳವರ ಸನ್ನಿಧಾನ ದಲ್ಲಿ ೧೯೬೭ ನೇ ಸೆಪ್ಟೆಂಬರಿನಲ್ಲಿ ಶಿವತತ್ವ ಚಿಂತಾಮಣಿ, ಪ್ರಭುಲಿಂಗಲೀಲೆಗಳನ್ನು ಇವರು ವಾಚನಮಾಡಿದಾಗ, ಆಸ್ಥಾನ ವಿದ್ವಾನ್ ಬಿ. ಶಿವಮೂರ್ತಿಶಾಸ್ತ್ರಿಗಳು ವ್ಯಾಖ್ಯಾನ ಮಾಡಿದರು. ರಾಜಾಜಿನಗರದ ರಾಮಮಂದಿರದಲ್ಲಿ ಇವರು ಕುಮಾರ ವ್ಯಾಸ ಭಾರತವನ್ನು ೬ ವರ್ಷಗಳ ಕಾಲ ವಾಚನ ಮಾಡಿದ ಸಂದರ್ಭದಲ್ಲಿ ಸಹೃ ದಯ ವಿದ್ವಾಂಸರು ಇವರಿಗೆ “ವಾಚನ ಸರಸ್ವತೀ” ಎಂದು ಪ್ರಶಸ್ತಿಯನ್ನಿತ್ತು ಮನ್ನಿಸಿರುವರು. ಇವರ ವಾಚನಗಳು ಬೆಂಗಳೂರಿನಲ್ಲಿನ ಅನೇಕ ಸಂಘಸಂಸ್ಥೆ ಗಳಲ್ಲಿ ನಡೆಯುತ್ತಿರುತ್ತವೆ. ಪುರಾಣ ಪ್ರಸಂಗಗಳನ್ನು ಕುರಿತ ‘ಶ್ರೀರಾಮಕೃಷ್ಣ ದರ್ಶನ’ ಎಂಬ ಪ್ರಕಟಣೆಯಲ್ಲಿ ಇವರ ಪ್ರಬಂಧವೂ ಸೇರಿದೆ.

೧೯೭. ಬಿ. ಎಂ. ಶ್ರೀಲಕ್ಷ್ಮೀ ಮಂಜುನಾಥರಾವ್

ಇವರು ಚಿಕ್ಕಮಗಳೂರು ಜಿಲ್ಲಾ ಶೃಂಗೇರಿಯಲ್ಲಿ ೮–೯–೧೯೩೮ ರಂದು ಜನಿಸಿದರು. ಇವರ ತಂದೆ ಕುಲಪತಿ ಶ್ರೀ ಶಂಕರನಾರಾಯಣ ಜೋಯಿಸರು ತಾಯಿ ಶ್ರೀಮತಿ ಶಾರದಮ್ಮನವರು. ಇವರು ಎಸ್.ಎಸ್.ಎಲ್.ಸಿ. ಪರೀಕ್ಷೆ ಯಲ್ಲಿ ತೇರ್ಗಡೆ ಹೊಂದಿ ಬಾಲವಾಡಿಯ ಶಾಲೆಯಲ್ಲಿ ಉಪಾಧ್ಯಾಯಿನಿಯಾಗಿರು ತ್ತಾರೆ. ಗಮುಕ ಪ್ರವೇಶ ಮತ್ತು ಪ್ರೌಢ ಪರೀಕ್ಷೆಗಳಲ್ಲಿಯೂ ಉತ್ತೀರ್ಣರಾಗಿ ದ್ದಾರೆ. ಸಂಗೀತದಲ್ಲಿ ಸಾಕಷ್ಟು ಅಭಿರುಚಿಯಿರುವ ಇವರು ಪುರಾಣ ಪುಣ್ಯಕಥೆ

ಗಳನ್ನು ಶ್ರೇಯಸ್ಸಿಗಾಗಿ ಕಲಿಯುವ ಮತ್ತು ವಾಚನ ಮಾಡುವ ಅಪೇಕ್ಷೆಯನ್ನು ಹೊಂದಿರುವರು. ಗಮಕ ವಿದ್ವಾಂಸರಾದ ಹ. ವೆಂ. ಲಕ್ಷ್ಮೀನಾರಾಯಣರಾಯರು ಇವರ ಗಮಕ ಕಲೆಯ ಗುರುಗಳು. ಚಿಕ್ಕಮಗಳೂರಿನ ಶ್ರೀ ಕುಮಾರವ್ಯಾಸ ಗಮಕ ಪಾಠಶಾಲೆಯಲ್ಲಿ ಗಮಕ ಶಿಕ್ಷಣ ತರಗತಿಗಳನ್ನು ಮೂರು ವರ್ಷಗಳಿಂದಲೂ ನಡೆಸುತ್ತಿರುವರು. ರಾಮ ಸೇವಾ ಸಮಿತಿಯಲ್ಲಿಯೂ ಉತ್ಸವ ಸಂದರ್ಭಗಳಲ್ಲಿಯೂ ಕಾವ್ಯವಾಚನ ಮಾಡುತ್ತಿರುವರು.

೧೯೮. ವಿಶ್ವನಾಥರಾಯರು

ಇವರು ಹೆಗ್ಗರೆ ಶಾಲಾ ಅಧ್ಯಾಪಕರು. ಗಮಕ ಕಲೆಯಲ್ಲಿ ವಿಶೇಷ ಆಸಕ್ತಿಯುಳ್ಳ ತರುಣರು. ಇವರ ಕಾವ್ಯವಾಚನವು ಬಹಳ ರಂಜಕವಾಗಿದ್ದು ಶ್ರೋತೃಗಳ ಕುತೂಹಲ, ಆಸಕ್ತಿಗಳನ್ನು ಕೆರಳಿಸುತ್ತದೆ.

೧೯೯. ಸುಶೀಲಾ ನಾರಾಯಣರಾವ್, ಬೆಂಗಳೂರು

ಇವರು ೧೯೪೯ರಲ್ಲಿ ಜನಿಸಿದರು. ಇವರು ಗಮಕ ಕಲೆ ಮತ್ತು ಸಂಗೀತಗಳಲ್ಲಿ ಬಾಲ್ಯದಿಂದಲೂ ಆಸಕ್ತಿ ಹೊಂದಿದ್ದರು. ೧೯೬೯ರಲ್ಲಿ ತಂದೆ ತಾಯಿಗಳ ಪ್ರೋತ್ಸಾಹದಿಂದ ಜಯನಗರದಲ್ಲಿ ನಡೆಯುತ್ತಿದ್ದ ಗಮಕ ತರಗತಿಗೆ ಸೇರಿ ಗಮಕ ಪ್ರವೇಶವನ್ನು ಅಭ್ಯಸಿಸಿ, ನಾಲ್ಕನೇ ರ್ಯಾಂಕ್ ಗಳಿಸಿ ತೇರ್ಗಡೆಯಾದರು. ಅನಂತರ ಶ್ರೀ ಅನಂತಪದ್ಮನಾಭರಾಯರಲ್ಲಿ ಗಮಕ ಕಲೆಯ ಅಭ್ಯಾಸವನ್ನು ಮುಂದುವರಿಸಿದರು. ಸಂಗೀತದಲ್ಲಿ ಸೀನಿಯರ್ ಪರೀಕ್ಷೆಯಾಗಿದೆ. ದೂರವಾಣಿ ನಗರದಲ್ಲಿ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿರುವರು.

೨೦೦. ಎ.ಎಸ್. ವೆಂಕಟದಾಸು, ಬೆಂಗಳೂರು

ಇವರು ೧೯೩೯ರಲ್ಲಿ ಚಾಮರಾಜನಗರ ತಾಲ್ಲೋಕು ಅಮಚವಾಡಿ ಗ್ರಾಮದಲ್ಲಿ ಜನಿಸಿದರು. ಇವರ ತಂದೆ ಹೊನ್ನಹಳ್ಳಿ ಶ್ಯಾನುಭೋಗ್ ಶ್ರೀನಿವಾಸಮೂರ್ತಿ ಅವರು. ವಿಶ್ವವಿದ್ಯಾಲಯ ಪದವಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತಾರೆ. ಗಮಕ ವಿದ್ವಾನ್ ಶ್ರೀ ಹೆಚ್.ಕೆ. ರಾಮಸ್ವಾಮಿಯವರಲ್ಲಿ ಶಿಷ್ಯವೃತ್ತಿಯನ್ನು ಕೈ

ಕೊಂಡು ಪರಿಷತ್ತಿನ ಗಮಕ ಪರೀಕ್ಷೆಯಲ್ಲಿ ೧೯೫೭ರಲ್ಲಿ ಉತ್ತಮ ದರ್ಜೆಯ
ತೇರ್ಗಡೆ ಹೊಂದಿರುತ್ತಾರೆ. ಚಿಕ್ಕತನದಿಂದಲೂ ತಂದೆಯವರ ಗಮಕ ವಾಚ
ವನ್ನಾಲಿಸಿ ಅದರಿಂದ ಭಜನೆ, ಹಾಡು, ಗಮಕ ರೂಪದಲ್ಲಿ ಪದ್ಯಗಳನ್ನು ಓದು
ಆಸಕ್ತಿ ಮೂಡಿ ಬಂದು ಹೈಸ್ಕೂಲು ಮತ್ತು ಕಾಲೇಜು ವಿದ್ಯಾಭ್ಯಾಸ ಕಾಲದಲ್ಲಿ
ಅಭಿರುಚಿಯು ಮತ್ತೂ ಬೆಳೆದು ಓದಿಗಿಂತ ಲಲಿತ ಕಲೆಗಳಲ್ಲಿ ಎಲ್ಲರಿಗಿಂತ ಮುಂದಾ
ದರು. ಅವರ ಸಹಪಾಠಿಗಳು, ಅಧ್ಯಾಪಕ ವರ್ಗದವರು ಅವರು ಗಮಕ ರೂಪದ
ಪದ್ಯಗಳನ್ನು ಓದುವುದನ್ನು ಕೇಳಿ, ಆನಂದಿಸಿ, ಪ್ರೋತ್ಸಾಹಿಸಿರುತ್ತಾರೆ. ವಿಜಯ
ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ವಿ. ಟಿ. ಶ್ರೀನಿವಾಸನ್‌ರವರು ಇವರು ದೇವ
ನಾಮ ಹಾಡಿದುದನ್ನು ಕೇಳಿ, ಆನಂದಿಸಿ, ಆಶೀರ್ವದಿಸಿದ್ದಾರೆ. ಇವರ ವಾಚ
ಗಳು ಅವರ ಜನ್ಮಸ್ಥಳದ ರಾಮಮಂದಿರದಲ್ಲಿ ಮತ್ತು ಅನೇಕ ಇತರ ಸ್ಥಳಗಳ
ನಡೆದಿವೆ. ರಾಮಾಯಣ, ಮಹಾಭಾರತ, ಹರಿಶ್ಚಂದ್ರ ಕಾವ್ಯಗಳ ವಾಚನ
ಜನರ ಅಭಿಮಾನ ಮೆಚ್ಚಿಗೆಗಳಿಗೆ ಪಾತ್ರವಾಗಿವೆ. ತಮ್ಮ ಉದ್ಯೋಗ ಸಂಸ್ಥೆಯಾ
ಎಂ.ಬಿ.ಟಿ. ಟ್ರಾನ್ಸ್‌ಪೋರ್ಟ್ ಕಂಪೆನಿಯ ಮಾಲೀಕರೂ ಸಹೋದ್ಯೋಗಿಗಳ
ಇವರ ಕಲೆಗೆ ಬೆಲೆ ಕೊಟ್ಟು ಪ್ರೋತ್ಸಾಹಿಸುತ್ತಿರುತ್ತಾರೆ. ಬೆಂಗಳೂರಿನ ಶಶಿಕಲ
ಸಂಘ ಮುಂತಾದ ಸಂಸ್ಥೆಗಳಲ್ಲಿ ಕಾವ್ಯವಾಚನಮಾಡಿ ಬಹುಮಾನಗಳನ್ನು ಮತ್ತ
ಪ್ರಶಸ್ತಿ ಪತ್ರಗಳನ್ನೂ ಪಡೆದಿರುತ್ತಾರೆ. ಶ್ರೀ ಗಮಕಿ ರಾಮಾರಾಧ್ಯರಿಗೂ ಮೆಚ್ಚಿ
ಶಿಷ್ಯರಾಗಿದ್ದಾರೆ. ಸಂಗೀತದಲ್ಲಿ ವಿದ್ವಾನ್ ಶ್ರೀ ನಾರಾಯಣಮೂರ್ತಿಗಳ ಶಿಷ
ರಾಗಿ ವಿದ್ವತ್ ಪರೀಕ್ಷೆಯ ಪಾಠ ನಡೆಯುತ್ತಿದೆ. ಸಂಗೀತ, ಕಾವ್ಯವಾಚನಗಳನ
ಭಕ್ತಿ ಶ್ರದ್ಧೆಗಳಿಂದ ನಡೆಸಿಕೊಂಡು ಬರುವುದು ಇವರ ಮುಖ್ಯ ಹವ್ಯಾಸ.

೧೦೦. ಕೃಷ್ಣಗಿರಿ ಕಮಲ, ಬೆಂಗಳೂರು

ಇವರು ಮೈಸೂರಿನಲ್ಲಿ ೪-೨-೧೯೩೩ರಲ್ಲಿ ಜನಿಸಿದರು. ಇವರ ತಂ
ಪ್ರಸಿದ್ಧ ಗಮಕ ವಿದ್ವಾಂಸರಾಗಿದ್ದ ಕೃಷ್ಣಗಿರಿ ಕೃಷ್ಣರಾಯರು, ತಾಯಿ ಶ್ರೀಮ
ಸರಸ್ವತೀಬಾಯಿ. ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಮತ್ತು ಹಿಂದೀ ರಾ
ಭಾಷಾ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಕೆಲವು ಕಾಲ ಉಪಾಧ್ಯಾಯಿನಿಯಾ
ದ್ದರು. ಆರು ವರ್ಷಗಳಕಾಲ ಸಂಗೀತ ಅಭ್ಯಾಸವಾಗಿದೆ. ಹಾಡಬಲ್ಲರು. ಸಾಹಿ
ದಲ್ಲಿ ಅಭಿರುಚಿಯಿದೆ. ಇವರ ಜನ್ಮದಾತರಾದ ಗಮಕ ಕಲಾ ಪ್ರವೀಣ ಕೃಷ್ಣ
ಕೃಷ್ಣರಾಯರೇ ಇವರ ಗಮಕ ಕಲಾ ಗುರುಗಳು. ಅಂದಮೇಲೆ ಹುಟ್ಟನಿಂದಲ

ಇವರಿಗೆ ಗಮಕ ಕಲೆಯಲ್ಲಿ ಆಸಕ್ತಿಯಿದ್ದಿತು. ತಂದೆಯವರೊಡನೆ ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಹತ್ತು ಹದಿನೈದು ವರ್ಷಗಳು ಗಮಕ ಅಭ್ಯಾಸ ಮಾಡಿರುತ್ತಾರೆ. ಇವರ ಮನೆಗೆ ಗಮಕಿ ಬಿಂದೂರಾಯರೇ ಮುಂತಾದ ಪ್ರಸಿದ್ಧ ಗಮಕಿಗಳು ಬರುತ್ತಿದ್ದರು. ಅವರ ವಾಚನಗಳ ಕೇಳಿಕೆಯಿಂದ ಇವರಲ್ಲಿ ಸಂಸ್ಕಾರ ಮೂಡಿದ್ದಿತು. ಆದರೂ ಶ್ರೀಮತಿಯವರ ಗಮಕ ಕಲೆಗೆ ಒಂದು ಶಿಸ್ತು ಬಂದುದು ೧೯೫೨ ರಲ್ಲಿ ಇವರು ಗಮಕ ಪ್ರವೇಶ ಪರೀಕ್ಷೆ ಮಾಡಿದ ನಂತರ. ತಂದೆಯವರು, ಮೈ.ಸು. ಅನಂತಪದ್ಮನಾಭರಾಯರು, ಮತ್ತೂರು ಲಕ್ಷ್ಮೀಕೇಶವ ಶಾಸ್ತ್ರಿಗಳು, ಗೋಪೀನಾಥರಾಯರು, ರಾಮಚಂದ್ರಶರ್ಮ ತ್ಯಾಗಲಿ—ಇವರುಗಳು ಶ್ರೀಮತಿಯವರ ವಾಚನಕ್ಕೆ ವ್ಯಾಖ್ಯಾನ ಮಾಡಿರುತ್ತಾರೆ. ಗೋಖಲೆ ಸಾರ್ವಜನಿಕ ಸಂಸ್ಥೆಯಲ್ಲಿ ಅನೇಕ ಹಿರಿಯರ ಸಮ್ಮುಖದಲ್ಲಿ ವಾಚನ ನಡೆಸಿ ಆಶೀರ್ವಾದ ಪಡೆದಿರ ವರು. ಹಾಸನದ ಲಕ್ಷ್ಮೀಸೌಮ್ಯ ಚನ್ನಕೇಶವ ದೇವಾಲಯದಲ್ಲಿ ಒಂದು ತಿಂಗಳ ಕಾಲ ಉತ್ಸವ ನಡೆದಾಗ ಇವರು ಗದುಗಿನ ಭಾರತ, ಜೈಮಿನಿ ಭಾರತ, ತೊರವೆ ರಾಮಾಯಣ ಮತ್ತು ಹರಿಶ್ಚಂದ್ರ ಕಾವ್ಯಗಳನ್ನು ವೇದಮೂರ್ತಿ ಲಕ್ಷ್ಮೀಕೇಶವ ಶಾಸ್ತ್ರಿಗಳ ವ್ಯಾಖ್ಯಾನದೊಂದಿಗೆ ವಾಚನ ನಡೆಸಿರುತ್ತಾರೆ. ಇದಲ್ಲದೆ ನಗರದ ಸಂಸ್ಕೃತಿ ಕೇಂದ್ರ, ಮಲ್ಲೇಶ್ವರ ಮಾಧ್ವಮಂಡಲ, ಕುಮಾರವ್ಯಾಸ ಮಂಟಪ, ಶ್ರೀರಾಮಮಂದಿರಗಳು, ಹೈದರಾಬಾದು, ಗುಲ್ಬರ್ಗ, ಹಾಸನ, ಚಾಮರಾಜ ನಗರ ಮುಂತಾದ ಸ್ಥಳಗಳಲ್ಲಿಯೂ ವಾಚನ ಮಾಡಿರುವರು. ಗಮಕ ಕಲೆಯ ಆರಾಧನೆಯೇ ತನಗೆ ನಿತ್ಯಪೂಜೆಯೆಂದು ತಿಳಿದು ಹತ್ತು ವರ್ಷಗಳಿಂದ ತಮ್ಮ ಮನೆಯಾದ "ಕೃಷ್ಣ ಕೃಪಾ"ದಲ್ಲಿ ಹಲವು ವಿದ್ಯಾರ್ಥಿಗಳಿಗೆ ತರಪೇತಿ ನೀಡಿರುತ್ತಾರೆ.

೨೦೨. ಕಮಲಾ ರಾಮಕೃಷ್ಣ, ಬೆಂಗಳೂರು

ಇವರು ಮೈಸೂರಿನಲ್ಲಿ ೧೭–೪–೧೯೩೯ ರಲ್ಲಿ ಜನಿಸಿದರು. ಶ್ರೀಮತಿ ರಾಧಾ ಬಾಯಿ ಮತ್ತು ಶ್ರೀ ಹೆಚ್.ಡಿ. ಶೇಷಗಿರಿರಾಯರು ಇವರ ತಾಯಿ ತಂದೆಗಳು. ಇವರಿಗೆ ಲೋಯರ್ ಸೆಕೆಂಡರಿ ಆಗಿದೆ. ಸಂಗೀತದಲ್ಲಿ ೧೯೬೦ ರಲ್ಲಿ ಸೀನಿಯರ್ ಪರೀಕ್ಷೆ ಮಾಡಿರುವರು. ಸಾಹಿತ್ಯದಲ್ಲಿ ಅಭಿರುಚಿಯಿದೆ. ತಮ್ಮ ಗೆಳತಿಯರು ಗಮಕಿ ಶ್ರೀ ಕೃಷ್ಣಗಿರಿ ಕೃಷ್ಣರಾಯರ ಮನೆಗೆ ಗಮಕ ಕಲಿಯಲು ಹೋಗಿ ಬರುತ್ತಿದ್ದುದು ಇವರಲ್ಲೂ ಆ ಕಲೆಯ ಬಗ್ಗೆ ಆಸಕ್ತಿ ಕೆರಳಿಸಿತು. ಕಡೆಗೆ ತಾವೂ ಶ್ರೀ ಕೃಷ್ಣ ರಾಯರ ಶಿಷ್ಯರಾಗಿ ಅಭ್ಯಾಸ ಮಾಡಿದರು. ತಂದೆ ತಾಯಿಯವರ ಪ್ರೋತ್ಸಾಹವೂ

ಇದ್ದಿತು. ೧೯೫೭ ರಲ್ಲಿ ಗಮಕ ಪ್ರವೇಶದಲ್ಲಿ ತೇರ್ಗಡೆಯಾದರು. ೧೯೬೩ ರ
ಆಕಾಶವಾಣಿಯಲ್ಲಿ ಕಾರ್ಯಕ್ರಮ ನಡೆಸಿದರು. ಆ ಸಂದರ್ಭದಲ್ಲಿ ಗಮಕಿ ಶ್ರೀ ಎಂ
ರಾಘವೇಂದ್ರರಾಯರ ಪರಿಚಯ, ಪ್ರೋತ್ಸಾಹಗಳು ದೊರೆತುವು. ಗ್ರಾಮಾಂತ
ಪ್ರದೇಶಗಳಲ್ಲಿ ವಾಚನಗಳನ್ನು ನಡೆಸಿರುವರು. ಸಂಸ್ಕೃತಿ ಪ್ರಸಾರ ಕಾರ್ಯಕ್ರಮ
ಗಳಲ್ಲಿಯೂ ಭಾಗವಹಿಸಿರುವರು. ೧೯೬೫-೬೬ ಮತ್ತು ೧೯೬೬-೬೭ ರಲ್ಲಿ ಗಮ
ತರಗತಿಗಳಲ್ಲಿ ಕಾವ್ಯಗಾಯನ ಕಲಾ ಮಂದಿರದಲ್ಲಿ ಅಧ್ಯಾಪಕಿಯಾಗಿ ಸೇವೆ ಸ
ಸಿರುವರು. ೧೫ ವರ್ಷಗಳಿಂದ ಆಕಾಶವಾಣಿಯಲ್ಲಿ ಕಾವ್ಯವಾಚನ ಮಾಡುತ್ತಿ
ವರು. ಶೃಂಗೇರಿ, ಬಿಜಾಪುರ ಮುಂತಾದೆಡೆಗಳಲ್ಲಿ ಇವರ ಕಾರ್ಯಕ್ರಮ ನಡೆ
ರುತ್ತೆ. ೧೯೫೮ರಲ್ಲಿ ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿನ ಶ್ರೀರಾಮಮಂದಿರದ
ಜೈಮಿನಿ ಭಾರತವನ್ನು ಪೂರ್ಣವಾಗಿ ವಾಚನ ಮಾಡಿದ ಸಂದರ್ಭದಲ್ಲಿ ಮಹ
ಜನರು ಮೆಚ್ಚಿ 'ಗಮಕ ಕಲಾ ಪ್ರವೀಣೆ' ಎಂಬ ಪ್ರಶಸ್ತಿಯನ್ನು ಕೊಟ್ಟು ಇವರನ
ಸನ್ಮಾನಿಸಿದ್ದಾರೆ.

೨೦೩. ಬಿ.ಆರ್. ಸಾವಿತ್ರಮ್ಮ, ಬೆಂಗಳೂರು

ಇವರು ೧೫-೪-೧೯೩೯ ರಂದು ಅರಸೀಕೆರೆ ತಾಲ್ಲೋಕು ಬಾಣಾವರದ
ಜನಿಸಿದರು. ಇವರ ತಂದೆ ಶ್ರೀ ಬಿ. ರಾಮಯ್ಯನವರು, ತಾಯಿ ಶ್ರೀಮತಿ ಗೌರವ
ನವರು. ಇವರು ಮಾಧ್ಯಮಿಕ ಶಾಲೆಯಲ್ಲಿ ಉಪಾಧ್ಯಾಯಿನಿಯಾಗಿರುವ
ಸಂಗೀತದಲ್ಲಿ ಸೀನಿಯರ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವರು. ಕನ್ನಡ ಸಾಹಿ
ದಲ್ಲಿಯೂ ಅಭಿರುಚಿಯಿದ್ದು ಕಾವ್ಯವಾಚನಕ್ಕೆ ಸುಮಾರಾಗಿ ವ್ಯಾಖ್ಯಾನ ಮಾ
ಬಲ್ಲರು. ಹೈಸ್ಕೂಲಿನಲ್ಲಿ ಓದುತ್ತಿದ್ದಾಗಲೇ ಗಮಕವನ್ನು ಕಲಿಯಬೇಕೆಂಬ ಆಸ
ಯುಂಟಾಗಿದ್ದಿತು. ಗಮಕಿ ಎಚ್.ಎಂ. ರಾಮಾರಾಧ್ಯರಲ್ಲಿ ಶಿಷ್ಯವೃತ್ತಿ ನಡೆಸಿ,
ವರ್ಷ ಅಭ್ಯಾಸ ಮಾಡಿ, ಗಮಕ ಪ್ರವೇಶ ಮತ್ತು ಪ್ರೌಢ ಪರೀಕ್ಷೆಗಳಲ್ಲಿ ೧೯೬
ರಲ್ಲಿ ಉತ್ತೀರ್ಣರಾದರು. ಇವರಿಗೆ ಕುಮಾರವ್ಯಾಸ ಭಾರತವನ್ನು ವಾಚ
ಮಾಡುವುದರಲ್ಲಿ ಬಹಳ ಇಷ್ಟ. ಮಲ್ಲೇಶ್ವರ ಮತ್ತು ವೈಯಾಳಿಕಾವಲ್‌ನ ಶ್ರೀರಾ
ಮಂದಿರ, ಬಾಣಾವರ, ಶಿವಗಂಗೆಗಳಲ್ಲಿ, ಅನೇಕ ಉತ್ಸವ ಸಂದರ್ಭಗಳಲ್ಲಿ ವಾಚ
ಮಾಡಿರುವರು.

೨೦೪. ಸುಮಿತ್ರಾ ನಾಗರಾಜ್, ಆನೇಕಲ್

ಇವರು ಬೆಂಗಳೂರಿನಲ್ಲಿ ೧೯-೮-೧೯೩೯ ರಲ್ಲಿ ಜನಿಸಿದರು. ತಂದೆ ಶ್ರೀ ಆರ್. ವೆಂಕಟರಾಮಯ್ಯನವರು ಮತ್ತು ತಾಯಿ ಶ್ರೀಮತಿ ಆರ್. ರುಕ್ಮಿಣಿಯಮ್ಮನವರು. ಎಸ್.ಎಸ್.ಎಲ್.ಸಿ. ಕೋರ್ಸ್ ಮುಗಿಸಿ ಗಮಕ ಅಧ್ಯಾಪಕಿಯಾಗಿರುವರು. ಸಂಗೀತದಲ್ಲಿ ಹತ್ತು ವರ್ಷಗಳ ಅನುಭವವಿದೆ. ೧೯೬೪ ರಿಂದ ಇವರಿಗೆ ಗಮಕ ಕಲೆಯಲ್ಲಿ ಇವರ ಅಣ್ಣಂದಿರಾದ ಗಮಕಿ ಆರ್. ಶಂಕರನಾರಾಯಣ್ ಅವರಿಂದ ಆಸಕ್ತಿ ಮೂಡಿತು. ಮನೆಯಲ್ಲೇ ಶ್ರೀಯುತರುಗಳಾದ ರಾಘವೇಂದ್ರರಾಯರು, ಅನಂತ ಪದ್ಮನಾಭಯ್ಯನವರು, ದಿಬ್ಬೂರು ಶ್ರೀನಿವಾಸರಾಯರು, ಶ್ರೀಮತಿ ಅನ್ನಪೂರ್ಣಮ್ಮನವರುಗಳಿಂದ, ರಾಮಾಯಣ, ಭಾರತ ಮುಂತಾದ ಕಾವ್ಯಗಳ ವಾಚನಗಳು ನಡೆಯುತ್ತಿದ್ದುವು. ಇವರ ಗಮಕ ಗುರುಗಳು ಶ್ರೀ ಎಂ. ರಾಘವೇಂದ್ರರಾಯರು. ೧೯೬೭ ರಲ್ಲಿ ಗಮಕ ಪ್ರವೇಶದಲ್ಲಿಯೂ, ೧೯೬೯ ರಲ್ಲಿ ಗಮಕ ಪ್ರೌಢದಲ್ಲಿಯೂ ಉತ್ತೀರ್ಣರಾಗಿರುವರು. ಎರಡು ವರ್ಷಗಳಿಂದ ಆನೇಕಲ್‌ನಲ್ಲಿರುವ ಚಂಪಕಧಾಮಸ್ವಾಮಿ ಗಮಕ ಕಲಾ ಮಂದಿರದಲ್ಲಿ ಅಧ್ಯಾಪಕಿಯಾಗಿ ಸೇವೆ ನಡೆಸುತ್ತಿರುವರು. ಗಣಪತಿ ಉತ್ಸವ ಸಮಾರಂಭಗಳಲ್ಲಿ, ರಾಜಾ ಮಹಲ್ ಗುಟ್ಟಹಳ್ಳಿ, ಮಂಚನಹಳ್ಳಿ, ಮಾವಳ್ಳಿ ಕರ್ಣಾಟಕ ಸಂಘ ಮುಂತಾದುವುಗಳಲ್ಲಿ ಇವರ ಕಾವ್ಯವಾಚನಗಳು ನಡೆದಿವೆ. ಇವರಿಗೆ ಎಲ್ಲ ಕಾವ್ಯಗಳಲ್ಲಿಯೂ ಅಭಿರುಚಿಯುಂಟು. ವ್ಯಾಖ್ಯಾನವನ್ನೂ ಮಾಡುವರು.

೨೦೫. ಜಿ.ಪಿ. ಲಕ್ಷ್ಮೀದೇವಿ, ಬೆಂಗಳೂರು

ಇವರು ಬೆಂಗಳೂರಿನಲ್ಲಿ ದಿನಾಂಕ ೧೬-೧೦-೧೯೪೦ ರಲ್ಲಿ ಹುಟ್ಟಿದರು. ಇವರ ತಾಯಿ ತಂದೆಗಳು ಶ್ರೀಮತಿ ಶಕುಂತಳಮ್ಮ ಮತ್ತು ಶ್ರೀ ಗೋಪಾಲರಾಯರು. ಇವರು ಇಂಟರ್ಮೀಡಿಯಟ್‌ವರೆಗೂ ವ್ಯಾಸಂಗ ಮಾಡಿರುತ್ತಾರೆ. ಇವರಿಗೆ ಸಂಗೀತದಲ್ಲಿ ಸಾಕಷ್ಟು ಪರಿಚಯವಿದೆ. ಕನ್ನಡ ಸಾಹಿತ್ಯದಲ್ಲಿ ಬಹು ಅಭಿರುಚಿಯಿದೆ. ಕೆಲವು ಕಡೆ ವ್ಯಾಖ್ಯಾನವನ್ನೂ ಮಾಡಿರುವರು. ಇವರ ತಾಯಿಯವರು ಭಾವಪೂರ್ಣವಾಗಿ ಹಾಡುತ್ತಿದ್ದುದನ್ನು ಕೇಳಿ ಪ್ರಭಾವಿತರಾಗಿ ತಾವೂ ಹಾಡುವುದನ್ನು ಕಲಿಯಬೇಕೆಂಬ ಇಚ್ಛೆಯುಂಟಾಯಿತು. ಶೇಷಾದ್ರಿಪುರದ ಕಾವ್ಯ

ಪ್ರಚಾರಮಂಡಳಿಯಲ್ಲಿ ಶ್ರೀ ರಾಘವೇಂದ್ರರಾಯರಿಂದ ತೊರವೆ ರಾಮಾಯಣದ ವಾಚನ ನಡೆಯಿತು. ಅನಂತರ ಶ್ರೀ ಜಿ.ಎ. ಅನಂತಪದ್ಮನಾಭಯ್ಯನವರು ಗದುಗಿನ ಭಾರತ ವಾಚನ ಮಾಡುತ್ತಿದ್ದರು. ಅದು ಇವರ ಮನಸ್ಸನ್ನು ಸೆಳೆಯಿತು. ನಂತರ ಗಮಕಿ ಅನಂತ ಪದ್ಮನಾಭಯ್ಯನವರಲ್ಲಿಯೇ ಶಿಷ್ಯರಾಗಿ ಗಮಕ ಕಲೆಯನ್ನು ಅಭ್ಯಾಸ ಮಾಡಿ ೧೯೬೬ರಲ್ಲಿ ಗಮಕ ಪ್ರವೇಶದಲ್ಲಿ ಪ್ರಥಮ ರ್‍ಯಾಂಕ್ ಪಡೆದರು. ೧೯೬೯ ರಲ್ಲಿ ಗಮಕ ಪ್ರೌಢದಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದರು. ಇಂದಿಗೂ ಅಭ್ಯಾಸ ಮಾಡುತ್ತಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ, ಬೆಂಗಳೂರಿನಲ್ಲಿ ಅನೇಕ ಉತ್ಸವ ಸಮಾರಂಭಗಳಲ್ಲಿ, ತುಮಕೂರು, ಚಿಂತಾಮಣಿ ಮುಂತಾದ ಸ್ಥಳಗಳಲ್ಲಿ ಕಾವ್ಯವಾಚನಮಾಡಿರುವರು. ಇದರಲ್ಲಿ ಎಂಟು ವರ್ಷ ಸೇವೆ ನಡೆಸಿರುತ್ತಾರೆ. ೧೯೭೫-೭೬ರಲ್ಲಿ ಕಾವ್ಯ ಪ್ರಚಾರಮಂಡಳಿಯಲ್ಲಿ ಅಧ್ಯಾಪಕಿಯಾಗಿ ಗಮಕ ತರಗತಿಗಳನ್ನು ನಡೆಸಿರುವರು. ಇವರ ಗಮಕ ಕಲೆಗೆ ಹೆಚ್ಚಿನ ಪ್ರೇರಕ ಶಕ್ತಿಯಾದವರು ಶ್ರೀ ಆರ್. ಶಂಕರನಾರಾಯಣ್‌ರವರು. ಇವರೆಲ್ಲರ ಮಾರ್ಗದರ್ಶನದಿಂದ ಇವರು ಉತ್ತಮ ಗಮಕಿಯಾಗಲು ಯತ್ನಿಸುತ್ತಿರುವರು.

೨೦೬. ಗಂಗಮ್ಮ ಕೇಶವಮೂರ್ತಿ

ಇವರು ೧೯೪೦ ರಲ್ಲಿ ಹಾಸನ ಜಿಲ್ಲೆಯ ಕೊಣನೂರಿನಲ್ಲಿ ಜನಿಸಿದರು. ಇವರ ತಂದೆಯವರು ಮಾಧ್ಯಮಿಕ ಶಾಲೆಯ ಉಪಾಧ್ಯಾಯರಾಗಿದ್ದ ಶ್ರೀಯುತ ವೆಂಕಟರಾಮಯ್ಯನವರು. ಅವರೇ ಈಕೆಗೆ ಸ್ವಲ್ಪಮಟ್ಟಿಗೆ ಸಂಗೀತ ಪಾಠವನ್ನೂ ಭಾರತ ವಾಚನವನ್ನೂ ಕಲಿಸಿರುವರು. ಮೆಟ್ರಿಕ್ ವ್ಯಾಸಂಗವನ್ನು ಮುಗಿಸಿಕೊಂಡು ಪ್ರೌಢಶಾಲೆಯಲ್ಲಿ ಸಂಗೀತವನ್ನು ಐಚ್ಛಿಕವಾಗಿ ಅಭ್ಯಾಸ ಮಾಡಿರುವರು. ಶ್ರೀ ರಾಧಾಕೃಷ್ಣ ಮತ್ತು ಶ್ರೀ ನಾಗರಾಜ ಭಾಗವತರಲ್ಲಿ ಸಹ ಕೆಲವು ಕಾಲ ಸಂಗೀತಾಭ್ಯಾಸ ಮಾಡಿರುವರು. ಬೆಂಗಳೂರಿನಲ್ಲಿ ಗಮಕಿ ಶ್ರೀ ಬಿ.ಎಸ್.ಎಸ್. ಕೌಶಿಕ್‌ರವರ ಮಗಳು ಶ್ರೀಮತಿ ಸತ್ಯವತೀ ಕೇಶವಮೂರ್ತಿಯವರ ಪರಿಚಯದಿಂದ ಇವರಿಗೆ ಗಮಕವನ್ನು ಹೆಚ್ಚು ಅಭ್ಯಾಸಮಾಡಲು ಅವಕಾಶವಾಯಿತು. ಆಗಿನ ಕಾಲದಲ್ಲಿಯೇ ಗಮಕಿ ಶ್ರೀ ಎಂ. ರಾಘವೇಂದ್ರರಾಯರ ಮತ್ತು ಶ್ರೀ ಬಿ.ಎಸ್.ಎಸ್. ಕೌಶಿಕ್‌ರವರ ಶಿಕ್ಷಣವೂ ಮಾರ್ಗದರ್ಶನವೂ ವಿಶೇಷವಾಗಿ ಲಭಿಸಿತು. ಇವರಲ್ಲಿ ಕೂಡಿ ಗಮಕ ಕಲೆಯನ್ನು ಅಭ್ಯಾಸ ಮಾಡಿದ ಶ್ರೀಮತಿ ಇಂದಿರಾ ವೆಂಕಟೇಶ್, ಲಕ್ಷ್ಮಿ ನರಸಮ್ಮ ಮತ್ತು ವಿಜಯಲಕ್ಷ್ಮಿ ಇವರುಗಳು ಉತ್ತಮ ಗಮಕಿಗಳಾಗಿ ಆಕಾಶ

ಪಾಣಿಯಲ್ಲಿ ಕಾರ್ಯಕ್ರಮಗಳನ್ನು ನೀಡುತ್ತಿರುವುದೇ ಅಲ್ಲದೆ ಗಮಕ ತರಗತಿಗಳನ್ನು ನಡೆಸುವುದನ್ನೂ, ಕಾರ್ಯಕ್ರಮಗಳಲ್ಲಿ ಭಾಗವಹಿಸುವುದನ್ನೂ ಮುಂದುವರಿಸುತ್ತಿರುವರು.

೨೦೭. ಎಸ್. ವಿ. ಮಲ್ಲಿಕಾರ್ಜುನಭಟ್ಟ, ಕಮ್ಮರಡಿ

ಇವರು ೧೬-೧೦-೧೯೪೦ ರಲ್ಲಿ ತೀರ್ಥಹಳ್ಳಿ ತಾಲ್ಲೂಕು ಮೇಳಿಗೆ ಗ್ರಾಮದಲ್ಲಿ ಜನಿಸಿದರು. ಶ್ರೀಮತಿ ಪದ್ಮಾವತಿಯಮ್ಮ ಮತ್ತು ಶ್ರೀ ಎಸ್. ವಿ. ದೇವರ ಭಟ್ಟ ಇವರ ಮಾತಾಪಿತೃಗಳು. ಇವರು ಎಂ. ಎ., ಬಿ.ಎಡ್. ಪದವೀಧರರು. ತೆಲುಗು ಭಾಷೆಯ ಡಿಪ್ಲೋಮಾ ಪಡೆದಿರುತ್ತಾರೆ. ಕಮ್ಮರಡಿ ಪ್ರೌಢಶಾಲೆಯಲ್ಲಿ ಅಧ್ಯಾಪಕರಾಗಿರುತ್ತಾರೆ. ಸಂಗೀತದಲ್ಲಿ ೬-೭ ವರ್ಷಗಳ ಅನುಭವವಿದೆ. ಕನ್ನಡ ಸಾಹಿತ್ಯದಲ್ಲಿ ಅಭಿರುಚಿಯಿದೆ. ಲೇಖನ ಕವನಗಳನ್ನು ರಚಿಸಿದ್ದಾರೆ. ಮತ್ತೂರು ರಾಮಾಶಾಸ್ತ್ರಿಗಳ ಕಾವ್ಯವಾಚನ ಕೇಳಿ ಅದರಿಂದ ಪ್ರಭಾವಿತರಾಗಿ ವಾಚನ ಮಾಡುವುದನ್ನು ತಮಗಿದ್ದ ಸಂಗೀತಜ್ಞಾನದ ನೆರವಿನಿಂದ ಕಲಿತರು. ೯ ವರ್ಷಗಳಿಂದ, ಹಾಲೂರು, ಕಮ್ಮರಡಿ, ಬಸವಾನಿ, ಕಸಗಾರು, ಮಾಳೂರು ಮುಂತಾದ ಕಡೆ ವಾಚನ, ವ್ಯಾಖ್ಯಾನಗಳನ್ನು ನಡೆಸಿದ್ದಾರೆ. ಗದುಗಿನ ಭಾರತ, ಜೈಮಿನಿ ಭಾರತ, ಹರಿಶ್ಚಂದ್ರಕಾವ್ಯ, ಪ್ರಭುಲಿಂಗಲೀಲೆ, ರಾಮಾಯಣದರ್ಶನಂ ಇವರಿಗೆ ಬಹು ಇಷ್ಟವಾದ ಕಾವ್ಯಗಳು. ಕಾವ್ಯಗಳನ್ನು ಕುರಿತು ಉಪನ್ಯಾಸಗಳನ್ನೂ ಅಲ್ಲಲ್ಲಿ ಮಾಡಿದ್ದಾರೆ.

೨೦೮. ಆಮಿದಾಲ ಕಮಲಾ, ಬಳ್ಳಾರಿ

ಇವರು ೧೯೪೧ ರಲ್ಲಿ ಹೊಸಪೇಟೆಯಲ್ಲಿ ಜನಿಸಿದರು. ಇವರ ತಂದೆ ಕೊಟ್ಟೂರು ಬೋರ್ಡ್ ಹೈಸ್ಕೂಲಿನ ನಿವೃತ್ತ ಮುಖ್ಯೋಪಾಧ್ಯಾಯರಾದ ಶ್ರೀ ಆಲೂರ ಹನುಮಂತರಾಯರು. ಇವರ ಸಾಮಾನ್ಯ ವಿದ್ಯಾಭ್ಯಾಸ ಎಸ್. ಎಸ್. ಎಲ್. ಸಿ., ಹಿಂದೀ ರಾಷ್ಟ್ರಭಾಷಾ ಮತ್ತು ಸರಳ ಸಂಸ್ಕೃತ ಪ್ರವೇಶ ಪರೀಕ್ಷೆಗಳು. ಇವರು ಸಂಗೀತ ವಿದ್ವಾಂಸರಾದ ಬಿ. ವೆಂಕಟಪ್ಪನವರಲ್ಲಿ ಸಂಗೀತವನ್ನು ಅಭ್ಯಾಸ ಮಾಡಿ ಕರ್ಣಾಟಕಸಂಗೀತ ಜೂನಿಯರ್ ಪರೀಕ್ಷೆಯಲ್ಲಿ ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿರುವರು. ದೇವರನಾಮಗಳನ್ನು ಹಾಡುವುದರಲ್ಲಿಯೂ ಕಾವ್ಯ ವಾಚನದಲ್ಲಿಯೂ ಹೆಚ್ಚಿನ ಅಭಿರುಚಿಯಿರುತ್ತದೆ.

೨೦೯. ಕೈಪು ಲಕ್ಷ್ಮೀನರಸಿಂಹಶಾಸ್ತ್ರಿಗಳು, ಕೈವಾರ

ಇವರು ೧೯೪೪ರಲ್ಲಿ ಕೋಲಾರ ಜಿಲ್ಲೆಯ ಕೈವಾರ ಗ್ರಾಮದಲ್ಲಿ ಜನಿಸಿದರು. ಕೈಪು ಎಂಬುದು ಇವರ ಮನೆತನದ ಹೆಸರು. ಇವರ ತಂದೆಯವರು ಪ್ರಸಿದ್ಧ ಕೀರ್ತನಕಾರರಾದ ಕೈಪು ಶ್ರೀ ಕೃಷ್ಣಶಾಸ್ತ್ರಿಗಳು. ಕೀರ್ತನೆ ಮತ್ತು ಗಮಕ ಕಲೆಯು ಈ ಮನೆತನಕ್ಕೆ ಪರಂಪರಾಗತವಾಗಿ ಪ್ರಾಪ್ತವಾದದ್ದು. ಇವರ ತಂದೆಯವರೇ ಗುರುಗಳಾಗಿ ತೆಲುಗು ಕನ್ನಡ ಭಾಷೆಗಳ ಕಾವ್ಯಗಳನ್ನು ವಾಚನಮಾಡುವ ರೂಢಿಯನ್ನು ಉಳಿಸಿಕೊಂಡಿರುವರು. ಇವರ ಸೋದರಮಾವಂದಿರಾದ ಹೊಳಲ್ಕೆರೆ ಶ್ರೀ ಶಂಕರರಾಮಶಾಸ್ತ್ರಿಗಳವರು ಇವರ ಕಾವ್ಯಾಭ್ಯಾಸಕ್ಕೆ ವಿಶೇಷ ನೆರವನ್ನೂ ಪ್ರೋತ್ಸಾಹವನ್ನೂ ನೀಡಿರುವರು. ಇವರು ಕರ್ಣಾಟಕ ಸಂಗೀತದಲ್ಲಿ ಪ್ರೌಢಶ್ರೇಣಿಯಲ್ಲಿ ತೇರ್ಗಡೆಯಾಗಿರುವರು. ಪ್ರೌಢಶಾಲೆಯಲ್ಲಿ ಅಧ್ಯಾಪಕರಾಗಿದ್ದು ನಾಲ್ಕಾರು ವರ್ಷಗಳಿಂದ ಕಾವ್ಯವಾಚನ ಕಾರ್ಯಕ್ರಮಗಳನ್ನು ತಮ್ಮ ಜಿಲ್ಲೆಯ ಹಲವಾರು ಕಡೆಗಳಲ್ಲಿ ನಡೆಸಿಕೊಂಡು ಬಂದಿರುತ್ತಾರೆ. ಇವರು ಹಾರ್ಮೋನಿಯಂ ವಾದಕರೂ ಹೌದು. ಇವರ ಅನೇಕ ಲೇಖನಗಳು ಪರಿಷತ್ಪತ್ರಿಕೆ, ಸುಧಾ, ಕಸ್ತೂರಿ ಮತ್ತು ದೈನಂದಿನ ಪತ್ರಿಕೆಗಳಾದ ಕನ್ನಡ ಪ್ರಭ, ಕರ್ಮವೀರ ಮುಂತಾದುವುಗಳಲ್ಲಿ ಪ್ರಕಟವಾಗಿವೆ. ಇವರು 'ಗಿರಿಜಾನಂದನ' ಎಂಬ ಕಾವ್ಯನಾಮದಿಂದ 'ಅರಳಿದ ಹೂ' ಎಂಬ ಸಾಮಾಜಿಕ ಕಾದಂಬರಿ, ಕೈವಾರ ಕ್ಷೇತ್ರ, ಬೋಧ ಸುಧಾ ಕಥಾವಳಿ ಮುಂತಾದ ಕೃತಿಗಳನ್ನು ಪ್ರಕಟಿಸಿರುವರು. ಶ್ರೀಯುತರು ಬಿ.ಎ. ಪದವೀಧರರು; ಕನ್ನಡ ಪಂಡಿತ ಪರೀಕ್ಷೆ, ಹಿಂದೀ ರಾಷ್ಟ್ರಭಾಷಾಪ್ರವೀಣ, ಸಂಗೀತ ಸೀನಿಯರ್ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವರು. ಸಂಸ್ಕೃತದಲ್ಲಿರುವ ಪೌರಾಣಿಕ ಸಾಹಿತ್ಯ ಪ್ರವಚನದಲ್ಲಿ ಇವರಿಗೆ ಅತಿಶಯವಾದ ಆಸಕ್ತಿಯಿದೆ.

೨೧೦. ವಸ್ತಾರೆ ಕೃಷ್ಣಮೂರ್ತಿ

ಇವರು ೧೯೪೬ರಲ್ಲಿ ಶಿವಮೊಗ್ಗಾದಲ್ಲಿ ಜನ್ಮತಾಳಿದರು. ಎಸ್. ಎಸ್. ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರು. ಇಂಡಿಯನ್ ಟೆಲಿಫೋನ್ ಕಾರ್ಖಾನೆಯಲ್ಲಿ ಉದ್ಯೋಗದಲ್ಲಿರುತ್ತಾರೆ. ಗಮಕದ ನೆಲೆವೀಡೆನಿಸಿರುವ ಮತ್ತೂರು ಹೊಸಹಳ್ಳಿಯ ಪರಿಸರದಲ್ಲಿ ಬೆಳೆದು ಚಿಕ್ಕಂದಿನಿಂದ ಅನೇಕ ಗಮಕ ವಾಚನ ಕಾರ್ಯಕ್ರಮಗಳನ್ನು ಕೇಳಿದ್ದ ಕಾರಣ ಈ ಕಲೆಯಲ್ಲಿ ವಿಶೇಷ ಅಭಿಮಾನ ತಳೆದರು.

ಬೆಂಗಳೂರಿಗೆ ಬಂದನಂತರ ದೂರವಾಣಿ ನಗರದ ಕರ್ನಾಟಕ ಸಂಘದಲ್ಲಿ ನಡೆಯುತ್ತಿದ್ದ ಗಮಕ ತರಗತಿಗಳಿಗೆ ಸೇರಿ ಗಮಕ ವಿದ್ವಾನ್ ಶ್ರೀ ಜಿ. ಎ. ಅನಂತಪದ್ಮನಾಭಯ್ಯನವರ ಶಿಷ್ಯರಾಗಿ ೧೯೬೩ರಲ್ಲಿ ಗಮಕ ಪ್ರವೇಶ ಪರೀಕ್ಷೆಯಲ್ಲಿಯೂ ಉತ್ತೀರ್ಣರಾದರು. ಈ ಸಂದರ್ಭದಲ್ಲಿ ತ್ರಿಭಾಷಾ ಪಂಡಿತರಾದ ಶ್ರೀ ಅನಂತ ರಾಮಯ್ಯನವರು, ಸಂಗೀತ ವಿದ್ವಾನ್ ಶ್ರೀ ವೆಂಕಟರಾಮಯ್ಯನವರು ಮತ್ತು ಸಂಗೀತ ವಿದುಷಿ ಶ್ರೀಮತಿ ವಿಜಯವಾಣಿ ಇವರುಗಳು ಇವರಿಗೆ ಅಧ್ಯಾಪಕರಾಗಿದ್ದರು. ಎಂಟು ಹತ್ತು ವರುಷಗಳಿಂದ ದೂರವಾಣಿನಗರದ ಕರ್ನಾಟಕ ಸಂಘದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ, ಗಣೇಶೋತ್ಸವದ ಸಂದರ್ಭಗಳಲ್ಲಿ ಬೆಂಗಳೂರಿನ ಹಲವೆಡೆಗಳಲ್ಲಿ ಇವರ ಗಮಕವಾಚನದ ಸೇವೆಯು ನಡೆದಿರುತ್ತದೆ. ಶಿಷ್ಯವರ್ಗವೆಂಬುದು ಯಾವುದೂ ಇವರಿಗಿಲ್ಲ. ಇವರ ಶ್ರೀಮತಿಯವರೇ ಶಿಷ್ಯೆ. ಆಚಾರ್ಯಪುಷ್ಟಿಯಿಲ್ಲದೆ, ಕಾವ್ಯಾನಂದಕ್ಕಾಗಿಯೇ ಮನೆಯಲ್ಲಿ ಕೆಲವರಿಗೆ ಗಮಕ ಕಲೆಯಲ್ಲಿ ತರಬೇತಿ ಕೊಡುತ್ತಿದ್ದಾರೆ. ಶಾಸ್ತ್ರೀಯವಾಗಿ ಸಂಗೀತಾಭ್ಯಾಸವಾಗಿಲ್ಲ. ದೇವರ ನಾಮಗಳನ್ನು ಬಂದಿರುವ ರಾಗಗಳಲ್ಲೇ ಹಾಡಿಕೊಂಡು ಆತ್ಮಾನಂದ ಹೊಂದುವ ಸ್ವಭಾವ ಇವರದು.

೨೧೧. ಕೆ. ರಾಧಾಕೃಷ್ಣ, ಬಳ್ಳಾರಿ

ಇವರು ೧೯೪೫ರಲ್ಲಿ ಜನಿಸಿದರು. ಎಸ್. ಎಸ್. ಎಲ್. ಸಿ. ಆಗಿ ಸರ್ಕಾರಿ ಉನ್ನತ ಮಾಧ್ಯಮಿಕ ಶಾಲೆ, ಪಾರ್ವತೀನಗರದಲ್ಲಿ ಉಪಾಧ್ಯಾಯರಾಗಿರುವರು. ಬಳ್ಳಾರಿ ರಾಘವರವರ ಮಾವನವರಾದ ಆಂಧ್ರ ನಾಟಕ ಪಿತಾಮಹ ಧರ್ಮಾವರಂ ಕೃಷ್ಣಮಾಚಾರ್ಯರು ಆಡುತ್ತಿದ್ದ ನಾಟಕಗಳಲ್ಲಿ ಪಾತ್ರವಹಿಸುತ್ತಿದ್ದ ಇವರ ತಂದೆಯವರು ಉತ್ಕೃಷ್ಟ ರೀತಿಯಲ್ಲಿ ತೆಲುಗು ಪದ್ಯಗಳನ್ನು ಹಾಡುವರು. ಅವರಿಂದ ಪ್ರೇರಿತರಾಗಿ ಮುಂದೆ ಸಂಗೀತವನ್ನು ಡಿ. ವೆಂಕಟಪ್ಪನವರಲ್ಲಿ ಕಲಿತರು. ಗಮಕ ಕಲೆಯನ್ನು ಶ್ರೀ ರಾಮಾಶಾಸ್ತ್ರಿಗಳವರು ನಡೆಸುತ್ತಿರುವ ಗಮಕ ತರಗತಿಗೆ ಸೇರಿ ಕಲಿತು ೧೯೭೧–೭೨ರಲ್ಲಿ ಪ್ರೌಢ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರು. ಚಿಕ್ಕ ಮಕ್ಕಳಿಗೆ ಸಂಗೀತವನ್ನೂ ಗಮಕವನ್ನೂ ಅಭ್ಯಾಸ ಮಾಡಿಸುತ್ತಿರುವರು.

೨೧೨. ಎಸ್. ಆರ್. ಕೃಷ್ಣಮೂರ್ತಿ, ಶಿಕಾರಿಪುರ

ಇವರು ೧೯೪೧ರಲ್ಲಿ ಶಿವಮೊಗ್ಗಾ ಜಿಲ್ಲೆಯ ಶಿಕಾರಿಪುರದಲ್ಲಿ ಶ್ರೀ ರಾ
ವೇಂದ್ರಾಚಾರ್ ಮತ್ತು ಸಣ್ಣಮ್ಮ ದಂಪತಿಗಳ ಮಗನಾಗಿ ಜನಿಸಿದರು. ಇವ
ತಂದೆಯವರು ಶಾಲಾ ಉಪಾಧ್ಯಾಯರಾಗಿ ನಿವೃತ್ತರಾಗಿರುವರು. ಅವರು ಶಾಸ್
ಸಂಪನ್ನರು, ಪೌರಾಣಿಕರು, ಯಕ್ಷಗಾನ ಮತ್ತು ನಾಟಕ ಕಲಾವಿದರಾಗಿದ್ದರು
ಅವರಂತೆಯೇ ಮಕ್ಕಳೂ ಗಮಕ ಪ್ರವೇಶ ತರಗತಿ ಸೇರಿ ಶ್ರೀ ಎಂ. ರಾಘವೇಂದ್ರ
ರಾಯರ ಶಿಷ್ಯರಾದರು. ಅನಂತರ ಶ್ರೀ ಹೆಚ್. ಎಂ. ರಾಮಾರಾಧ್ಯರಲ್ಲಿ ಅಭ್ಯಾ
ವನ್ನು ಮುಂದುವರಿಸಿದರು. ಅವರೀರ್ವರ ಪ್ರೋತ್ಸಾಹ ಮತ್ತು ಅನುಗ್ರಹಗಳಿಂ
ಮಲ್ಲೇಶ್ವರದಲ್ಲಿ "ಕರ್ನಾಟಕ ಗಮಕ ಕಲಾ ಸಂಘ"ವನ್ನು ಸ್ಥಾಪಿಸಿದರು. ಪ್ರಕೃ
ಅಲ್ಲಿ ಸಮಗ್ರ ಕುಮಾರವ್ಯಾಸ ಭಾರತ ವಾಚನವು ೩೨೦ ದಿನಗಳಿಂದ ನಡೆಯುತ್ತಿ
ಪ್ರತಿದಿನ ೩೦೦ ಜನ ಸಹೃದಯ ಶ್ರೋತೃಗಳು ಸೇರುತ್ತಾರೆ. ಪ್ರಾಚೀನ ಕಾವ
ಗಳನ್ನು ಗಮಕ ಕಲೆಯ ಮೂಲಕ ವ್ಯಾಖ್ಯಾನದ ನೆರವಿನೊಂದಿಗೆ ಪ್ರಚಾ
ಮಾಡುವುದೇ ಮುಖ್ಯ ಉದ್ದೇಶವಾಗಿರುತ್ತದೆ.

೨೧೩. ಕೆ. ವಿ. ರುಕ್ಮಿಣಿ ಎಸ್ ಅಯ್ಯಂಗಾರ್, ಬೆಂಗಳೂರ

ಇವರು ೭–೩–೧೯೪೧ರಂದು ಮೈಸೂರಿನಲ್ಲಿ ಜನಿಸಿದರು. ತಂದೆ ಶ್ರೀ
ಎಸ್. ಎಸ್. ರಂಗಾಚಾರ್‌ರವರು ಮತ್ತು ತಾಯಿ ಶ್ರೀಮತಿ ಎನ್. ಎಸ್
ತಿರುಮಲಮ್ಮನವರು. ಸಂಗೀತದಲ್ಲಿ ಅನುಭವವಿದೆ. ಗಮಕ ವಾಚನ ಕಾರ್ಯಕ್ರಮ
ಗಳನ್ನು ಕೇಳಿ ಇವರಿಗೆ ಮತ್ತು ಇವರ ತಂದೆಯವರಿಗೆ ಆ ಕಲೆಯಲ್ಲಿ ಆಸಕ್ತಿ
ಯುಂಟಾಯಿತು. ಶ್ರೇಷ್ಠ ಗಮಕಿಗಳೂ ವ್ಯಾಖ್ಯಾನಕಾರರೂ ಆದ ಶ್ರೀ ಕೆ. ಎಸ್
ವೆಂಕಟೇಶಯ್ಯನವರಲ್ಲಿ ಗಮಕವನ್ನು ಅಭ್ಯಾಸ ಮಾಡಿ ೧೯೬೪ರಲ್ಲಿ ಪ್ರವೇ
ದಲ್ಲಿಯೂ ೧೯೭೬ರಲ್ಲಿ ಗಮಕ ಪ್ರೌಢಪರೀಕ್ಷೆಯಲ್ಲಿಯೂ ತೇರ್ಗಡೆ ಹೊಂದಿದರು
ಈ ವರ್ಷದಿಂದ ರಾಜಾಜಿನಗರದ ಕುಶಲವ ಗಮಕ ಕಲಾಸಂಘದಲ್ಲಿ ತರಗತಿಗಳನ್ನು
ನಡೆಸುತ್ತಿರುವರು. ಹಬ್ಬಹರಿದಿನಗಳು, ಉತ್ಸವ ಸಮಾರಂಭಗಳು, ರಥೋತ್ಸವಗ
ಗಳ ಸಂದರ್ಭಗಳಲ್ಲಿ ಕೆ. ಆರ್. ಪೇಟೆ, ಬಯಲಹಳ್ಳಿ, ಹಾಸನ, ಬೆಂಗಳೂರಿ
ಅನೇಕ ಸ್ಥಳಗಳಲ್ಲಿ ಕನ್ನಡಸಾಹಿತ್ಯ ಪರಿಷತ್ತಿನಲ್ಲಿ ಕಾವ್ಯವಾಚನ ಕಾರ್ಯಕ್ರಮ
ನಡೆಸಿರುವರು. ಮೈಸೂರು, ಮಂಡ್ಯ ನಗರಗಳಲ್ಲಿ ನಡೆದ ಕುವೆಂಪು ರಾಮಾ

ಯಣದರ್ಶನಂ ಕಾವ್ಯವಾಚನ ಸ್ಪರ್ಧೆಗಳಲ್ಲಿ, ಪ್ರಥಮ ಬಹುಮಾನಗಳನ್ನು ಗಳಿಸಿರುವರು. ಬೆಂಗಳೂರಿನ ದೂರವಾಣಿನಗರದ ಕರ್ನಾಟಕ ಸಂಘದ ಆಶ್ರಯದಲ್ಲಿ ನಡೆದ ಕಾವ್ಯವಾಚನ ಸ್ಪರ್ಧೆಯಲ್ಲಿ ಸಹ ಪ್ರಥಮ ಬಹುಮಾನ ಬಂದಿರುತ್ತದೆ.

೨೧೩. ಕೆ. ಸುಬ್ರಹ್ಮಣ್ಯಂ, ಗಾಯತ್ರೀನಗರ, ಬೆಂಗಳೂರು

ಇವರು ತುಮಕೂರು ಜಿಲ್ಲಾ ಗುಬ್ಬಿ ತಾಲ್ಲೂಕಿಗೆ ಸೇರಿದ ಕಡಬಾ ಗ್ರಾಮದಲ್ಲಿ ೧೪-೧-೧೯೪೨ರಂದು ಜನಿಸಿದರು. ಇವರ ತಂದೆ ಶ್ರೀ ಕೆ. ನಾರಣಪ್ಪ, ತಾಯಿ ಭಾಗೀರಥಮ್ಮನವರು. ಇವರು ಬಿ.ಎಸ್‌ಸಿ. ಪದವೀಧರರು. ಭಾರತೀಯ ವಿಜ್ಞಾನ ಮಂದಿರದಲ್ಲಿ ಜೂನಿಯರ್ ಟೆಕ್ನಿಕಲ್ ಅಸಿಸ್ಟೆಂಟರಾಗಿರುವರು. ಇವರಿಗೆ ವರ್ಣಕೃತಿ ಕೀತನೆಗಳನ್ನು ಹಾಡುವ ಸಾಮರ್ಥ್ಯವು ೧೫ ವರುಷಗಳ ಮೇಲ್ಪಟ್ಟು ರೂಢವಾಗಿದೆ. ಸಾಹಿತ್ಯ ಪರಿಚಯವಿರುವ ಇವರು ಆಕಾಶವಾಣಿಯ ಪ್ರಸಾರಕ್ಕೆ ಒದಗಬಲ್ಲ ರೂಪಕಗಳನ್ನು ರಚಿಸಿರುವರು. ಅವುಗಳಲ್ಲಿ "ಕುಮಾರವ್ಯಾಸ ಭಾರತದಲ್ಲಿ ಹಾಸ್ಯಪ್ರಸಂಗ, ದಕ್ಷಾಧ್ವರ ಮತ್ತು ಶಂಕರವಿಜಯದ ಪ್ರಸಂಗ"ಗಳನ್ನು ಹೆಸರಿಸಬಹುದು. ಇವರು ಗಮಕ ಗುರುಗಳು ಪಂಡಿತ ಹು. ಮಾ. ರಾಮಾರಾಧ್ಯರು. ಇವರು ಗಮಕ ಪ್ರೌಢಪರೀಕ್ಷೆಯಲ್ಲಿ ಉತ್ತಮ ದರ್ಜೆಯಲ್ಲಿ ತೇರ್ಗಡೆಯಾಗಿರುವರು. ಆಕಾಶವಾಣಿಯಲ್ಲಿಯೂ ಸಹ ಇವರ ಕಾವ್ಯವಾಚನಗಳು ೫-೬ ವರ್ಷಗಳಿಂದ ಪ್ರಸಾರವಾಗಿವೆ. ಮಲ್ಲೇಶ್ವರ ಗಾಂಧೀಸಾಹಿತ್ಯ ಸಂಘದಲ್ಲಿ ನಡೆಸುತ್ತಿದ್ದ ಗಮಕ ತರಗತಿಗಳಿಗೂ ಕೆಲವು ಕಾಲ ಅಧ್ಯಾಪಕರಾಗಿದ್ದರು.

೨೧೪. ಪರಿಮಳಾ ಗುರುರಾಜ್, ಬೆಂಗಳೂರು

ಇವರು ನವೆಂಬರ್ ೧೯೪೨ರಲ್ಲಿ ಜನಿಸಿದರು. ಇವರ ತಂದೆ ಗಮಕಿ ಶ್ರೀ ಎಂ. ರಾಘವೇಂದ್ರರಾಯರು—ತಾಯಿ ಶ್ರೀಮತಿ ಜಯಲಕ್ಷಮ್ಮನವರು. ಇವರ ಸಾಮಾನ್ಯ ವಿದ್ಯಾಭ್ಯಾಸ ೭ನೆಯ ತರಗತಿಯವರೆಗೆ. ಸಂಗೀತವನ್ನು ಪಿಟೀಲ್ ಶ್ರೀ ಚೌಡಯ್ಯನವರಲ್ಲಿಯೂ, ವೀಣೆ ಜಯರಾಯರಲ್ಲಿಯೂ ಮತ್ತು ಬೆಳಕವಾಡಿ ವರದರಾಜಯ್ಯಂಗಾರ್ಯರಲ್ಲಿಯೂ ಅಭ್ಯಾಸ ಮಾಡಿರುವರು. ಗಮಕ ಪ್ರೌಢ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾರೆ. ೧೯೬೦ರಿಂದಲೂ ಸಾಹಿತ್ಯ ಪರಿಷತ್ತಿನ ಕಾರ್ಯಕ್ರಮಗಳಲ್ಲಿ ಪ್ರಾರ್ಥನೆ ಮತ್ತು ದೇವರನಾಮಗಳನ್ನು ಹಾಡುವ ಮೂಲಕ

ಭಾಗವಹಿಸುತ್ತಿರುವರು. ಕಾವ್ಯವಾಚನದಲ್ಲಿ ಸುಮಾರು ೧೫ ವರ್ಷಗಳ ಅ
ಭವವಿದೆ.

೨೧೪. ಸತ್ಯವತಿ ಕೇಶವಮೂರ್ತಿ, ಬೆಂಗಳೂರು

ಇವರು ೨೫-೫-೧೯೪೩ರಲ್ಲಿ ಮೈಸೂರಿನಲ್ಲಿ ಜನಿಸಿದರು. ಇವರ ಮಾ
ಪಿತೃಗಳು ಶ್ರೀಮತಿ ಜಯಲಕ್ಷ್ಮಿ ಮತ್ತು ಶ್ರೀ ಬಿ. ಎಸ್. ಎಸ್. ಕೌಶಿಕ್‌ರವ
ಸಂಗೀತದಲ್ಲಿ ಸುಮಾರು ೧೫ ವರ್ಷಗಳ ಅನುಭವವಿದೆ. ಕನ್ನಡ ಸಾಹಿತ್ಯ
ಬಹಳ ಅಭಿಮಾನ ಮತ್ತು ಅಭಿರುಚಿ. ತಂದೆಯವರ ಗಮಕ ವಾಚನ ಕಾ
ಕ್ರಮಗಳಿಗೆ ಹೋಗಿ, ಕೇಳಿ ಈ ಕಲೆಯಲ್ಲಿ ಆಸಕ್ತಿ ಮೂಡಿತು. ತಂದೆಯವರ
ಶ್ರೀ ಗಮಕಿ ಬಿ. ಎಸ್. ಎಸ್. ಕೌಶಿಕ್‌ರವರೇ ಗುರುಗಳು. ಅಲ್ಲದೆ ಇ
ಮಾತೃಶ್ರೀಯವರು, ಅತ್ತೆ ಮಾವಂದಿರು ಮತ್ತು ಯಜಮಾನರ ಸತತ ಪ್ರೋ
ಹವೂ ಲಭಿಸಿರುತ್ತದೆ. ಶ್ರೀ ಗಮಕಿ ರಾಘವೇಂದ್ರರಾಯರ ಪ್ರೋತ್ಸಾಹದಿ
ಗಮಕ ಪ್ರೌಢಕ್ಕೆ ವ್ಯಾಸಂಗ ಮಾಡಿ ಎರಡನೇ ತರಗತಿಯಲ್ಲಿ ಉತ್ತೀ
ರಾದರು. ೧೩ ವರ್ಷಗಳಿಂದ ಗಮಕ ತರಗತಿಗಳನ್ನು ನಡೆಸುತ್ತ ಬಂದಿದ್ದಾ
ಶ್ರೀಮತಿಯರಾದ ಗಂಗಮ್ಮ ಕೇಶವಮೂರ್ತಿ, ಇಂದಿರಾ ವೆಂಕಟೇಶ್ ಮುಂತ
ಉತ್ತಮ ಗಮಕಿಗಳನ್ನು ತಯಾರು ಮಾಡಿರುತ್ತಾರೆ. ಅನೇಕ ವರ್ಷಗಳಿಂದ ಕೃ
ಪುರ, ಕುದೂರು ಮುಂತಾದ ಗ್ರಾಮಾಂತರ ಪ್ರದೇಶಗಳಲ್ಲಿ ಕಾವ್ಯವಾಚನಗಳ
ನಡೆಸಿರುತ್ತಾರೆ. ಇವರಿಗೆ ಗದುಗಿನ ಭಾರತ, ಜೈಮಿನಿ ಭಾರತ, ಹರಿಶ್ಚಂದ್ರ ಕಾ
ರಾಮ ಪಟ್ಟಾಭಿಷೇಕ, ತೊರವೆಯ ರಾಮಾಯಣ ಪ್ರಿಯವಾದ ಕಾವ್ಯಗ
ಚಂಪೂಕಾವ್ಯಗಳೂ ಇಷ್ಟ. ಮೈಸೂರು ಬಳೇಪೇಟೆ ಶ್ರೀನಿವಾಸ ಮಂದಿರದಲ್ಲಿ, ಜ
ನಗರದ ರಾಮ ಮಂದಿರದಲ್ಲಿ ಒಂದು ತಿಂಗಳು ಇವರ ವಾಚನ ನಡೆದಿದೆ. ಮೈಸ
ಸೊಪ್ಪಿನ ಕೊಳದ ಬೀದಿಯಲ್ಲಿರುವ ರೇಣುಕೇಶ್ವರ ದೇವಾಲಯದ ಜಯಂತಿ ಉ
ದಲ್ಲಿ ೧೦ ದಿನಗಳು ಶ್ರೀ ಶ್ರೀಕಂಠಶಾಸ್ತ್ರಿಗಳ ವ್ಯಾಖ್ಯಾನದೊಂದಿಗೆ ಅನೇ
ವಾಚನ ನಡೆಸಿ ಮಹಾಜನಗಳ ಸಂತೋಷಕ್ಕೆ ಪಾತ್ರರಾಗಿ ಒಂದು ಚಿನ್ನದ ಪ
ವನ್ನೂ "ಗಮಕ ಕಲಾ ಚದುರೆ" ಎಂಬ ಪ್ರಶಸ್ತಿಯನ್ನೂ ಪಡೆದಿರುತ್ತಾರೆ. ಅ
ಸಂದರ್ಭದಲ್ಲಿ ಶ್ರೀ ಶ್ರೀಕಂಠಶಾಸ್ತ್ರಿಗಳಿಗೆ "ವ್ಯಾಖ್ಯಾನ ಭೂಷಣ" ಎಂಬ ಪ್ರ
ಯನ್ನು ನೀಡಿ ಗೌರವಿಸಲಾಯಿತು.

೨೧೫. ಪಿ. ಎ. ಗಿರಿಧರ್, ಮೈಸೂರು

ಇವರು ಮೈಸೂರು ಜಿಲ್ಲೆಯಲ್ಲಿ ೨೮-೧೧-೧೯೪೩ ನೇ ದಿನ ಜನಿಸಿದರು. ಇವರ ತಂದೆ ಪಿ. ಕೆ. ಆನಂದರಾಯರು, ತಾಯಿ-ಇಂದಿರಾಬಾಯಿ. ಆಟೊ ಮೊಬೈಲ್ ಇಂಜಿನೀಯರಿಂಗ್‌ನಲ್ಲಿ ಡಿಪ್ಲೊಮಾ ಪಡೆದು ವ್ಯಾಪಾರೋದ್ಯಮಿಗಳಾಗಿರುವರು. ಸ್ವಲ್ಪಮಟ್ಟಿಗೆ ಸಂಗೀತ ಮತ್ತು ರಾಗಗಳ ಪರಿಚಯವಿದೆ. ಇವರಿಗೆ ಕನ್ನಡ ಸಾಹಿತ್ಯದಲ್ಲಿ ಅಭಿರುಚಿಯಿದೆ. ಕಾವ್ಯವಾಚನವನ್ನು ಮಾಡಬಲ್ಲರು, ಪದ್ಯಗಳ ತಾತ್ಪರ್ಯವನ್ನೂ ಹೇಳಬಲ್ಲರು. ಅವರ ಅಜ್ಜಿಯವರ ಮೂಲಕ ಪದ್ಯಗಳನ್ನು ರಾಗವಾಗಿ ಓದುವುದನ್ನು ಕಲಿತರು. ೧೯೭೫ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ನಡೆಸಿದ ಗಮಕ ಅಧ್ಯಾಪಕರ ಶಿಕ್ಷಣ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುತ್ತಾರೆ. ಇವರಿಗೆ ಗಮಕ ಕಲೆಯಲ್ಲಿ ಮಾರ್ಗದರ್ಶನ ಮಾಡಿದ ಗುರುಗಳೆಂದರೆ ಸಾಲಿಗ್ರಾಮದ ಶ್ರೀಕಂಠಶಾಸ್ತ್ರಿಗಳು ಮತ್ತು ಕೃಷ್ಣಗಿರಿ ಕೃಷ್ಣರಾಯರು. ಇವರಿಗೆ ಅತ್ಯಂತ ಇಷ್ಟವಾದ ಕಾವ್ಯ ಕುಮಾರವ್ಯಾಸ ಭಾರತ. ಗ್ರಾಮಾಂತರ ಪ್ರದೇಶಗಳಲ್ಲಿ, ರಾಮೋತ್ಸವ ಸಮಾರಂಭಗಳಲ್ಲಿ ಗಣೇಶೋತ್ಸವ ಸಮಾರಂಭಗಳಲ್ಲಿ ಅನೇಕ ಕಡೆಗಳಲ್ಲಿ ಕಾವ್ಯವಾಚನ ಮಾಡಿರುವರು. ಸಾಹಿತ್ಯ ಮತ್ತು ಸಂಸ್ಕೃತಿ ಪ್ರಸಾರ ಇಲಾಖೆಯಲ್ಲಿ ಕಾರ್ಯಕ್ರಮಗಳನ್ನು ನಡೆಸಿರುತ್ತಾರೆ. ಬೆಂಗಳೂರು ಆಕಾಶವಾಣಿಯಲ್ಲಿ ಕಾವ್ಯವಾಚನ ಕಾರ್ಯಕ್ರಮಗಳನ್ನು ನಡೆಸುತ್ತಿರುವರು. ಸೋಸಲೆ ಶ್ರೀ ವ್ಯಾಸರಾಜ ಮಠದ ಸ್ವಾಮಿಗಳವರು ಇವರ ಕಾವ್ಯವಾಚನವನ್ನು ಮೆಚ್ಚಿ ಇವರಿಗೆ "ಕಾವ್ಯವಾಚನ ಪ್ರವೀಣ" ಎಂಬ ಬಿರುದನ್ನು ದಯಪಾಲಿಸಿರುವರು. ಕೆಲ ವರ್ಷಗಳಿಂದಲೂ ಮೈಸೂರು ಕೃಷ್ಣಮೂರ್ತಿಪುರಂನ ಶ್ರೀರಾಮ ಮಂದಿರದಲ್ಲಿ ಗಮಕ ಪ್ರವೇಶ ತರಗತಿಗಳನ್ನು ನಡೆಸುತ್ತಿರುವರು.

೨೧೬. ಎಂ. ಆರ್. ಸುಲೋಚನ, ಬೆಂಗಳೂರು

ಇವರು ೩೦-೧೨-೧೯೪೩ರಲ್ಲಿ ಚಿಕ್ಕಬಳ್ಳಾಪುರದಲ್ಲಿ ಜನಿಸಿದರು. ಸಂಗೀತ ಶಾಸ್ತ್ರ ರತ್ನ ಶ್ರೀ ವಾಸುದೇವಾಚಾರ್ಯರು ಇವರ ವಂಶಜರೇ ಆಗಿದ್ದು ದೂರದ ತಾತನವರೂ ಆಗಿದ್ದರು. ಇವರ ಸ್ವಂತ ತಾತನವರು ಕುಶಲ ಕಲೆಗಳಲ್ಲಿ ಪ್ರವೀಣರಾಗಿದ್ದು ೧೯೧೮ರಲ್ಲಿ ಆಳಿದ ನಾಲ್ವಡಿ ಕೃಷ್ಣರಾಜ ಒಡೆಯರವರು ಕುಣಿಗಲಿಗೆ

ದಯಮಾಡಿಸಿದ್ದಾಗ ಒಂದು ಕೆತ್ತನೆಯ ರಜತ ಕರಂಡವನ್ನು ಪ್ರಭುಗಳಿಗೆ ಅರ್ಪಿಸಿ ದರಂತೆ. ಇವರು ಸಾಮಾನ್ಯ ವಿದ್ಯಾಭ್ಯಾಸವನ್ನು ಎಸ್. ಎಸ್. ಎಲ್. ಸಿ.ವರೆಗೂ ಸಂಗೀತವನ್ನು ಸೀನಿಯರ್ ಪರೀಕ್ಷೆವರೆಗೂ ಪಡೆದಿರುವರು. ಇವರಿಗೆ ಸಣ್ಣ ಕತೆ ಕವನಗಳನ್ನು ಬರೆಯುವ ಆಸಕ್ತಿ ವಿಶೇಷವಾಗಿದೆ. ದೂರವಾಣಿ ನಗರದ ಕರ್ನಾ ಟಕ ಸಂಘದ ಆಶ್ರಯದಲ್ಲಿ ನಡೆಸುತ್ತಿದ್ದ ಗಮಕ ತರಗತಿಗಳಲ್ಲಿ ಗಮಕಿ ಜಿ. ಎ. ಅನಂತಪದ್ಮನಾಭಯ್ಯನವರ ಶಿಷ್ಯತ್ವವನ್ನು ವಹಿಸಿ, ಗಮಕ ಪ್ರವೇಶ ಮತ್ತು ಪ್ರೌಢ ಪರೀಕ್ಷೆಗಳನ್ನು ಉತ್ತಮ ಶ್ರೇಣಿಯಲ್ಲಿಯೇ ಮಾಡಿರುವರು. ಇವರ ಕಾವ್ಯ ವಾಚನ ಕಾರ್ಯಕ್ರಮಗಳು ಬೆಂಗಳೂರಿನ ಆಕಾಶವಾಣಿಯಿಂದ ಪ್ರಸಾರವಾಗಿವೆ. ದೇವನೂರು, ಮಂಡ್ಯ, ಮೇಲುಕೋಟೆ ಮತ್ತು ಧರ್ಮಸ್ಥಳಗಳಲ್ಲಿ ಕಾವ್ಯವಾಚನ ಗಳನ್ನು ನಡೆಸಿ ಶ್ರೋತೃಗಳ ಪ್ರಶಂಸೆಯನ್ನೂ ಶ್ರೀ ವೀರೇಂದ್ರ ಹೆಗ್ಗಡೆಯವರ ಆಶೀ ರ್ವಾದವನ್ನೂ ಪಡೆದಿರುವರು. ಅನೇಕ ಗಮಕ ವಿದ್ವಾಂಸರ ಕಾವ್ಯವಾಚನಗಳನ್ನು ಕೇಳಿ ಇವರ ವಾಚನ ಕಲೆಯು ಪುಷ್ಟವಾಗಿದೆ. ಗಮಕ ಪ್ರಚಾರವು ರೂಪಕದ ಅಭಿನಯದಿಂದ ಹೆಚ್ಚು ಸಾಧ್ಯವೆಂದು ಇವರ ಅಭಿಪ್ರಾಯ.

೨೧೭. ಪಿ. ಮುರಳೀಧರ್, ಬಳ್ಳಾರಿ

ಇವರು ೧೯೪೪ರಲ್ಲಿ ಜನಿಸಿದರು. ಸಾಮಾನ್ಯ ವಿದ್ಯಾಭ್ಯಾಸ ಎಸ್. ಎಸ್. ಎಲ್. ಸಿ. ಚಿಕ್ಕವಯಸ್ಸಿನಿಂದಲೂ ಹಾಡುಗಾರಿಕೆ, ವಾದ್ಯ ಸಂಗೀತ ಇವರಿ ಪ್ರಭಾವವನ್ನು ಬೀರಿತ್ತು. ವೀಣೆ, ಪಿಟೀಲು ಬಾರಿಸುವುದರಲ್ಲಿಯೂ ಹಾಡುವುದ ರಲ್ಲಿಯೂ ತಕ್ಕಮಟ್ಟಿನ ಪರಿಶ್ರಮವಿದೆ. ಇವರು ಸರ್ಕಾರಿ ಹೈಯರ್ ಪ್ರೈಮರಿ ಶಾಲೆಯಲ್ಲಿ ಉಪಾಧ್ಯಾಯರಾಗಿರುವರು.ಗಮಕ ವಿದ್ವಾನ್ ಶ್ರೀ ರಾಮಾಶಾಸ್ತ್ರಿಗಳ ೧೯೬೭ರಲ್ಲಿ ಗಮಕ ಪ್ರವೇಶ ಪರೀಕ್ಷೆಯನ್ನು ಅಭ್ಯಾಸ ಮಾಡಿ ಅದರಲ್ಲಿ ಉತ್ತೀರ್ಣ ರಾಗಿರುವರು. ಇವರಿಗೆ ಹಾರ್ಮೋನಿಯಂ ನುಡಿಸುವುದರಲ್ಲಿಯೂ ಚಿತ್ರಕಲೆ ಯಲ್ಲಿಯೂ ಪರಿಶ್ರಮವಿವೆ.

೨೧೮. ಆಲೂರು ಶಾಂತ

ಇವರು ೧೯೪೫ ರಂದು ಬಳ್ಳಾರಿ ಜಿಲ್ಲೆಯ ಕೊಟ್ಟೂರಿನಲ್ಲಿ ಜನಿಸಿದರು. ಇವರ ತಂದೆಯವರು ಕೊಟ್ಟೂರು ಬೋರ್ಡ್ ಹೈಸ್ಕೂಲಿನ ಮುಖ್ಯೋಪಾಧ್ಯಾಯ

ರಾಗಿದ್ದು ನಿವೃತ್ತರಾದ ಆಲೂರು ಹನುಮಂತರಾಯರು, ಬಿ.ಎ., ಎಲ್.ಟಿ., ಈಕೆ ಬಿ.ಎ., ಪದವೀಧರೆ. ಭಾರತೀಯ ವಿದ್ಯಾಭವನದ ಸರಳ ಸಂಸ್ಕೃತ "ಕೋವಿದ" ಪರೀಕ್ಷೆಯಲ್ಲಿಯೂ ಹಿಂದಿಯಲ್ಲಿ ರಾಷ್ಟ್ರಭಾಷಾ ಪ್ರವೀಣ ಪರೀಕ್ಷೆಯಲ್ಲಿಯೂ ಉತ್ತಮ ಶ್ರೇಣಿಯಲ್ಲಿ ಉತ್ತೀರ್ಣರಾಗಿರುವರು. ಸಂಗೀತ ಸೀನಿಯರ್ ಗ್ರೇಡ್‌ನಲ್ಲಿ ತೇರ್ಗಡೆಯಾಗಿರುವರು. ಇವರು ಗಮಕ ಕಲಾನಿಧಿ ಶ್ರೀ ರಾಮಾಶಾಸ್ತ್ರಿಗಳ ಶಿಷ್ಯರು ಇವರಿಗೆ ದೇವರನಾಮುಗಳನ್ನು ಹಾಡುವುದರಲ್ಲಿ ಹೆಚ್ಚು ಅಭಿರುಚಿ.

೨೧೯. ಎಂ. ಆರ್. ಕೇಶವಮೂರ್ತಿ, ಬೆಂಗಳೂರು

ಇವರು ೮-೬-೧೯೪೫ರಲ್ಲಿ ಬೆಂಗಳೂರಿನಲ್ಲಿ ಜನಿಸಿದರು. ಇವರ ಮಾತಾ ಪಿತೃಗಳು ಶ್ರೀಮತಿ ಜಯಲಕ್ಷಮ್ಮ ಮತ್ತು ಗಮಕಿ ಎಂ. ರಾಘವೇಂದ್ರರಾಯರು. ಇವರು ಬಿ.ಕಾಂ. ವರೆಗೆ ವ್ಯಾಸಂಗ ಮಾಡಿ, ಇಂಗ್ಲೀಷ್ ಸೀನಿಯರ್ ಟೈಪ್ ರೈಟಿಂಗ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಮೋಟಾರ್ ಇಂಡಸ್ಟ್ರೀಸ್ ಕಂಪೆನಿ, ಲಿಮಿಟೆಡ್ ಸಂಸ್ಥೆಯಲ್ಲಿ ಉದ್ಯೋಗದಲ್ಲಿರುವರು. ಇವರು ೧೯೬೪ರಲ್ಲಿ ಗಮಕ ಪ್ರೌಢ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರು. ಇವರಿಗೆ ಚಿಕ್ಕಂದಿನಿಂದಲೂ ಸಂಗೀತ, ಸಾಹಿತ್ಯ, ಗಮಕ ಕಲೆಗಳಲ್ಲಿ ಆಸಕ್ತಿಯಿದ್ದಿತು. ಇದಕ್ಕೆ ಅವರ ತೀರ್ಥ ರೂಪರವರೇ ಕಾರಣ. ಗಮಕ ಕಲೆಯ ವ್ಯಾಸಂಗವನ್ನು ಕಾಲಾವಕಾಶವಾದಾಗ ಲೆಲ್ಲ ಮುಂದುವರಿಸುತ್ತಿರುವರಲ್ಲದೆ, ಅನೇಕ ಕಡೆಗಳಲ್ಲಿ ಕಾವ್ಯವಾಚನವನ್ನು ಸಹಾಯಮಾಡಿರುವರು.

೨೨೦. ಎಸ್. ಸರೋಜ

ಇವರು ೧೯೪೭ರಲ್ಲಿ ಜನಿಸಿದರು. ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವರು. ೧೯೪೭ರಿಂದ ಕಾವ್ಯಾಭ್ಯಾಸ ಮಾಡುತ್ತಿರುವರು. ಗಮಕ ಪ್ರವೇಶ ಮತ್ತು ಪ್ರೌಢ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿರುವರು. ಬಳ್ಳಾರಿಯಲ್ಲಿ ಉತ್ಸವ ಸಂದರ್ಭಗಳಲ್ಲಿಯೂ ವಿಶೇಷ ಸಮಾರಂಭಗಳಲ್ಲಿಯೂ ಅನೇಕ ಸ್ಥಳೀಯ ಸಂಘ ಸಂಸ್ಥೆಗಳಲ್ಲಿ ಇವರ ಕಾವ್ಯವಾಚನಗಳು ನಡೆದಿವೆ. ಇವ ರಿಗೆ ಪ್ರಿಯವಾದ ಕೃತಿಗಳು ಕುಮಾರವ್ಯಾಸ ಭಾರತ, ಜೈಮಿನಿ ಭಾರತ, ತೊರವೆ ರಾಮಾಯಣ, ಹರಿಶ್ಚಂದ್ರ ಕಾವ್ಯ, ಚನ್ನಬಸವಪುರಾಣ, ಪ್ರಭುಲಿಂಗಲೀಲೆ ಮುಂತಾದವು.

೨೨೧. ಕೆ.ಎಂ. ರೇವಣ್ಣ, ಬೆಂಗಳೂರು

ಇವರು ಚಿಕ್ಕಮಗಳೂರು ಜಿಲ್ಲಾ ತರೀಕೆರೆ ತಾಲ್ಲೂಕು ಲಿಂಗದಹಳ್ಳಿ ಹೋಬಳಿ ಕೆಂಚಾಪುರದಲ್ಲಿ ೧೯೪೬ರಲ್ಲಿ ಜನಿಸಿದರು. ಇವರ ತಂದೆ ಶ್ರೀ ಮಲ್ಲೇಶಪ್ಪನವರು. ಇವರು ಬಿ.ಎ. ಪದವೀಧರರು. ಕಳಸ ದೇವಸ್ಥಾನದ ಆಡಳಿತಾಧಿಕಾರಿಯಾಗಿರುವರು. ಇವರು ಗಮುಕಿ ಹು.ಮ. ರಾಮಾರಾಧ್ಯರ ಶಿಷ್ಯರು. ಇವರ ಕಾವ್ಯವಾಚನಗಳು ಗುರುಮನೆಯವರಿಂದಲೂ ಮತ್ತು ಮಹಾಜನರಿಂದಲೂ ಮೆಚ್ಚಿಗೆಯನ್ನು ಪಡೆದಿವೆ.

೨೨೨. ವಿ. ಭಾಗ್ಯಲಕ್ಷ್ಮಿ, ಬೆಂಗಳೂರು

ಇವರು ಮೈಸೂರು ಜಿಲ್ಲಾ ಕೊಳ್ಳೇಗಾಲದಲ್ಲಿ ೨೬-೧೧-೧೯೪೬ ರಂದು ಜನಿಸಿದರು. ಇವರ ತಂದೆ ಶ್ರೀ ವೆಂಕಟರಾಮ ಪುರಾಣಿಕರು, ತಾಯಿ ರಾಜಲಕ್ಷ್ಮಿಯವರು. ಬಿ.ಎಸ್‌ಸಿ. ಪದವೀಧರರಾಗಿ ಎಲ್.ಐ.ಸಿ.ಯಲ್ಲಿ ಉದ್ಯೋಗದಲ್ಲಿರುವರು. ೧೯೭೨ರಲ್ಲಿ ನಡೆದ ಗಮಕ ಪ್ರೌಢ ಪರೀಕ್ಷೆಯಲ್ಲಿ ಉಚ್ಚಶ್ರೇಣಿಯಲ್ಲಿ ಉತ್ತೀರ್ಣರಾಗಿರುವರು. ಸಂಗೀತ ಸೀನಿಯರ್ ಪರೀಕ್ಷೆಯಲ್ಲಿಯೂ ಪ್ರಥಮ ಶ್ರೇಣಿ ಗಳಿಸಿರುವರು. ಕಾಲೇಜಿನಲ್ಲಿ ವ್ಯಾಸಂಗ ನಡೆಸುತ್ತಿದ್ದಾಗ ಅಧ್ಯಾಪಕರಿಂದ ಪ್ರಭಾವಿತರಾಗಿ ಸಾಹಿತ್ಯದ ಕಡೆ ಒಲವು ಹೆಚ್ಚಾಯಿತು. ಇವರ ಯಜಮಾನರಾದ ಶ್ರೀ ಕೆ. ಸುಬ್ರಹ್ಮಣ್ಯರವರು ಗಮುಕಿಗಳೇ ಆಗಿದ್ದು ಈಕೆಯ ಗಮುಕಾಭ್ಯಾಸಕ್ಕೆ ಪ್ರೋತ್ಸಾಹಿಸಿರುವರು. ಹು.ಮಾ. ರಾಮಾರಾಧ್ಯರು ಇವರ ಗಮಕದ ಗುರುಗಳು. ಸುಧಾ ಸಾಹಿತ್ಯ ಸಂಘವೆಂಬ ಸಂಸ್ಥೆಯ ಮೂಲಕ ಅನೇಕ ಗಮಕ ರೂಪಕಗಳಲ್ಲಿ ಭಾಗವಹಿಸಿರುವರು. ಗಮಕ ಶಿಕ್ಷಣ ಶಿಬಿರದಲ್ಲಿಯೂ ಸಹ ಭಾಗವಹಿಸಿ ಪ್ರಶಸ್ತಿಯನ್ನು ಗಳಿಸಿರುವರು. ಕುಮಾರವ್ಯಾಸ, ಲಕ್ಷ್ಮೀಶ, ಹರಿಹರ, ರಾಘವಾಂಕ ಮುಂತಾದ ಕವಿಗಳ ಕೃತಿಗಳು ಇವರಿಗೆ ಪ್ರಿಯವಾದುವು.

೨೨೩. ಕೆ. ಸುಧಾವಾಣಿ

ಇವರು ೧೯೪೭ರಲ್ಲಿ ಜನಿಸಿದರು. ಇವರ ತಂದೆ ಸಂಗೀತದಲ್ಲಿ ಆಸ್ಥಾನ ವಿದ್ವಾಂಸರಾದ ಶ್ರೀ ಹೆಚ್.ವಿ. ಕೃಷ್ಣರಾಯರು. ಇವರು ಬಿ. ಎ. ಪದವೀಧರೆ

ಮತ್ತು ಎಂ. ಮ್ಯೂಸಿಕ್ ಪರೀಕ್ಷೆಯನ್ನು ಮಾಡಿಕೊಂಡಿದ್ದಾರೆ. ಸಂಗೀತಗಾರರ ಮನೆತನದಲ್ಲಿ ಜನಿಸಿದ ಇವರಿಗೆ ಕಾವ್ಯವಾಚನದಲ್ಲೂ ಆಸಕ್ತಿ ಮೂಡಿತು. ಪ್ರಾರಂಭ ಕಾಲದಲ್ಲಿ ಸಂಗೀತದ ಅಧ್ಯಾಪಕಿಯಾಗಿದ್ದ ಮತ್ತು ಗಮಕಿ ಬಿಂದೂರಾಯರ ಶಿಷ್ಯರಾದ ಶ್ರೀಮತಿ ಇಂದಿರಾಬಾಯಿ ಅವರು ಇವರಿಗೆ ಕಾವ್ಯವಾಚನವನ್ನು ಕಲಿಸಿದರು. ಮುಂದೆ ಮಹಾರಾಣಿ ಹೈಸ್ಕೂಲಿನಲ್ಲಿ ಗಮಕಿ ಶ್ರೀ ಬಿ.ಎಸ್.ಎಸ್. ಕೌಶಿಕ್ ಅವರು ನಡೆಸುತ್ತಿದ್ದ ಗಮಕ ತರಗತಿಗಳಲ್ಲಿ ಕ್ರಮವಾಗಿ ಪಾಠವಾಯಿತು. ಇವರು ಕಾವ್ಯವಾಚನವನ್ನು ಮಾಡುವುವೇ ಅಲ್ಲದೆ ಗಮಕ ರೂಪಕಗಳಲ್ಲಿಯೂ ಪಾತ್ರ ನಿರ್ವಹಿಸುವರು. ಗಮಕ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರು. ಸೋಸಲೆ ವ್ಯಾಸರಾಯ ಮಠದ ಸ್ವಾಮಿಗಳ ಸನ್ನಿಧಿಯಲ್ಲಿಯೂ ಮತ್ತು ಕೂಡಲೀ ಶೃಂಗೇರಿ ಮಠದ ಶ್ರೀಗಳವರ ಸಮ್ಮುಖದಲ್ಲಿಯೂ ಕಾವ್ಯವಾಚವವನ್ನು ನಡೆಸಿ ಅವರ ಆಶೀರ್ವಾದವನ್ನು ಪಡೆದಿರುವರು. ಬಿಡಾರಂ ಕೃಷ್ಣಪ್ಪನವರ ರಾಮಮಂದಿರದಲ್ಲಿ ಸಂಗೀತ ವಿದ್ವಾಂಸರ ಸಮಕ್ಷಮದಲ್ಲಿ ಕಾವ್ಯ ಗಾಯನವನ್ನು ಮಾಡಿದ ಸಂದರ್ಭದಲ್ಲಿ ಪ್ರಸಿದ್ಧ ಪಿಟೀಲು ವಾದಕರಾಗಿದ್ದ ಟಿ. ಚೌಡಯ್ಯನವರಿಂದ ಪ್ರಶಂಸೆಯನ್ನು ಪಡೆದಿರುವರು.

೨೨೪. ಜಿ. ರಾಜೇಶ್ವರಿ, ಬೆಂಗಳೂರು

ಇವರು ೨೯-೪-೧೯೪೭ರಲ್ಲಿ ಬೆಂಗಳೂರಿನಲ್ಲಿ ಜನಿಸಿದರು. ತಂದೆ ಶ್ರೀ ಜಿ. ಅನಂತಯ್ಯ, ತಾಯಿ ಶ್ರೀಮತಿ ಜಿ. ಶಾರದಮ್ಮ. ಎಸ್.ಎಸ್.ಎಲ್.ಸಿ. ಪರೀಕ್ಷೆ ಆಗಿರುತ್ತೆ. ಸಂಗೀತದಲ್ಲಿ ವರ್ಣ, ಕೃತಿ, ಕೀರ್ತನೆಗಳನ್ನು ಹಾಡುತ್ತಾರೆ. ಕನ್ನಡ ಸಾಹಿತ್ಯದಲ್ಲಿ ಅಭಿರುಚಿಯಿದ್ದು ತಕ್ಕಮಟ್ಟಿಗೆ ವ್ಯಾಖ್ಯಾನ ಮಾಡುತ್ತಾರೆ. ಇವರಿಗೆ ಗಮಕ ಕಲೆಯಲ್ಲಿ ಆಸಕ್ತಿಯನ್ನುಂಟುಮಾಡಿದವರು ಶ್ರೀಮತಿ ಸರೋಜಮ್ಮ ಅನಂತ ರಾಮಯ್ಯನವರು. ಇವರು ಮೂರು ವರ್ಷಗಳಿಂದ ವ್ಯಾಸಂಗ ಮಾಡುತ್ತಿದ್ದಾರೆ. ಕುಮಾರವ್ಯಾಸ ಭಾರತ, ಹರಿಶ್ಚಂದ್ರ ಕಾವ್ಯಗಳು ಇವರಿಗೆ ಇಷ್ಟವಾಗಿವೆ. ಗಮಕಿ ಶ್ರೀ ರಾಘವೇಂದ್ರರಾಯರಿಂದ ಮಾರ್ಗದರ್ಶನ ಪಡೆದಿರುತ್ತಾರೆ. ಗಮಕ ಪ್ರವೇಶ ಮತ್ತು ಪ್ರೌಢಗಳಲ್ಲಿ ತೇರ್ಗಡೆಯಾಗಿ ೧೯೭೫ ರಲ್ಲಿ ಅಧ್ಯಾಪಕರ ತರಬೇತಿಯನ್ನೂ ಪಡೆದಿರುತ್ತಾರೆ. ಮಾವಳ್ಳಿಯಲ್ಲಿ ಗಮಕ ತರಗತಿಗಳನ್ನು ನಡೆಸುತ್ತಿದ್ದಾರೆ.

೨೨೫. ಲಲಿತಾಕುಮಾರಿ, ಬೆಂಗಳೂರು

ಇವರ ವಯಸ್ಸು ೨೮ ವರ್ಷಗಳು. ಇವರು ವಿದ್ಯಾಮಂದಿರದಲ್ಲಿ ಅಧ್ಯಾಪಕಿ ಯಾಗಿರುವರು. ಅಲ್ಲಿನ ಕರ್ಣಾಟಕ ಸಂಘದಲ್ಲಿ ನಡೆಸುತ್ತಿದ್ದ ಗಮಕ ತರಗತಿಗಳಿಗೆ ಸೇರಿ ಗಮಕಿ ಶ್ರೀ ಜಿ.ಎ. ಅನಂತಪದ್ಮನಾಭಯ್ಯನವರಲ್ಲಿ ಗಮಕಾಭ್ಯಾಸ ಮಾಡಿದರು. ೧೯೬೮-೬೯ ರಲ್ಲಿ ನಡೆದ ಗಮಕ ಪ್ರೌಢ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರು. ಸೀನಿಯರ್ ಶ್ರೇಣಿಯವರೆಗೂ ಸಂಗೀತದ ಪರಿಚಯವಿದೆ. ಇವರು ಕಾವ್ಯವಾಚನ ಮಾಡುವುದೇ ಅಲ್ಲದೆ ಗಮಕ ರೂಪಕದಲ್ಲಿಯೂ ಪಾತ್ರವನ್ನು ನಿರ್ವಹಿಸಿರುವರು. ಹಾಡುಗಳು ಮತ್ತು ದೇವರ ನಾಮಗಳನ್ನು ಚಿಕ್ಕವಯಸ್ಸಿನಿಂದಲೇ ಕಲಿತಿದ್ದು ಅವು ಗಳ ಮೇಲೆ ಒಲವು ವಿಶೇಷವಾಗಿದೆ. ಬಿ.ಎ.ವರೆಗೂ ಕಾಲೇಜು ವ್ಯಾಸಂಗವನ್ನು ಮಾಡಿರುವರು. ಹಿಂದೀ ಭಾಷೆಯ ಪರಿಚಯವೂ ಇದೆ. ಶಾಲೆಯ ಮಕ್ಕಳಿಗೆ ಪದ್ಯಗಳನ್ನು ರಾಗಬದ್ಧವಾಗಿ ಹೇಳಿಕೊಡುವುದರ ಮೂಲಕ ಮುಂದೆ ಗಮಕ ಕಲೆಗೆ ಸಹಾಯವಾಗುವುದೆಂದು ನಂಬಿರುವರು.

೨೨೬. ಎಲ್. ಸತ್ಯವತಿ, ಬೆಂಗಳೂರು

ಇವರು ೧-೭-೧೯೪೮ರಲ್ಲಿ ಜನಿಸಿದರು. ತಂದೆ ಶ್ರೀ ಬಿ. ಕೆ. ಲಕ್ಷ್ಮೀನಾರಾ ಯಣರಾಯರು, ತಾಯಿ ಶ್ರೀಮತಿ ಜಯಮ್ಮನವರು. ಇವರು ಬಿ.ಎಸ್‌ಸಿ., ಪದ ವೀಧರರು. ತಕ್ಕಮಟ್ಟಿಗೆ ಸಂಗೀತವನ್ನೂ ಅಭ್ಯಾಸ ಮಾಡಿರುವರು. ಕಾವ್ಯಪ್ರಚಾರ ಮಂಡಲಿಯಲ್ಲಿ ನಡೆಯುತ್ತಿದ್ದ ಗಮಕ ತರಗತಿಗೆ ಸೇರಿ, ಕಲಿತು, ೧೯೬೬ರಲ್ಲಿ ಪ್ರವೇಶ ಪರೀಕ್ಷೆಯಲ್ಲಿ ತೇರ್ಗಡೆಯಾದರು. ಇವರು ದೇವರನಾಮಗಳು, ಭಾವಗೀತೆ ಗಳನ್ನು ಹಾಡುವರು. ಆಕಾಶವಾಣಿಯ ಬೆಂಗಳೂರು ಕೇಂದ್ರದಿಂದ ಇವರ ಕಾರ್ಯಕ್ರಮಗಳು ಪ್ರಸಾರವಾಗಿವೆ.

೨೨೭. ಬಿ.ಸಿ. ರಮೇಶಬಾಬು, ಬೆಂಗಳೂರು

ಇವರು ೧೬-೧೦-೧೯೪೮ರಲ್ಲಿ ಜನಿಸಿದರು. ತಂದೆ ಬಿ. ಚಂದ್ರಶೇಖರಯ್ಯ ನವರು, ತಾಯಿ ಆರ್. ಸಾವಿತ್ರಮ್ಮನವರು. ಇವರು ಬಿ.ಕಾಂ. ಓದಿರುವರು.

ಬಾಲ್ಯದಿಂದಲೂ ದೇವರನಾಮುಗಳನ್ನೂ ಚಲನಚಿತ್ರ ಗೀತೆಗಳನ್ನೂ ಹಾಡುತ್ತಿದ್ದರು. ಹಾವೇರಿ ಪ್ರಹ್ಲಾದಾಚಾರ್‌ರವರಲ್ಲಿ ಸಂಗೀತಾಭ್ಯಾಸವನ್ನು ಮಾಡಿ ಕೀರ್ತನೆಗಳ ವರೆಗೂ ಕಲಿತಿರುವರು. ಇವರು ಗಮಕವನ್ನು ಗಮಕಿ ಶ್ರೀ ಜಿ.ಎ. ಅನಂತಪದ್ಮನಾಭಯ್ಯನವರಲ್ಲಿಯೂ ಹಾಗೂ ಗಮಕಿ ಶ್ರೀ ಶಂಕರನಾರಾಯಣ್ ಅವರಲ್ಲಿಯೂ ಅಭ್ಯಾಸ ಮಾಡಿರುವರು. ಭಕ್ತಿಗೀತೆಗಳನ್ನು ಶಾಲೆ ಸಮಾರಂಭಗಳಲ್ಲಿಯೂ ಸಂಘ ಸಂಸ್ಥೆಗಳಲ್ಲಿಯೂ ಹಾಡಿ ಮೆಚ್ಚಿಗೆಯನ್ನು ಪಡೆದಿರುವರು. ಗಮಕ ಪ್ರೌಢ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರು. "ವಾಗ್ದೇವಿ ವಾದ್ಯವೃಂದ"ದ ಕಾರ್ಯಕ್ರಮಗಳಲ್ಲಿ ಹಾರ್ಮೋನಿಯಂ ನುಡಿಸುವರು ಮತ್ತು ಹಾಡುವರು. ಟೈಪ್‌ರೈಟಿಂಗ್ ಪರೀಕ್ಷೆ ಮಾಡಿಕೊಂಡು ಸರ್ಕಾರೀ ವೃತ್ತಿಯಲ್ಲಿರುವರು.

೨೨೮. ಹೆಚ್. ನಾರಾಯಣರಾಯರು, ಮೈಸೂರು

ಇವರು ೧೯೪೯ನೇ ಇಸವಿಯಿಂದಲೂ ಗಮಕ ಕಲೆಯಲ್ಲಿ ಪರಿಶ್ರಮ ಹೊಂದಿರುವರು. ಮಂಡ್ಯದ ಶ್ರೀ ವಿದ್ಯಾಗಣಪತಿ ಗಮಕ ಶಿಕ್ಷಣಾಲಯದಲ್ಲಿ ಎರಡೂವರೆ ವರ್ಷ ಕಾಲ ಟ್ರೈನಿಂಗ್ ಪಡೆದಿರುವರು. ಸಂಗೀತದಲ್ಲಿ ಪರಿಶ್ರಮವಿರುತ್ತದೆ. ಹಾರ್ಮೋನಿಯಂ ಸಹ ನುಡಿಸಬಲ್ಲರು. ಕೆ.ಆರ್.ನಗರ, ಮಂಡ್ಯ ಮತ್ತು ಮಳವಳ್ಳಿಗಳಲ್ಲಿ ಕಾವ್ಯವಾಚನ ಕಾರ್ಯಕ್ರಮಗಳನ್ನು ನಡೆಸಿರುವರು. ಮೈಸೂರಿನಲ್ಲಿ ಆಕಾಶವಾಣಿಯ ಕೇಂದ್ರವಿದ್ದಾಗ ಅಲ್ಲಿ ಇವರು ಗಮಕ ವಾಚನ ಮಾಡಿರುವರು. ಇವರು ಮೊದಲನೇ ದರ್ಜೆಯ ಸ್ಟೆನೋಗ್ರಾಫರ್ ಆಗಿರುವರು.

೨೨೯. ಯಾಮಿನಿ, ಕೋಟಾ

ಇವರು ದ.ಕ. ಜಿಲ್ಲೆಯ ಕೋಟಾದಲ್ಲಿ ೧೩-೬-೧೯೪೯ರಂದು ಜನಿಸಿದರು. ಇವರ ತಂದೆ ಹೆಚ್.ಎ. ಪದ್ಮನಾಭಭಟ್ಟರು. ಈಕೆಯು ಪದವೀಧರೆಯಾಗಿ ವಿವೇಕ ಜೂನಿಯರ್ ಕಾಲೇಜ್, ಕೋಟಾದಲ್ಲಿ ಅಧ್ಯಾಪಕಿಯಾಗಿರುವರು. ಈಕೆಯು ಕಾವ್ಯವಾಚನವನ್ನು ತಮ್ಮ ಪ್ರಾಂತ್ಯದಲ್ಲಿನ ಅನೇಕ ಸಂಘ ಸಂಸ್ಥೆಗಳಲ್ಲಿ ಸಮ್ಮೇಳನಗಳು, ರಾಜ್ಯೋತ್ಸವಗಳು, ಜನ್ಮಶತಾಬ್ದಿಗಳು ಮುಂತಾದ ಸಾಂಸ್ಕೃತಿಕ ಸಮಾರಂಭಗಳಲ್ಲಿ ಮಾಡಿರುವರು. ಆಕಾಶವಾಣಿಯ ಬೆಂಗಳೂರು ಕೇಂದ್ರದಿಂಲೂ ಇವರ ಕಾವ್ಯವಾಚನ ಕಾರ್ಯಕ್ರಮಗಳು ಪ್ರಸಾರಿತವಾಗಿವೆ.

೨೩೦. ಬಿ.ಎನ್. ವಿದ್ಯಾ, ಬೆಂಗಳೂರು

ಇವರು ೧೯೪೯ರಲ್ಲಿ ಜನಿಸಿದರು. ಇವರ ತಂದೆ ಶ್ರೀ ಬಿ. ನಾರಾಯಣ ಮೂರ್ತಿಯವರು ಮತ್ತು ತಾಯಿ ಶ್ರೀಮತಿ ಶಶಿರೇಖಮ್ಮನವರು. ಇವರು ಬಿ.ಎಸ್ಸಿ ಪದವೀಧರರು. ಸಂಗೀತವನ್ನು ಚಿಕ್ಕಂದಿನಲ್ಲಿ ತಮ್ಮ ತಾಯಿಯ ಬಳಿಯೂ ಮುಂದೆ ಸಂಗೀತ ವಿದ್ವಾನ್ ಶ್ರೀ ಗುಂಡಪ್ಪನವರು ಮತ್ತು ಪಿಟೀಲು ವಿದ್ವಾನ್ ಶ್ರೀ ಎಂ. ಶಂಕರಪ್ಪನವರಲ್ಲಿಯೂ ಕಲಿತರು. ಗಮಕ ಕಲೆಯನ್ನು ಕಾವ್ಯಪ್ರಚಾರ ಮಂಡಳಿಯಲ್ಲಿ ನಡೆಯುತ್ತಿದ್ದ ಗಮಕ ತರಗತಿಗಳಲ್ಲಿ ಅಭ್ಯಾಸ ಮಾಡಿ ಗಮಕ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವರು. ಉತ್ಸವ ಸಮಾರಂಭಗಳಲ್ಲಿಯೂ ಸಂಘ ಸಂಸ್ಥೆಗಳ ವಿಶೇಷ ಕಾರ್ಯಕ್ರಮಗಳಲ್ಲಿಯೂ ಇವರ ದೇವರನಾಮಗಳ ಹಾಡುಗಾರಿಕೆ ಮತ್ತು ಕಾವ್ಯವಾಚನ ಕಾರ್ಯಕ್ರಮಗಳು ನಡೆಯುತ್ತಿರುತ್ತವೆ. ವಿದ್ವಾಂಸರ ಮನೆತನದವ ರಾಗಿದ್ದು ಇವರ ಲೇಖನ ಕಲೆಯೂ ಪ್ರಬುದ್ಧವಾಗಿದೆ.

೨೩೧. ಎಸ್. ವಾಸುಕಿ, ಬಳ್ಳಾರಿ

ಇವರು ೧೯೩೦ನೇ ಇಸವಿಯಲ್ಲಿ ಜನಿಸಿದರು. ಸಾಮಾನ್ಯ ವಿದ್ಯಾಭ್ಯಾಸ ಎಸ್.ಎಸ್.ಎಲ್.ಸಿ. ಇವರಿಗೆ ಗಮಕ ಕಲೆಯಲ್ಲಿ ಆಸಕ್ತಿ ಮೂಡಿದುದು ಸುಮಾರು ೧೯೬೬–೬೭ ರಲ್ಲಿ. ಬಳ್ಳಾರಿಯಲ್ಲಿ ಗಮಕ ಕೇಂದ್ರವನ್ನು ನಡೆಸುತ್ತಿರುವ ಗಮಕ ಕಲಾವಿಶಾರದ ಶ್ರೀ ಆರ್. ರಾಮಾಶಾಸ್ತ್ರಿಗಳು ಇವರಿಗೆ ಗಮಕದ ಗುರು ಗಳು. ಇವರು ೧೯೬೯–೭೦ರಲ್ಲಿ ಗಮಕ ಪ್ರೌಢ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರು ವರು. ಮಹಿಳಾ ಮಂಡಳಿಗಳಲ್ಲಿಯೂ ದೇವಾಲಯಗಳಲ್ಲಿಯೂ ಕಾವ್ಯವಾಚನವನ್ನು ನಡೆಸುತ್ತಿರುವರು.

೨೩೨. ಎಂ. ಆರ್. ಸತ್ಯನಾರಾಯಣ, ಬೆಂಗಳೂರು

ಇವರ ಸ್ವಂತ ಊರು ಮೈಸೂರು. ೧೯೫೫ ರಲ್ಲಿ ಜನಿಸಿದರು. ಇವರ ತಂದೆ ಯವರು ಶ್ರೀ ರಾಘವೇಂದ್ರರಾಯರು, ತಾತಂದಿರು ಶ್ರೀ ಎಂ. ಎನ್. ಕೇಶವ ರಾಯರು. ಅವರು ಸರ್ಕಾರಿ ಪ್ರೈಮರೀ ಶಾಲೆಯ ಮುಖ್ಯೋಪಾಧ್ಯಾಯರಾ

ದ್ದರು. ಅವರಿಗೆ ಗಮಕ ಕಲೆಯಲ್ಲಿ ವಿಶೇಷವಾದ ಆಸಕ್ತಿಯಿದ್ದುದರಿಂದ ಮಗನನ್ನು ಆಗ ಮೈಸೂರಿನಲ್ಲಿ ಹಸರಾಂತ ಗಮಕಿಗಳಾಗಿದ್ದ ಶ್ರೀ ತಮ್ಮಯ್ಯನವರ ಬಳಿಗೆ ಗಮಕ ಕಲೆಯನ್ನು ಅಭ್ಯಾಸಮಾಡಲು ಕಳುಹಿಸಿಕೊಟ್ಟರು. ಶ್ರೀ ಸತ್ಯನಾರಾಯಣ್‌ರವರು ವಿಶ್ವವಿದ್ಯಾಲಯದ ಪದವೀಧರು. ಮನೆಯಲ್ಲಿ ಸಂಗೀತ, ಗಮಕ ಮುಂತಾದ ಕಲೆಗಳ ವಾತಾವರಣವಿದ್ದು ಅದರಲ್ಲಿ ಬೆಳೆದ ಸಂಸ್ಕಾರಬಲದಿಂದ ಗಮಕ ಕಲೆಯಲ್ಲಿ ಸ್ವಾಭಾವಿಕವಾಗಿಯೇ ಆಸಕ್ತಿ ಮೂಡಿತು. ತಂದೆಯವರಾದ ಶ್ರೀ ರಾಘವೇಂದ್ರರಾಯರೇ ಇವರ ಮೊದಲ ಗುರುಗಳು, ಗಮಕ ಕಲೆಯ ಅಭ್ಯಾಸಕ್ಕೆ. ಇವರಿಗೆ ಗಮಕ ಪ್ರವೇಶ ಪರೀಕ್ಷೆಯು ಮೊದಲ ತರಗತಿಯಲ್ಲಿ ತೇರ್ಗಡೆಯಾಗಿರುತ್ತದೆ. ಪ್ರೌಢಪರೀಕ್ಷೆಯಲ್ಲೂ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿರುತ್ತಾರೆ. ದಿವಂಗತ ಪೂಜ್ಯ ಬಿಂದೂರಾಯರು, ಕೃಷ್ಣಗಿರಿ ಕೃಷ್ಣರಾಯರು, ಎಂ. ಎಸ್. ಚಂದ್ರಶೇಖರಯ್ಯನವರೇ ಮುಂತಾದವರಿಂದ ಪ್ರೋತ್ಸಾಹ ಮತ್ತು ಆಶೀರ್ವಾದಗಳನ್ನು ಪಡೆದಿರುತ್ತಾರೆ. ಸಂಗೀತದಲ್ಲೂ ಆಸಕ್ತಿಯಿದೆ. ಸಾಕಷ್ಟು ರಾಗಗಳ ಪರಿಚಯವಿದೆ. ೧೨ ವರ್ಷಗಳಿಂದಲೂ ನಾನಾ ಕಡೆಗಳಲ್ಲಿ ಕಾವ್ಯವಾಚನ ಕಾರ್ಯಕ್ರಮಗಳನ್ನು ನಡೆಸಿ, ಮೆಚ್ಚಿಕೆ ಮತ್ತು ಬಹುಮಾನಗಳನ್ನೂ ಪಡೆದಿರುತ್ತಾರೆ. ಶಿಷ್ಯವರ್ಗವನ್ನು ಸಂಪಾದಿಸಬೇಕೆಂಬ ಕುತೂಹಲ ಬಹಳವಾಗಿದೆ.

೨೩೩. ದಾಕ್ಷಾಯಣಿ

ಇವರು ೧೯೫೧ ನೇ ಇಸವಿಯಲ್ಲಿ ನಂಜನಗೂಡು ತಾಲ್ಲೋಕಿನ ಹುರಾ ಗ್ರಾಮದಲ್ಲಿ ಜನಿಸಿದರು. ತಂದೆಯವರು ಶ್ರೀ ಹೆಚ್. ಎಲ್. ನಾರಾಯಣ ಶಾಸ್ತ್ರಿಗಳು; ವೈದಿಕ ವಿದ್ವಾನ್ ಅಣ್ಣಾಜಿರಾಯರ ವಂಶಸ್ಥರು. ಈಕೆ ಬಿ.ಎ. ಪದವೀಧರೆ. ಸ್ವಗ್ರಾಮದ ಸಾರ್ವಜನಿಕ ಪ್ರೌಢಶಾಲೆಯಲ್ಲಿ ಕನ್ನಡ ಉಪಾಧ್ಯಾಯಿನಿಯಾಗಿದ್ದಾರೆ. ಇವರು ನಾಲ್ಕು ವರ್ಷಗಳ ಕಾಲ ಪ್ರಸಿದ್ಧ ಗಮಕಿಗಳಾದ ಶ್ರೀ ಬಿ. ಎಸ್. ಎಸ್. ಕೌಶಿಕರಲ್ಲಿ ಶಿಷ್ಯವೃತ್ತಿಯನ್ನು ಕೈಕೊಂಡು ಗಮಕ ಕಲೆಯನ್ನು ಅಭ್ಯಸಿಸಿದರು. ಮೊದಲಿನಿಂದಲೂ ಇವರಿಗೆ ಸಂಗೀತ ಸಾಹಿತ್ಯಗಳಲ್ಲಿ ಆಸಕ್ತಿಯಿದ್ದಿತು. ಅದರಲ್ಲಿ ಪರಿಶ್ರಮ ಪಡೆದರು. ಚಂಪೂ ಮತ್ತು ಷಟ್ಪದೀ ಕಾವ್ಯಗಳನ್ನು ರಾಗರಸಭರಿತವಾಗಿ ಓದಬಲ್ಲರು. ಅನೇಕ ಸಭೆಗಳಲ್ಲಿ ಕಾವ್ಯವಾಚನಮಾಡಿ ಜನಪ್ರಿಯರಾಗಿದ್ದಾರೆ. ಈಕೆಯ ಸಹೋದರರಾದ ಶ್ರೀ ಲಕ್ಷ್ಮೀನಾರಾಯಣ ಪಂಡಿತರು ಗಮಕ ಕಲಾ ಸಂಘವನ್ನು ಕಟ್ಟಲು ಶ್ರಮಿಸುತ್ತಿರುವರು. ನಾಟಕದಲ್ಲಿ

ಭಾಗವಹಿಸಲು ಇವರಿಗೆ ಬಹು ಆಸಕ್ತಿ. ಶ್ರವಣ ಪ್ರಧಾನ ಕಾವ್ಯಗಳನ್ನು ಓದು ವುದೆಂದರೆ ಈಕೆಗೆ ಬಲುಪ್ರೇಮ. ಶ್ರೀ ಗಮಕಿ ಬಿ. ಎಸ್. ಎಸ್. ಕೌಶಿಕ್‌ರವರು ರಚಿಸಿರುವ ಗಮಕ ಗೀತರೂಪಕಗಳಾದ "ಕುಂತೀಕರ್ಣ", "ವಿಶ್ವೇಶ್ವರ ಸಾಕ್ಷಾ ತ್ಕಾರ" ಇವುಗಳಲ್ಲಿ ಪಾತ್ರಗಳನ್ನು ಭಾವಪೂರಿತವಾಗಿ ನಿರ್ವಹಿಸಿರುತ್ತಾರೆ. ಶಿಷ್ಯ ವರ್ಗವನ್ನು ಬೆಳೆಸುವ ಯತ್ನದಲ್ಲಿದ್ದಾರೆ.

೨೩೪. ಹೆಚ್. ಡಿ. ರಾಜರಾಜೇಶ್ವರಿ, ಶಿವಮೊಗ್ಗ

ಇವರು ೩೧-೮-೫೦ರಲ್ಲಿ ಜನಿಸಿದರು. ಇವರು ಗಮಕ ಅಭ್ಯಾಸವನ್ನು ಗಮಕಿ ಶ್ರೀ ವೆಂಕಟೇಶಯ್ಯನವರಲ್ಲಿ ನಡೆಸಿ ಗಮಕ ಪ್ರವೇಶ ಪರೀಕ್ಷೆಯಲ್ಲಿ ಉತ್ತಮ ಶ್ರೇಣಿ ಯಲ್ಲಿ ಉತ್ತೀರ್ಣರಾದರು. ಇವರ ಸಂಗೀತಾಭ್ಯಾಸವು ವಿದ್ವಾನ್ ಹೊಸಹಳ್ಳಿ ರಾಮಾ ಶಾಸ್ತ್ರಿಗಳು ಮತ್ತು ವಿದ್ವಾನ್ ಎಂ. ಪ್ರಭಾಕರ್ ಅವರಲ್ಲಿ ನಡೆಯಿತು. ಇವರು ಶಾಲಾ ಕಾಲೇಜುಗಳಲ್ಲಿಯೂ ಅನೇಕ ಉತ್ಸವ ಸಮಾರಂಭಗಳಲ್ಲಿಯೂ ಭಾವಗೀತೆ ಗಳನ್ನೂ ಹಿಂದೂಸ್ಥಾನೀ ಸಂಗೀತವನ್ನೂ ಭಜನೆಗಳನ್ನೂ ನಡೆಸಿರುವರು. ಶಿವಮೊಗ್ಗ ಕಮಲಾ ನೆಹರು ಮಹಿಳಾ ಕಾಲೇಜಿನಲ್ಲಿ ವ್ಯಾಸಂಗಮಾಡುತ್ತಿದ್ದಾರೆ. ದೇವನೂರಿನಲ್ಲಿ ನಡೆದ ಲಕ್ಷ್ಮೀಶ ಕವಿಯ ಜಯಂತ್ಯುತ್ಸವದ ಸಂದರ್ಭದಲ್ಲಿ ಕಾವ್ಯ ವಾಚನ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥಮ ಬಹುಮಾನವನ್ನು ಪಡೆದಿರುವರು. ಇವರ ಕಾರ್ಯಕ್ರಮಗಳು ಬೆಂಗಳೂರು ಆಕಾಶವಾಣಿ ಕೇಂದ್ರದಿಂದ ಪ್ರಸಾರ ವಾಗಿವೆ. ಕುಮಾರವ್ಯಾಸ ಭಾರತ, ಜೈಮಿನಿ ಭಾರತ, ಹರಿಶ್ಚಂದ್ರಕಾವ್ಯ ಮತ್ತು ಜಗನ್ನಾಥವಿಜಯ ಕಾವ್ಯಗಳ ವಾಚನದಲ್ಲಿ ಪರಿಶ್ರಮವಿದೆ.

೨೩೫. ಎಂ. ಎ. ನಾಗೇಂದ್ರ

ಇವರು ೧೬-೯-೧೯೫೦ ರಲ್ಲಿ ಕೊಡಗಿನ ಮಡಿಕೇರಿಯಲ್ಲಿ ಹುಟ್ಟಿದರು. ಬಿ.ಕಾಂ. ಪದವೀಧರರಾಗಿ ಕೋಣಂದೂರಿನಲ್ಲಿ ಕೆನರಾ ಬ್ಯಾಂಕಿನಲ್ಲಿ ಅಕೌಂಟೆಂಟ್ ರಾಗಿರುವರು. ಶ್ರೀಮತಿ ಲಕ್ಷ್ಮೀದೇವಮ್ಮನವರು ಮತ್ತು ಪ್ರಸಿದ್ಧ ಗಮಕಿಗಳಾದ ಶ್ರೀ ಎಂ. ಎಸ್. ಅನಂತಪದ್ಮನಾಭರಾಯರು ಇವರ ಮಾತಾಪಿತೃಗಳು. ಸಂಗೀತ ದಲ್ಲಿ ಸಾಮಾನ್ಯ ಪರಿಶ್ರಮ ಹೊಂದಿರುವರು. ಗಮಕ ಶಿಕ್ಷಣ ಶಿಬಿರದಲ್ಲಿ ತರಪೇತಿ ಯನ್ನು ಪಡೆದು ತೇರ್ಗಡೆಯಾಗಿರುವರು. ಬೆಂಗಳೂರಿನ ಭಾರತೀವೃಂದದ ಸದಸ್ಯ

ರಾಗಿದ್ದು ವೃಂದಗಾನದಲ್ಲಿ ದೇವರ ನಾಮಗಳನ್ನೂ ಭಾವಗೀತೆಗಳನ್ನೂ ಜನಪದ ಗೀತೆಗಳನ್ನೂ ಹಾಡುವರು. ಇವರ ಕಾರ್ಯಕ್ರಮಗಳು ಆಕಾಶವಾಣಿಯ ಬೆಂಗಳೂರು ಕೇಂದ್ರದಿಂದ ಪ್ರಸಾರವಾಗಿವೆ.

೨೩೬. ಬಿ. ವಿ. ಜ್ಯೋತಿ, ಬೆಂಗಳೂರು

ಇವರು ೨೧–೧೧–೧೯೫೦ರಲ್ಲಿ ಜನಿಸಿದರು. ತಂದೆ ಶ್ರೀ ವೆಂಕಟಸುಬ್ಬರಾವ್, ತಾಯಿ ಶ್ರೀಮತಿ ಬಿ. ವಿ ಶಾರದಮ್ಮ. ಪಿ.ಯುಸಿ. ಆಗಿದೆ. ಮನೆಯಲ್ಲಿ ಸಂಗೀತ ಪಾಠವನ್ನು ಹೇಳಿಕೊಡುತ್ತಿದ್ದಾರೆ. ಸಂಗೀತದಲ್ಲಿ ಸೀನಿಯರ್ ಪರೀಕ್ಷೆಯಾಗಿದೆ. ವಿದ್ವತ್‌ನಲ್ಲಿ ಪರಿಣತಿಹೊಂದಿದ್ದಾರೆ. ಸಂಗೀತ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹು ಮಾನಗಳನ್ನು ಪಡೆದಿರುತ್ತಾರೆ. ಉತ್ಸವ ಸಮಾರಂಭಗಳಲ್ಲಿ ಸಂಗೀತ ಕಛೇರಿ ಗಳನ್ನು ನಡೆಸಿದ್ದಾರೆ. ಇವರಿಗೆ ಕನ್ನಡ ಸಾಹಿತ್ಯದಲ್ಲಿ ಅಭಿರುಚಿಯಿದೆ. ಇವರ ಸಂಗೀತದ ಗುರುಗಳು ಶ್ರೀ ಶಂಕರಮೂರ್ತಿಗಳು ಮತ್ತು ಶ್ರೀ ನಾಗೇಂದ್ರ ಅವರು, ಶ್ರೀ ಆರ್. ಆರ್. ಕೇಶವಮೂರ್ತಿಗಳು. ೬೫–೬೬ ನೇ ಸಾಲುಗಳಲ್ಲಿ ಗಮಕ ಪ್ರವೇಶ ಮತ್ತು ಪ್ರೌಢಪರೀಕ್ಷೆ (ಪ್ರಥಮದರ್ಜೆ) ಗಳಲ್ಲಿ ಉತ್ತೀರ್ಣ ರಾಗಿರುತ್ತಾರೆ. ಗಮಕ ಗುರುಗಳು ಶ್ರೀಮತಿ ರಾಮಚಂದ್ರನ್‌ರವರು. ಕಾವ್ಯ ವಾಚನದಲ್ಲಿ ಬಹು ಆಸಕ್ತಿಯಿದೆ. ಭಾಮಿನಿ ಷಟ್ಪದಿ ಮತ್ತು ವಾರ್ಧಕ ಷಟ್ಪದೀ ಕಾವ್ಯಗಳು ಬಹು ಇಷ್ಟವಾದುವು. ಇವರ ಕಲಾ ಸೇವೆಗೆ ಮೆಚ್ಚಿದ ಜನತೆ ಸಂಘ ಸಂಸ್ಥೆಗಳು ವಾಗೂ ಗುರುಗಳು ಇವರಿಗೆ ಅರ್ಹತಾಪತ್ರ ಮತ್ತು ಪ್ರಶಸ್ತಿಗಳನ್ನು ಕೊಟ್ಟಿರುತ್ತಾರೆ.

೨೩೭. ರೇಣುಕಾ ರಾಮರಾವ್, ರಾಬರ್ಟ್‌ಸನ್‌ಪೇಟೆ

ಇವರು ೮–೧೧–೧೯೫೧ರಲ್ಲಿ ಬೆಂಗಳೂರಿನಲ್ಲಿ ಜನಿಸಿದರು. ತಾಯಿ ಸೀತಮ್ಮನವರು, ತಂಪೆ ಶ್ರೀ ಎಸ್.ಎನ್. ವಿಶ್ವೇಶ್ವರಯ್ಯನವರು. ಎಸ್.ಎಸ್. ಎಲ್.ಸಿ. ಮುಗಿಸಿ ಸಂಗೀತದಲ್ಲಿ ೧೪ ವರ್ಷಗಳ ಅನುಭವವನ್ನು ಪಡೆದಿರುವರು. ಕನ್ನಡ ಸಾಹಿತ್ಯದಲ್ಲಿ ಇವರಿಗೆ ತುಂಬಾ ಅಭಿರುಚಿಯಿದೆ. ೧೯೬೫ರಲ್ಲಿ ಗಮಕ ತರ ಗತಿಗೆ ಸೇರಿದರು. ಶ್ರೀಮತಿ ಅನ್ನಪೂರ್ಣಮ್ಮ ರಘುಪತಿ ಶಾಸ್ತ್ರಿಗಳು ಇವರ ಗಮಕ ಗುರುಗಳು. ಇವರಲ್ಲಿ ಅಭ್ಯಾಸ ಮಾಡಿ ೧೯೬೬ರಲ್ಲಿ ಗಮಕ ಪ್ರವೇಶದಲ್ಲಿ ಮೊದಲನೆ

ದರ್ಜೆಯಲ್ಲಿ ತೇರ್ಗಡೆಯಾದರು. ಮಲ್ಲೇಶ್ವರದ ಗಾಂಧೀ ಸಾಹಿತ್ಯ ಸಂಘದಲ್ಲಿ ಶ್ರೀ ಹೆಚ್.ಎಂ. ರಾಮಾರಾಧ್ಯರು ನಡೆಸುತ್ತಿದ್ದ ಗಮಕ ಪ್ರೌಢ ತರಗತಿಗೆ ಸೇರಿ ೧೯೬೬ ರಲ್ಲಿ ಅದರಲ್ಲಿಯೂ ಪ್ರಥಮಶ್ರೇಣಿಯಲ್ಲಿ ಉತ್ತೀರ್ಣರಾದರು. ೧೯೬೮ರಲ್ಲಿ ಮಂಡ ದಲ್ಲಿ ನಡೆದ ರಾಮಾಯಣ ದರ್ಶನಂ ವಾಚನ ಸ್ಪರ್ಧೆಯಲ್ಲಿ ತೃತೀಯ ಬಹುಮಾ ವನ್ನು ಪಡೆದರು. ಆಗ ತೀರ್ಪುಗಾರರಾಗಿದ್ದ ಗಮಕಿ ಶ್ರೀ ರಾಘವೇಂದ್ರರಾಯ ಮೆಚ್ಚಿಕೆ ಮತ್ತು ಪ್ರೋತ್ಸಾಹವನ್ನು ಗಳಿಸಿದರು. ಹಂಪೆಯಲ್ಲಿ ನಡೆದ ಗಮ ಸಮ್ಮೇಳನದಲ್ಲಿ ಪಾಲ್ಗೊಂಡಿದ್ದಾರೆ. ಗದಗ, ಕೋಳಿವಾಡ, ಧಾರವಾಡಗಳ ವಾಚನ ನಡೆಸಿರುತ್ತಾರೆ. ಆಕಾಶವಾಣಿಯಲ್ಲಿ ನಾಲ್ಕು ಬಾರಿ ಕಾರ್ಯಕ್ರಮವನ್ನು ಕೊಟ್ಟಿರುತ್ತಾರೆ. ಸಂಗೀತದಲ್ಲಿಯೂ ವಿದ್ವತ್ ಪರೀಕ್ಷೆಯನ್ನು ಮಾಡಿಕೊಂಡ ಕಛೇರಿಗಳನ್ನು ನಡೆಸಿರುವರು. ದೂರವಾಣಿ ನಗರ, ವೈಯಾಳಿಕಾವಲ್, ರಾಜಾ ನಗರ ಮುಂತಾದ ಕಡೆಗಳಲ್ಲಿ ವಾರ್ಷಿಕೋತ್ಸವಗಳು, ಸ್ಪರ್ಧೆಗಳಲ್ಲಿ ಭಾಗವಹಿ ಬಹುಮಾನಗಳನ್ನು ಪಡೆದಿರುತ್ತಾರೆ. ಕೆ.ಜಿ.ಎಫ್.ನ ಸನಾತನ ಧರ್ಮಸಭಾದಲ್ಲಿ ಶಂಕರಜಯಂತಿ ಪ್ರಯುಕ್ತ ೪-೫-೭೬ರಲ್ಲಿ ಶ್ರೀ ಮತ್ತೂರು ಲಕ್ಷ್ಮೀಕೇಶವಶಾಸ್ತ್ರಿ ಗಳ ವ್ಯಾಖ್ಯಾನದೊಂದಿಗೆ ಇವರ ವಾಚನವು ನಡೆದು ಜನರಿಗೆ ಆನಂದವನ್ನುಂಟು ಮಾಡಿತು. ಇವರು ತಮ್ಮ ಗುರುಗಳಾದ ಗಮಕಿ ರಾಮಾರಾಧ್ಯರೊಡನೆ ಚನ್ನ ಪಟ್ಟಣ ಮತ್ತು ಇತರ ಸ್ಥಳಗಳಲ್ಲಿ ಹರಿಶ್ಚಂದ್ರ ಕಾವ್ಯವನ್ನು ವಾಚ ಮಾಡಿರುತ್ತಾರೆ.

೨೩೮. ಎಸ್.ಆರ್. ಲಲಿತ, ಬೆಂಗಳೂರು

ಇವರು ೧೯೫೨ರಲ್ಲಿ ಜನಿಸಿದರು. ಇವರಿಗೆ ಸಂಗೀತದಲ್ಲಿ ಸೀನಿಯರ ಮಟ್ಟದ ಪ್ರಾವೀಣ್ಯವಿದೆ. ಗಮಕಿ ಶ್ರೀ ಅನಂತಪದ್ಮನಾಭರಾಯರಲ್ಲಿ ಗಮಕವನ್ನು ಅಭ್ಯಾಸ ಮಾಡಿ ಗಮಕ ಪ್ರವೇಶ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣ ರಾಗಿರುತ್ತಾರೆ. ಇವರು ಬಿ.ಎಸ್‌ಸಿ. ಪದವೀಧರರು.

೨೩೯. ಎಸ್. ವಿಜಯಮಾಲಾ, ಮೈಸೂರು

ಇವರು ತುಮಕೂರು ಜಿಲ್ಲೆಯ ಶಿರಾದಲ್ಲಿ ೩-೯-೧೯೫೪ರಲ್ಲಿ ಜನಿಸಿದರು ತಂದೆಯವರು ಗಮಕಿ ಶ್ರೀ ಎಸ್. ಶಂಕರಪ್ಪನವರು, ತಾಯಿ ಶ್ರೀಮತಿ ಲಕ್ಷ್ಮ ನವರು. ಇವರು ಬಿ.ಎ., ಬಿ.ಎಡ್. ಪದವೀಧರರು. ಪದವೀ ಪರೀಕ್ಷೆಗೆ ಸಂಗೀ

ವನ್ನು ಅಭ್ಯಾಸ ಮಾಡಿರುತ್ತಾರೆ. ಸಂಗೀತ, ಸಾಹಿತ್ಯ, ಗಮಕಗಳಲ್ಲಿ ಅಭಿರುಚಿ ಆಸಕ್ತಿಗಳನ್ನು ಹೊಂದಿರುವ ಮನೆತನ ಇವರದು. ಕನ್ನಡ ಸಾಹಿತ್ಯವನ್ನು ಅಭ್ಯಾಸ ಮಾಡಿದ್ದಾರೆ. ಗಮಕ ಕಲೆಯಲ್ಲಿ ತಂದೆ ತಾಯಿಗಳಲ್ಲದೆ ಗಮಕಿ ಶ್ರೀ ಎಂ. ರಾಘವೇಂದ್ರರಾಯರ ಮತ್ತು ಮೈಸೂರಿನ ಶ್ರೀ ಸಿ.ವಿ. ಶ್ರೀನಿವಾಸಾಚಾರ್ಯರ ಮಾರ್ಗದರ್ಶನವನ್ನು ಪಡೆದಿರುತ್ತಾರೆ. ಗಮಕ ಪ್ರವೇಶ ಮತ್ತು ಪ್ರೌಢಗಳಲ್ಲಿ ತೇರ್ಗಡೆಯಾಗಿದೆ. ಗಮಕ ಅಧ್ಯಾಪಕರ ಶಿಕ್ಷಣ ಶಿಬಿರದಲ್ಲಿ ಪಾಲ್ಗೊಂಡು ಪ್ರಶಸ್ತಿ ಪತ್ರವನ್ನು ಪಡೆದಿರುತ್ತಾರೆ. ಮೈಸೂರು. ಪಿರಿಯಾಪಟ್ಟಣ, ಮಿರ್ಲೆ ಮುಂತಾದ ಸ್ಥಳಗಳಲ್ಲಿನ ರಾಮಮಂದಿರದಲ್ಲಿ, ಮೈಸೂರಿನ ದಸರಾ ವಸ್ತು ಪ್ರದರ್ಶನದಲ್ಲಿ ಕಾವ್ಯ ವಾಚನ ಕಾರ್ಯಕ್ರಮಗಳನ್ನು ನಡೆಸಿರುತ್ತಾರೆ.

೨೪೦. ಎಸ್. ಗಿರಿಜ, ಬಳ್ಳಾರಿ

ಇವರು ೧೯೩೮ರಲ್ಲಿ ಜನಿಸಿದರು. ಇವರ ತಂದೆ ಶ್ರೀ ಎಸ್. ಕಲ್ಲೂರಾವ್ ಅವರು. ಇವರು ಕಾಲೇಜು ಶಿಕ್ಷಣವನ್ನು ಪಡೆದಿರುವರು. ಬಳ್ಳಾರಿಯಲ್ಲಿ ಗಮಕಿ ರಾಮಾಶಾಸ್ತ್ರಿಗಳು ನಡೆಸುತ್ತಿರುವ ಗಮಕ ತರಗತಿಗಳಿಗೆ ಸೇರಿ ಕಾವ್ಯವಾಚನವನ್ನು ಅಭ್ಯಾಸ ಮಾಡಿ ಗಮಕ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವರು. ತಕ್ಕಮಟ್ಟಿನ ಸಂಗೀತ ಜ್ಞಾನವಿದ್ದು ಸುಮಾರು ಏಳೆಂಟು ವರ್ಷಗಳಿಂದಲೂ ಕಾವ್ಯವಾಚನ ಮಾಡುತ್ತಿರುವರು.

೨೪೧. ಡಿ.ಆರ್. ಗುರುನಾಥ್

ಇವರು ದೂರವಾಣಿನಗರದ ಕರ್ನಾಟಕ ಸಂಘದ ಆಶ್ರಯದಲ್ಲಿ ನಡೆಯುತ್ತಿದ್ದ ಗಮಕ ತರಗತಿಯಲ್ಲಿ ಶ್ರೀ ಜಿ.ಎ. ಅನಂತಪದ್ಮನಾಭಯ್ಯನವರ ಶಿಷ್ಯರಾಗಿ ಗಮಕಾಭ್ಯಾಸ ಮಾಡಿ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರು. ಪ್ರಸಿದ್ಧ ಗಮಕಿಗಳ ವಾಚನ ವ್ಯಾಖ್ಯಾನಗಳನ್ನು ಕೇಳಿ ತಮ್ಮ ಗಮಕ ಕಲಾಸಕ್ತಿಯನ್ನು ಹೆಚ್ಚಿಸಿಕೊಂಡಿರುವರು.

೨೪೨. ಆರ್. ಪದ್ಮ, ಬೆಂಗಳೂರು

ಇವರಿಗೆ ಚಿಕ್ಕಂದಿನಿಂದಲೂ ಸಂಗೀತದ ಮೇಲೆ ತುಂಬಾ ಪ್ರೀತಿಯಿದ್ದಿತ ಸಂಗೀತದಲ್ಲಿ ಜೂನಿಯರ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದಾರೆ. ಸುಮಾ ೧೯೭೦ರಲ್ಲಿ ಗಾಂಧೀ ಸಾಹಿತ್ಯ ಸಂಘದಲ್ಲಿ ನಡೆದ ಗಮಕ ರೂಪಕವನ್ನು ನೋ ದಾಗಿನಿಂದ ಗಮಕ ಕಲಿಯುವ ಆಸಕ್ತಿ ಇವರಲ್ಲಿ ಮೂಡಿತು. ಗಮಕಿ ಹು.ಮಾ ರಾಮಾರಾಧ್ಯರಲ್ಲಿ ಗಮಕ ಶಿಕ್ಷಣ ಪಡೆದರು. ಗಮಕ ಪ್ರವೇಶ ಮತ್ತು ಪ್ರೌ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುತ್ತಾರೆ. ಕೆಲವು ಕಡೆ ವಾಚನ ಮಾಡಿರುವರು ವಾಚನ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನವನ್ನು ಗಳಿಸಿರುವರು.

೨೪೩. ಎಸ್. ಎನ್. ಶಾರದಮ್ಮ

ಇವರು ಅಮ್ಮಸಂದ್ರದ ಮೈಸೂರು ಸಿಮೆಂಟ್ಸ್ ಕಾರ್ಖಾನೆಯಲ್ಲಿ ಮೆಡಿಕಲ ಆಫೀಸರಾಗಿರುವ ಶ್ರೀ ಡಾ. ಎಸ್. ನರಸಿಂಹಮೂರ್ತಿಯವರ ಕುಟುಂಬ. ಇವ ೧೯೫೭ರಲ್ಲಿ ಗಮಕ ಪ್ರವೇಶ ಪರೀಕ್ಷೆಯಲ್ಲಿಯೂ ೧೯೬೪ರಲ್ಲಿ ಗಮಕ ಪ್ರೌ ಪರೀಕ್ಷೆಯಲ್ಲಿಯೂ ಉತ್ತೀರ್ಣರಾಗಿರುವರು.

೨೪೪. ಹೆಚ್.ವಿ. ರಾಮಚಂದ್ರ ಜೋಯಿಸ್, ಭದ್ರಾವತಿ

ಇವರು ಶಿವಮೊಗ್ಗಾದಲ್ಲಿ ಹುಟ್ಟಿದರು. ಎಸ್.ಎಸ್.ಎಲ್.ಸಿ. ಮತ್ತು ಶಿಕ್ಷಕರ ತರಬೇತಿ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿ ಭದ್ರಾವತಿ ಪೇಪರ್‌ಟೌನ ಪ್ರಾಥಮಿಕ ಶಾಲೆಯಲ್ಲಿ ಉಪಾಧ್ಯಾಯರಾಗಿರುತ್ತಾರೆ. ವಿದ್ಯಾರ್ಥಿ ದೆಸೆಯಿಂ ಪದ್ಯಗಳನ್ನು ರಾಗವಾಗಿ ಹಾಡುವುದರಲ್ಲಿ ಆಸಕ್ತಿಯಿದ್ದಿತು. ಉಪಾಧ್ಯಾ ಮಿತ್ರರೂ ಪ್ರೋತ್ಸಾಹ ನೀಡಿದರು. ಸ್ವಲ್ಪಮಟ್ಟಿಗೆ ರಾಗಗಳ ಪರಿಚಯವಿರುತ್ತ ದೇವರ ನಾಮಗಳನ್ನು ಇಂಪಾಗಿ ಹಾಡಬಲ್ಲರು. ನಾಟಕಗಳಲ್ಲಿ ಅಭಿನಯಿಸು ದೆಂದರೆ ಇವರಿಗೆ ತುಂಬಾ ಪ್ರೀತಿ. ಪ್ರೌಢಶಾಲಾ ವಿದ್ಯಾರ್ಥಿಯಾಗಿದ್ದಾಗ ಗಮ ಗಳಾದ ಬಿಂದೂರಾಯರು, ನಾಗೇಶರಾಯರು ಮತ್ತು ವೆಂಕಟೇಶಯ್ಯನವರ ಕಾ ವಾಚನಗಳನ್ನು ಕೇಳಿ ಗಮಕ ಕಲೆಯಲ್ಲಿ ಅಭಿಮಾನ ಒಲವುಗಳನ್ನು ತಳೆದರ

೧೯೪೯-೫೦ ರಲ್ಲಿ ಅವರ ಗುರುಗಳಾಗಿದ್ದ ಶ್ರೀ ಕೆ. ಟಿ. ರಾಮಸ್ವಾಮಿ ಅಯ್ಯಂಗಾರ್ಯರು ರಾಗಭಾವಪೂರ್ಣವಾಗಿ ಕಾವ್ಯವಾಚನ ಮಾಡುವುದನ್ನು ಇವರಿಗೆ ಕಲಿಸಿಕೊಟ್ಟರು. ಸರ್ಕಾರದ ಸಂಸ್ಕೃತಿ ಪ್ರಸಾರ ಕಾರ್ಯಕ್ರಮದಲ್ಲಿ ಭಾಗವಹಿಸಿರುತ್ತಾರೆ. ೧೯೫೪ ರಿಂದ ಆಕಾಶವಾಣಿಯಲ್ಲಿ ಕಾವ್ಯವಾಚನ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದಾರೆ. ವ್ಯಾಖ್ಯಾನ ವಾಚಸ್ಪತಿ ಶ್ರೀ ಲಕ್ಷ್ಮೀಕೇಶವಶಾಸ್ತ್ರಿಗಳು ಗದುಗಿನ ಭಾರತ ಮತ್ತು ಜೈಮಿನಿ ಭಾರತ ಮುಂತಾದ ಕಾವ್ಯಗಳ ವಿಚಾರದಲ್ಲಿ ಅಮೋಘ ಸಲಹೆ ಮಾರ್ಗದರ್ಶನಗಳನ್ನು ನೀಡಿ ಉತ್ತಮ ಗಮಕಿಗಳಾಗಲು ಸಹಾಯಮಾಡಿರುವರು.

೨೪೫. ಬಿ. ಕೆ. ಸೀತಮ್ಮ

ಇವರ ಸ್ಥಳ ಮೈಸೂರು. ಬೆಟ್ಟಪುರದ ಕೃಷ್ಣಮೂರ್ತಿಗಳು ಈಕೆಯ ತಂದೆಯವರು. ಇವರು ಉಪಾಧ್ಯಾಯಿನಿಯಾಗಿ ಕೆಲಸ ಮಾಡುತ್ತಿರುವರು. ಇವರು ಶ್ರೀಯುತ ಕೃಷ್ಣಗಿರಿ ಕೃಷ್ಣರಾಯರ ಶಿಷ್ಯೆ. ಗಮಕ ಪ್ರವೇಶ ಮತ್ತು ಪ್ರೌಢ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವರು. ಬಸವಾಪಟ್ಟಣದಲ್ಲಿ ಗಮಕ ತರಗತಿಗಳನ್ನು ಏಳು ವರುಷಗಳಿಂದಲೂ ನಡೆಸುತ್ತಿರುವರು.

೨೪೬. ಶ್ರೀರಂಗಂ ಕೃಷ್ಣಮಾಚಾರ್ಯರು

ಇವರು ಕೋಲಾರ ಜಿಲ್ಲೆಯ ಚಿಕ್ಕಬಳ್ಳಾಪುರದಲ್ಲಿ ಜನಿಸಿದರು. ಇವರ ತಂದೆ ಶ್ರೀ ಸಿ. ಟಿ. ವೆಂಕಟಾಚಾರ್ಯರು, ತಾಯಿ ರಂಗಮ್ಮನವರು. ತಿರುಮಲೆ ತಾತಾಚಾರ್ಯರವರು ಇವರ ಪೂರ್ವಜರು. ಇವರು ಪ್ರಾಥಮಿಕ ಶಾಲಾ ಉಪಾಧ್ಯಾಯರಾಗಿರುವರು. ಸಂಗೀತ ಸಾಹಿತ್ಯಗಳ ವಾತಾವರಣದಲ್ಲಿ ಬೆಳೆದ ಇವರಿಗೆ ಬಾಲ್ಯದಿಂದಲೂ ಸಂಗೀತದಲ್ಲಿ ಅಭಿರುಚಿ. ಉತ್ತಮ ಶಾರೀರವನ್ನು ಹೊಂದಿ ಶಾಲೆಯ ಅನೇಕ ಗಾಯನ ವಾಚನ ಸ್ಪರ್ಧೆಗಳಲ್ಲಿ ಪ್ರಶಂಸೆಯನ್ನೂ ಬಹುಮಾನವನ್ನೂ ಪಡೆಯುತ್ತಿದ್ದರು. ಶ್ರೀಮಾನ್ ಮುಂಡಿಕಲ್ ಅಶ್ವತ್ಥನಾರಾಯಣರಾಯರು ತಾವು ರಚಿಸಿದ ಭಾವಗೀತೆಗಳನ್ನು ಇವರಿಂದ ವಾಚನ ಮಾಡಿಸಿ, ಮೆಚ್ಚಿ, ಆಶೀರ್ವದಿಸಿ ಪ್ರೋತ್ಸಾಹಿಸಿರುವರು. ಇವರ ಮಿತ್ರರೂ ಚಿತ್ರ ಸಾಹಿತಿ, ನಿರ್ಮಾತೃ ಮತ್ತು ನಿರ್ದೇಶಕರೂ ಆದ ಶ್ರೀ ಸಿ. ವಿ. ಶಿವಶಂಕರ್‌ರವಗು ತಮ್ಮ ದೂರದಬೆಟ್ಟ ಚಿತ್ರದಲ್ಲಿ ಇವರ ಅನೇಕ ಗೀತೆಗಳನ್ನು ಮುದ್ರಿಸಿಕೊಂಡು ಪ್ರೋತ್ಸಾಹಿಸಿರುವರು.

೨೪೭. ಕಮಲಮ್ಮ ಶ್ರೀಕಂಠಸ್ವಾಮಿ, ಕೊಳ್ಳೇಗಾಲ

ಇವರು ಶ್ರೀಯುತ ಗಮಕಿ ಬಿ. ಎಸ್. ಎಸ್. ಕೌಶಿಕ್‌ರವರಲ್ಲಿ ಗಮ[ಕ] ಕಲೆಯನ್ನು ಅಭ್ಯಾಸಮಾಡಿ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರು. ಗಾನವಿಶಾರದ ಶ್ರೀ ತಿಟ್ಟೆ ಕೃಷ್ಣಯ್ಯಂಗಾರ್‌ರವರು ಇವರ ಸಂಗೀತದ ಗುರುಗಳು. ಸಂಗೀತದಲ್ಲಿ ವಿದ್ವತ್ ಪರೀಕ್ಷೆಯಾಗಿದೆ. ಸಂಗೀತದ ಅಧ್ಯಾಪಕಿಯಾಗಿ ವಸಂ[ತ] ಕುಮಾರಿ ಬಾಲಿಕಾ ಪ್ರೌಢಶಾಲೆಯಲ್ಲಿ ಸೇವೆ ಸಲ್ಲಿಸುತ್ತಿರುವರು. ಮೈಸೂರಿ[ನ] ಅಕ್ಕನ ಬಳಗ ವಿದ್ಯಾಸಂಸ್ಥೆಯಲ್ಲಿ ಗಮಕದ ಅಧ್ಯಾಪಕಿಯಾಗಿರುವರು. ಇವ[ರು] ಹಾಡಿದ ದೇವರನಾಮುಗಳನ್ನು ಆಕಾಶವಾಣಿಯಲ್ಲಿ ಅನೇಕ ವರ್ಷಗಳಿಂದಲ[ೂ] ಬಿತ್ತರಿಸುತ್ತಿರುವರು.

೨೪೮. ಎಸ್. ಜಿ. ಛಾಯಾಪತಿರಾವ್, ಭರಮಸಾಗರ

ಇವರು ಕನ್ನಡ ಭಾರತ ಮತ್ತು ಅನೇಕ ಧಾರ್ಮಿಕ ಗ್ರಂಥಗಳನ್ನು ಮಧು[ರ] ಕಂಠದಿಂದ ವಾಚನ ಮಾಡಿ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಸಿದ್ಧರಾಗಿರುವರು. ಅರಕೆರೆ ಗ್ರಾಮದಲ್ಲಿ ಚೆನ್ನಬಸವಪುರಾಣ, ಶರಣಸಾಹಿತ್ಯ, ರಗಳೆಗಳು ಮತ್ತು ವಚನಗಳು, ಭಾರತ, ಅನುಭವಾಮೃತ ಮುಂತಾದ ಗ್ರಂಥಗಳನ್ನು ವಾಚ[ನ] ಮಾಡಿರುವರು.

೨೪೯. ಎ. ಆರ್. ಸೀತಾರಾಮರಾವ್

ಇವರು ಎಂ.ಎ., ಬಿ.ಎಡ್. ಪದವೀಧರರು. ಮಾಯಿಕೊಂಡ ಹೈಸ್ಕೂ[ಲಿನ] ಮುಖ್ಯೋಪಾಧ್ಯಾಯರು. ಕಾವ್ಯವಾಚನವನ್ನೂ ಮತ್ತು ಲಘು ಗೀತೆಗಳನ್ನು ಬಹು ಸ್ವಾರಸ್ಯವಾಗಿ ಹಾಡುವರು. ಇವರು ಗ್ರಂಥಕರ್ತರೂ ಹೌದು.

೨೫೦. ನಂದಗುಡಿ ಶ್ರೀನಿವಾಸರಾವ್

ಇವರು ಪೂಜ್ಯ ಗಮಕಿ ಬಿಂದೂರಾಯರ ಶಿಷ್ಯವರ್ಗಕ್ಕೆ ಸೇರಿದವರು. ಎಷ್ಟೋ ಮಂದಿ ವಿದ್ಯಾರ್ಥಿಗಳನ್ನು ಗಮಕಕಲೆಯಲ್ಲಿ ತರಬೇತಿ ಮಾಡಿದ್ದಾ[ರೆ].

ಇವರು ಗಾಂಧಿನಗರದಲ್ಲಿರುವ ಆರ್ಯ ವಿದ್ಯಾಶಾಲೆಯ ಉಪಾಧ್ಯಾಯರಾಗಿ ನಿವೃತ್ತ ರಾಗಿದ್ದಾರೆ. ಸಂಸ್ಕೃತಿ ಪ್ರಸಾರ ಕಾರ್ಯಕ್ರಮಗಳಲ್ಲಿ ವಾಚನಗಳನ್ನು ನಡೆಸಿರುತ್ತಾರೆ. ಪ್ರತಿದಿನವೂ ಮನೆಯಲ್ಲಿಯೇ ವಾಚನ ಮಾಡುತ್ತಾರೆ. ಶಿಷ್ಯರಲ್ಲಿ ಇವರಿಗೆ ಬಹು ವಾತ್ಸಲ್ಯ. ಗಮಕ ಕಲಾಸೇವೆಯನ್ನು ಕೇವಲ ಆಧ್ಯಾತ್ಮಿಕ ದೃಷ್ಟಿಯಿಂದ ಮಾಡುತ್ತಿರುತ್ತಾರೆ. ಒಂದೆರಡು ವರ್ಷ ಗಮಕ ತರಗತಿಗಳನ್ನೂ ನಡೆಸಿದರು. ಈಗ ಬೆಂಗಳೂರಿನ ಗಾಯತ್ರೀ ನಗರದಲ್ಲಿ ವಾಸಿಸುತ್ತಿದ್ದಾರೆ. ಸಾತ್ವಿಕ ಮನೋಧರ್ಮವುಳ್ಳ ಹಿರಿಯ ಜೀವಿಗಳು ಇವರು. ವರದಾಚಾರ್ಯರ ನಾಟಕಗಳನ್ನು ವೀಕ್ಷಿಸಿ ಕಂದ, ವೃತ್ತಗಳನ್ನು ಹಾಡುವ ರೀತಿಯನ್ನು ಚೆನ್ನಾಗಿ ಅಭ್ಯಾಸ ಮಾಡಿರುವರು. ಅತ್ಯಂತ ಸರಳಜೀವಿಗಳು ಮತ್ತು ಹಾಸ್ಯರಸಪ್ರಿಯರು.

೨೫೧. ಎಂ. ಪಿ. ತಿರುಮಲಾವಧಾನಿ, ಮತ್ತೂರು

ಇವರು ಗಮಕಕಲೆಯನ್ನು ಗುರುಮುಖೇನ ಶಾಸ್ತ್ರೋಕ್ತವಾಗಿ ಅಭ್ಯಸಿಸಿ ಅದರಲ್ಲಿ ಸಾಕಷ್ಟು ಅನುಭವ ಪಡೆದಿರುತ್ತಾರೆ. ಗದುಗಿನ ಭಾರತ, ಜೈಮಿನೀ ಭಾರತ, ಹರಿಶ್ಚಂದ್ರಕಾವ್ಯ, ತೊರವೇ ರಾಮಾಯಣ, ಶೇಷರಾಮಾಯಣ, ರಾಮಾಯಣದರ್ಶನಂ, ಗಿರಿಜಾಕಲ್ಯಾಣ, ನಳಚರಿತ್ರೆ, ಗದಾಯುದ್ಧವೇ ಮುಂತಾದ ಪ್ರಧಾನ ಕಾವ್ಯಗಳನ್ನು ವಾಚಿಸಿರುವರು. ಪ್ರಸಿದ್ಧ ಗಮಕಿಗಳಾದ ಶ್ರೀ ಲಕ್ಷ್ಮೀಕೇಶವ ಶಾಸ್ತ್ರಿಗಳು, ಮಾರ್ಕಂಡೇಯಾವಧಾನಿಗಳು, ಮತ್ತೂರು ಕೃಷ್ಣಮೂರ್ತಿ, ಚನ್ನಕೇಶವಶಾಸ್ತ್ರಿಗಳು, ರಘುಪತಿಶಾಸ್ತ್ರಿಗಳು, ರಾಮಭದ್ರಶಾಸ್ತ್ರಿಗಳು ಮುಂತಾದವರ ವ್ಯಾಖ್ಯಾನದೊಂದಿಗೆ ಅನೇಕ ಕಡೆಗಳಲ್ಲಿ ಹಲವಾರು ಬಾರಿ ವಾಚನ ನಡೆಸಿರುತ್ತಾರೆ. ಇವರು ತಮ್ಮ ಬಿಡುವಿನ ವೇಳೆಯಲ್ಲಿ ಮತ್ತೂರಿನಲ್ಲಿ ಗಮಕ ತರಗತಿಗಳನ್ನು ಸ್ವಂತ ಶ್ರಮ ಮತ್ತು ಜವಾಬ್ದಾರಿಗಳಿಂದ ನಡೆಸುತ್ತಿರುವರು.

೨೫೨. ಡಿ. ಆರ್. ವೇದವತಿ, ಬೆಂಗಳೂರು

ಇವರು ದೂರವಾಣೀನಗರದ ಕರ್ನಾಟಕ ಸಂಘವು ನಡೆಸುತ್ತಿದ್ದ ಗಮಕ ತರಗತಿಗೆ ಸೇರಿ ಗಮಕಿ ಶ್ರೀ ಅನಂತಪದ್ಮನಾಭಯ್ಯನವರ ಮಾರ್ಗದರ್ಶನದಲ್ಲಿ ಗಮಕವನ್ನು ಅಭ್ಯಾಸ ಮಾಡಿದರು. ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ತಂದೆತಾಯಿಗಳ ಮತ್ತು ಅಣ್ಣನವರ ಪ್ರೋತ್ಸಾಹವೂ ಇವರಿಗಿದೆ. ಸಂಘದ ಕಾರ್ಯ

ಕ್ರಮಗಳಲ್ಲಿ ಹಾಡಿದ್ದಾರೆ. ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನಗಳನ್ನು ಪಡೆ ದಿರುತ್ತಾರೆ.

೨೫೩. ಬಿ. ಆರ್. ಕೃಷ್ಣಮೂರ್ತಿ, ಬೆಂಗಳೂರು

ಶ್ರೀಯುತರಿಗೆ ಚಿಕ್ಕವಯಸ್ಸಿನಿಂದಲೂ ಸಂಗೀತ ಸಾಹಿತ್ಯಗಳಲ್ಲಿ ಹೆಚ್ಚಿನ ಮಮತೆ ಮತ್ತು ಒಲವುಗಳಿದ್ದುವು. ಒಳ್ಳೆಯ ಶಾರೀರವಿದ್ದಿತು. ತಂದೆಯವರು ಬಸವಾಪಟ್ಟಣದ ಶ್ರೀ ಬಿ. ಕೆ. ಶ್ರೀನಿವಾಸಮೂರ್ತಿಯವರನ್ನು ಸಂಗೀತಪಾಠಕ್ಕೆ ನೇಮಿಸಿದರು. ಅದಾದನಂತರ ಮೈಸೂರಿನಲ್ಲಿ ಗಾನಕಲಾ ಸಿಂಧು ಶ್ರೀ ಎಸ್. ಚನ್ನಕೇಶವಯ್ಯನವರ ಬಳಿ ಸೀನಿಯರ್‌ವರೆಗೂ ಪಾಠವಾಯಿತು. ಆ ಕಾಲದಲ್ಲಿ ನಡೆಯುತ್ತಿದ್ದ ಸುಪ್ರಸಿದ್ಧ ವಿದ್ವಾಂಸರುಗಳ ಕಛೇರಿಗಳನ್ನು ಕೇಳುವ ಅವಕಾಶ ಲಭಿಸಿತು. ಕೇಳ್ಮೆಯಿಂದ ಆಸಕ್ತಿ ಇಮ್ಮಡಿಸಿತು. ಅನಂತರ ಬೆಂಗಳೂರಿಗೆ ಬಂದಾಗ ತಮ್ಮ ಸೋದರಮಾವಂದಿರೂ ಸುಪ್ರಸಿದ್ಧ ಗಮಕ ವಿದ್ವಾಂಸರೂ ಆಗಿದ್ದ ಶ್ರೀ ಎಂ. ಎಸ್. ಚಂದ್ರಶೇಖರಯ್ಯನವರು ಇವರನ್ನು ಗಮಕ ಕಲಿಯುವಂತೆ ಪ್ರೋತ್ಸಾಹಿಸಿದರು. ಅವರೇ ಇವರಿಗೆ ಗಮಕ ಕಲೆಯಲ್ಲಿ ಮೊದಲ ಗುರುಗಳಾದರು. ಮುಂದೆ ಗಮಕ ವಿದ್ವಾನ್ ಕಳಲೆ ಸಂಪತ್ಕುಮಾರಾಚಾರ್ಯರಲ್ಲಿ ಗಮಕ ಅಭ್ಯಾಸ ಮಾಡಿದರು. ಅವರ ವಾಚನ ವೈಖರಿಗಳು ಇವರನ್ನು ರೋಮಾಂಚಗೊಳಿಸಿದುವು. ಮುಂದೆ ಗಮಕಿ ವಿದ್ವಾನ್ ಶ್ರೀ ಎಂ. ರಾಘವೇಂದ್ರರಾಯರಿಗೂ ಶಿಷ್ಯರಾಗುವ ಭಾಗ್ಯ ಇವರದಾಯಿತು. ೧೯೭೧ ರಲ್ಲಿ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ ಯಲ್ಲಿ ದಿವಂಗತ ಡಿ.ವಿ.ಜಿ. ಯವರ ಸಮ್ಮುಖದಲ್ಲಿ ವಾಚನಮಾಡಿ ಅವರ ಆಶೀರ್ವಾದ ವನ್ನು, ಮೆಚ್ಚಿಗೆಯನ್ನು ಪಡೆದಿರುವರು. ಅದೇ ಸಂಸ್ಥೆಯ ಶ್ರೀ ಬಿ.ವಿ. ವೆಂಕಟಾ ಚಲಪತಿಯವರೂ ಅವನ ವಾಚನ ಕೇಳಿ ಸೂಕ್ತ ಸಲಹೆಗಳನ್ನು ಇತ್ತಿರುವರು. ಗಾಯನ ಸಮಾಜದಲ್ಲಿ ನಡೆಯುವ ಸಂಗೀತ ಸಮ್ಮೇಳನದಲ್ಲಿಯೂ ಅನೇಕ ಕಾವ್ಯ ಗಳಿಂದ ಆಯ್ದ ಭಾಗಗಳನ್ನು ವಾಚನಮಾಡಿರುವರು. ಇವರ ವಾಚನವನ್ನು ನಾಡಿನ ಮಹಾ ಸಂಗೀತ ವಿದ್ವಾಂಸರುಗಳಾದ ರಾಳ್ಳಪಲ್ಲಿಯವರು. ಚಿನ್ನಕೇಶವಯ್ಯ ನವರು, ತಿಟ್ಟೆ ಕೃಷ್ಣಯ್ಯಂಗಾರ್ರವರು, ಬಿ. ದೇವೇಂದ್ರಪ್ಪನವರು, ಬಿ. ಪುಟ್ಟ ಸ್ವಾಮಯ್ಯನವರು, ಜಿ. ಚನ್ನಮ್ಮನವರು ಕೇಳಿ ಹೊಗಳಿ ಹಾರೈಸಿರುವರು. ಅಲ್ಲದೆ 'ರಾಜಶ್ರೀ', "ಮುರಳಿ" ಮತ್ತು "ಸಾರಗ್ರಾಹಿ"ಯವರು ಉತ್ತಮ ವಿಮರ್ಶೆಯ ಲೇಖನಗಳನ್ನು ಬರೆದಿರುವರು. ಗಮಕ ತರಗತಿಗಳ ಪ್ರಾಧ್ಯಾಪಕರಾಗಿ, ಪರೀಕ್ಷ

ರಾಗಿ ಸೇವೆ ಸಲ್ಲಿಸುತ್ತಿರುವರು. ಗಾಯನ ಸಮಾಜದ ಕಾರ್ಯದರ್ಶಿಗಳಾಗಿ ಸಂಗೀತ ಕಲೆಗೂ ಸೇವೆ ಸಲ್ಲಿಸುತ್ತಿರುವರು.

೨೫೪. ಡಿ. ಸೀತಾರಾಮಯ್ಯ, ಬೆಂಗಳೂರು

ಇವರು ಮಾಗಡಿ ಕರಣಿಕರ ವಂಶದವರು. ಎಸ್.ಎಸ್.ಎಲ್.ಸಿ, ಮುಗಿಸಿಕೊಂಡು ಬೆಂಗಳೂರಿನ ಸರ್ಕಾರೀ ಮುದ್ರಣಾಲಯದಲ್ಲಿ ಕರಡು ಪ್ರತಿಗಳ ಪರೀಕ್ಷಕರಾಗಿರುವರು. ನಿರಂತರ ಸ್ವಪ್ರಯತ್ನದಿಂದ ಸಾಹಿತ್ಯ, ಸಂಗೀತ ಮತ್ತು ಬೇರೆ ಭಾಷೆಗಳಲ್ಲಿ ಪರಿಣತಿಯನ್ನು ಪಡೆದುಕೊಂಡರು. ೧೯೫೫ ರಲ್ಲಿ ಪರಿಷತ್ತಿನಲ್ಲಿ ನಡೆದ ಗಮಕ ತರಗತಿಯಲ್ಲಿ ಸೇರಿ ಗಮಕಿ ಚಂದ್ರಶೇಖರಯ್ಯನವರ ಶಿಕ್ಷಣದಲ್ಲಿ ಕ್ರಮವಾಗಿ ಅಭ್ಯಾಸಮಾಡಿ ಪರೀಕ್ಷೆಯಲ್ಲಿಯೂ ಉತ್ತೀರ್ಣರಾಗಿರುವರು. ಗಮಕಿಗಳಾದ ಅನಂತಪದ್ಮನಾಭರಾವ್ ಮತ್ತು ಟಿ. ಆರ್. ಜಯರಾಯರು ಕಾವ್ಯ ವಾಚನ ಕಲೆಯ ಬಗ್ಗೆ ಸೂಕ್ತ ಮಾರ್ಗದರ್ಶನವಿತ್ತು ಪ್ರೋತ್ಸಾಹಿಸಿರುವರು. ಬಾಲ್ಯದಿಂದಲೂ ಸಂಗೀತದಲ್ಲಿ ಅಭಿರುಚಿಹೊಂದಿದ್ದು ಸಂಸ್ಕಾರಬಲದಿಂದಲೇ ದೇವರ ನಾಮಗಳನ್ನು ಹಾಡುತ್ತಿದ್ದರು. ಮುಂದೆ ಶಾಸ್ತ್ರೀಯ ಸಂಗೀತವನ್ನು ಮೋಹನ ರಂಗಯ್ಯನವರು, ಬಾಗಲೂರು ಕೃಷ್ಣಮೂರ್ತಿಗಳು, ಶ್ರೀನಿವಾಸಾಚಾರ್ಯರು ಕೃಷ್ಣಪ್ಪನವರೇ ಮುಂತಾದ ವಿದ್ವಾಂಸರಲ್ಲಿ ಕಲಿತು ಸಂಗೀತ ಮತ್ತು ಪಿಟೀಲು ವಾದನಗಳಲ್ಲಿ ಕೀರ್ತನೆಯ ಮಟ್ಟದವರೆಗೂ ಅಭ್ಯಸಿಸಿದರು. ಆರ್ಕೆಸ್ಟ್ರಾಗಳಲ್ಲಿ ಪಿಟೀಲನ್ನು ನುಡಿಸಿರುವರು. ಇವರ ಸಂಗೀತ, ಕಾವ್ಯವಾಚನ ಕಾರ್ಯಕ್ರಮಗಳು ಅನೇಕಬಾರಿ ಆಕಾಶವಾಣಿಯಲ್ಲಿ ಪ್ರಸಾರವಾಗಿವೆ. ಇವರು ಲೇಖಕರೂ ಆಗಿದ್ದು ಅನೇಕ ಗೀತೆಗಳನ್ನು ಅಷ್ಟಷಟ್ಪದಿಗಳನ್ನು ರಚಿಸಿರುವರು. ಅವುಗಳು ಆಕಾಶವಾಣಿಯಿಂದ ಪ್ರಸಾರವಾಗಿವೆ. ಇವರು ನಟರಾಗಿಯೂ ಅನೇಕ ನಾಟಕ ಕಂಪೆನಿಗಳಲ್ಲಿ ಪಾತ್ರವಹಿಸಿ, ಪ್ರೇಕ್ಷಕರಿಂದ ಮನ್ನಣೆಯನ್ನು ಪಡೆದಿರುವರು. ಅನೇಕ ವಿದ್ಯಾರ್ಥಿಗಳು ಇವರಲ್ಲಿ ಸಂಗೀತ ಮತ್ತು ಗಮಕಗಳನ್ನು ಕಲಿತು ಪ್ರಖ್ಯಾತರಾಗಿರುವರು.

೨೫೫. ಶಾರದಾಬಾಯಿ ಕೃಷ್ಣಮೂರ್ತಿ, ಬೆಂಗಳೂರು

ಇವರ ತಂದೆಯವರು ನಿವೃತ್ತ ಹೈಸ್ಕೂಲು ಹೆಡ್ಮಾಸ್ಟರ್ ಬಾದರಾಯಣ ಮೂರ್ತಿಯವರು, ತಾಯಿ ಇಂದಿರಾಬಾಯಿಯವರು. ತಾಯಿಯವರೂ ಯಾವಾ

ಗಲೂ ದೇವರನಾಮಗಳನ್ನು ಹಾಡುವುದನ್ನು ಕೇಳಿ ಸ್ಫೂರ್ತಿಗೊಂಡು ಇವರೂ ಆ ಬಗ್ಗೆ ಆಸಕ್ತಿ ತಾಳಿದರು. ಇವರು ಗಮಕಿ ಎನ್. ಪದ್ಮಾವತಮ್ಮನವರಲ್ಲಿ ಗಮಕ ವನ್ನು ಅಭ್ಯಾಸಮಾಡಿದರು. ಅವರ ಶಿಷ್ಯವಾತ್ಸಲ್ಯ ಮತ್ತು ಮಾರ್ಗದರ್ಶನದಲ್ಲಿ ಮುಂದುವರಿದರು. ಗಮಕ ಶಿಕ್ಷಣ ಶಿಬಿರದಲ್ಲಿ ಎಂ. ರಾಘವೇಂದ್ರರಾಯರ ತರಬೇತಿಯೂ ಲಭಿಸಿದೆ. ತಂದೆಯವರ ವ್ಯಾಖ್ಯಾನದೊಂದಿಗೆ ಮಲ್ಲೇಶ್ವರ ಮತ್ತು ರಾಜಾಜಿ ನಗರದ ಮಾಧ್ವ ಸಂಘಗಳಲ್ಲಿ, ವೈಯಾಳಿ ಕಾವಲ್ ಬಳಿಯಿರುವ ಸಂಸ್ಕೃತಿ ಕೇಂದ್ರದಲ್ಲಿ ವಾಚನಗಳನ್ನು ಮಾಡಿರುತ್ತಾರೆ. ಶ್ರೀ ರಾಘವೇಂದ್ರರಾಯರು ರಚಿಸಿದ 'ವೆಂಕಟೇಶವಿಜಯ' ಮತ್ತು 'ವ್ಯಾಸರಾಯ ಚರಿತ್ರೆ'ಯನ್ನು ೧೪ ದಿನಗಳ ಕಾಲ ವಾಚನ ಮಾಡಿರುತ್ತಾರೆ.

೨೫೬. ವಿಜಯವಾಣಿ, ಬೆಂಗಳೂರು

ಇವರ ಸಾಮಾನ್ಯ ವಿದ್ಯಾಭ್ಯಾಸ, ಎಸ್.ಎಸ್.ಎಲ್.ಸಿ. ೧೯೫೬ ನೆಯ ಇಸವಿಯಲ್ಲಿ ಗಮಕ ವಿದ್ವಾನ್ ಶ್ರೀ ಗುಂಡೂರಾಮಯ್ಯನವರಲ್ಲಿ ಅಭ್ಯಾಸಮಾಡಿ ಪ್ರವೇಶಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದಾರೆ. ತಂದೆಯವರಾದ ರಾಯಚಪರ್ ಕೃಷ್ಣಾಚಾರ್ಯರಲ್ಲಿ ಸಂಗೀತದ ಬಾಲ್ಯ ಪಾಠ ಕಲಿತು ನಂತರ ಸಂಗೀತ ವಿದ್ವಾನ್ ಶ್ರೀನಿವಾಸಮೂರ್ತಿ ಎಂಬುವರಲ್ಲಿ ಅಭ್ಯಾಸವನ್ನು ಮುಂದುವರಿಸಿ ಜೂನಿಯರ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ. ವಿದ್ವಾನ್. ಹೆಚ್. ವಿ. ವೆಂಕಟರಾಮಯ್ಯನವರಲ್ಲಿ ಸಂಗೀತ ಸೀನಿಯರ್ ಪರೀಕ್ಷೆಗೆ ತರಬೇತಿ ಪಡೆದು ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ. ಶ್ರೀ ವಿದ್ವಾನ್ ಚಿಂತಲಪಲ್ಲಿ ಕೃಷ್ಣ ಮೂರ್ತಿಯವರಲ್ಲಿ ಹೆಚ್ಚಿನ ವ್ಯಾಸಂಗಮಾಡುತ್ತಿರುತ್ತಾರೆ. ಹತ್ತು ವರ್ಷಗಳಿಂದ ರಾಮೋತ್ಸವ, ಗಣೇಶೋತ್ಸವಗಳಲ್ಲಿ ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿದ್ದಾರೆ. ದೂರವಾಣಿ ನಗರದ ಕರ್ಣಾಟಕ ಸಂಘದಲ್ಲಿ ಗಮಕ ಮತ್ತು ಸಂಗೀತ ತರಗತಿ ಗಳನ್ನು ನಡೆಸುತ್ತಿರುತ್ತಾರೆ. ಗಮಕಿ ಶ್ರೀ ರಾಘವೇಂದ್ರರಾಯರಲ್ಲಿಯೂ ಗಮಕ ಅಭ್ಯಾಸಮಾಡಿ ಅವರು ಏರ್ಪಡಿಸಿದ್ದ ಗಮಕ ಗೋಷ್ಠಿಯಲ್ಲಿ ಭಾಗವಹಿಸಿರುತ್ತಾರೆ. ಅನೇಕ ಸ್ಪರ್ಧೆಗಳಲ್ಲಿಯೂ ಭಾಗವಹಿಸಿ ಬಹುಮಾನಗಳನ್ನು ಪಡೆದಿರುತ್ತಾರೆ.

೨೫೭. ದೊಡ್ಡ ಬಸವ ಗವಾಯಿಗಳು, ಜಾಲಿಬೆಂಚಿ

ಇವರು ಬಳ್ಳಾರಿ ಪ್ರಾಂತದಲ್ಲಿ ಕಾಲು ಶತಮಾನದ ಹಿಂದೆ ಬೈಲಾಟ ನಾಟಕಗಳಲ್ಲಿ ಸ್ತ್ರೀ ಪಾತ್ರವಹಿಸುವುದರಲ್ಲಿ ಸುಪ್ರಸಿದ್ಧರಾಗಿದ್ದ ಶ್ರೀ ಜಾಲಿಬೆಂಚಿ ವೀರಭದ್ರಯ್ಯನವರ ಮಕ್ಕಳು. ಚಿಕ್ಕಂದಿನಲ್ಲಿ ವಿದ್ಯಾಭ್ಯಾಸ ಮುಗಿದೊಡನೆ ಶ್ರೀ ಜೋಳದರಾಶಿಯವರು ಮತ್ತಿತರರ ನಾಟಕ ಕಂಪೆನಿಗಳಿಗೆ ಸೇರಿದ್ದರು. ಅನಂತರ ಗದಗಿನಲ್ಲಿ ಶ್ರೀ ಪುಟ್ಟರಾಜು ಗವಾಯಿಗಳ ಶಿಷ್ಯರಾಗಿದ್ದು ಹಿಂದೂಸ್ಥಾನಿ ಸಂಗೀತ ಕಲಿತರು. ಅಭ್ಯಾಸ ಕಾಲದಲ್ಲೇ ಅನೇಕ ರಸಿಕರ ಆಹ್ವಾನದಂತೆ ಕಛೇರಿಗಳನ್ನು ಅಮೋಘವಾಗಿ ನಡೆಸಿದರು. ತಮ್ಮ ಕಲಿಕೆಯ ಸಂಗೀತ ಶಾಲೆಯಲ್ಲೇ ಅಧ್ಯಾಪಕರೂ ಆದರು. ಇವರು ಉತ್ತಮ ನಟರೂ ಆಗಿರುವರು. ಧಾರವಾಡದ ಆಕಾಶವಾಣಿ ಕೇಂದ್ರದಲ್ಲಿ ಇವರ ಹಾಡುಗಾರಿಕೆ ಪ್ರಸಾರವಾಗಿದೆ. ಹೆಚ್.ಎಮ್.ವಿ. ಮತ್ತು ಕೊಲಂಬಿಯಾ ಕಂಪೆನಿಗಳು ಇವರ ಹಾಡುಗಳನ್ನು ಧ್ವನಿಮುದ್ರಿಸಿಕೊಂಡಿವೆ. ನೆರೆಹೊರೆಯ ರಾಜ್ಯಗಳಲ್ಲೂ ಇವರ ಕಾರ್ಯಕ್ರಮಗಳನ್ನು ಏರ್ಪಡಿಸಿ ಗೌರವಿಸಿರುತ್ತಾರೆ. ಕೀರ್ತನ ಮತ್ತು ಪುರಾಣಗಳಲ್ಲಿ ಭಾವಮೈದುನರಾದ ದೇವಸಮುದ್ರದ ಶಿವಕುಮಾರಸ್ವಾಮಿಗಳ ಮಾರ್ಗದರ್ಶನ ಪಡೆದು ಪೌರಾಣಿಕರಾಗಿ ಕೀರ್ತಿಯನ್ನು ಪಡೆದಿರುತ್ತಾರೆ. ಇವರು ಶ್ರೇಷ್ಠಗಾಯಕರೂ ಗಮಕಿಗಳೂ ಆಗಿರುವರು.

೨೫೮. ಹೆಚ್, ಎನ್, ನಾರಾಯಣಾಚಾರ್, ಬೆಂಗಳೂರು

ಇವರು ಬಿ.ಎಸ್‌ಸಿ. ಪದವೀಧರರು. ಐ.ಟಿ.ಐ. ಕಾರ್ಖಾನೆಯಲ್ಲಿ ಉದ್ಯೋಗದಲ್ಲಿರುತ್ತಾರೆ. ಹೊಳವನಹಳ್ಳಿಯ ಸಂಸ್ಕೃತ ಪಾಠಶಾಲೆಯಲ್ಲಿ ಶ್ರೀ ರಾಯಚೂರು ಕೃಷ್ಣಾಚಾರ್ಯರಲ್ಲಿ ಸಂಸ್ಕೃತ ಅಭ್ಯಾಸವನ್ನು ಮಾಡಿದುದು ಇವರ ಗಮಕ ವಾಚನದ ಅಭ್ಯಾಸಕ್ಕೆ ಹೆಚ್ಚು ಸಹಾಯಕವಾಗಿದೆ. ವಿದ್ಯಾರ್ಥಿದೆಸೆಯಲ್ಲಿ ಶ್ರೀಯುತ ಕಳಲೆ ಸಂಪತ್ಕುಮಾರಾಚಾರ್ಯರ ಹೆಸರು, ಶ್ರೀ ಜಯರಾಯರ ಗಮಕ ವಾಚನವನ್ನು ಕೇಳಿದ್ದರು. ದೂರವಾಣಿ ನಗರದ ಕರ್ನಾಟಕ ಸಂಘದಲ್ಲಿ ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾಯರ ಭಾರತ ವಾಚನವನ್ನು ಆಲಿಸಿದರು. ವೃಂದಗಾನಗಳನ್ನು ಕೇಳಿದ್ದರು. ಸುಪ್ತವಾಗಿದ್ದ ಅವರ ಗಮಕ ಕಲಾಸಕ್ತಿಗೆ

ಚೇತನ ಬಂದದ್ದು ಅಲ್ಲಿನ ಸಂಘದಲ್ಲಿ ಗಮಕ ತರಗತಿಗೆ ಸೇರಿದಾಗ. ಶ್ರೀ ಗಮಕಿ ಜಿ. ಎ. ಪದ್ಮನಾಭರಾಯರು ಇವರ ಗುರುಗಳಾಗಿ ಪ್ರವೇಶ ಪರೀಕ್ಷೆಯಲ್ಲಿ ತೇರ್ಗಡೆಯಾಗುವ ಮಟ್ಟಕ್ಕೆ ಇವರನ್ನು ತಯಾರು ಮಾಡಿದರು. ಇತರ ಸ್ನೇಹಿತರೂ ಇವರಿಂದ ಸ್ಫೂರ್ತಿಗೊಂಡರು. ಇವರಿಗೆ ಗದುಗಿನ ಭಾರತ, ಜೈಮಿನಿ ಭಾರತ, ತೊರವೆ ರಾಮಾಯಣ, ಹರಿಶ್ಚಂದ್ರ ಕಾವ್ಯ, ಭಾಗವತಗಳ ಅಭ್ಯಾಸದಲ್ಲಿ ಆಸಕ್ತಿ. ಗಮಕ ಪ್ರೌಢ ಪರೀಕ್ಷೆಯೂ ಆಗಿದೆ. ಗಮಕ ಕಲೆಯಲ್ಲಿ ಇವರು ಹೊಂದಿರುವ ಉತ್ತಮ ಅನುಭವಕ್ಕೆ ಅವರ ಗುರುಗಳಾದ ಗಮಕಿ ಅನಂತಪದ್ಮನಾಭಯ್ಯನವರ ಮತ್ತಿತರ ಸಹೃದಯ ಸ್ನೇಹಿತರ ಪ್ರೋತ್ಸಾಹಗಳೇ ಕಾರಣ. ಗಮಕ ವಾಚನ ಸ್ಪರ್ಧೆಗಳಲ್ಲಿ ಭಾಗವಹಿಸಿ, ಬಹುಮಾನಗಳನ್ನು ಪಡೆದಿದ್ದಾರೆ. ಅವರ ಶ್ರೀಮತಿಯವರಿಗೂ ಗಮಕ ಪ್ರೌಢ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುತ್ತದೆ. ಮಕ್ಕಳಿಗೂ ಆ ಕಲೆಯನ್ನು ಅಭ್ಯಾಸ ಮಾಡಿಸುತ್ತಿದ್ದಾರೆ.

೨೫೯. ಶಾಸ್ತ್ರಿ ಶಂಕರಗೌಡರು, ಹಚ್ಚಳ್ಳಿ

ಇವರ ತಂದೆ ಶಿದ್ದನಗೌಡರು. ಇವರ ವಿದ್ಯಾಭ್ಯಾಸ ಕೇವಲ ನಾಲ್ಕನೆಯ ತರಗತಿ. ಇವರಲ್ಲಿ ಸಂಗೀತಸಾಹಿತ್ಯದ ಜನ್ಯಗುಣವಿದ್ದಿತು, ತಾವೇ ಹಾಡಿಕೊಳ್ಳುತ್ತಿದ್ದರು. ದೇವಾಲಯದಲ್ಲಿ ಭಜನೆ ಮಾಡುವಾಗ ಉತ್ತಮವಾಗಿ ಹಾಡುತ್ತಿದ್ದರು. ೧೦-೧೨ ವರ್ಷಗಳಲ್ಲಿ ಹಾಡುಗಾರಿಕೆಗೆ ಒಳ್ಳೇ ಹೆಸರುವಾಸಿಯಾದರು. ಗೌಡರು ಬೈಲಾಟ, ನಾಟಕಗಳಲ್ಲಿಯೂ ಪಾತ್ರವಹಿಸುತ್ತಿದ್ದರು. ಅವರು ನಿರುಹಕಾರಿಗಳಾಗಿ ಅನೇಕ ಗ್ರಂಥಗಳನ್ನು ಶೋಧನೆ ಮಾಡಿ ನಿಜಗುಣ ಶಿವಯೋಗಿಗಳ ಮತ್ತು ಸರ್ಪಭೂಷಣ ಶಿವಯೋಗಿಗಳ ಹಾಡುಗಳಿಗೆ ರಾಗ ಜೋಡಿಸಿ ಹಾಡುತ್ತಿದ್ದರು. ಅವರು ಪುರಾಣ ಓದುವ ರೀತಿಯು ಚಿತ್ತಾಕರ್ಷಕವಾಗಿತ್ತು. ವ್ಯಾಖ್ಯಾನಕಾರರು ಇವರ ಕಾವ್ಯವಾಚನ ಪ್ರತಿಭೆಯನ್ನು ಮುಕ್ತಕಂಠದಿಂದ ಪ್ರಶಂಸಿಸುತ್ತಿದ್ದರು. ಇವರ ಪ್ರತಿಭೆ ಮತ್ತು ಪಾಂಡಿತ್ಯಗಳ ಉಪಯೋಗವನ್ನು ಅನೇಕ ಸಂಘಗಳವರು, ಸ್ವಾಮಿಗಳು, ಬಂಧುಮಿತ್ರರು ಪಡೆದುಕೊಂಡರು. ಶಾಸ್ತ್ರಿಗಳು ಶಿವಾನುಭವ ಶಾಸ್ತ್ರ ಪ್ರವಚನಕಾರರಾದರು. ಜೈಮಿನಿಭಾರತ ಕುಮಾರವ್ಯಾಸ ಭಾರತಗಳನ್ನು ಸೊಗಸಾಗಿ ವಾಚನ ಮಾಡುತ್ತಿದ್ದರು. ಇಷ್ಟೆಲ್ಲವನ್ನೂ ಅವರು ಸ್ವಪ್ರಯತ್ನದಿಂದಲೇ ಸಾಧಿಸಿಕೊಂಡು ಸುಪ್ರಸಿದ್ಧ ಗಮಕಿಗಳೂ ಪ್ರವಚನಕಾರರೂ ಆದರು.

೨೬೦. ಎ. ಡಿ. ಶ್ರೀನಿವಾಸ ಅಯ್ಯಂಗಾರ್, ಮೈಸೂರು

ಇವರ ತಂದೆ ಶ್ರೀ ತಿರುಮಲಾಚಾರ್ಯರು. ಸಂಸ್ಕೃತ ಕನ್ನಡಗಳಲ್ಲಿ ಪಂಡಿತರು, ಸಂಗೀತಜ್ಞರು, ಒಳ್ಳೇ ಗಮಕಿಗಳು. ಇವರ ಮಾತಾಮಹರು ಶ್ರೀ ದೊಡ್ಡಾಚಾರ್ಯರು ಪಂಡಿತರು, ಪೌರಾಣಿಕರು, ಅನುಭವಿಗಳು. ಅವರಿಂದ ಶ್ರೀಯುತರು ಪುರಾಣ, ಕಾವ್ಯವಾಚನಗಳನ್ನು ಕಲಿತರು. ಹಿಂದಣ ಇಂಟರ್ಮೀಡಿಯಟ್‌ವರೆಗೆ, ಸಂಸ್ಕೃತದಲ್ಲಿ 'ನೈಷಧ'ದವರೆಗೆ ವ್ಯಾಸಂಗ ಮಾಡಿರುತ್ತಾರೆ. ಈಗ ಬೆಳುಗೊಳದ ರಾಸಾಯನಿಕ ಗೊಬ್ಬರದ ಕಾರ್ಖಾನೆಯಲ್ಲಿ ಅಕೌಂಟೆಂಟ್ ಕೆಲಸದಲ್ಲಿರುವರು. ಅಮೆಚೂರ್ ನಾಟಕರಂಗದಲ್ಲಿ ಇವರ ಪಾತ್ರ ಮಹಾಜನರ ಪ್ರಶಂಸೆ ಗಳಿಸಿರುತ್ತದೆ. ಇವರ ಕಾವ್ಯವಾಚನ, ಪುರಾಣಪ್ರವಚನ ಮತ್ತು ಕೀರ್ತನಗಳು ಜನಾನುರಾಗವನ್ನು ಗಳಿಸಿರುತ್ತವೆ. ಸಂಸ್ಕೃತ ಗ್ರಂಥಗಳನ್ನು ಕನ್ನಡಕ್ಕೆ ಪರಿವರ್ತಿಸಿರುತ್ತಾರೆ. ಸುಪ್ರಸಿದ್ಧ ಗಮಕಿಗಳಾಗಿದ್ದ ಸಂಪತ್ಕುಮಾರಾಚಾರ್ಯರಲ್ಲಿ ಗಮಕ ಕಲೆಯನ್ನು ಅಭ್ಯಸಿಸಿರುತ್ತಾರೆ. "ವ್ಯಾಖ್ಯಾನ ರತ್ನ" ಶ್ರೀ ವೆಂಕಟಸುಬ್ಬಯ್ಯನವರೊಡನೆ ಅನೇಕ ಸಲ ವಾಚನ ಮಾಡಿರುತ್ತಾರೆ. ಹಾಗೂ ಶ್ರೀ ಹೆಚ್. ಜೆ. ಶಾಮಣ್ಣನವರ ವ್ಯಾಖ್ಯಾನದೊಡನೆಯೂ ವಾಚನವನ್ನು ಮಾಡುತ್ತಿರುತ್ತಾರೆ. ಇವರ ಗಮಕಕಲೆಗೆ ಸ್ಫೂರ್ತಿಯನ್ನಿತ್ತಿರುವ ಸಾಹಿತಿಗಳು ಮತ್ತು ಇತರ ಗಮಕಿಗಳೆಂದರೆ ಶ್ರೀ ಗೋವಿಂದ ಪೈರವರು, ಹನುಮನಾಳ್ ಸಿದ್ದಯ್ಯನವರು, ದೇವುಡು ಶಾಸ್ತ್ರಿಗಳು, ಕೃಷ್ಣಗಿರಿ ಕೃಷ್ಣರಾಯರು, ಕೆಂಪನಪುರದ ಗಮಕಿ ನರಸಿಂಹಾಚಾರ್ಯರು.

೨೬೧. ಹೆಚ್. ಶೇಷಗಿರಿರಾವ್, ಮಂಡ್ಯ

ಇವರು ಮಂಡ್ಯ ನಗರದಲ್ಲಿ 'ವಿದ್ಯಾಗಣಪತಿ ಗಮಕಶಾಲೆ'ಯನ್ನು ಹದಿನೈದು ವರುಷಗಳಿಂದಲೂ ಸ್ವಶಕ್ತಿ ಸಾಧನೆಗಳಿಂದ ಬೆಳೆಸಿ ಮಕ್ಕಳಿಗೆ ಸಂಗೀತ, ಸಾಹಿತ್ಯ, ಗಮಕವನ್ನು ಹೇಳಿಕೊಡುತ್ತಿರುವರು. ಸಂಗೀತಕ್ಕೆ ಹೆಸರಾದ ಮನೆತನ ಇವರದು. ಸ್ವಯಂಸ್ಫೂರ್ತಿಯಿಂದ ಕಾವ್ಯಾಭ್ಯಾಸ ಮಾಡಿ ಕುಮಾರವ್ಯಾಸ ಭಾರತವನ್ನು ಅಭ್ಯಸಿಸಿ ಅದರಲ್ಲಿ ಸಂಶೋಧನೆಗಳನ್ನೂ ನಡೆಸುತ್ತಿರುವರು. ವೇದಾಂತ, ತರ್ಕ, ವಿದ್ವತ್ಸಭೆಗಳಲ್ಲಿಯೂ ಪ್ರತಿಭಾಶಾಲಿಗಳು. ಕಿರಿಯರಿಂದ ಹಿಡಿದು ಹಿರಿಯರವರೆಗೆ ಎಲ್ಲರಿಗೂ ವಿದ್ಯಾದಾನ ಮಾಡುತ್ತಿದ್ದಾರೆ.

೨೬೨. ಡಿ. ಎನ್. ಗುಂಡಪ್ಪ, ಮಂಡ್ಯ

ಇವರ ಹುಟ್ಟೂರು ದೇವಲಾಪುರ. ಹಿರಿಯರು, ಸಂಪ್ರದಾಯ ಶರಣರು ಮತ್ತು ವಿದ್ವತ್ಪಕ್ಷಪಾತಿಗಳೂ ಆಗಿದ್ದವರ ಮನೆತನಕ್ಕೆ ಸೇರಿದವರು. ವಕೀಲಿ ವೃತ್ತಿಯನ್ನು ನಡೆಸುತ್ತಿದ್ದಾರೆ. ಅರುವತ್ತಕ್ಕೆ ಮೀರಿದ್ದರೂ ಶ್ರೀ ಶೇಷಗಿರಿರಾಯರಲ್ಲಿ ಪಾಠಪ್ರವಚನಗಳಿಗೆ ಹೋಗುತ್ತಿರುತ್ತಾರೆ. ಅಭ್ಯಾಸದಲ್ಲಿ ನಿಷ್ಠೆ ಮತ್ತು ಶಿಸ್ತು ಗಳಿವೆ. ಗಮಕ, ಸಾಹಿತ್ಯ, ಸಂಗೀತ ಸಭೆಗಳಲ್ಲಿ ಭಾಗವಹಿಸಿ, ರಸಿಕರಿಂದ ಮೆಚ್ಚಿಕೆಯನ್ನು ಪಡೆದಿರುತ್ತಾರೆ. ಹಿಂದಿನ ಕವಿಗಳೆಂದರೆ ಇವರಿಗೆ ಪಂಚಪ್ರಾಣ. ಇವುಗಳಲ್ಲಿ ಅವರು ಹೊಂದಿರುವ ಆಸಕ್ತಿ ಇತರರಿಗೆ ಮಾರ್ಗದರ್ಶಕವಾಗಿದೆ.

೨೬೩. ಟಿ. ಸೂರ್ಯನಾರಣಪ್ಪ

ಇವರು ರಾಮನಾಥಪುರದ ಜಾವಗಲ್ ಗ್ರಾಮದವರು. ರೂರಲ್ ಎ. ವಿ. ಪಾಠಶಾಲೆಯ ಮುಖ್ಯೋಪಾಧ್ಯಾಯರಾಗಿದ್ದರು. ಇವರು ಪ್ರಸಿದ್ಧ ಗಮಕಿಗಳೂ ಕೀರ್ತನಕಾರರೂ ಆಗಿದ್ದರು.

೨೬೪. ದರೋಗ ನರಸಿಂಹಯ್ಯ

ಇವರೂ ಸಹ ಜಾವಗಲ್ ಗ್ರಾಮದವರೇ. ಇವರ ತಂದೆ ಶ್ರೀ ಕಪನೀ ಪತಯ್ಯನವರು. ಇವರ ಕಾವ್ಯವಾಚನದ ವೈಖರಿಯು ವಿಶೇಷವಾಗಿ ಕಳಲೆ ಸಂಪತ್ಕುಮಾರಾಚಾರ್ಯರ ವಾಚನವನ್ನು ಸ್ಮರಣೆಗೆ ತರುತ್ತಿತ್ತು.

೨೬೫. ಬಿ. ಕೆ. ಸುಬ್ಬರಾವ್

ಇವರು ಈಗ ಅರಸೀಕೆರೆ ಸರ್ಕಾರಿ ಬಾಲಕಿಯರ ಪ್ರೌಢಶಾಲೆಯಲ್ಲಿ ಅಧ್ಯಾ ಪಕರಾಗಿದ್ದಾರೆ. ಸಂಗೀತ, ಸಾಹಿತ್ಯ, ಹರಿಕಥೆ ಮತ್ತು ಜನಪದಗೀತೆಗಳಲ್ಲಿ ಪರಿಶ್ರಮವಿದೆ. ಇವರ ಗಮಕಕಲೆಯ ಗುರುಗಳು ಶ್ರೀ ಮತ್ತೂರು ವೆಂಕಟೇಶಯ್ಯ ನವರು. ಸುಬ್ಬರಾಯರು ೧೯೬೮ರಲ್ಲಿ ನಡೆದ ಗಮಕ ಪ್ರವೇಶ ಪರೀಕ್ಷೆಯಲ್ಲಿ

ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾದರು. ಅದಕ್ಕಾಗಿ ಸಾಹಿತ್ಯ ಪರಿಷತ್ತಿನ ಬಹುಮಾನ ಪಡೆದಿರುತ್ತಾರೆ. ಕರ್ನಾಟಕದ ನಾನಾ ಭಾಗಗಳಲ್ಲಿ ಗಮಕ ವಾಚನ ಮಾಡಿರುತ್ತಾರೆ.

೨೬೬. ಟಿ. ಎನ್. ಸುಭದ್ರಮ್ಮ, ಬೆಂಗಳೂರು

ಪ್ರಸಿದ್ಧವಾದ 'ಭೂಪಾಳಂ' ಮನೆತನದಲ್ಲಿ ಹುಟ್ಟಿ 'ತಲ್ಲಂ' ಮನೆತನವನ್ನು ಸೇರಿದರು. ೧೯೪೮ ರಲ್ಲಿ ಹೈಯರ್ ಸೆಕೆಂಡರಿಯಲ್ಲಿ ಉತ್ತೀರ್ಣರಾಗಿದ್ದಾರೆ. ಅವರ ತಂದೆ ಶ್ರೀ ಭೂಪಾಳಂ ಪುಟ್ಟನಂಜಪ್ಪನವರು ಕಲೆ, ಸಂಗೀತ, ಸಾಹಿತ್ಯಗಳಲ್ಲಿ ಒಳ್ಳೆಯ ಅಭಿಮಾನಿಗಳು. ಸಂಸ್ಕಾರ ಬಲದಿಂದ ಇವರಲ್ಲಿಯೂ ಬಾಲ್ಯದಿಂದ ಕಲಾಸಕ್ತಿ ಹೇರಳವಾಗಿತ್ತು. ಶಿವಮೊಗ್ಗೆಯಲ್ಲಿ ನಡೆಯುತ್ತಿದ್ದ ಯಾವುದೇ ಸಾಂಸ್ಕೃತಿಕ ಕಾರ್ಯಕ್ರಮಗಳಿಗೂ ಹಾಜರಿರುತ್ತಿದ್ದರು. ಸಂಪ್ರದಾಯಸ್ಥರ ಮನೆತನದಲ್ಲಿ ಹುಟ್ಟಿದ ಇವರ ತಾಯಿಯವರ ಮಾರ್ಗದರ್ಶನವೂ ಇವರಿಗೆ ಲಭಿಸಿತು. ಸಂಗೀತ ಸೀನಿಯರ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ. ಸುಮಾರು ೧೦-೧೨ ವರ್ಷಗಳಿಂದ ಗಮಕ ಕಲೆಯನ್ನು ಅಭ್ಯಾಸ ಮಾಡುತ್ತಿದ್ದಾರೆ. ತಮ್ಮ ಮನೆಯಲ್ಲೇ ನಡೆದ ಸಮಾರಂಭವೊಂದರ ಸಂದರ್ಭದಲ್ಲಿ ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾಯರ ವಾಚನ ಕೇಳಿ ಸ್ಫೂರ್ತಿ ಪಡೆದರು. ಅವರು ಇವರ ಗಮಕಕಲೆಯ ಪ್ರಥಮ ಗುರುಗಳು. 'ರಾಮಾಯಣ ದರ್ಶನಂ' ಮತ್ತು 'ಗದುಗಿನ ಭಾರತ'ಗಳನ್ನು ಅಭ್ಯಸಿಸಿ ಗಮಕ ಪ್ರವೇಶಪರೀಕ್ಷೆಯಲ್ಲಿ ಎರಡನೇ ದರ್ಜೆಯಲ್ಲಿ ಉತ್ತೀರ್ಣರಾಗಿರುವರು. ಅನಂತರ ಕಾವ್ಯ ಪ್ರಚಾರಮಂಡಲಿಯಲ್ಲಿ ಗಮಕಿಗಳಾದ ಶ್ರೀ ರಾಘವೇಂದ್ರರಾಯರು, ಶ್ರೀ ಅನಂತಪದ್ಮನಾಭಯ್ಯನವರು ಮತ್ತು ಶ್ರೀ ಶಂಕರನಾರಾಯಣ್‌ರವರಲ್ಲಿ ಇವರ ಗಮಕಕಲೆಯ ಅಭ್ಯಾಸವು ಮುಂದುವರಿಯಿತು. ಕ್ರಮವಾಗಿ ಜೈಮಿನಿಭಾರತ, ಶ್ರೀನಿವಾಸಕಲ್ಯಾಣ, ಹರಿಶ್ಚಂದ್ರ ಕಾವ್ಯ, ತೊರವೆ ರಾಮಾಯಣ ಮತ್ತು ಗದುಗಿನ ಭಾರತದ ಕೆಲವು ಭಾಗಗಳನ್ನು ಅಭ್ಯಾಸ ಮಾಡಿರುವರು.

೨೬೭. ಬಿ. ಆರ್. ಸುಬ್ಬಕೃಷ್ಣ

ಬಾಣಾವರದ ಜನರು ಇವರ ಸಂಗೀತಕ್ಕೆ ಮುಗ್ಧರಾಗಿ, ಹೊಗಳುತ್ತಾರೆ. ವಿದ್ವಾನ್ ಶ್ರೀ ಬಿ. ಎಸ್. ರಾಜಯ್ಯಂಗಾರ್‌ರವರ ಮಾರ್ಗದರ್ಶನ ಆಶೀರ್ವಾದ

ಗಳನ್ನು ಹೊಂದಿ ಮುಂದುವರಿಯುತ್ತಿದ್ದಾರೆ. ಸಂಗೀತದಲ್ಲಿ ವಿದ್ವತ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ನೂರಾರು ಕಛೇರಿಗಳನ್ನು ಮಾಡಿರುತ್ತಾರೆ. ಗಮಕ ಪ್ರೌಢ ಪರೀಕ್ಷೆಯೂ ಆಗಿದೆ. ಅನೇಕ ಕಡೆ ವಾಚನ ಮಾಡಿರುವರು. ಇವರ ಅಭಿವೃದ್ಧಿಗೆ ಕಾರಣರಾದ ಗುರುಗಳು ಕೋಟಗಲ್ ದಿ. ನಾಗಭೂಷಣಂ ಮತ್ತು ಮತ್ತೂರು ಶ್ರೀ ವೆಂಕಟೇಶಯ್ಯನವರು. ಶ್ರೀಯುತರು ಈಗ ಚನ್ನರಾಯಪಟ್ಟಣದಲ್ಲಿ ಅಧ್ಯಾಪಕರಾಗಿರುವರು.

೨೬೮. ಬಿ. ಎನ್. ಶ್ರೀಕಂಠಯ್ಯ

ಇವರು ಹಾಲಿ ಬಾಣಾವರದಲ್ಲಿ ಅಧ್ಯಾಪಕರಾಗಿರುತ್ತಾರೆ. ಇವರು ಗಮಕ ಪ್ರೌಢಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾರೆ. ಈ ವರ್ಷ ೩೭ ಜನ ವಿದ್ಯಾರ್ಥಿನಿಯರನ್ನು ಗಮಕ ಪರೀಕ್ಷೆಗೆ ತಯಾರು ಮಾಡಿರುವರು. ಸಂಗೀತ, ಸಾಹಿತ್ಯ, ನಾಟಕ ಕಲೆಗಳಲ್ಲಿ ಇವರಿಗೆ ಅಪಾರ ಅನುಭವವಿದೆ. ಗಮಕ ಕಲೆಯ ಏಳಿಗೆಗೆ ಶ್ರಮಿಸುತ್ತಿರುತ್ತಾರೆ.

೨೬೯. ತ್ಯಾಮಗೊಂಡ್ಲು ವೆಂಕಟರಾಮಯ್ಯ

ಇವರ ತಂದೆಯವರು ಸಂಗೀತಪ್ರಿಯರಾಗಿದ್ದರು ಮತ್ತು ಚಿಕ್ಕಪ್ಪಂದಿರು ಅಭಿನಯ ಚತುರರಾಗಿದ್ದರು; ಅಲ್ಲದೆ ಗದುಗಿನ ಭಾರತದ ವಾಚನಮಾಡಿ ಜನರ ಮೆಚ್ಚಿಕೆಯನ್ನು ಗಳಿಸಿದ್ದರು; ಭಾರತವನ್ನು ನಾಟಕರೂಪದಲ್ಲಿ ವಾಚನ ಮತ್ತು ವ್ಯಾಖ್ಯಾನಗಳನ್ನು ಮಾಡಿ ಹೆಸರುವಾಸಿಯಾಗಿದ್ದರು. ಹೀಗಾಗಿ ಇವರಿಗೂ ಕಾವ್ಯ ವಾಚನ ಮಾಡುವುದನ್ನು ಕಲಿಯುವ ಹುಚ್ಚು ಹಿಡಿಯಿತು. ಶಾಲೆಯಲ್ಲಿ ಕಲಿಯುತ್ತಿದ್ದಾಗಲೇ ಕಲಾಪ್ರದರ್ಶನ ಮಾಡಿ ಮೆಚ್ಚಿಗೆ ಪಡೆದಿದ್ದರು. ಗಮಕ ಕಲೆಗೆ ಪೋಷಕವಾಗುವಂತೆ ಸಂಗೀತವನ್ನು ಶ್ರೀ ಹನುಮಂತಭಟ್ಟರಲ್ಲಿ ಮೂರು ವರ್ಷಗಳ ಕಾಲ ಅಭ್ಯಾಸ ಮಾಡಿದರು. ವಿದ್ಯಾಪ್ರೌಢಿಮೆಯಿಂದ ಕೂಡಿದ ವಯೋವೃದ್ಧರ ಮುಂದೆ ವಾಚನ ಮಾಡಿ ಪ್ರಶಂಸೆ ಪಡೆದಿರುವರು. ಶ್ರೀಯುತರಿಗೆ ವಾಚನ ವ್ಯಾಖ್ಯಾನಗಳೆರಡರಲ್ಲೂ ಪರಿಶ್ರಮವಿದೆ. ಇದನ್ನು ಅವರ ಗುರುಗಳಿಂದ ಆಸ್ಥಾನ ವಿದ್ವಾನ್ ಶ್ರೀ ಲಕ್ಷ್ಮಣಾಚಾರ್ಯರಲ್ಲಿ ಕಲಿತರು. ಗುರುಮನೆಗಳಲ್ಲಿ ವಾಚನ ಮಾಡಿ, ಮೆಚ್ಚಿಗೆಯನ್ನು ಪಡೆದು ಪ್ರಶಂಸನಾ ಪತ್ರಗಳನ್ನೂ ಪಡೆದಿರುವರು.

ತಲಕಾಡು ಶ್ರೀ ಕೃಷ್ಣಾನಂದ ಮಠದ ಸ್ವಾಮಿಗಳ ಸನ್ನಿಧಾನದಲ್ಲಿ ಹಾಗೂ ಶ್ರೀ ಕೆ. ಬಾಲಸುಬ್ರಹ್ಮಣ್ಯಂ, ಐ.ಎ.ಎಸ್.ರವರ ಸಮ್ಮುಖದಲ್ಲಿ ವಾಚನ ಮಾಡಿ, ವಿದ್ವತ್‌ಸಭೆಯಲ್ಲಿ "ಗಮಕ ಪ್ರವೀಣ" ಎಂಬ ಪ್ರಶಸ್ತಿಯನ್ನು ಪಡೆದಿರುವರು.

೨೭೦. ಕೆ. ಜಯಮ್ಮ, ಹಾಸನ

ಇವರು ಗಮಕಿ ಶ್ರೀ ನಂ. ಅಶ್ವತ್ಥನಾರಾಯಣರವರಲ್ಲಿ ಗಮಕ ಕಲೆಯನ್ನು ಅಭ್ಯಾಸ ಮಾಡಿ ಪ್ರವೇಶ ಪರೀಕ್ಷೆಯಲ್ಲಿ ರಾಜ್ಯಮಟ್ಟದಲ್ಲಿ ಪ್ರಥಮ ಸ್ಥಾನವನ್ನು ಗಳಿಸಿ ಉತ್ತೀರ್ಣರಾಗಿರುವರು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಗಮಕ ತರಗತಿಗಳನ್ನು ನಡೆಸುತ್ತಿರುವರು. ಹಾಸನದ ಉತ್ತರ ಬಡಾವಣೆಯಲ್ಲಿರುವ ಶ್ರೀ ಸೀತಾರಾಮಾಂಜನೇಯ ದೇವಾಲಯದಲ್ಲಿ ಸುಮಾರು ೧೫ ವರ್ಷಗಳಿಂದಲೂ ಭಾರತ, ರಾಮಾಯಣ, ಭಾಗವತಗಳನ್ನು ನಿರಂತರವಾಗಿ ವಾಚನ ಮಾಡುತ್ತಿರುವರು. ಇವರು ಸಂಗೀತ ವಿದುಷಿಯೂ ಆಗಿದ್ದಾರೆ.

೨೭೧. ಎಸ್. ವಸಂತಮ್ಮ, ನಾಗಮಂಗಲ

ಇವರು ಎಸ್.ಎಸ್.ಎಲ್.ಸಿ.ಯಲ್ಲಿ ಸಂಗೀತವನ್ನು ಐಚ್ಛಿಕವಾಗಿ ಕಲಿತು ಶಾಲಾ ಉಪಾಧ್ಯಾಯಿನಿಯಾಗಿರುವರು. ಇವರಿಗೆ ಗಮಕ ಕಲೆಯನ್ನು ಕಲಿಸಿದವರು ಶ್ರೀ ಎ. ಡಿ. ಶ್ರೀನಿವಾಸಯ್ಯಂಗಾರ್ ಮತ್ತು ಗಮಕಿ ಶ್ರೀ ಬಿ. ಎಸ್. ಎಸ್. ಕೌಶಿಕ್‌ರವರು. ಇವರು ಕಾವ್ಯವಾಚನವನ್ನು ಸುಮಾರು ಹತ್ತು ವರ್ಷಗಳಿಂದಲೂ ನಡೆಸುತ್ತಿರುವರು.

೨೭೨. ಕೆ. ಶ್ರೀನಿವಾಸರಾಯರು, ಮೈಸೂರು

ಇವರು ಗಮಕಿ ಶ್ರೀ ಕೃಷ್ಣಗಿರಿ ಕೃಷ್ಣರಾಯರ ಮಕ್ಕಳು. ಅಂಚೆ ಇಲಾಖೆಯಲ್ಲಿ ಉದ್ಯೋಗದಲ್ಲಿರುವರು. ಮನೆಯಲ್ಲಿ ತುಂಬಿದ್ದ ಸಂಗೀತ, ಸಾಹಿತ್ಯ, ಗಮಕ ಕಲೆಗಳ ವಾತಾವರಣದಲ್ಲಿ ಬೆಳೆದರು. ಗಮಕ ಕಲೆಯನ್ನು ತಮ್ಮ ತಂದೆಯವರ ವಾಚನಗಳನ್ನು ಕೇಳಿಯೂ ಮುಂದೆ ೧೯೫೪ರಲ್ಲಿ ಗಮಕಿ ನಂ. ಅಶ್ವತ್ಥನಾರಾಯಣರವರಲ್ಲಿಯೂ ಮತ್ತು ೧೯೬೯ರಲ್ಲಿ ಗಮಕಿ ಶ್ರೀ ರಾಮಾಶಾಸ್ತ್ರಿಗಳವರಲ್ಲಿಯೂ

ಕಲಿತು ಪ್ರವೇಶ ಮತ್ತು ಪ್ರೌಢ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವರು. ಇವರು ಹೈದರಾಬಾದು ಕಲ್ಬುರ್ಗಿ, ಬಳ್ಳಾರಿ, ಮಡಕೇರಿ, ಬೆಂಗಳೂರು ನಗರಗಳಲ್ಲಿ ಕಾವ್ಯ ವಾಚನ ಮಾಡಿರುವರು. ಇವರ ತಂಗಿ ಶ್ರೀಮತಿ ಕೃಷ್ಣಗಿರಿ ಕಮಲ ಅವರು ಬೆಂಗಳೂರು ಬಳಿಯ ಯಶವಂತಪುರದಲ್ಲಿ ನಡೆಸುತ್ತಿರುವ ಗಮಕ ತರಗತಿಗಳಿಗೆ ಸಹಾಯಕರಾಗಿ ಕಾವ್ಯವಾಚನವನ್ನು ಕಲಿಸುತ್ತಿರುವರು.

೨೭೩. ಜಯಮ್ಮ ಅನಂತಮೂರ್ತಿ, ಭದ್ರಾವತಿ

ಇವರಿಗೆ ವಿದ್ಯಾರ್ಥಿ ದೆಸೆಯಿಂದಲೂ ಸಂಗೀತದ ಕಡೆಗೆ ಒಲವಿದ್ದಿತು. ಹಿಂದೀ ಪ್ರವೀಣ, ಕನ್ನಡ ರತ್ನ ಮತ್ತು ಪಿ.ಯು.ಸಿ. ಪರೀಕ್ಷೆಗಳಲ್ಲಿ ತೇರ್ಗಡೆಯಾಗಿರುವರು. ಹಾಲಿ ಹಿಂದೀ ಅಧ್ಯಾಪಕಿಯಾಗಿರುವರು. ಇವರ ಮನೆತನದಲ್ಲಿ ಸಂಗೀತ, ಸಾಹಿತ್ಯ ಗಮಕ ಕಲೆಗಳ ವಾತಾವರಣವಿದ್ದುದರಿಂದ ಇವರಿಗೂ ಕಾವ್ಯ ವಾಚನದಲ್ಲಿ ಆಸಕ್ತಿ ಮೂಡಿತು. ತಮ್ಮ ಯಜಮಾನರು ನಡೆಸುತ್ತಿದ್ದ ಕಾವ್ಯ ವಾಚನ ಕಾರ್ಯಕ್ರಮಗಳಿಗೆ ತಪ್ಪದೆ ಹಾಜರಾಗುತ್ತಿದ್ದು ಶ್ರವಣ ಸಂಸ್ಕಾರವನ್ನು ಬೆಳೆಸಿಕೊಂಡರು. ದಾವಣಗೆರೆಯಲ್ಲಿದ್ದ ಕಾಲದಲ್ಲಿ ಗಮಕಿ ಶ್ರೀ ನಂ. ಅಶ್ವತ್ಥ ನಾರಾಯಣರವರು ನಡೆಸುತ್ತಿದ್ದ ಗಮಕ ತರಗತಿಗಳಿಗೆ ಸೇರಿ, ಅವರ ಶಿಷ್ಯರಾದರು. ಅವರಲ್ಲಿ ಗಮಕವನ್ನು ಅಭ್ಯಾಸಮಾಡಿ ೧೯೬೬–೬೭ ರಲ್ಲಿ ನಡೆದ ಗಮಕ ಪ್ರವೇಶ ಪರೀಕ್ಷೆಯಲ್ಲಿ ಎರಡನೇ ರ್‍ಯಾಂಕು ಗಳಿಸಿ ಉತ್ತೀರ್ಣರಾದರು. ಅನೇಕ ಸಭೆ ಸಮಾರಂಭಗಳಲ್ಲಿ ಕಾವ್ಯವಾಚನವನ್ನು ನಡೆಸುತ್ತ ಗಮಕ ಕಲೆಯನ್ನು ರೂಢಿಸಿ ಕೊಳ್ಳುತ್ತಿರುವರು. ಗದುಗಿನ ಭಾರತ, ಜೈಮಿನಿ ಭಾರತ, ರಾಮಾಯಣ ದರ್ಶನ, ತೊರವೇ ರಾಮಾಯಣ ಕಾವ್ಯಗಳನ್ನು ವಾಚನ ಮಾಡಬಲ್ಲರು.

೨೭೪. ಟಿ. ಜಿ. ಸರೋಜ ಮತ್ತು ಕುಸುಮಾ ಮೂರ್ತಿ, ತುಮಕೂರು

ಇವರಿಬ್ಬರೂ ಜವಳಿ ಮತ್ತು ಸರಾಫ್ ವ್ಯಾಪಾರಿಗಳಾದ ಶ್ರೀ ಮಾಕಂ ಗುರಪ್ಪಶೆಟ್ಟರ ಮಕ್ಕಳು. ಸಂಗೀತ ಮತ್ತು ಕಾಲೇಜು ವಿದ್ಯಾಭ್ಯಾಸವನ್ನು ನಡೆಸುತ್ತಿರುವರು. ಗಮಕ ಕಲೆಯನ್ನು ಶ್ರೀ ಸಿದ್ಧಲಿಂಗದೇವರಲ್ಲಿ ಅಭ್ಯಾಸಮಾಡಿ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರು. ಇವರ ವಾಚನ ಕಾರ್ಯಕ್ರಮಗಳು

ಅಜ್ಜಂಪುರ ಮತ್ತು ನಲ್ಲೂರಿನ ಕನ್ನಿಕಾಪರಮೇಶ್ವರೀ ದೇವಾಲಯಗಳಲ್ಲಿ ನಡೆದು ಶ್ರೋತೃಗಳ ಮೆಚ್ಚಿಗೆಯನ್ನು ಪಡೆದಿವೆ. ಶ್ರೀಮಂತರ ಮನೆತನದವರಾದ ಇವರು ತಮ್ಮ ಬಂಧುವರ್ಗದವರ ಮನೆಗಳಲ್ಲಿ ನಡೆಯುವ ಶುಭಮಂಗಳ ಕಾರ್ಯಗಳ ಸಂದರ್ಭದಲ್ಲಿ ಕಾವ್ಯವಾಚನವನ್ನು ನಡೆಸುತ್ತಿರುವರು. ಇವರೂ ಇವರ ಮಿತ್ರವೃಂದ ದವರೂ ಕೂಡಿ ತುಮಕೂರಿನಲ್ಲಿ 'ಗೋಕುಲ ನಿರ್ಗಮನ' ಗೀತರೂಪಕವನ್ನು ಮೊದಲಬಾರಿಗೆ ನಡೆಸಿ ಜನರ ಮೆಚ್ಚಿಗೆಯನ್ನು ಗಳಿಸಿರುವರು.

೨೭೫. ಹೆಚ್. ಕೆ. ನಾಗಮ್ಮ, ರುದ್ರಪಟ್ಣ

ಇವರು ರುದ್ರಪಟ್ಣದಲ್ಲಿ ಜನಿಸಿದರು. ಬಿ.ಎ.,ಬಿ.ಎಡ್. ಪದವೀಧರರಾಗಿ ಪ್ರೌಢಶಾಲಾ ಉಪಾಧ್ಯಾಯಿನಿಯಾಗಿರುವರು. ತಮ್ಮ ವ್ಯಾಸಂಗದಲ್ಲಿ ಸಂಗೀತ ವನ್ನು ಐಚ್ಛಿಕವಾಗಿ ಅಭ್ಯಾಸ ಮಾಡಿದರು. ಸಂಗೀತ, ಸಾಹಿತ್ಯ ಸಂಸ್ಕೃತಗಳಲ್ಲಿ ಪರಿಣತರಾಗಿದ್ದ ಇವರ ತಂದೆಯವರಿಂದಲೇ ಪ್ರೋತ್ಸಾಹ ದೊರೆತು ಗಮಕ ಕಲೆ ಯನ್ನು ಗಮಕಿ ಶ್ರೀ ಬಿ.ಎಸ್.ಎಸ್. ಕೌಶಿಕ್ ಮತ್ತು ಗಮಕಿ ನಂ. ಅಶ್ವತ್ಥ ನಾರಾಯಣರವರಲ್ಲಿ ಮುಂದುವರಿಸಿ ೧೯೬೧ ರಲ್ಲಿ ನಡೆದ ಗಮಕ ಪ್ರವೇಶಪರೀಕ್ಷೆ ಯಲ್ಲಿ ರಾಜ್ಯಕ್ಕೆ ಪ್ರಥಮಸ್ಥಾನವನ್ನು ಪಡೆದರು. ಇವರ ವಿರಾಮ ಕಾಲದಲ್ಲಿ ಶಾಲಾ ವಿದ್ಯಾರ್ಥಿನಿಯರಿಗೆ ಗಮಕ ಕಲೆಯನ್ನು ಕಲಿಸುತ್ತಿರುವರು.

೨೭೬. ಎಂ. ಮುನೀಶ್ವರಯ್ಯ

ಇವರು ಆನೆಕಲ್ ತಾಲ್ಲೂಕು ಮಾಯಸಂದ್ರ ಗ್ರಾಮದಲ್ಲಿ ಜನಿಸಿದರು. ಇವರ ತಂದೆ ಶ್ರೀ ಮುನೇಗೌಡರು ಮತ್ತು ತಾಯಿ ಶ್ರೀಮತಿ ಸಿದ್ದಮ್ಮನವರು. ಪ್ರೌಢಶಾಲಾ ವ್ಯಾಸಂಗವನ್ನು ಮುಗಿಸಿಕೊಂಡು ಇವರು ಸಮಾಜಸೇವಕ ರಾಗಿ ಕೆಲಸ ಮಾಡುತ್ತಿರುವರು. ವಿದ್ಯಾರ್ಥಿ ದೆಸೆಯಲ್ಲಿ, ಕನ್ನಡ ಪಂಡಿತರಾಗಿದ್ದ ಶ್ರೀ ಶ್ರೀನಿವಾಸಯ್ಯಂಗಾರ್‌ರವರು ಇವರಿಗೆ ಕಾವ್ಯವಾಚನದಲ್ಲಿ ಆಸಕ್ತಿಯನ್ನುಂಟು ಮಾಡಿದರು. ಇವರು ಸಂಗೀತ ವಿದ್ವಾನ್ ಎ. ಕೃಷ್ಣಮೂರ್ತಿರಾಯರಲ್ಲಿ ಸಂಗೀತಾ ಭ್ಯಾಸವನ್ನು ಮಾಡಿರುವರು. ಇವರು ಕಾವ್ಯವಾಚನವನ್ನೂ ಯಕ್ಷಗಾನ ಪ್ರಸಂಗ ಗಳನ್ನೂ ನಡೆಸುವರು. ಸಂಸ್ಕೃತಿ ಪ್ರಸಾರ ಇಲಾಖೆಯ ಆಶ್ರಯದಲ್ಲಿ ಪ್ರವಾಸ ಮಾಡಿ ಬಳ್ಳಾರಿ ಜಿಲ್ಲೆಯ ಅನೇಕ ಸ್ಥಳಗಳಲ್ಲಿ ಕಾವ್ಯವಾಚನವನ್ನು ನಡೆಸಿರುವರು.

ಆನೆಕಲ್ ತಾಲ್ಲೂಕು ಮರಸೂರು, ಮಡಿವಾಳ ಗ್ರಾಮದ ಶ್ರೀ ಸುಬ್ರಹ್ಮಣ್ಯಸ್ವಾಮಿ ಜ್ಯೋತಿಷಾಶ್ರಮದಲ್ಲಿ ಇವರ ಕಾವ್ಯವಾಚನ ಕಾರ್ಯಕ್ರಮಗಳು ನಡೆದು ಅಲ್ಲಿನ ಪೀಠಾಧಿಪತಿಗಳು ಇವರಿಗೆ 'ಸಮಾಜ ಸೇವಾರತ್ನ' ಎಂಬ ಪ್ರಶಸ್ತಿಯನ್ನಿತ್ತು ಗೌರವಿಸಿರುವರು. ಇವರು ಲೇಖಕರೂ ಆಗಿದ್ದು 'ಬಡ ರೈತನ ಬದುಕು', 'ಶ್ರೀಮನ್ ಬೀರೇಶ್ವರ ಸಂಕ್ಷಿಪ್ತ ಚರಿತ್ರೆ' 'ಸಾಧುದರ್ಪಣ', 'ಕನಕ ಹೃದಯ'—ಮುಂತಾದ ಗ್ರಂಥಗಳೇ ಅಲ್ಲದೆ ಅನೇಕ ಉಪಯುಕ್ತ ಪ್ರಬಂಧಗಳನ್ನೂ ಬರೆದಿರುವರು. ಇವರು ಜಿಲ್ಲಾ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿಯ ಸದಸ್ಯರಾಗಿಯೂ ಸೇವೆ ಸಲ್ಲಿಸುತ್ತಿರುವರು.

೨೭೭. ಹೆಚ್. ಆರ್. ಸುನಂದ

ಇವರ ಜನ್ಮಸ್ಥಳ ತುಮಕೂರು. ಇವರ ತಂದೆ ಪತ್ರಿಕೋದ್ಯಮಿಗಳಾಗಿದ್ದ ಶ್ರೀ ರಾಮಸ್ವಾಮಿ ಅಯ್ಯಂಗಾರ್‌ರವರು. ತಾಯಿ ಶ್ರೀಮತಿ ಸೀತಮ್ಮನವರು. ಇವರು ಎಂ.ಎ., ಬಿ.ಎಡ್., ಪದವೀಧರರಾಗಿ ಜೂನಿಯರ್ ಕಾಲೇಜಿನಲ್ಲಿ ಇತಿಹಾಸದ ಉಪನ್ಯಾಸಕರಾಗಿರುವರು. ಇವರಿಗೆ ಸುಮಾರು ೧೮ ವರ್ಷಗಳ ಸಂಗೀತಾಭ್ಯಾಸವಿದ್ದು ಕೀರ್ತನೆ ಮತ್ತು ದೇವರನಾಮಗಳನ್ನು ಸುಶ್ರಾವ್ಯವಾಗಿ ಹಾಡಬಲ್ಲರು. ಇವರ ಕಥೆಗಳು, ವಿಚಾರಾತ್ಮಕ ಲೇಖನಗಳು, ಕವನಗಳು ನಾಡಿನ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಸಣ್ಣ ಕತೆಗಳ ಸಂಕಲನವೊಂದನ್ನು ಮತ್ತು 'ದೀಪ ಹಚ್ಚಿದ ದೇವತೆ' ಎಂಬ ಕಾದಂಬರಿಯನ್ನೂ ಹೊರತಂದಿರುವರು. ಇವರು 'ಗಮಕ ಕಲಾ ನಿಪುಣ' ಶ್ರೀ ಸಿದ್ಧಲಿಂಗ ದೇವರಲ್ಲಿ ಗಮಕ ಕಲೆಯನ್ನು ಕಲಿತು ತಮ್ಮ ಶಾಲೆಯಲ್ಲಿ ಗಮಕ ತರಗತಿಗಳನ್ನು ನಡೆಸುತ್ತಿರುವರು. ಇವರಿಗೆ ಷಟ್ಪದೀ ಕಾವ್ಯಗಳ ವಾಚನವು ಬಹು ಪ್ರಿಯವಾದುದು. ಪರಿಷತ್ತಿನ ಗಮಕ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವ ಇವರು ತುಮಕೂರು ಜಿಲ್ಲೆಯ ಅನೇಕ ಸ್ಥಳಗಳಲ್ಲಿ ಕಾವ್ಯ ವಾಚನಗಳನ್ನೂ ಗಮಕ ರೂಪಕ ಕಾರ್ಯಕ್ರಮಗಳನ್ನೂ ನಡೆಸಿರುವುದೇ ಅಲ್ಲದೆ ತುಮಕೂರಿನಲ್ಲಿ ಪ್ರತಿ ತಿಂಗಳೂ ಗಮಕ ಕಾರ್ಯಕ್ರಮಗಳ ವ್ಯವಸ್ಥೆಯನ್ನು ಮಾಡುತ್ತಿರುವರು.

೧೭೮. ಎಂ. ಎಸ್. ಆನಂದರಾಯರು
ದೂರವಾಣಿನಗರ, ಬೆಂಗಳೂರು

ಇವರು ದೂರವಾಣಿನಗರದ ಕರ್ನಾಟಕ ಸಂಘದ ಮೂಲಕ ಗಮಕ ತರಗತಿಗಳಲ್ಲಿ ಅಭ್ಯಸಿಸಿ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಪ್ರೌಢ ತರಗತಿಯವರೆಗೆ ವ್ಯಾಸಂಗ ಮಾಡಿರುತ್ತಾರೆ. ಇವರು ಗಮಕ ಕಲೆಯನ್ನು ಅಭ್ಯಾಸ ಮಾಡಲು ಶ್ರೀಯುತರಾದ ಗಮಕಿ ಜಿ. ಅನಂತ ಪದ್ಮನಾಭಯ್ಯನವರು ಮತ್ತು ಗಮಕಿ ಎಂ. ರಾಘವೇಂದ್ರರಾಯರು ಇತ್ತ ಪ್ರೋತ್ಸಾಹವೇ ಕಾರಣ. ಇವರು ಐ.ಟಿ.ಐ. ಕಾರ್ಖಾನೆಯಲ್ಲಿ ಡೆಪ್ಯುಟಿ ಇಂಜನೀಯರ್ ಆಗಿರುತ್ತಾರೆ. ದೂರವಾಣಿನಗರದ ಕರ್ನಾಟಕ ಸಂಘ ಮತ್ತಿತರ ಬಡಾವಣೆಗಳಲ್ಲಿ ಏರ್ಪಡಿಸುವ ಕಾವ್ಯವಾಚನ ಕಾರ್ಯಕ್ರಮಗಳಲ್ಲಿ ಆಗಾಗ್ಗೆ ಭಾಗವಹಿಸುತ್ತಾರೆ. ಇವರಿಗೆ ಕುಮಾರವ್ಯಾಸ ಭಾರತವೆಂದರೆ ಪರಮ ಆದರ. ಮನರಂಜನೆಯ ಮೂಲಕ ಕಾವ್ಯವಾಚನವನ್ನು ಜನಾದರಣೀಯಗೊಳಿಸಬಹುದೆಂಬ ನಂಬಿಕೆಯಿಂದ ಕುಮಾರವ್ಯಾಸ ಭಾರತದ "ಗದಾಯುದ್ಧ ಪ್ರಸಂಗ"ವನ್ನು ನಾಟಕಕ್ಕೆ ಅಳವಡಿಸಿ ರಂಗಭೂಮಿಯ ಮೇಲೆ ಪ್ರಯೋಗಿಸಿ, ಒಂದೆರಡು ಪ್ರಯೋಗಗಳಲ್ಲಿ ಯಶಸ್ವಿಯಾಗಿಯೂ ಇದ್ದಾರೆ. ಬಿಡುವಿನ ವೇಳೆಯಲ್ಲಿ ಗಮಕವನ್ನು ಅಭ್ಯಾಸ ಮಾಡುತ್ತಿರುತ್ತಾರೆ.

೧೭೯. ಆರ್. ಎಸ್. ಜಯಲಕ್ಷಮ್ಮ, ಬೆಂಗಳೂರು

ಇವರ ತಂದೆ ಶ್ರೀ ವೈ. ವೆಂಕಟಕೃಷ್ಣಯ್ಯನವರು, ತಾಯಿ ಶ್ರೀಮತಿ ಶಂಕರಮ್ಮನವರು. ಇವರ ಜನ್ಮಸ್ಥಳ ಹಾಸನ. ಹೈಸ್ಕೂಲು ಮಟ್ಟದವರೆಗೆ ವಿದ್ಯಾಭ್ಯಾಸವನ್ನು ಹೊಂದಿದ್ದಾರೆ. ಬಾಯಿ ಹಾಡುಗಾರಿಕೆ ಮತ್ತು ವೀಣಾವಾದನಗಳಲ್ಲಿ ಪರಿಶ್ರಮವಿದೆ. ಕುಮಾರವ್ಯಾಸ ಭಾರತವನ್ನು ಇವರು ಕೇಳ್ಮೆಯಿಂದ ಅಭ್ಯಾಸ ಮಾಡಿ ಮುಂದೆ ಶ್ರೀಯುತ. ಸಂ. ಗೋ. ಬಿಂದೂರಾಯರ ಅನುಗ್ರಹವನ್ನೂ ಮಾರ್ಗದರ್ಶನವನ್ನೂ ಪಡೆದುಕೊಂಡರು. ಗದುಗಿನ ಭಾರತದಲ್ಲಿ ನವ ರಸಗಳೂ ತುಂಬಿರುವುದರಿಂದ ಶ್ರೀಮತಿಯವರಿಗೆ ಅದರ ವಾಚನದಲ್ಲಿ ಅಪಾರ ಆಸಕ್ತಿ. ಅನೇಕ ಸಂಘ ಸಂಸ್ಥೆಗಳಲ್ಲಿ ವಾಚನ ಮಾಡಿರುತ್ತಾರೆ. ಈಗಲೂ ಮನರಂಜನೆಗಾಗಿ ಅಭ್ಯಾಸವನ್ನು ಇಟ್ಟುಕೊಂಡಿರುತ್ತಾರೆ.

ಅನುಬಂಧ

(ಗಮಕಿಗಳ ಹೆಸರು, ವಿಳಾಸ, ಅಕಾರಾದಿ. ಕೊನೆಯದು ಪುಟ ಸಂಖ್ಯೆ)

ಅನಂತ ಜೋಷಿ ಕೆ, ಕ್ಲರ್ಕ್ ಮುನ್ಸೀಫ್ ಕೋರ್ಟು ಬಳ್ಳಾರಿ, ೧೭೭

ಅನಂತನಾರಾಯಣ ಅಯ್ಯಂಗಾರ್, ಮುಖ್ಯೋಪಾಧ್ಯಾಯರು
ಶ್ರೀ ಯದುಶೈಲ ಪ್ರೌಢಶಾಲೆ ಮೇಲುಕೋಟೆ ಮಂಡ್ಯ ಜಿಲ್ಲೆ, ೧೦೦

ಅನಂತಪದ್ಮನಾಭಯ್ಯ ಜಿ ಎ, ೧೩೬ ೯ನೇ ಕ್ರಾಸ್ ೩ನೇ ಮೇನ್
ಚಾಮರಾಜಪೇಟೆ ಬೆಂಗಳೂರು-೧೮, ೭೩

ಅನಂತಪದ್ಮನಾಭರಾವ್ ಎಂ ಎಸ್, ೨೯ ಅರಣ್ಯ ಇಲಾಖೆಯ ವಸತಿಗಳು
೧೮ನೇ ಕ್ರಾಸ್ ಮಲ್ಲೇಶ್ವರಂ ಬೆಂಗಳೂರು-೫೫, ೨೭

ಅನಂತಮೂರ್ತಿ ಆರ್, ಗಮಕಿ ಉಪಾಧ್ಯಾಯ ಜಿ ೨/೨೭
ಪೇಪರ್ ಟೌನ್, ಭದ್ರಾವತಿ, ೧೨೫

ಅನಂತರಾಮು ಆರ್, ೧೦೧ ಗೊಲ್ಲಗೇರಿ ಮೈಸೂರು-೧, ೮೦

ಅನ್ನಪೂರ್ಣಮ್ಮ ರಘುಪತಿ ಶಾಸ್ತ್ರಿ, ೨೦, ೧ನೇ ಬ್ಲಾಕ್ 'ಕೆ' ರಾಜಾಜಿನಗರ
ಬೆಂಗಳೂರು-೧೦, ೯೦

ಅಪ್ಪೂರಾವ್ ಎಂ ವಿ, ಗಮಕಿ ದೂರವಾಣಿನಗರ ಬೆಂಗಳೂರು, ೧೧೭

ಅಶ್ವತ್ಥನಾರಾಯಣ ನಂ,೨೧೧೯ 'ಕಾವ್ಯಶ್ರೀ'ಕಾಳಿದಾಸನಗರ ದಾವಣಗೆರೆ-೪, ೫೯

ಆನಂದರಾವ್ ಎಂ ಎಸ್, ಡೆಪ್ಯುಟಿ ಎಂಜಿನಿಯರ್ ಐಟಿಐ ಲಿಮಿಟೆಡ್
ದೂರವಾಣಿನಗರ ಬೆಂಗಳೂರು-೧೬, ೧೭೭

ಆಮಿದಾಲ ಕಮಲಾ, ಸತ್ಯನಾರಾಯಣಪೇಟೆ ಬಳ್ಳಾರಿ, ೧೪೧

ಆಲೂರು ಶಾಂತ, ೧೭/೨೦ ಸತ್ಯನಾರಾಯಣಪೇಟೆ ಬಳ್ಳಾರಿ, ೧೪೮

ಇಂದಿರಾ ವೆಂಕಟೇಶ್, ೮೩ 'ಸೀತಾರಾಮಕೃಪಾ' ಮೈಸೂರು ಬ್ಯಾಂಕ್
ಕಾಲೋನಿ ಹನುಮಂತನಗರ ಬೆಂಗಳೂರು-೫೦, ೧೨೭

ಕಡಬ ನಂಜುಂಡಯ್ಯ, ಸ್ಟಾಂಪ್ ವೆಂಡರ್ ಅಗ್ರಹಾರ ತುಮಕೂರು, ೩೫

ಕಡಬ ಲಕ್ಷ್ಮೀಕಾಂತ, ಕಡಬ ಗುಬ್ಬಿ ತಾಲ್ಲೂಕು ತುಮಕೂರು ಜಿಲ್ಲೆ, ೧೦೩

ಕನಕಲಕ್ಷ್ಮೀ ದಾನಿ, ೧೧೦

ಕಮಲಮ್ಮ ಶ್ರೀಕಂಠಸ್ವಾಮಿ, ಸಂಗೀತ ಉಪಾಧ್ಯಾಯಿನಿ ೭ ಅಗ್ರಹಾರ
(ಮಹಡಿ ಮನೆ) ಕೊಳ್ಳೇಗಾಲ, ೧೬೨

ಕಮಲಾಕ್ಷಮ್ಮ, ಸುತ್ತೂರು ಕುದೇರು ಚಾಮರಾಜನಗರ ತಾಲ್ಲೂಕು, ೫೭
ಕಮಲಾ ರಾಮಕೃಷ್ಣ, ೩೨, ೪ನೇ ಬ್ಲಾಕು ತ್ಯಾಗರಾಜನಗರ
ಬೆಂಗಳೂರು-೨೮, ೧೩೭

ಕಳಲೆ ಸಂಪತ್ಕುಮಾರಾಚಾರ್ಯ, ಬೆಂಗಳೂರು, ೧೬
ಕುರುಡು ತಮ್ಮಯ್ಯ, ಮೈಸೂರು, ೨೧
ಕುಸುಮಾ ಮೂರ್ತಿ, ತುಮಕೂರು, ೧೭೪
ಕೂರಾಡಿ ಸದಾಶಿವ ಕಲ್ಕೂರ, ಗಮಕಿ ಹನೆಹಳ್ಳಿ ಅಂಚೆ
ಬಹ್ಮಾವರ (ದ.ಕ.), ೧೨೬

ಕೃಷ್ಣಗಿರಿ ಕಮಲ, 'ಕೃಷ್ಣಕೃಪ' ೯೦೭/೨, ೬ನೇ ರಸ್ತೆ ಯಶವಂತಪುರಂ
ಬೆಂಗಳೂರು-೨೨, ೧೩೬

ಕೃಷ್ಣಗಿರಿ ಕೃಷ್ಣರಾಯರು, ಮೈಸೂರು, ೭
ಕೃಷ್ಣದೇವರಯ್ಯ ಎನ್ ವಿ, ಉಪಾಧ್ಯಾಯ ಸೂರಟಿ ಕೊಪ್ಪ ತಾಲ್ಲೂಕು
ಚಿಕ್ಕಮಗಳೂರು ಜಿಲ್ಲೆ, ೭೬

ಕೃಷ್ಣಮೂರ್ತಿ ಎಸ್ ಆರ್, ೧೩೭೧ ೮ನೇ ಕ್ರಾಸು ಮಲ್ಲೇಶ್ವರಂ
ಬೆಂಗಳೂರು-೩, ೧೪೪

ಕೃಷ್ಣಮೂರ್ತಿ ಬಿ ಆರ್, ೧೯ ಸನ್ನಿಧಿ ರೋಡ್ ಬಸವನಗುಡಿ
ಬೆಂಗಳೂರು-೪, ೧೬೪

ಕೇರಳಾಪುರದ ಸುಬ್ಬರಾವ್, ಗಮಕಿ ಕೇರಳಾಪುರ, ೪೯
ಕೇಶವಭಟ್ಟ ಟಿ, ೨೮ (ಮಳಿಗೆ) ೩ನೇ ಮೈನ್ ರಸ್ತೆ
ನರಸಿಂಹರಾಜಾ ಕಾಲೋನಿ ಬೆಂಗಳೂರು-೧೯, ೮೫

ಕೇಶವಮೂರ್ತಿ ಎಂ ಆರ್, ೩೨ ೪ನೇ ಬ್ಲಾಕ್ ತ್ಯಾಗರಾಜನಗರ
ಬೆಂಗಳೂರು-೨೮, ೧೪೯

ಕೈಪು ಲಕ್ಷ್ಮೀನರಸಿಂಹಶಾಸ್ತ್ರಿ, ಕೈವಾರ ಪೋಸ್ಟ್ ಚಿಂತಾಮಣಿ ತಾಲ್ಲೂಕು
ಕೋಲಾರ ಜಿಲ್ಲೆ, ೧೪೨

ಕೌಶಿಕ್ ಬಿ ಎಸ್ ಎಸ್, ೩೭೪ ೧ನೇ ಕ್ರಾಸ್ ೧ನೇ ಬ್ಲಾಕ್
ತ್ಯಾಗರಾಜನಗರ, ಬೆಂಗಳೂರು-೨೮, ೫೩

ಗಂಗಮ್ಮ ಕೇಶವಮೂರ್ತಿ, C/O ಎ ಎಸ್ ಕೇಶವಮೂರ್ತಿ, ಇಂಡಿಯನ್
ಪ್ಲೈವುಡ್ ಮ್ಯಾನುಫ್ಯಾಕ್ಚರಿಂಗ್ ಕಂಪೆನಿ ಲಿ ಧಾರವಾಡ-೭, ೧೪೦

ಗಂಗಾಧರಶಾಸ್ತ್ರಿ ಎ ಎಸ್, ೫೯ ದತ್ತಕೃಪ, ೩ನೇ ಬ್ಲಾಕ್
ತ್ಯಾಗರಾಜನಗರ ಬೆಂಗಳೂರು-೨೮, ೭೬

ಗರುಡಾಚಾರ್ ಬಿ ಜಿ, ಭದ್ರಾವತಿ, ೫೫

ಗಿರಿಜ ಎಸ್, D/o ಕಲ್ಲೂರಾವ್ ಎಸ್, ಸಾರಂಗಂ ಬಿಲ್ಡಿಂಗ್ಸ್
ಸತ್ಯನಾರಾಯಣ ಪೇಟೆ ಬಳ್ಳಾರಿ, ೧೫೯

ಗಿರಿಧರ್ ಪಿ ಎ. ೧೨೩೦ ೨ನೇ ಅಡ್ಡರಸ್ತೆ ಕೃಷ್ಣಮೂರ್ತಿಪುರಂ
ಮೈಸೂರು-೪, ೧೪೭

ಗುಂಡಪ್ಪ ಡಿ ಎನ್, ಅಡ್ವೊಕೇಟ್ ಮಂಡ್ಯ, ೧೭೦

ಗುಂಡುರಾಮಯ್ಯ ರು ನಾ, ೬, ೧ನೇ ಕ್ರಾಸ್ ಶಂಕರಪುರಂ
ಬೆಂಗಳೂರು-೪, ೨೪

ಗುಡದಪ್ಪ ಪಿ, ಹೆಡ್‌ಮಾಸ್ಟರ್ ಸಣ್ಣಹಳ್ಳಿ ಪೋ : ಬೆಳಲಗೆರೆ
ಶಿವಮೊಗ್ಗ ಜಿಲ್ಲೆ, ೬೨

ಗುರುನಾಥ್ ಡಿ ಆರ್, ಗಮಕಿ ಕೃಷ್ಣರಾಜಪುರಂ ಬೆಂಗಳೂರು-೩೬, ೧೫೯

ಗುರುರಾವ್ ದೇಶಪಾಂಡೆ, ೧೧

ಗೋಪಾಲ್ ಎಂ ಎಸ್, ೩೦೭ ರಾಮಾನುಜ ರಸ್ತೆ ಮೈಸೂರು-೪, ೧೧೫

ಗೋಪಾಲಕೃಷ್ಣ ಬಿ ಎನ್, ಸಂಪಾದಕ 'ಶಕ್ತಿ' ದಿನಪತ್ರಿಕೆ ಮಡಕೇರಿ
(ಕೊಡಗು), ೧೦೯

ಗೋಪಾಲಕೃಷ್ಣ ಹೆಚ್ ಎಸ್, ಗಮಕಿ ಶೀಘ್ರಲಿಪಿಗಾರ ವ್ಯವಸಾಯ ಇಲಾಖೆ
ಹಾಸನ, ೧೧೯

ಗೋಪಿನಾಥ್ ಆರ್ ವಿ, ೨ನೇ ಕ್ರಾಸ್ ೭ನೇ ಮೇನ್ ೧೫/೩
ಶ್ರೀನಿವಾಸ ಬಿಲ್ಡಿಂಗ್ಸ್ ಆಲೂರು ವೆಂಕಟರಾವ್ ರಸ್ತೆ ಚಾಮರಾಜ ಪೇಟೆ
ಬೆಂಗಳೂರು-೧೮, ೧೧೦

ಗೋಪಿನಾಥರಾವ್ ಜೆ ಪಿ, ೧೭೭೬, ೩ನೆ ಹಂತ ರಾಜಾಜಿನಗರ
ಬೆಂಗಳೂರು-೨೧, ೧೦೫

ಗೌರಮ್ಮ ಎ ಎಸ್, ೧೫೧ 'ಸುರಭಿ' ೧೨ನೇ ಮೇನ್ ೧೦ನೇ ಕ್ರಾಸ್
ತೊಣಚಿ ಕೊಪ್ಪಲ್ ಮೈಸೂರು-೯, ೮೯

ಗೌರಮ್ಮ ನಾಗರಾಜ್ ೯೬೧, ೨ನೇ ಮೈನ್ ವಿದ್ಯಾರಣ್ಯಪುರಂ ಮೈಸೂರು, ೧೧೪

ಗೌರೀದೇವುಡು ನರಸಿಂಹಶಾಸ್ತ್ರಿಗಳು, ಮೈಸೂರು, ೫

ಚಂದ್ರಯ್ಯ ಬಿ, ಕನ್ನಡ ಪಂಡಿತ ಜೈನ ಹೈಸ್ಕೂಲು ಮೂಡಬಿದ್ರಿ (ದ.ಕ.), ೧೦೯

ಜಾನಕಿ ಹೆಚ್, ೧೧೭೧ ಬಜ್ಜಣ್ಣ ಲೇನ್, ಮೈಸೂರು-೪, ೧೧೧

ಜೋಳದ ರಾಶಿ ಕೆ ದೊಡ್ಡಣ್ಣಗೌಡರು, ಪೋ : ಜೋಳದ ರಾಶಿ
ಬಳ್ಳಾರಿ ಜಿಲ್ಲೆ, ೩೭

ಜ್ಯೋತಿ ಬಿ ವಿ, ಎಂ-೭೩ ಶಾರದಾನಿಲಯ ಮಾರ್ಕೆಟ್ ರಸ್ತೆ
ಎಲ್ ಎನ್ ಪುರಂ ಬೆಂಗಳೂರು-೨೧, ೧೫೭

ತಮ್ಮಯ್ಯ ಪಿ ಎಂ, ೨

ತಲಕಾಡು ಮಾಯಿಗೌಡರು, ೮

ತ್ಯಾಮಗೊಂಡ್ಲು ವೆಂಕಟರಾಮಯ್ಯ, ಗಮಕ ಪ್ರವೀಣ ತ್ಯಾಮಗೊಂಡ್ಲು
ನೆಲಮಂಗಲ ತಾಲ್ಲೂಕು, ೧೭೨

ತಿಮ್ಮರಸಯ್ಯ ವೈ ಕೆ, ಸಮಾಜಶಿಕ್ಷಣಾಧಿಕಾರಿ ತೀರ್ಥಹಳ್ಳಿ
ಶಿವಮೊಗ್ಗ ಜಿಲ್ಲೆ, ೮೨

ತಿರುಮಲಾವಧಾನಿ ಎಂ ಪಿ, ಮತ್ತೂರು ಶಿವಮೊಗ್ಗ ಜಿಲ್ಲೆ, ೧೬೩

ತಿರುಮಲೆ ರಂ ವರದರಾಜ ಅಯ್ಯಂಗಾರ್, ೭೯೬ ೧೭ ಇ ಮೇನ್ ರಸ್ತೆ
೫ನೇ ಬ್ಲಾಕ್ ರಾಜಾಜಿನಗರ ಬೆಂಗಳೂರು-೧೦, ೯೨

ದರೋಗ ನರಸಿಂಹಯ್ಯ, S/O ಕಪಿನೀಪತಯ್ಯ, ಚಾವಗಲ್
ರಾಮನಾಥಪುರ ತಾಲ್ಲೂಕು, ೧೭೦

ದಾಕ್ಷಾಯಿಣಿ, ಕನ್ನಡ ಉಪಾಧ್ಯಾಯಿನಿ ಸಾರ್ವಜನಿಕ ಪ್ರೌಢಶಾಲೆ ಹುರಾ
ನಂಜನಗೂಡು ತಾಲ್ಲೂಕು, ೧೫೫

ದ್ವಾರಕಾನಾಥ್ ಪಿ ಕೆ, ೧೦೯೧ ೮ನೇ ಕ್ರಾಸ್ ಬನಶಂಕರಿ ೨ನೇ ಹಂತ
ಅಶೋಕನಗರ ಬೆಂಗಳೂರು-೫೦, ೯೮

ದೇವಜೀರಂಗೋ ಪಾಟೀಲ, ಅಸಿಸ್ಟೆಂಟ್ ಶಿಕ್ಷಕರು ಶಿರೂರ
ಕುಂದಗೋಳ ತಾಲ್ಲೂಕು, ಧಾರವಾಡ ಜಿಲ್ಲೆ, ೮೬

ದೊಡ್ಡ ಬಸವ ಗವಾಯಿ, ಜಾಲಿಬೆಂಚಿ ಬಳ್ಳಾರಿ ತಾಲ್ಲೂಕು ೧೬೭

ನಂಜುಂಡಶಾಸ್ತ್ರಿ ಟಿ ಎಸ್, ವಿಜಯಪುರ ಬಡಾವಣೆ ಚಿಕ್ಕಮಗಳೂರು, ೭೮

ನಂದಗುಡಿ ಶ್ರೀನಿವಾಸರಾವ್, ಗಮಕಿ ಮತ್ತು ನಿವೃತ್ತ ಅಧ್ಯಾಪಕ
ಗಾಯಿತ್ರೀನಗರ ಬೆಂಗಳೂರು, ೧೬೨

ನರಸಿಂಗಶೆಟ್ಟಿ ಬಿ, ಮುಖ್ಯೋಪಾಧ್ಯಾಯ ಎಲ್ ಪಿ ಬಿ ಎಸ್ ಮಲ್ಲಿಗೆರೆ
ಹೊಸಗಾವಿ ಪೋ : ಮಂಡ್ಯ ಜಿಲ್ಲೆ, ೬೨

ನೀಲಾವರ ಲಕ್ಷ್ಮೀನಾರಾಯಣರಾವ್, ಗಮಕಿ ನೀಲಾವರ ಪೋಸ್ಟ್
ಉಡುಪಿ ತಾಲ್ಲೂಕು, ೮೭

ಪದ್ಮ ಆರ್, ೧೦೫೨ ವಯ್ಯಾಲಿ ಕಾವಲ್ ಬೆಂಗಳೂರು-೩, ೧೬೦
ಪದ್ಮಾವತಮ್ಮ ನಾಗೇಶರಾವ್ ಎನ್, ೨೧೨/೨೨ ಬಸವನಗುಡಿ ಕೋ-ಆಪರೇ
ಟಿವ್ ಸೊಸೈಟಿ ಕ್ವಾರ್ಟರ್ಸ್ ಗಾಂಧಿಬಜಾರ್ ಬೆಂಗಳೂರು-೪, ೯೫

ಪದ್ಮ ಎಸ್, ೧೮೫/೧೪ ದೇವನಾಥಾಚಾರ್ ಬೀದಿ ೭ನೇ ಕ್ರಾಸ್ ೫ನೇ ಮೇನ್
ಚಾಮರಾಜಪೇಟೆ ಬೆಂಗಳೂರು-೧೮, ೯೯

ಪದ್ಮಾ ನಾಗರಾಜ್, ೩೬ ಅಣ್ಣಯ್ಯಪ್ಪ ಬ್ಲಾಕ್ ೧ನೇ ಕ್ರಾಸ್ ಶೇಷಾದ್ರಿಪುರಂ
ಬೆಂಗಳೂರು-೨೪, ೧೨೦

ಪದ್ಮಾ ನಾರಾಯಣಾಚಾರ್, ಗಮಕಿ ದೂರವಾಣಿನಗರ ಬೆಂಗಳೂರು, ೧೨೨
ಪರಮೇಶ್ವರರಾವ್ ಜಿ, ಉಪಾಧ್ಯಾಯ ಗಮಕಿ ತುಮಕೂರು, ೧೩೦
ಪರಿಮಳಾ ಗುರುರಾಜ್, ೨೨ ಔಟ್‌ಹೌಸ್ ನಾಗಸಂದ್ರ ರಸ್ತೆ ಬಸವನಗುಡಿ
ಬೆಂಗಳೂರು-೪, ೧೪೫

ಪಾಚಾ ಚಿನ್ನಸುಬ್ಬಯ್ಯ, ಹೊಸಬೀದಿ ದೇವಾಂಗಪೇಟೆ ಕೊಳ್ಳೇಗಾಲ, ೬೮
ಪುಟ್ಟಬಸಪ್ಪ ಎಂ, ಉಪಾಧ್ಯಾಯ ೬೦೭ ಶ್ರೀರಾಮನಗರ ತುಮಕೂರು, ೧೩೦
ಪುಟ್ಟಣ್ಣಯ್ಯ ಸಿ ಕೆ, ಕೃಷ್ಣರಾಜನಗರ, ೪೮
ಬಂಡಯ್ಯ, ಗುಡದೂರು ಬಳ್ಳಾರಿ ಜಿಲ್ಲೆ, ೧೯
ಬಸವಪ್ಪ ಶಾಸ್ತ್ರಿ, ಮೈಸೂರು, ೧
ಬಸವಾರಾಧ್ಯ ಕೆ ಎನ್, ಬೂದಿಗುಪ್ಪೆ ಕನಕಪುರ ತಾಲ್ಲೂಕು
ಬೆಂಗಳೂರು ಜಿಲ್ಲೆ, ೨೨

ಬಳ್ಳಾರಿ ಅಮರಯ್ಯ, ೨೦
ಬಾಲ ಶ್ರೀನಿವಾಸಯ್ಯ, ಕೊಳ್ಳೇಗಾಲ ಮುಖ್ಯೋಪಾಧ್ಯಾಯ ಗೌ|| ಹೈಯರ್
ಪ್ರೈಮರಿ ಶಾಲೆ ರಾಮಪುರ ಕೊಳ್ಳೇಗಾಲ ತಾಲ್ಲೂಕು, ೭೩

ಬಾಳಗಂಚಿ ನಂಜುಂಡಯ್ಯ, ೨೫
ಬಾಳಮ್ಮ ಪಾಟೀಲ, ೬
ಬಿಂದೂರಾಯರು ಸಂ ಗೋ, ೨
ಬೆಳಗೆರೆ ಪಾರ್ವತಮ್ಮ, ಉಪಾಧ್ಯಾಯಿನಿ ಪ್ರದೀಪ ಪ್ರಕಾಶನ ೪ನೇ ಕ್ರಾಸ್
ಸತ್ಯನಾರಾಯಣ ಪೇಟೆ ಬಳ್ಳಾರಿ, ೮೪

ಭಾಗ್ಯಲಕ್ಷ್ಮಿ, ಕೆ ೨೭/೨ ೭ನೇ ಕ್ರಾಸ್ ಗಾಯತ್ರೀ ನಗರ
ಬೆಂಗಳೂರು-೨೧, ೧೫೦

ಭಾರತದ ಲಲಿತಮ್ಮ, ಬೆಂಗಳೂರು, ೩೦

ಭೂಪಾಳಂ ಶಶಿರೇಖಮ್ಮ W/O ಭೂಪಾಳಂ ನಾರಾಯಣಮೂರ್ತಿ ಆ ವಿ,
ಲೇಔಟ್ ಕೆ ಪಿ ಡಬ್ಲ್ಯು ಬಡಾವಣೆ ಬೆಗಳೂರು-೨೦, ೯೬

ಮಂಜುಳಾ ರಾಜು, ಗಮಕಿ ಚಿಕ್ಕನಾಯ್ಕನ ಹಳ್ಳಿ, ೧೩೨

ಮುಡಿಕಲ್ ಅಶ್ವತ್ಥನಾರಾಯಣರಾವ್, ಉಪಾಧ್ಯಾಯ ಹಿರಿಯ ಪ್ರಾಥಮಿಕ
ಶಾಲೆ ಆವನಿ ಪೋಸ್ಟ್ ಮುಳಬಾಗಲು ತಾಲ್ಲೂಕು, ೬೭

ಮಣಿ ಸೋಮಶೇಖರ್, ೧೧ ಅಣ್ಣಯ್ಯಪ್ಪ ಬ್ಲಾಕ್ ೩ನೇ ಅಡ್ಡರಸ್ತೆ ಶೇಷಾದ್ರಿಪುರ
ಬೆಂಗಳೂರು-೨೦, ೧೨೯

ಮಣೇಗಾರ್ ನರಸಿಂಹಚಾರ್ಯ, ೧೮

ಮನ್ನಾರು ಕೃಷ್ಣಯ್ಯ, ಶ್ರೀರಾಮನಿಲಯ ಹುಲ್ಲಳ್ಳಿ ನಂಜನಗೂಡು ತಾಲ್ಲೂಕು, ೩೧

ಮಲ್ಲಾರಾಧ್ಯ ಹೆಚ್ ಎಂ, ಉಪಾಧ್ಯಾಯರು ಹುಲ್ಲಳ್ಳಿ ನಂಜನಗೂಡು
ತಾಲ್ಲೂಕು, ೭೨

ಮಲ್ಲಿಕಾರ್ಜುನ ಭಟ್ಟ ಎಸ್ ವಿ, ಅಧ್ಯಾಪಕ ಸರ್ಕಾರಿ ಪ್ರೌಢಶಾಲೆ ಕಮ್ಮರಡಿ
ಚಿಕ್ಕಮಗಳೂರು ಜಿಲ್ಲೆ, ೧೮೧

ಮಾದೇಶಯ್ಯ ಆರ್, ೧೧-೧೬೦ ದೇವಾಂಗ ಪೇಟೆ ಕೊಳ್ಳೇಗಾಲ, ೧೨೮

ಮಿರ್ಲೆ ಸುಬ್ರಹ್ಮಣ್ಯಶಾಸ್ತ್ರಿ, ಮೈಸೂರು, ೩೯

ಮುನಿವೆಂಕಟಪ್ಪ ಬಿ ಎಂ, ಸಂಗೀತ ಅಧ್ಯಾಪಕ ಸೀತಮ್ಮ ಬಾಲಿಕಾ ಪ್ರೌಢಶಾಲೆ
ದಾವಣಗೆರೆ, ೮೮

ಮುನೀಶ್ವರಯ್ಯ ಎಂ, ಸಮಾಜ ಸೇವಕ ಗಮಕಿ ಮತ್ತು ಪತ್ರಿಕೋದ್ಯಮಿ
ಹಾರಗದ್ದೆ ಪೋಸ್ಟ್ ಆನೆಕಲ್ ತಾಲ್ಲೂಕು, ೧೭೫

ಮುರಳೀಧರ ಪಿ, ಮುಖ್ಯೋಪಾಧ್ಯಾಯ ಗೌ|| ಲೋ|| ಪ್ರೈಮರಿ ಶಾಲೆ
ಸತ್ಯನಾರಾಯಣ ಪೇಟೆ, ಬಳ್ಳಾರಿ, ೧೮೮

ಮೋಟಗಾನ ಹಳ್ಳಿ ಸುಬ್ರಹ್ಮಣ್ಯಶಾಸ್ತ್ರಿ, ಬೆಂಗಳೂರು, ೧೩

ಯಾಮಿನಿ ಕೋಟಾ, ಉಪನ್ಯಾಸಕರು ವಿವೇಕ ಜೂನಿಯರ್ ಕಾಲೇಜು
ಕೋಟ (ದ ಕ), ೧೫೩

ರಂಗೋಪಂತ್ರ ರಾಮರಾವ್, ಸ್ಟೇಷನ್ ಮಾಸ್ಟರ್ ೧೫೯/೨ ಗಾಂಧಿನಗರ
ಬಳ್ಳಾರಿ-೨, ೭೭

ರತ್ನಮ್ಮ ಟಿ ಎಸ್, ೩೬, ೧ನೇ ಮೇನ್ ರಸ್ತೆ ರಾಜಾಮಹಲ್ ಗುಟ್ಟಹಳ್ಳಿ, ಬೆಂಗಳೂರು-೨, ೫೬

ರತ್ನಮ್ಮ ಸುಂದರರಾವ್, ೪೪೨ 'ನರಸಿಂಹನಿಲಯ' ೩೮ನೇ ಕ್ರಾಸ್ ೫ನೇ ಬ್ಲಾಕ್ ಜಯನಗರ ಬೆಂಗಳೂರು-೪೧, ೧೦೪

ರಮಾಕಾಂತರಾವ್ ಎಂ ಆರ್, ೨೨೦ ಔಟ್‌ಹೌಸ್ ಸಂಪಿಗೆ ರಸ್ತೆ ಮಲ್ಲೇಶ್ವರಂ ಬೆಂಗಳೂರು-೩, ೧೧೬

ರಮಾಬಾಯಿ ಎಂ, ಮಂಜೇಶ್ವರ, ೧೩

ರಮೇಶಬಾಬು ಬಿ ಸಿ, ಕಾವ್ಯಪ್ರಚಾರ ಮಂಡಲಿ ಅಣ್ಣಯ್ಯಪ್ಪ ಬ್ಲಾಕ್ ಶೇಷಾದ್ರಿಪುರಂ ಬೆಂಗಳೂರು, ೧೫೨

ರಾಂಪುರ ರಾಮಾಶಾಸ್ತ್ರಿ, ನಿವೃತ್ತ ಶಿರಸ್ತೇದಾರರು ಸತ್ಯನಾರಾಯಣ ಪೇಟೆ ಬಳ್ಳಾರಿ, ೪೧

ರಾಘವೇಂದ್ರರಾವ್ ಎಂ, ೩೨, ೪ನೇ ಬ್ಲಾಕ್ ತ್ಯಾಗರಾಜನಗರ ಬೆಂಗಳೂರು-೨೮, ೫೦

ರಾಜಗೋಪಾಲಾಚಾರ್ಯ ಎ, ಕನ್ನಡ ಪ್ರಾಧ್ಯಾಪಕ ಪೂರ್ಣಪ್ರಜ್ಞ ಕಾಲೇಜು ಉಡುಪಿ, ೯೦

ರಾಜಮ್ಮ ಕಲ್ಲೋಳಿಮಠ, ಆಕಾಶವಾಣಿ ಬೆಂಗಳೂರು-೧, ೫೮

ರಾಜರಾಜೇಶ್ವರಿ ಹೆಚ್ ಡಿ D/o ಹೆಚ್ ವಿ ದತ್ತಾತ್ರೇಯ ಶಾಸ್ತ್ರಿ, ಶ್ಯಾಮ ಪ್ರಸಾದ ಮುಖರ್ಜಿ ರಸ್ತೆ ಶಿವಮೊಗ್ಗ, ೧೫೬

ರಾಜಾಮಣಿ ನಾಗರಾಜರಾವ್, ಬೆಂಗಳೂರು, ೭೧

ರಾಜೇಶ್ವರಿ ಜಿ, ೧೧೬ 'ವಾಗ್ದೇವಿ ನಿಲಯ' ೪ನೇ ಕ್ರಾಸ್ ಗವೀಪುರು ಬಡಾವಣೆ ಬೆಂಗಳೂರು-೧೯, ೧೫೧

ರಾಧಾಕೃಷ್ಣ ಎಸ್ ಎಲ್, ೭೪ ವಿಶ್ವೇಶ್ವರ ನಗರ ಮೈಸೂರು, ೧೨೩

ರಾಧಾಕೃಷ್ಣ ಕೆ, ಉಪಾಧ್ಯಾಯ ಸರಕಾರಿ ಉಪ ಪ್ರಾಥಮಿಕ ಶಾಲೆ ೨ನೇ ಕ್ರಾಸ್ ಪಾರ್ವತೀ ನಗರ ಬಳ್ಳಾರಿ, ೧೪೩

ರಾಮಕೃಷ್ಣ ಎಂ ಆರ್, ೩೨, ೪ನೇ ಬ್ಲಾಕ್ ತ್ಯಾಗರಾಯನಗರ ಬೆಂಗಳೂರು-೨೮, ೧೨೨

ರಾಮಕೃಷ್ಣಶಾಸ್ತ್ರಿ, ಬೆಂಗಳೂರು, ೯

ರಾಮಚಂದ್ರ ಜೋಯಿಸ್ ಹೆಚ್ ವಿ, ಉಪಾಧ್ಯಾಯರು ಸರ್ಕಾರಿ ಪ್ರಾಥಮಿಕ ಶಾಲೆ ಪೇಪರ್‌ಟೌನ್ ಭದ್ರಾವತಿ, ೧೬೦

ರಾಮದಾಸ್ ಹೆಚ್, ಉಪಾಧ್ಯಾಯ ರಾಮಸಮುದ್ರ
ಚಾಮರಾಜನಗರ ತಾಲ್ಲೂಕು, ೧೦೧
ರಾಮಯ್ಯ ಎನ್ ಬಿ, ಅಧ್ಯಾಪಕ ಗೂರನಹಳ್ಳಿ ಗುಳಸಾದ ಪೋಸ್ಟ್
ಚನ್ನರಾಯಪಟ್ಟಣ ತಾಲ್ಲೂಕು, ೮೭
ರಾಮಸ್ವಾಮಿ ಅಯ್ಯಂಗಾರ್ ಕೆ ಟಿ ಬಿಎ, ಬಿಟಿ,
೧೪೭ ಕಾಲೇಜು ರಸ್ತೆ ಮೈಸೂರು-೧, ೨೭
ರಾಮಸ್ವಾಮಿ ಬಿ ವಿ, ೨ ಔಟ್‌ಹೌಸ್ ೧ನೇ ಕ್ರಾಸ್
ಶಂಕರಪುರ ಬೆಂಗಳೂರು-೪, ೧೦೨
ರಾಮಸ್ವಾಮಿ ಅಯ್ಯರ್ ಎನ್ ಎಸ್, ೫೪೪ ೨ನೇ ಕ್ರಾಸ್ ೭ನೇ ಮೇನ್
ಹನುಮಂತನಗರ ಬೆಂಗಳೂರು-೧೯, ೬೫
ರಾಮಸ್ವಾಮಿ ಹೆಚ್ ಕೆ, ಅಕೌಂಟ್ಸ್ ಸೂಪರಿಂಟೆಂಡೆಂಟ್
ಕಲ್ಪತರು ಕಾಲೇಜು ತಿಪಟೂರು, ೭೭
ರಾಮಾಚಾರ್ ಬಿ ಎಸ್, ಗಮಕಿ ಗುಡಿಬಂಡೆ ಕೋಲಾರ ಜಿಲ್ಲೆ, ೬೧
ರಾಮಾರಾಧ್ಯ ಹು ಮ, ಬೆಂಗಳೂರು, ೩೯
ರಾಮಾಶಾಸ್ತ್ರಿ ಟಿ, ಮತ್ತೂರು, ೧೪
ರಾಮೇಗೌಡ ಎ, ನಿವೃತ್ತ ಉಪಾಧ್ಯಾಯ ಮಿರ್ಲೆ ಮೈಸೂರು ಜಿಲ್ಲೆ, ೩೭
ರಾಯಚೂಟಿಶಾಸ್ತ್ರಿ ಮೈಸೂರು,-೨೧
ರುಕ್ಮಿಣಿ ಎಸ್ ಅಯ್ಯಂಗಾರ್ ಕೆ ವಿ,
೨೫೮, ೪ನೇ ಸ್ಟೇಜು ರಾಜಾಜಿನಗರ ಬೆಂಗಳೂರು-೧೦, ೧೪೪
ರೇಣುಕಾ ರಾಮರಾವ್, ೬೯, ೪ನೇ ರಸ್ತೆ ರಾಬರ್ಟ್‌ಸನ್ ಪೇಟೆ ಕೆ ಜಿ ಎಫ್, ೧೫೭
ರೇವಣ್ಣ ಕೆ ಎಂ, ಆಡಳಿತಾಧಿಕಾರಿ ಕಳಸ ದೇವಸ್ಥಾನ ಕಳಸ, ೧೫೦
ಲಕ್ಷ್ಮಣರಾವ್ ಟಿ, ಖಾದಿಭವನ್ ಸಿಲ್ವರ್ ಜ್ಯೂಬಿಲಿ ಪಾರ್ಕ್
ಬೆಂಗಳೂರು-೨, ೬೧
ಲಕ್ಷ್ಮೀದೇವಿ ಜಿ ಪಿ, W/O ಜಿ ಎಸ್ ಪದ್ಮನಾಭಯ್ಯ ೧೧ ಅಣ್ಣಯ್ಯಪ್ಪ ಬ್ಲಾಕ್
೨ನೇ ಕ್ರಾಸ್ ಶೇಷಾದ್ರಿಪುರಂ ಬೆಂಗಳೂರು-೨೦, ೧೩೯
ಲಕ್ಷ್ಮೀನರಸಮ್ಮ ಎಸ್, W/O ಕೆ ಕೃಷ್ಣಜೋಯಿಸ್ ೧೨/೧ ಈಸ್ಟ್
ಆಂಜನೇಯ ಟೆಂಪಲ್ ರಸ್ತೆ ಬಸವನಗುಡಿ ಬೆಂಗಳೂರು-೪, ೧೦೧
ಲಕ್ಷ್ಮೀನಾರಾಯಣ ಬಿ ಎಸ್ S/O ಸುಬ್ಬರಾಯ ಶಾನುಭೋಗ್
ಬೇಗೂರು ಗುಂಡ್ಲುಪೇಟೆ ತಾಲ್ಲೂಕು, ೯೩

ಲಕ್ಷ್ಮೀನಾರಾಯಣ ಹ ವೆಂ, ಕನ್ನಡ ಪಂಡಿತ ಕುಮಾರವ್ಯಾಸ ಗಮಕ ಪಾಠಶಾಲೆ
ಸುಗ್ಗಿಕಲ್ಲು ರಸ್ತೆ ಕೋಟೆ ಚಿಕ್ಕಮಗಳೂರು, ೭೮

ಲಕ್ಷ್ಮೀನಾರಾಯಣಶಾಸ್ತ್ರಿ ಹೆಚ್, ೨೮ ಪೋಲೀಸ್ ಸ್ಟೇಷನ್ ರಸ್ತೆ
ಬಸವನಗುಡಿ ಬೆಂಗಳೂರು-೪, ೧೧೫

ಲಲಿತ ಎಸ್ ಆರ್, c/o ಎಸ್ ರಂಗಸ್ವಾಮಿ ಸಿ/೨, ನಂ ೧೦
'ವೈ' ರಸ್ತೆ ದೂರವಾಣಿ ನಗರ ಬೆಂಗಳೂರು-೧೬, ೧೫೮

ಲಲಿತಾಕುಮಾರಿ ಇ-೧೪ ಉತ್ತರ ೬ನೇ ಲೇನ್ ಐಟಿಐ ಟೌನ್‌ಶಿಪ್
ದೂರವಾಣಿ ನಗರ ಬೆಂಗಳೂರು-೧೬, ೧೫೨

ಲಲಿತಾ ನಂಜುಂಡಯ್ಯ, ೨೬ ಎಚ್ ಎನ್ ಲೇ ಔಟ್
ವೈಯಾಳಿಕಾವಲ್ ಬೆಂಗಳೂರು-೩, ೧೨೭

ಲಲಿತಾ ರಾಮಯ್ಯ, ೪೬೦ ೬ನೇ ಬ್ಲಾಕ್
ರಾಜಾಜಿನಗರ ಬೆಂಗಳೂರು-೧೦, ೧೧೭

ವಸಂತಮ್ಮ ಎಸ್ c/o ಟಿ ಎಸ್ ಕಣ್ಣನ್ ದೊಡ್ಡಬಾಲ ಪೋಸ್ಟ್
ನಾಗಮಂಗಲದ ಮೂಲಕ ಮಂಡ್ಯ ಜಿಲ್ಲೆ, ೧೭೩

ವಸಂತಲಕ್ಷ್ಮೀ ಸೀತಾರಾಮಯ್ಯ ರುದ್ರಪಟ್ಟಣ
ಅರಕಲಗೂಡು ತಾಲ್ಲೂಕು ಹಾಸನ ಜಿಲ್ಲೆ, ೧೩೧

ವಸ್ತಾರೆ ಕೃಷ್ಣಮೂರ್ತಿ, 'ಶ್ರೀನಿವಾಸ ನಿಲಯ' ಕೃಷ್ಣಮೂರ್ತಿಪುರಂ
ಬೆಂಗಳೂರು-೩೬, ೧೪೨

ವಾಸುಕಿ ಎಸ್, D/o ಎಸ್ ಕಲ್ಲೂರಾವ್ ಸಾರಂಗಂ ಬಿಲ್ಡಿಂಗ್
೩ ನೇ ಕ್ರಾಸ್ ರಸ್ತೆ ಸತ್ಯನಾರಾಯಣ ಪೇಟೆ ಬಳ್ಳಾರಿ, ೧೫೪

ವಾಸುದೇವರಾವ್ ಎಸ್, ೧೫-೧೭ ಎ ಅಡ್ಡ ರಸ್ತೆ ೮ ನೇ ಮುಖ್ಯರಸ್ತೆ
ಮಲ್ಲೇಶ್ವರ, ಬೆಂಗಳೂರು-೫೫, ೧೩೩

ವಾಸುದೇವರಾವ್ ಟಿ ಎಸ್, ೨೯ ಎಂ ಜಿ ರೋಡ್ ರಾಮನಗರಂ
ಬೆಂಗಳೂರು ಜಿಲ್ಲೆ, ೩೩

ವಿಜಯಮಾಲಾ ಎಸ್. ೩೦೭ ಡಿ ಸುಬ್ಬಯ್ಯರಸ್ತೆ ಮೈಸೂರು, ೧೫೮

ವಿಜಯವಾಣಿ ಆರ್ ಎ, ಸಿ/೨ ೧೧ ಸೆಂಟ್ರಲ್ ಅವಿನ್ಯೂ ದೂರವಾಣಿನಗರ
ಬೆಂಗಳೂರು-೧೬. ೧೬೬

ವಿದ್ಯಾ ಬಿ ಎಸ್, ೧೭/೩ ಆರ್ ವಿ ಲೇ ಔಟ್ ಕೆ ಪಿ ಡಬ್ಲ್ಯು ಬಡಾವಣೆ
ಬೆಂಗಳೂರು-೨೦, ೧೫೪

...ಚ್ ಎಸ್, ೨೧೦ ೪೫ ನೇ ಅಡ್ಡರಸ್ತೆ ೮ ನೇ ಬ್ಲಾಕ್
ಜಯನಗರ ಬೆಂಗಳೂರು-೪೧, ೯೧

...ನಾಥರಾವ್, ಅಧ್ಯಾಪಕರು ಹೆಗ್ಗರೆ, ೧೩೫

ವಿಶ್ವೇಶ್ವರಯ್ಯ ಬಿ ಪಿ, ೩೧೩೨ 'ವಿಂಧ್ಯಾ' ಕಾಳಿದಾಸ ರಸ್ತೆ
ಮೈಸೂರು-೨, ೪೭

ವೀರಬಸವಯ್ಯ, ಯೇಳುಬೆಂಚಿ ಬಳ್ಳಾರಿ ಜಿಲ್ಲೆ, ೨೦

ವೀರಭದ್ರಶೆಟ್ಟಿ ಸಿ, ಪೋಸ್ಟ್ ಆಫೀಸ್ ರಸ್ತೆ ಚನ್ನರಾಯಪಟ್ಟಣ
ಹಾಸನ ಜಿಲ್ಲೆ, ೩೫

ವೆಂಕಟಜೀರಯ್ಯ, ರಿಟೈರ್ಡ್ ಹೆಡ್ಮಾಸ್ಟರ್ ಟಿ ನಾರಾಯಣಪುರ
ಬೆಂಗಳೂರು-೧೬, ೩೩

ವೆಂಕಟದಾಸು ಎ ಎಸ್, ಗಮಕಿ ೨೦ ಲಿಂಕ್‌ರೋಡ್ ೩ ನೇ ಕ್ರಾಸ್
ಮಲ್ಲೇಶ್ವರಂ ಬೆಂಗಳೂರು ೩, ೧೩೫

ವೆಂಕಟಪ್ಪ ಟಿ, ಗಮಕಿ ಶ್ರೇಣಿಗರ ಬೀದಿ ಮಾಲೂರು ಕೋಲಾರ ಜಿಲ್ಲೆ, ೫೨

ವೆಂಕಟರಾಮಯ್ಯ ಜೆ, ಮುಖ್ಯೋಪಾಧ್ಯಾಯರು ವಿವೇಕಾನಂದ ಹೈಸ್ಕೂಲು
ಸೂಲಿಬೆಲೆ ಬೆಂಗಳೂರು ಜಿಲ್ಲೆ, ೧೧೨

ವೆಂಕಟಸುಬ್ಬಯ್ಯ ಎಂ ಎಸ್, ಕೋಟಿ ಅರಕಲಗೂಡು ಹಾಸನ ಜಿಲ್ಲೆ, ೩೨

ವೆಂಕಟಸುಬ್ಬಯ್ಯ, ಮುಳ್ಳೂರು ಹೆಗ್ಗಡದೇವನಕೋಟೆ ತಾಲ್ಲೂಕು, ೩೪

ವೆಂಕಟಾಚಲಯ್ಯ ಬಿ ವಿ, ೫೧೦, ೨೦ ನೇ ಮೇನ್ ೪ ನೇ ಟಿ ಬ್ಲಾಕು
ಜಯನಗರ ಬೆಂಗಳೂರು-೧೧, ೫೩

ವೆಂಕಟಾದ್ರಿ ಶರ್ಮ ಕೆ ಎಸ್, ಗಮಕಿ ೫೪ ತ್ಯಾಗರಾಜ ನಗರ
ಬೆಂಗಳೂರು-೨೮, ೯೪

ವೆಂಕಟೇಶಯ್ಯ ಕೆ ಎಸ್, ೩೯೪೨ ಗಾಯತ್ರೀ ನಗರ ಶ್ರೀರಾಮಪುರ
ಬೆಂಗಳೂರು-೨೧, ೨೯

ವೆಂಕಟೇಶಯ್ಯ ಬಿ ಎಸ್, ೧೫

ವೇದವತಿ ಡಿ ಆರ್, ಆರ್ ಕೃಷ್ಣಮೂರ್ತಿಯವರ ಕಾಂಪೌಂಡ್
ಕೃಷ್ಣರಾಜಪುರ ಬೆಂಗಳೂರು-೩೬, ೧೬೩

ಶಂಕರನಾರಾಯಣ್ ಆರ್, ಡಿ ೯೫ ಪೂರ್ವದ ೫ ನೇ ಬೀದಿ ಐ ಟಿ ಐ
ಟೌನ್‌ಶಿಪ್ ದೂರವಾಣಿ ನಗರ ಬೆಂಗಳೂರು-೧೬, ೧೦೭

ಶಂಕರಪ್ಪ ಎಸ್, ಉಪನ್ಯಾಸಕ ಸರ್ಕಾರಿ ಜೂನಿಯರ್ ಕಾಲೇಜು ಸಾಕ ಪಾಠಶಾಲೆ
ಶಕುಂತಳಾಬಾಯಿ ಪಾಂಡುರಂಗರಾವ್, 'ಮಕ್ಕಳ ಮಂಟಪ' ೫ ನೆಹರು, ೭೮
ಶೇಷಾದ್ರಿಪುರಂ ಬೆಂಗಳೂರು,
ಶಾಂತಾ ಎ ಎಸ್, ಆದಂಖಾನ್ ಮಸೀದಿ ರಸ್ತೆ ಕೆ ಆರ್ ಮೊಹಲ್ಲ
ಮೈಸೂರು-೪, ೧೨೬
ಶಾಮಯ್ಯಂಗಾರ್ ಕೆ, ಡಿ ಕೆ ೧೧/ಬಿ ನ್ಯೂ ಕಾಲೊನಿ ಭದ್ರಾವತಿ, ೫೦
ಶಾರದಮ್ಮ ಎಸ್ ಎಸ್ W/O ಡಾ ಎಸ್ ನರಸಿಂಹಮೂರ್ತಿ, ಮೆಡಿಕಲ್
ಆಫೀಸರ್ ಮೈಸೂರು ಸಿಮೆಂಟ್ ಕಾರ್ಖಾನೆ ಅಮ್ಮಸಂದ್ರ, ೧೬೦
ಶಾರದಾಬಾಯಿ ಕೃಷ್ಣಮೂರ್ತಿ, ಎ-೯೯ ಪುಟ್ಟಣ್ಣ ರೋಡ್ ಬಸವನಗುಡಿ
ಬೆಂಗಳೂರು-೪, ೧೬೫
ಶಾಸ್ತ್ರಿ ಶಂಕರಗೌಡ, ಹಚ್ಚೊಳ್ಳಿ ಶಿರಗುಪ್ಪಾ ತಾಲ್ಲೂಕು ಬಳ್ಳಾರಿ ಜಿಲ್ಲೆ, ೧೬೮
ಶಿವಣ್ಣ ಎಸ್, ಮುಖ್ಯೋಪಾಧ್ಯಾಯ ಹೈಯರ್ ಪ್ರೈಮರಿ ಶಾಲೆ ಕುಂಕುಮನ
ಹಳ್ಳಿ ಕಂಬತ್ತನಹಳ್ಳಿ ಪೋಸ್ಟ್ ತುಮಕೂರು ತಾಲ್ಲೂಕು, ೧೦೩
ಶಿವಮೂರ್ತಿ ಎಂ, ಮುಖ್ಯೋಪಾಧ್ಯಾಯ ಉನ್ನತ ಪ್ರಾಥಮಿಕ ಶಾಲೆ
ಎರೇಚಿಕ್ಕನಹಳ್ಳಿ, ಹೊನ್ನಾಳಿ ತಾಲ್ಲೂಕು, ೧೦೬
ಶಿವಯ್ಯ ಎ, ಮುಖ್ಯೋಪಾಧ್ಯಾಯ ಕಿರಿಯ ಪ್ರಾಥಮಿಕ ಶಾಲೆ ಪ್ರಭುವನಹಳ್ಳಿ
ಗುಬ್ಬಿ ತಾಲ್ಲೂಕು, ೭೫
ಶ್ರೀಕಂಠಯ್ಯ ಬಿ ಎಸ್, ಲಕ್ಷ್ಮೀಶ ಸಾಹಿತ್ಯ ಸಂಘ ಬಾಣಾವರ ಅರಸೀಕೆರೆ
ತಾಲ್ಲೂಕು, ೧೭೨
ಶ್ರೀನಿವಾಸ ಅಯ್ಯಂಗಾರ್ ಎ ಡಿ, ೬೦೨ ಕಾಲೇಜು ರಸ್ತೆ ಮೈಸೂರು, ೧೪೯
ಶ್ರೀನಿವಾಸಮೂರ್ತಿ ಕೆ ಎಸ್, 'ಶ್ರೀ ವೆಂಕಟೇಶ ನಿಲಯ' ೭೮೭ ೬ ನೇ ವಿಭಾಗ
ರಾಜಾಜಿನಗರ ಬೆಂಗಳೂರು-೧೦, ೮೨
ಶ್ರೀನಿವಾಸಮೂರ್ತಿ ಬಿ ಕೆ, ಜ್ಯೋತಿ ೬-೫೯ ೩೪ನೇ ಕ್ರಾಸ್ ಜಯನಗರ
ಬೆಂಗಳೂರು-೧೧, ೯೬
ಶ್ರೀನಿವಾಸಯ್ಯ ಎಸ್, 'ಶ್ರೀರಾಮಚಂದ್ರ ನಿಲಯ' ತೇರಿನ ಬೀದಿ
ಟಿ ನರಸೀಪುರ, ೨೩
ಶ್ರೀನಿವಾಸರಾಯರು ಡಿ ಎಸ್, ೨, ೧ನೇ ಕ್ರಾಸ್ ಶಂಕರಪುರಂ
ಬೆಂಗಳೂರು-೪, ೫೬